ಮಂಗಳೂರು
ಬುಧವಾರ, 15 ಏಪ್ರಿಲ್ 2026
ಸಂಪುಟ 48, ಸಂಚಿಕೆ 27 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಸುಖೀ ಸಂಸಾರ ಎಂದರೆ, ಇಬ್ಬರು ಬುದ್ಧಿವಂತರ, ಸಹನಶೀಲರ ಸಮಾಗಮ.

▲ಸುಭಾಷಿತ

ಏಕಾತ್ಮತೆಯ ಸೂತ್ರದಿಂದ ಸಮನ್ವಯ ಸಾಧಿಸಿದ ಶಂಕರರು

ಪದ ಸಂಚಲನ

• ಡಾ.ವಿಶ್ವನಾಥ ಸುಂಕಸಾಳ

• ಪುಟ ೬

ಕಿರುಸುದ್ದಿ

ರಷ್ಯಾದ ಸೇನಾ ನೆಲೆ ವಶಕ್ಕೆ ಪಡೆದ ಉಕ್ರೇನ್ ರೋಬೋ

• **ಕೈವ್:** ಉಕ್ರೇನ್ ತನ್ನ ಸೈನಿಕರನ್ನು ಬಳಸದೆ ಮತ್ತು ಯಾವುದೇ ಪ್ರಾಣಾಪಾಯವಿಲ್ಲದೆ, ಕೇವಲ ಮಾನವರಹಿತ ಭೂದಳ ಮತ್ತು ರೋಬೋಟ್‌ಗಳನ್ನು ಬಳಸಿಕೊಂಡು ರಷ್ಯಾದ ಸೇನಾ ನೆಲೆಯನ್ನು ಯಶಸ್ವಿಯಾಗಿ ವಶಪಡಿಸಿಕೊಂಡಿದೆ. ಈ ಕಾರ್ಯಾಚರಣೆಯ ನಂತರ ಶತ್ರು ಸೈನಿಕರು ಶರಣಾಗಿದ್ದಾರೆ ಎಂದು ಉಕ್ರೇನ್ ಹೇಳಿಕೊಂಡಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನೀಡಿರುವ ಮಾಹಿತಿಯಂತೆ, ಕಳೆದ ಮೂರು ತಿಂಗಳಲ್ಲಿ ರೇಟಲ್, ಟರ್ಮಿಟ್ ಮತ್ತು ಪ್ರೊಟೆಕ್ಟರ್ ಸೇರಿದಂತೆ ಉಕ್ರೇನ್‌ನ ಭೂದಳದ ರೋಬೋಟಿಕ್ ವ್ಯವಸ್ಥೆಗಳು 22,000 ಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿವೆ. ಸೈನಿಕರ ಬದಲಿಗೆ ರೋಬೋಟ್‌ಗಳನ್ನು ಅಪಾಯಕಾರಿ ಪ್ರದೇಶಗಳಿಗೆ ಕಳುಹಿಸುವ ಮೂಲಕ ಮಾನವ ಜೀವಗಳನ್ನು ಉಳಿಸಲು ಆದ್ಯತೆ ನೀಡಲಾಗುತ್ತಿದೆ ಎಂದಿದ್ದಾರೆ. ➡ಪುಟ ೪

30ರಿಂದ ಪಿಯು ಪರೀಕ್ಷೆ-2

• **ಬೆಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣಗೊಂಡಿರುವ ಅಥವಾ ಪರೀಕ್ಷೆಗೆ ಗೈರಾದ ಅಭ್ಯರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸದೇ ಏ.30 ರಿಂದ ಆರಂಭವಾಗಲಿರುವ ಪರೀಕ್ಷೆ-2ಕ್ಕೆ ಹಾಜರಾಗಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.

• ಪುಟ ೫

ಹಿಂದುಗಳ ವಿವಾಹವಾಗಿ, ಮತಾಂತರಕ್ಕೆ ಸಂಚು

• ಪುಟ ೨

ಸಿರಿಂಜ್ ಮರುಬಳಕೆ: 331 ಪಾಕ್ ಮಕ್ಕಳಿಗೆ ಎಚ್‌ಐವಿ!

• ಪುಟ ೨

ಛತ್ತೀಸ್‌ಗಢದಲ್ಲಿ ಬಾಯ್ಲರ್ ಸ್ಫೋಟಕ್ಕೆ 9 ಮಂದಿ ಬಲಿ

• ಪುಟ ೨

ಆಸ್ಟ್ರೇಲಿಯಾ ಸೇನೆಗೆ ಮೊದಲ ಮಹಿಳಾ ಮುಖ್ಯಸ್ಥೆ

• ಪುಟ ೨

ಜಾತಿ ವಿಮುಕ್ತಿಗೆ ಶಿಕ್ಷಣ ಅಸ್ತ್ರ

• ಪುಟ ೫

2029ರ ಲೋಕಸಭೆ, ವಿಧಾನಸಭೆ ಕದನದಲ್ಲಿ ಮಹಿಳಾ ಮೀಸಲು

ಪ್ರಜಾಪ್ರಭುತ್ವಕ್ಕೆ ನಾರೀಶಕ್ತಿ

ದೇಶದ ಮಹಿಳೆಯರಿಗೆ ಪ್ರಧಾನಿ ಮೋದಿ ಪತ್ರ

• **ಹೊಸದಿಲ್ಲಿ:** 2029ರ ಲೋಕಸಭೆ ಹಾಗೂ ವಿವಿಧ ವಿಧಾನಸಭೆಗಳ ಚುನಾವಣೆಯಲ್ಲಿ ಮಹಿಳಾ ಮೀಸಲು ಸಂಪೂರ್ಣವಾಗಿ ಜಾರಿಗೆ ಬಂದರೆ ಭಾರತೀಯ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಚೈತನ್ಯಮಯವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ದೇಶದ ಮಹಿಳೆಯರಿಗೆ ಬರೆದ ಪತ್ರದಲ್ಲಿ ಮೋದಿ ಅವರು, ಮಹಿಳೆಯರು ನೀತಿ ರೂಪಣೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ವಿಕಸಿತ ಭಾರತದತ್ತ ಸಾಗುವ ಪಯಣ ಇನ್ನಷ್ಟು ಬಲ ಪಡೆಯುತ್ತದೆ ಎಂದಿದ್ದಾರೆ. ಹೀಗಾಗಿ, ನಮ್ಮ ಅಭಿವೃದ್ಧಿಯ ಗತಿಗೆ ಮತ್ತಷ್ಟು ಶಕ್ತಿ ತುಂಬಲು ಸಾಧ್ಯವಾದ ಎಲ್ಲವನ್ನೂ ಮಾಡುವುದು ಅಗತ್ಯವಾಗಿದೆ. ಆದಕ್ಕಾಗಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಸಂಪೂರ್ಣ ಅನಿವಾರ್ಯ ಎಂದು ಅವರು ಹೇಳಿದ್ದಾರೆ. ಈ ತತ್ವವೇ 2023ರಲ್ಲಿ 2023ರಲ್ಲಿ ನಾರೀಶಕ್ತಿ ವಂದನ್ ಅಧಿನಿಯಮ್ ಮಸೂದೆ ಅಂಗೀಕಾರಕ್ಕೆ ಕಾರಣ ವಾಯಿತು ಎಂದು ಅವರು ಹೇಳಿದರು. ಇದೇ ತತ್ವ ಈ ಸಂವಿಧಾನ ತಿದ್ದುಪಡಿಯ ಅಗತ್ಯತೆಯನ್ನು ತೋರಿಸುತ್ತದೆ ಎಂದರು.



ನಾರೀಶಕ್ತಿ ವಂದನ ಅಧಿನಿಯಮ

ಮತ್ತಷ್ಟು ವಿಳಂಬ ಬೇಡ: ಏ.16ರಿಂದ ಆರಂಭವಾಗುವ 3 ದಿನಗಳ ವಿಶೇಷ ಸಂಸತ್ ಅಧಿವೇಶನಗಳಲ್ಲಿ ಈ ಕಾನೂನು ತಿದ್ದುಪಡಿಗಳನ್ನು ಅಂಗೀಕರಿಸಬೇಕು ಎಂದು ಮೋದಿ ಹೇಳಿದರು. ಮತ್ತಷ್ಟು ವಿಳಂಬವು ದುರಾದೃಷ್ಟಕರವಾಗಿದ್ದು, ಭಾರತದ ಮಹಿಳೆಯರಿಗೆ ಅನ್ಯಾಯವಾಗುತ್ತದೆ ಎಂದರು. 2029ರ ಲೋಕಸಭೆ ಮತ್ತು ಆ ವರ್ಷ ನಡೆಯುವ ವಿವಿಧ ವಿಧಾನಸಭಾ ಚುನಾವಣೆಗಳು ಮಹಿಳಾ ಮೀಸಲು ಸಂಪೂರ್ಣ ಜಾರಿಗೆ ಬಂದು ನಡೆದರೆ, ನಮ್ಮ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಚೈತನ್ಯಮಯವಾಗುತ್ತದೆ ಎಂದು ಅವರು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡ ಪತ್ರದಲ್ಲಿ ಹೇಳಿದ್ದಾರೆ. ➡ಪುಟ ೪

ಲೋಕಸಭೆ ಸ್ಥಾನ ಸಂಖ್ಯೆ 850ಕ್ಕೆ ಹೆಚ್ಚಳ ಶೀಘ್ರ

• **ಹೊಸದಿಲ್ಲಿ:** ಮಹಿಳೆಯರಿಗೆ 33% ಮೀಸಲಾತಿ ನೀಡುವ ಉದ್ದೇಶದಿಂದ ನಾರೀಶಕ್ತಿ ವಂದನ್ ಅಧಿನಿಯಮ್‌ಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದ್ದು, ಈ ಮಸೂದೆಯ ಪ್ರತಿಯನ್ನು ಎಲ್ಲ ಸಂಸದರಿಗೂ ಕಳುಹಿಸಿರುವ ಪ್ರಧಾನಿ ಮೋದಿ ಬೆಂಬಲ ಕೋರಿದ್ದಾರೆ. ಈ ತಿದ್ದುಪಡಿಯ ಪ್ರಕಾರ, 2029ರ ಲೋಕಸಭಾ ಚುನಾವಣೆಗೆ ಮುನ್ನವೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಇಂದಿನ 543ರಿಂದ ಸುಮಾರು 850ರವರೆಗೆ ಹೆಚ್ಚಿಸಲಾಗುತ್ತದೆ. ಹೊಸ ಮಸೂದೆ ಪ್ರಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲೂ ಸ್ಥಾನಗಳನ್ನು ಹೆಚ್ಚಿಸಿ, ಒಟ್ಟು ಸ್ಥಾನಗಳಲ್ಲಿ 33% ಮಹಿಳೆಯರಿಗೆ ಮೀಸಲಿಡಲಾಗುತ್ತದೆ. ಈ ಮೀಸಲಾದ ಕ್ಷೇತ್ರಗಳನ್ನು ಪ್ರತಿ ಚುನಾವಣೆಯಲ್ಲೂ ವಿಭಿನ್ನ ಕ್ಷೇತ್ರಗಳಿಗೆ ಪರ್ಯಾಯವಾಗಿ ಹಂಚಿಕೆ ಮಾಡುವ ವ್ಯವಸ್ಥೆ ಇರಲಿದೆ. ಮಸೂದೆಯು ಸಂವಿಧಾನದ 81 ವಿಧಿಗೆ ತಿದ್ದುಪಡಿ ಮಾಡುವುದನ್ನು ಉದ್ದೇಶಿಸಿದೆ. ಅದರ ಪ್ರಕಾರ, ಲೋಕಸಭೆಯಲ್ಲಿ ರಾಜ್ಯಗಳಿಂದ ಗರಿಷ್ಠ 815 ಸದಸ್ಯರು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಗರಿಷ್ಠ 35 ಸದಸ್ಯರು ಇರಬಹುದು ಎಂದು ನಿರ್ಧರಿಸಲಾಗುತ್ತದೆ. ಜನಸಂಖ್ಯೆಯ ಆಧಾರವಾಗಿ ಕ್ಷೇತ್ರಗಳ ಮರುಹಂಚಿಕೆ ನಡೆಸಲಾಗುತ್ತದೆ. ➡ಪುಟ ೪



ಬೆಂಬಲಿಸಲು ಎಲ್ಲಾ ಪಕ್ಷಗಳಿಗೆ ಮೋದಿ ಮನವಿ

• **ಡೆಹ್ರಾಡೂನ್:** ಮಹಿಳಾ ಮೀಸಲು ಕಾಯ್ದೆ ದೀರ್ಘಕಾಲದ ನಿರೀಕ್ಷೆಯ ನಂತರ ಎಲ್ಲಾ ಪಕ್ಷಗಳ ಬೆಂಬಲದೊಂದಿಗೆ ಅಂಗೀಕರಿಸಲ್ಪಟ್ಟಿದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿಯವರು, 2029ರ ಲೋಕಸಭೆ ಚುನಾವಣೆಯಲ್ಲಿ ಇದರ ಜಾರಿ ಖಚಿತಪಡಿಸಲು ಕಾನೂನು ತಿದ್ದುಪಡಿಗಳಿಗೆ ಬೆಂಬಲ ನೀಡುವಂತೆ ಎಲ್ಲ ಪಕ್ಷಗಳಿಗೆ ಮನವಿ ಮಾಡಿದ್ದಾರೆ. ದೇಶದ ಸಹೋದರಿಯರು ಮತ್ತು ಪುತ್ರಿಯರ ಹಕ್ಕುಗಳಿಗೆ ಸಂಬಂಧಿಸಿದ ಈ ಉಪಕ್ರಮವನ್ನು ಏಕಮತದಿಂದ ಮುಂದಕ್ಕೆ ತೆಗೆದುಕೊಂಡು ಹೋಗಲು ಎಲ್ಲಾ ರಾಜಕೀಯ ಪಕ್ಷಗಳು ಒಗ್ಗೂಡಲಿ ಎಂದು ಅವರು ಏ.16ರಿಂದ ಆರಂಭವಾಗುವ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನಗಳ ಮುನ್ನ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ನಾಳೆಯಿಂದ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನ

ಭೈರವೈಕ್ಯ ಮಂದಿರ ಉದ್ಘಾಟನೆ ಇಂದು

ಪ್ರಧಾನಿ ಮೋದಿ ಸ್ವಾಗತಕ್ಕೆ ಜಿಲ್ಲಾಡಳಿತ ಸಿದ್ಧತೆ





• **ನಾಗಮಂಗಲ:** ತಾಲೂಕಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ದ್ರಾವಿಡ-ಹೊಯ್ಸಳ ಶೈಲಿಯ ಶಿಲ್ಪಕಲೆಯಿಂದ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನೆಗೆ ಸಕಲ ರೀತಿಯಲ್ಲೂ ಸಜ್ಜಾಗಿದೆ. ಶ್ರೀಕ್ಷೇತ್ರದ ಪವಾಡ ಪುರುಷ ಡಾ.ಬಾಲಗಂಗಾಧರನಾಥ ಶ್ರೀಗಳ ಶ್ರೀ ಗುರು ಭೈರವೈಕ್ಯ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿಯವರು ಬುಧವಾರ ಲೋಕಾರ್ಪಣೆ ಮಾಡಲಿದ್ದಾರೆ.



ಸಾವಿರದ ಐನೂರು ವರ್ಷಗಳಿಗೂ ಮಿಗಿಲಾದ ಇತಿಹಾಸ ಹೊಂದಿರುವ ನಾಥ ಪರಂಪರೆಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಣ್ಯ ಕ್ಷೇತ್ರವಾಗಿರುವ ಆದಿಚುಂಚನಗಿರಿ ಮಠಕ್ಕೆ ಪ್ರಧಾನಿ ಮೋದಿ ಮೊದಲ ಬಾರಿಗೆ ಭೇಟಿ ನೀಡುತ್ತಿದ್ದಾರೆ. ಮೋದಿಯವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ಶ್ರೀಮಠ ಹಾಗೂ ಜಿಲ್ಲಾಡಳಿತ ಸಜ್ಜಾಗಿ ನಿಂತಿದೆ.

ಬೆಳಗ್ಗೆ 11ಕ್ಕೆ ಶ್ರೀಕ್ಷೇತ್ರಕ್ಕೆ ಪ್ರಧಾನಿ: ಬುಧವಾರ ಬೆಳಗ್ಗೆ 7.15ಕ್ಕೆ ದಿಲ್ಲಿ ವಿಮಾನ ನಿಲ್ದಾಣದಿಂದ ವಾಯುಪಡೆಯ ವಿಮಾನದಲ್ಲಿ ಬರಲಿರುವ ಮೋದಿ ಅವರು ಬೆಳಗ್ಗೆ 10.05ಕ್ಕೆ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣ ತಲುಪಲಿದ್ದಾರೆ. ಬಳಿಕ ಹೆಲಿಕಾಪ್ಟರ್ ಮೂಲಕ ತೆರಳಿ ಬೆ.10.55ಕ್ಕೆ ಆದಿಚುಂಚನಗಿರಿ ಕ್ಷೇತ್ರದ ತಪೋವನದ ಆವರಣದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ. ➡ಪುಟ ೪

ಕಂಗೊಳಿಸುತ್ತಿರುವ ಆದಿಚುಂಚನಗಿರಿ ಮಠ

ಭೈರವೈಕ್ಯ ಡಾ.ಬಾಲಗಂಗಾಧರನಾಥ ಶ್ರೀ, ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಶ್ರೀ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರವುಳ್ಳ ಬೃಹತ್ ಕಟೌಟ್‌ಗಳು, ಓಂ ಚಿತ್ರವುಳ್ಳ ಕೇಸರಿ ಬಾವುಟಗಳು ಕ್ಷೇತ್ರದ ತುಂಬೆಲ್ಲಾ ರಾರಾಜಿಸುತ್ತಿವೆ. ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರದಿಂದ ಸಿಂಗಾರಗೊಂಡಿರುವ ಶ್ರೀಮಠ ವಿಶೇಷ ರೀತಿಯಲ್ಲಿ ಕಂಗೊಳಿಸುತ್ತಿದೆ.

ಭಾರೀ ಭದ್ರತೆ

ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನಲೆ ಶ್ರೀಮಠಕ್ಕೆ ಪ್ರವೇಶಿಸುವ ಎಲ್ಲಾ ಮಾರ್ಗಗಳನ್ನು ಮಂಗಳವಾರ ಬೆಳಗ್ಗೆಯಿಂದಲೇ ಬಂದ್ ಮಾಡಿ ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ. ಆದಿಚುಂಚನಗಿರಿ ಕ್ಷೇತ್ರದಾದ್ಯಂತ ಹಿಂದೆಂದೂ ಕಾಣದ ರೀತಿಯಲ್ಲಿ 2 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನೊಳಗೊಂಡ ಭದ್ರತೆ ಒದಗಿಸಲಾಗಿದೆ.



ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಅಂಗವಾಗಿ ವಿಧಾನಸೌಧದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಚಿವ ಕೆ.ಎಚ್. ಮುನಿಯಪ್ಪ, ಶಾಸಕ ರಿಜ್ವಾನ್ ಅರ್ಷದ್ ಮೊದಲಾದವರಿದ್ದರು.

ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪ

ಸಿಎಂ ರಾಜಕೀಯ ಕಾರ್ಯದರ್ಶಿ ವಜಾ

• **ಬೆಂಗಳೂರು:** ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪ ಹಿನ್ನೆಲೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ವಿಧಾನಪರಿಷತ್ ಸದಸ್ಯ ನಜೀರ್ ಅಹಮದ್ ಅವರನ್ನು ವಜಾ ಮಾಡಲಾಗಿದೆ. ಈ ಸಂಬಂಧ ಸೋಮವಾರ ಆದೇಶ ಹೊರಡಿಸಲಾಗಿದ್ದು, 2023, ಜೂನ್ 1ರಂದು ನಜೀರ್ ಅಹಮದ್ ಅವರನ್ನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದ್ದು, ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸಚಿವರಾದ ಜಮೀರ್ ಅಹ್ಮದ್‌ಖಾನ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಜೀರ್ ಅಹ್ಮದ್, ಅಬ್ದುಲ್ ಜಬ್ಬಾರ್ ಪಕ್ಷದ ಪರ ಕೆಲಸ ಮಾಡಿಲ್ಲ. ➡ಪುಟ ೪

ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡದವರ ವಿರುದ್ಧ ಕ್ರಮ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಜೀರ್ ಅಹ್ಮದ್ ಅವರನ್ನು ಬಿಡುಗಡೆ ಮಾಡಿರುವ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ದಾವಣಗೆರೆ ಉಪಚುನಾವಣೆಯಲ್ಲಿ ನಜೀರ್ ಅಹಮದ್ ಅವರಿಗೆ ದಾವಣಗೆರೆಗೆ ತೆರಳಿ ಕೆಲಸ ಮಾಡುವಂತೆ ಸೂಚಿಸಲಾಗಿತ್ತು. ಹಾಗೆಯೇ ಎಲ್ಲರೂ ಸೇರಿ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿತ್ತು. ಇಷ್ಟಾದರೂ ಅವರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿಲ್ಲ ಎಂಬ ದೂರುಗಳು ಇದ್ದವು. ➡ಪುಟ ೪

ಎಲ್ಲರ ಸಾರ್ವಭೌಮತ್ವ ಗೌರವಿಸಿ



• **ಬೀಜಿಂಗ್:** ಪಶ್ಚಿಮ ಏಷ್ಯಾ ಮತ್ತು ಗಲ್ಫ್ ಪ್ರದೇಶದ ಎಲ್ಲಾ ರಾಷ್ಟ್ರಗಳ ಸಾರ್ವಭೌಮತ್ವ, ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕೆಂದು ಯುಎಇ ರಾಜಕುಮಾರನ ಜತೆಗಿನ ಭೇಟಿ ವೇಳೆ ಒಗ್ಗಟ್ಟಿನ ಕರೆ ನೀಡಿದ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಅಮೆರಿಕ ಅಧ್ಯಕ್ಷರಿಗೆ ತಿರುಗೇಟು ನೀಡಿದ್ದಾರೆ. ಅಬುಧಾಬಿಯ(ಯುಎಇ) ರಾಜಕುಮಾರ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಅವರನ್ನು ಮಂಗಳವಾರ ಜಿನ್‌ಪಿಂಗ್ ಭೇಟಿಯಾದರು. ➡ಪುಟ ೪

ಮೋದಿಗೆ ಕರೆ ಮಾಡಿ 40 ನಿಮಿಷ ಟ್ರಂಪ್ ಚರ್ಚೆ

• **ಹೊಸದಿಲ್ಲಿ:** ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಅಮೆರಿಕ-ಇರಾನ್ ಕದನ ವಿರಾಮ ಒಪ್ಪಂದ ವಿಫಲವಾದ ನಂತರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ಮೋದಿ ಅವರಿಗೆ ಮಂಗಳವಾರ ದೂರವಾಣಿ ಕರೆ ಮಾಡಿದ್ದಾರೆ. ಮೋದಿ ಜತೆ ಟ್ರಂಪ್ 40 ನಿಮಿಷ ಸುದೀರ್ಘ ಚರ್ಚೆ ನಡೆಸಿದ್ದಾರೆ. ಸ್ನೇಹಿತರಾದ ಅಧ್ಯಕ್ಷ ಟ್ರಂಪ್ ಅವರಿಂದ ಕರೆ ಸ್ವೀಕರಿಸಿದ್ದೆ. ವಿವಿಧ ಕ್ಷೇತ್ರಗಳಲ್ಲಿ ನಮ್ಮ ದ್ವಿಪಕ್ಷೀಯ ಸಹಕಾರದಲ್ಲಿನ ಸುಸ್ಥಿರ ಪ್ರಗತಿ ಪರಾಮರ್ಶೆ ನಡೆಸಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ ಸಮಗ್ರ ಜಾಗತಿಕ ಕಾರ್ಯತಾಂತ್ರಿಕ ಪಾಲುದಾರಿಕೆ ಬಲಗೊಳಿಸುವಲ್ಲಿ ನಾವು ಬದ್ಧರಾಗಿದ್ದೇವೆ. ➡ಪುಟ ೪

ಭಾರತ ತೀವ್ರ ನಿಗಾ

ಕೊಲ್ಲಿ ರಾಷ್ಟ್ರಗಳಿಂದ ತೈಲ ಆಮದಿನ ಮೇಲೆ ಭಾರತವು ಹೆಚ್ಚಿನ ಅವಲಂಬನೆ ಹೊಂದಿರುವುದರಿಂದ, ಪರಿಸ್ಥಿತಿ ತಿಳಿಗೊಳಿಸಲು ಮತ್ತು ಹೊರ್ಮುಜ್ ಜಲಸಂಧಿಯನ್ನು ತಕ್ಷಣವೇ ಮುಕ್ತಗೊಳಿಸಲು ಭಾರತ ಕರೆ ನೀಡಿದೆ. ಪ್ರಸ್ತುತ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಕಚ್ಚಾ ತೈಲ ಪೂರೈಕೆಯನ್ನು ಸುರಕ್ಷಿತವಾಗಿರಿಸಲು ಮತ್ತು ಭಾರತದ ಧ್ವಜ ಹೊತ್ತ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತುರ್ತು ಕಾರ್ಯಯೋಜನೆಗಳಿಗೆ ಸಿದ್ಧವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚೀನಾ ಎಚ್ಚರಿಕೆ

ಸಂಘರ್ಷ ತೀವ್ರಗೊಳ್ಳದಂತೆ ಎಚ್ಚರಿಕೆ ನೀಡಿರುವ ಚೀನಾ, ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ನೌಕಾಯಾನದ ಸ್ವಾತಂತ್ರ್ಯವನ್ನು ಕಾಪಾಡುವ ಅಗತ್ಯವನ್ನು ಒತ್ತಿಹೇಳಿದೆ. ಹಾರ್ಮುಜ್ ಜಲಸಂಧಿಯಲ್ಲಿನ ಯಾವುದೇ ಅಡೆತಡೆಗಳು ಜಾಗತಿಕ ವ್ಯಾಪಾರ ಮತ್ತು ಇಂಧನ ಮಾರುಕಟ್ಟೆಗಳ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದು ಚೀನಾ ತಿಳಿಸಿದೆ. ಇದೇ ವೇಳೆ, ತನ್ನ ವಾಣಿಜ್ಯ ಹಡಗುಗಳ ಸಂಚಾರ ಅಂತಾರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಮುಂದುವರಿಯಲಿದೆ ಎಂದು ಚೀನಾ ಸರ್ಕಾರ ಸ್ಪಷ್ಟಪಡಿಸಿದೆ.

ರಷ್ಯಾ ಸಂಧಾನದ ಪ್ರಸ್ತಾಪ

ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಸಲು ರಷ್ಯಾ ಮುಂದಾಗಿದ್ದು, ತಾನು ಮಧ್ಯಸ್ಥಿಕೆ ವಹಿಸಲು ಸಿದ್ಧವಿರುವುದಾಗಿ ತಿಳಿಸಿದೆ. ಪ್ರದೇಶದಲ್ಲಿ ಸ್ಥಿರತೆಯನ್ನು ಪುನಃ ಸ್ಥಾಪಿಸಲು ಮತ್ತು ಪ್ರಮುಖ ನೌಕಾ ಮಾರ್ಗಗಳನ್ನು ಪುನರಾರಂಭಿಸಲು ಪೂರಕವಾಗಿ ರಾಜತಾಂತ್ರಿಕ ವೇದಿಕೆ ಒದಗಿಸಲು ಮಾಸ್ಕೋ ಸಿದ್ಧತೆ ನಡೆಸಿದೆ.

ಭಾರತದ ರಷ್ಯಾ ತೈಲ ಆಮದು 5 ಬಿಲಿಯನ್ ಯುರೋಗೆ ಏರಿಕೆ

• **ಹೊಸದಿಲ್ಲಿ:** ಆಮದು ಪ್ರಮಾಣ ದುಪ್ಪಟ್ಟಾಗುವುದರ ಜೊತೆಗೆ, ಜಾಗತಿಕ ತೈಲ ಬೆಲೆಗಳು ಏರಿಕೆಯಾದ ಕಾರಣ, ಮಾರ್ಚ್‌ನಲ್ಲಿ ರಷ್ಯಾದಿಂದ ಭಾರತದ ಕಚ್ಚಾ ತೈಲ ಖರೀದಿ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದ್ದು, ಒಟ್ಟು 5.3 ಬಿಲಿಯನ್ ಯುರೋಗಳಿಗೆ ತಲುಪಿದೆ. ಇಂಧನ ಮತ್ತು ಶುದ್ಧ ಗಾಳಿ ಸಂಶೋಧನಾ ಕೇಂದ್ರದ (ಸಿಆರ್‌ಇಎ) ವರದಿಯ ಪ್ರಕಾರ, ಮಾರ್ಚ್‌ನಲ್ಲಿ ರಷ್ಯಾದ ಪಳೆಯುಳಿಕೆ ಇಂಧನಗಳ ಎರಡನೇ ಅತಿದೊಡ್ಡ ಖರೀದಿದಾರನಾಗಿ ಭಾರತ ಹೊರಹೊಮ್ಮಿದೆ. ಭಾರತ ಒಟ್ಟು 5.8 ಬಿಲಿಯನ್ ಯುರೋ ಮೌಲ್ಯದ ಹೈಡ್ರೋಕಾರ್ಬನ್‌ಗಳನ್ನು ಆಮದು ಮಾಡಿಕೊಂಡಿದ್ದು, ಇದರಲ್ಲಿ ಕಚ್ಚಾ ತೈಲದ ಪಾಲು ಶೇ.91 ರಷ್ಟಿದೆ.

ಹಾರ್ಮುಜ್ ಉದ್ವಿಗ್ನತೆ ಹೆಚ್ಚಳ | ಜಾಗತಿಕ ಆರ್ಥಿಕತೆ ಮತ್ತು ಪೂರೈಕೆ ಸರಪಳಿ ಮೇಲೆ ತೀವ್ರ ಪರಿಣಾಮ

ಇರಾನ್‌ಗೆ ಅಮೆರಿಕ ನೌಕಾ ದಿಗ್ಬಂಧನ



• **ವಾಷಿಂಗ್ಟನ್:** ಇರಾನ್ ಜತೆಗಿನ ಕದನ ವಿರಾಮ ಮಾತುಕತೆಗಳು ವಿಫಲಗೊಂಡ ಬೆನ್ನಲ್ಲೇ, ಅಮೆರಿಕ ಆ ದೇಶದ ಬಂದರುಗಳ ಮೇಲೆ ನೌಕಾ ದಿಗ್ಬಂಧನವನ್ನು ಆರಂಭಿಸಿದೆ. ಈ ಬೆಳವಣಿಗೆಯಿಂದಾಗಿ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿದ್ದು, ಹಾರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಹೆಚ್ಚುವ ಆತಂಕ ಮೂಡಿದೆ. ಕಳೆದ ವಾರಾಂತ್ಯದಲ್ಲಿ ಅಮೆರಿಕದಲ್ಲಿ ನಡೆದ ಶಾಂತಿ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡ ನಂತರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಕಠಿಣ ನಿರ್ಧಾರ ಪ್ರಕಟಿಸಿದ್ದಾರೆ. ಇದಕ್ಕೂ ಮೊದಲು ಇರಾನ್ ತಾನೇ ಜಲಸಂಧಿಯಲ್ಲಿ ಟ್ಯಾಂಕರ್‌ಗಳ ಸಂಚಾರವನ್ನು ನಿರ್ಬಂಧಿಸಿತ್ತು. ಈಗ ಅಮೆರಿಕದ ದಿಗ್ಬಂಧನ ಇರಾನ್‌ನ ತೈಲ ರಫ್ತನ್ನು ಸಂಪೂರ್ಣವಾಗಿ ಕಡಿತಗೊಳಿಸಿ, ಅದನ್ನು ಮತ್ತೆ ಮಾತುಕತೆಗೆ ಬರುವಂತೆ ಒತ್ತಡ ಹೇರುವ ತಂತ್ರ ಎಂದು ವಿಶ್ಲೇಷಿಸಲಾಗಿದೆ.

ದಿಗ್ಬಂಧನ ಜಾರಿಯ ಸವಾಲುಗಳು: ಈ ದಿಗ್ಬಂಧನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಮೆರಿಕ ನೌಕಾಪಡೆ ಬೃಹತ್ ಪ್ರಮಾಣದ ಹಡಗುಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿದೆ. ವಿಶ್ವದ ಒಟ್ಟು ತೈಲ ವ್ಯಾಪಾರದಲ್ಲಿ ಸುಮಾರು ಶೇ. 20ರಷ್ಟು ಪಾಲು ಹೊಂದಿರುವ ಹೊರ್ಮುಜ್ ಜಲಸಂಧಿಯಲ್ಲಿನ ದಟ್ಟಣೆಯನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ. ನೌಕಾಶಕ್ತಿ ತಜ್ಞರ ಪ್ರಕಾರ, ಆರಂಭಿಕ ದಿನಗಳಲ್ಲಿ ಎಷ್ಟು ಹಡಗುಗಳನ್ನು ಅಮೆರಿಕ ವಶಪಡಿಸಿಕೊಳ್ಳುತ್ತದೆ ಎಂಬುದರ ಮೇಲೆ ಈ ಕಾರ್ಯಾಚರಣೆಯ ಯಶಸ್ಸು ನಿರ್ಧಾರವಾಗಲಿದೆ.



ಅಂತಾರಾಷ್ಟ್ರೀಯ ಕಾನೂನು: ಅಂತಾರಾಷ್ಟ್ರೀಯ ಕಾನೂನಿನಲ್ಲಿ ಇಂತಹ ದಿಗ್ಬಂಧನಗಳು ನಿಷ್ಪಕ್ಷಪಾತವಾಗಿರಬೇಕು ಮತ್ತು ಆಹಾರ ಹಾಗೂ ಔಷಧಿಗಳಂತಹ ಮಾನವೀಯ ನೆರವಿನ ಸರಕುಗಳಿಗೆ ವಿನಾಯಿತಿ ನೀಡಬೇಕು. ಈ ನಿಯಮಗಳನ್ನು ಉಲ್ಲಂಘಿಸಿದರೆ ದಿಗ್ಬಂಧನ ಕಾನೂನುಬಾಹಿರವಾಗುವ ಸಾಧ್ಯತೆಯಿದೆ. ಅಮೆರಿಕ ನೌಕಾಪಡೆಯ ಉಪಸ್ಥಿತಿಯಿಂದಾಗಿ ಹೆಚ್ಚಿನ ವ್ಯಾಪಾರಿ ಹಡಗುಗಳು ಸಂಘರ್ಷಕ್ಕೆ ಇಳಿಯದೆ ದಿಗ್ಬಂಧನವನ್ನು ಗೌರವಿಸುವ ಸಾಧ್ಯತೆಯಿದೆ, ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ತೈಲ ಮಾರುಕಟ್ಟೆ , ಆರ್ಥಿಕತೆ ಮೇಲೆ ಆಘಾತ: ಈ ಬೆಳವಣಿಗೆಯಿಂದಾಗಿ ತೈಲ ಬೆಲೆಗಳು ಗಗನಕ್ಕೇರಿವೆ. ಕಚ್ಚಾ ತೈಲದ ಬೆಲೆ ಈಗಾಗಲೇ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿದ್ದು, ಸಂಘರ್ಷ ಮುಂದುವರಿದರೆ ಇದು 150 ಡಾಲರ್‌ವರೆಗೂ ಏರಬಹುದು ಎಂದು ಎಚ್ಚರಿಸಲಾಗಿದೆ. ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಗ್ಯಾಲನ್‌ಗೆ ಸರಾಸರಿ 4.12 ಡಾಲರ್‌ಗೆ ತಲುಪಿದ್ದು, ಇದು ಗ್ರಾಹಕರಿಗೆ ದೊಡ್ಡ ಹೊರೆಯಾಗಿದೆ. ಏಷ್ಯಾ ರಾಷ್ಟ್ರಗಳು ತಮ್ಮ ತೈಲ ಅಗತ್ಯಕ್ಕಾಗಿ ಮಧ್ಯಪ್ರಾಚ್ಯವನ್ನು ಅವಲಂಬಿಸಿರುವುದರಿಂದ, ಈ ಭಾಗದ ದೇಶಗಳ ಮೇಲೆ ಆರ್ಥಿಕ ಪರಿಣಾಮ ತೀವ್ರವಾಗಿರಲಿದೆ.

ಪೂರೈಕೆ ಸರಪಳಿ ಮತ್ತು ಆಹಾರ ಭದ್ರತೆ: ತೈಲದ ಹೊರತಾಗಿ, ಈ ಮಾರ್ಗ ರಸಗೊಬ್ಬರ ಮತ್ತು ಕೈಗಾರಿಕಾ ಕಚ್ಚಾ ವಸ್ತುಗಳ ಸಾಗಣೆಗೆ ಅತ್ಯಂತ ನಿರ್ಣಾಯಕ. ವಿಶ್ವದ ಒಟ್ಟು ರಸಗೊಬ್ಬರ ಪೂರೈಕೆಯ ಶೇ. 30ರಷ್ಟು ಈ ಜಲಸಂಧಿಯ ಮೂಲಕವೇ ಸಾಗುತ್ತದೆ. ಇದರಿಂದಾಗಿ ಜಾಗತಿಕ ಕೃಷಿ ಇಳುವರಿ ಕುಂಠಿತಗೊಂಡು ಆಹಾರದ ಬೆಲೆಗಳು ಹೆಚ್ಚಾಗಬಹುದು. ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಕತಾರ್‌ನಂತಹ ದೇಶಗಳು ತಮ್ಮ ಆಹಾರದ ಅಗತ್ಯಕ್ಕಾಗಿ ಆಮದನ್ನೇ ನೆಚ್ಚಿಕೊಂಡಿದ್ದು, ವಿಮಾನಗಳ ಮೂಲಕ ಸರಕು ಸಾಗಿಸಬೇಕಾದ ಅನಿವಾರ್ಯತೆಯಿಂದಾಗಿ ವೆಚ್ಚ ದುಪ್ಪಟ್ಟಾಗುವ ಭೀತಿಯಿದೆ.

ಸಂಘರ್ಷ ತೀವ್ರಗೊಳ್ಳುವ ಸಾಧ್ಯತೆ: ಇರಾನ್ ಈ ದಿಗ್ಬಂಧನಕ್ಕೆ ಸುಲಭವಾಗಿ ಶರಣಾಗುವ ಲಕ್ಷಣಗಳು ಕಾಣುತ್ತಿಲ್ಲ. ಚೀನಾ ಮತ್ತು ರಷ್ಯಾದಂತಹ ದೇಶಗಳೊಂದಿಗೆ ಅದು ಪರ್ಯಾಯ ವ್ಯಾಪಾರ ಸಂಬಂಧಗಳನ್ನು ಹೊಂದಿದೆ. ಅಲ್ಲದೆ, ಇರಾನ್ ತನ್ನ 'ಫಾಸ್ಟ್ ಅಟ್ಯಾಕ್' ಬೋಟ್‌ಗಳು ಮತ್ತು ಕ್ಷಿಪಣಿಗಳ ಮೂಲಕ ಅಮೆರಿಕದ ಹಡಗುಗಳ ಮೇಲೆ ದಾಳಿ ನಡೆಸುವ ಬೆದರಿಕೆ ಹಾಕಿದೆ. ಅಮೆರಿಕ ಕೂಡ ದಿಗ್ಬಂಧನ ವಲಯಕ್ಕೆ ಬರುವ ಇರಾನ್‌ನ ಯಾವುದೇ ಹಡಗುಗಳನ್ನು ನಾಶಪಡಿಸುವುದಾಗಿ ಎಚ್ಚರಿಸಿದೆ. ಒಟ್ಟಾರೆಯಾಗಿ, ಈ ದಿಗ್ಬಂಧನವು ಕೇವಲ ಆರ್ಥಿಕ ಒತ್ತಡವಾಗಿ ಉಳಿಯದೆ ದೊಡ್ಡ ಮಟ್ಟದ ಯುದ್ಧಕ್ಕೆ ನಾಂದಿ ಹಾಡುತ್ತದೆಯೇ ಎಂಬ ಆತಂಕ ಜಗತ್ತನ್ನು ಕಾಡುತ್ತಿದೆ.

ಅಮೆರಿಕದ ದಿಗ್ಬಂಧನದಿಂದ ಇರಾನ್‌ಗೆ ಪ್ರತಿದಿನ 4081ಕೋಟಿ ರೂ. ನಷ್ಟ

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿಯಲ್ಲಿನ ಇರಾನ್ ಬಂದರುಗಳ ಮೇಲೆ ಅಮೆರಿಕ ವಿಧಿಸಿರುವ ದಿಗ್ಬಂಧನದಿಂದಾಗಿ ಇರಾನ್‌ಗೆ ಪ್ರತಿದಿನ ಅಂದಾಜು 435 ಮಿಲಿಯನ್ ಡಾಲರ್ ಆರ್ಥಿಕ ನಷ್ಟವಾಗಬಹುದು, ಎಂದು ಅಂದಾಜಿಸಲಾಗಿದೆ.

ಸೋಮವಾರದಿಂದ ಜಾರಿಗೆ ಬಂದಿರುವ ಈ ದಿಗ್ಬಂಧನ, ಇರಾನ್‌ನ ಇಂಧನ ವ್ಯಾಪಾರ, ವಿಶೇಷವಾಗಿ ಕಚ್ಚಾ ತೈಲ ಮತ್ತು ಪೆಟ್ರೋಕೆಮಿಕಲ್ಸ್ ನಿಂದ ಬರುವ ಹಣದ ಹರಿವನ್ನು ಗುರಿಯಾಗಿಸಿಕೊಂಡಿದೆ. ದಿನಕ್ಕೆ 87 ಡಾಲರ್ ಬೆಲೆಯಂತೆ 15 ಲಕ್ಷ ಬ್ಯಾರೆಲ್ ತೈಲ ರಫ್ತಿನ ಆಧಾರದ ಮೇಲೆ, ರಫ್ತು ವಲಯವೊಂದರಲ್ಲೇ 276 ಮಿಲಿಯನ್ ಡಾಲರ್ ನಷ್ಟವಾಗಲಿದೆ ಎಂದು ಅಂದಾಜಿಸಲಾಗಿದೆ. ಆದರೆ, ಪ್ರಸ್ತುತ ಕೊಲ್ಲಿಯ ಹೊರಭಾಗದಲ್ಲಿರುವ ಇರಾನ್‌ನ 154 ಮಿಲಿಯನ್ ಬ್ಯಾರೆಲ್ ತೈಲ ಸಂಗ್ರಹ ಈ ನಷ್ಟವನ್ನು ಸ್ವಲ್ಪಮಟ್ಟಿಗೆ ಸರಿದೂಗಿಸಬಹುದು.

ಶಾಂತಿ ಮಾತುಕತೆಗಳು ಒಪ್ಪಂದವಿಲ್ಲದೆ ಮುಕ್ತಾಯಗೊಂಡ ನಂತರ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಕ್ರಮಕ್ಕೆ ಮುಂದಾಗಿದ್ದಾರೆ. ಚೀನಾಕ್ಕೆ ಹೋಗುವ ಇಂಧನ ರಫ್ತನ್ನು ನಿರ್ಬಂಧಿಸುವುದು ಈ ಕಾರ್ಯಾಚರಣೆಯ



ಉದ್ದೇಶವಾಗಿದೆ, ಏಕೆಂದರೆ ಚೀನಾ ತನ್ನ ಅರ್ಧದಷ್ಟು ಕಚ್ಚಾ ತೈಲವನ್ನು ಈ ಜಲಸಂಧಿಯ ಮೂಲಕವೇ ಪಡೆಯುತ್ತದೆ.

ಭೂಸೇನೆಯನ್ನು ಬಳಸದೆಯೇ ಇರಾನ್‌ನ ಖಾರ್ಗ್ ದ್ವೀಪವನ್ನು ವಶಪಡಿಸಿಕೊಂಡಷ್ಟೇ ಆರ್ಥಿಕ ಹಾನಿಯನ್ನು ಈ ದಿಗ್ಬಂಧನ ಉಂಟುಮಾಡಲಿದೆ, ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ನಾಳೆ ಮತ್ತೆ ಅಮೆರಿಕ-ಇರಾನ್ ಮಾತುಕತೆ?

• **ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಕದನ ವಿರಾಮ ಮಾತುಕತೆಗಳನ್ನು ಮರುಪ್ರಾರಂಭಿಸಲು ಪಾಕಿಸ್ತಾನ ಉನ್ನತ ಮಟ್ಟದ ಸಂಪರ್ಕಗಳ ಮನವೊಲಿಸಿದ್ದು, ಗುರುವಾರ ಇಸ್ಲಾಮಾಬಾದ್‌ನಲ್ಲಿ ಎರಡನೇ ಸುತ್ತಿನ ಮಾತುಕತೆ ನಡೆಯಲಿದೆ ಎಂದು ಮಂಗಳವಾರ ವರದಿಯಾಗಿದೆ.

ಏ.21ರಂದು ಎರಡು ವಾರಗಳ ಯುದ್ಧ ವಿರಾಮ ಕೊನೆಗೊಳ್ಳಲಿದ್ದು, ಮತ್ತೊಮ್ಮೆ ಮಾತುಕತೆ ನಡೆಯಲಿದೆ. ಇರಾನ್ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಎರಡನೇ ಸುತ್ತಿನ ಮಾತುಕತೆಯನ್ನು ನಡೆಸಲು ಪ್ರಧಾನಿ ಶೆಹಬಾಜ್ ಷರೀಫ್, ಉಪಪ್ರಧಾನಿ ಇಶಾಕ್ ದಾರ್ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ತೀವ್ರ ಪ್ರಯತ್ನ ಮಾಡುತ್ತಿದ್ದಾರೆಂದು ಬಲ್ಲ ಮೂಲಗಳು ತಿಳಿಸಿವೆ.

ಕಳೆದ ವಾರಾಂತ್ಯ ನಡೆದ ಸಭೆಯಲ್ಲಿ, 47 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಅಮೆರಿಕ-ಇರಾನ್ ನೇರ ಮಾತುಕತೆ ನಡೆಸಿದ್ದವು. ಸೌದಿ ಅರೇಬಿಯಾ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಆಹ್ವಾನದ ಮೇರೆಗೆ ಗುರುವಾರ ಪಾಕ್ ಪ್ರಧಾನಿ ಶರೀಫ್ ಸೌದಿ ಅರೇಬಿಯಾಗೆ ಭೇಟಿ ನೀಡಲಿದ್ದಾರೆ. ಬಳಿಕ ಟರ್ಕಿಗೆ ಕಿರು ಭೇಟಿ ನೀಡಲಿದ್ದಾರೆ.

ಮಧ್ಯಸ್ಥಿಕೆ ವಹಿಸಿಕೊಳ್ಳಲು ಟರ್ಕಿ ಉತ್ಸುಕ: ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆ ವಿಫಲವಾದ ಹಿನ್ನೆಲೆ ಮಧ್ಯಸ್ಥಿಕೆ ವಹಿಸಲು ಟರ್ಕಿ ಉತ್ಸಾಹವನ್ನು ತೋರಿಸಿದೆ. ಅಮೆರಿಕ-ಇರಾನ್ ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ. ಆದರೆ ಇಸ್ರೇಲ್‌ನ ವಿಧ್ವಂಸಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಟರ್ಕಿ ವಿದೇಶಾಂಗ ಸಚಿವ ಹಕನ್ ಫೈದಾನ್ ಹೇಳಿದ್ದಾರೆ.

ಇರಾನ್ ಬಂದರುಗಳಿಂದ ನಿರ್ಗಮಿಸಿದ 2 ಹಡಗುಗಳು

• **ದುಬೈ:** ಇರಾನ್ ಬಂದರುಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ವಿಧಿಸಿರುವ ಸೇನಾ ದಿಗ್ಬಂಧನದ ನಡುವೆಯೂ, ಸೋಮವಾರ ಕನಿಷ್ಠ ಎರಡು ವಾಣಿಜ್ಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿವೆ.

ಮಾ.31ರಂದು ಬುಶೆಹ್ರ್‌ನಿಂದ ಹೊರಟಿದ್ದ, 31,000 ಟನ್ ಮೆಥನಾಲ್ ಹೊತ್ತ ಕೊಮೊರೊಸ್ ಧ್ವಜದ ಟ್ಯಾಂಕರ್ ಎಲ್ಪಿಸ್ ಸೋಮವಾರ ಸಂಜೆ 1600 ಜಿಎಂಟಿ ವೇಳೆಗೆ ಲಾರಾಕ್ ದ್ವೀಪವನ್ನು ದಾಟಿದೆ ಎಂದು ಕೆಪ್ಲರ್ ಕಡಲ ಟ್ರ್ಯಾಕಿಂಗ್ ಅಂಕಿಅಂಶಗಳು ಖಚಿತಪಡಿಸಿವೆ. ಬಂದರ್ ಇಮಾಮ್ ಖೊಮೇನಿಯಲ್ಲಿ ಜೋಳವನ್ನು ಇಳಿಸಿದ್ದ ಲೈಬೀರಿಯಾ ಧ್ವಜದ 'ಕ್ರಿಶ್ಚಿಯಾನಾ' ಹಡಗು ಕೂಡ ದಿಗ್ಬಂಧನ ಜಾರಿಗೆ ಬಂದ ಎರಡು ಗಂಟೆಗಳ ನಂತರ ಜಲಸಂಧಿಯನ್ನು ದಾಟಿದೆ. ಇದಲ್ಲದೆ, ಚೀನಾದ ಟ್ಯಾಂಕರ್ 'ರಿಚ್ ಸ್ಟಾರ್ರಿ' ಕೂಡ ರಾತ್ರೋರಾತ್ರಿ ಒಮನ್ ಕಡೆಗೆ ಪ್ರಯಾಣ ಬೆಳೆಸಿದೆ.

ಶಾಂತಿ ಮಾತುಕತೆ ವಿಫಲವಾದ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ದಿಗ್ಬಂಧನಕ್ಕೆ ಆದೇಶಿಸಿದ್ದರು. ಇರಾನ್ ಕರಾವಳಿ ಪ್ರದೇಶಗಳನ್ನು ಪ್ರವೇಶಿಸುವ ಅಥವಾ ಅಲ್ಲಿಂದ ನಿರ್ಗಮಿಸುವ ಎಲ್ಲಾ ಹಡಗುಗಳಿಗೆ ಈ ನಿರ್ಬಂಧ ಅನ್ವಯಿಸುತ್ತದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಈ ನಿರ್ಬಂಧಗಳು ತೈಲ, ರಸಗೊಬ್ಬರ ಮತ್ತು ಆಹಾರದ ಜಾಗತಿಕ ಪೂರೈಕೆಗೆ ಅಡ್ಡಿಪಡಿಸಬಹುದು ಮತ್ತು ಗ್ರಾಹಕ ಬೆಲೆಗಳ ಏರಿಕೆಗೆ ಕಾರಣವಾಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕಿರುಸುದ್ದಿ

ಐ-ಪ್ಯಾಕ್ ಸಹಸಂಸ್ಥಾಪಕ 10 ದಿನ ಇಡಿ ಕಸ್ಟಡಿಗೆ

• **ಹೊಸದಿಲ್ಲಿ:** ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು(ಇಡಿ) ಐ-ಪ್ಯಾಕ್ ಸಹ-ಸಂಸ್ಥಾಪಕ ಮತ್ತು ನಿರ್ದೇಶಕ ವಿನೇಶ್ ಚಾಂಡೇಲ್ ಅವರನ್ನು ಬಂಧಿಸಿದೆ. ದಿಲ್ಲಿಯ ವಿಶೇಷ ನ್ಯಾಯಾಲಯವು ಅವರನ್ನು ಹತ್ತು ದಿನಗಳ ಇಡಿ ಕಸ್ಟಡಿಗೆ ಕಳುಹಿಸಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಕೆಲವು ವಾರಗಳ ಮುನ್ನ ಇಡಿ ಸೋಮವಾರ ತಡರಾತ್ರಿ ರಾಜ್ಯದಲ್ಲಿ ನಡೆದ ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಚಾಂಡೇಲ್ ಅವರನ್ನು ಬಂಧಿಸಿದೆ.

ಆಸ್ಟ್ರೇಲಿಯಾಗೆ ಮೊದಲ ಮಹಿಳಾ ಸೇನಾ ಮುಖ್ಯಸ್ಥೆ

• **ಕ್ಯಾನ್ಬೆರಾ:** ಲೆಫ್ಟಿನೆಂಟ್ ಜನರಲ್ ಸುಸಾನ್ ಕೊಯ್ಲ್ ಅವರನ್ನು ನೇಮಿಸುವ ಮೂಲಕ ಆಸ್ಟ್ರೇಲಿಯಾ ಇದೇ ಮೊದಲ ಬಾರಿಗೆ ತನ್ನ ಮೊದಲ ಮಹಿಳಾ ಸೇನಾ ಮುಖ್ಯಸ್ಥರನ್ನು ನೇಮಕ ಮಾಡಿದೆ. ಪ್ರಸ್ತುತ ಜಂಟಿ ಸಾಮರ್ಥ್ಯಗಳ ಮುಖ್ಯಸ್ಥರಾಗಿರುವ ಕೊಯ್ಲ್, ಆಸ್ಟ್ರೇಲಿಯಾದ ಮಿಲಿಟರಿಯಲ್ಲಿ ಸೇವೆಗಳ ಮುಖ್ಯಸ್ಥರಾಗಿ ನೇಮಕಗೊಂಡ ಮೊದಲ ಮಹಿಳೆಯಾಗಿದ್ದಾರೆ.

ಸಿರಿಂಜ್ ಮರುಬಳಕೆ:331 ಪಾಕ್ ಮಕ್ಕಳಿಗೆ ಎಚ್‌ಐವಿ!

• **ಇಸ್ಲಾಮಾಬಾದ್:** ಆಘಾತಕಾರಿ ಘಟನೆಯೊಂದರಲ್ಲಿ ಪಾಕಿಸ್ತಾನದಲ್ಲಿ ಸಿರಿಂಜಿಯನ್ನು ಮರುಬಳಕೆ ಮಾಡಿದ್ದರಿಂದ 331 ಮಕ್ಕಳು ಎಚ್‌ಐವಿ ಸೋಂಕಿಗೆ ತುತ್ತಾಗಿದ್ದಾರೆ. ಬಿಬಿಸಿ ನ್ಯೂಸ್‌ನ ರಹಸ್ಯ ತನಿಖೆಯಿಂದ ಪಾಕಿಸ್ತಾನದ ಟಿಎಚ್‌ಕ್ಯು ಆಸ್ಪತ್ರೆ ಟೌನ್ಸಾದಲ್ಲಿ ವ್ಯವಸ್ಥಿತ ಸೋಂಕು ನಿಯಂತ್ರಣ ವೈಫಲ್ಯಗಳನ್ನು ಬಹಿರಂಗಪಡಿಸಿದೆ. ಬಿಬಿಸಿಯು ಆಸ್ಪತ್ರೆ ಸಿಬ್ಬಂದಿ ಮಕ್ಕಳ ಮೇಲೆ ಸಿರಿಂಜ್‌ಗಳನ್ನು ಮರುಬಳಕೆ ಮಾಡುವುದನ್ನು ಚಿತ್ರೀಕರಿಸಿದೆ. ದೃಶ್ಯಾವಳಿಗಳು ಅಪಾಯಕಾರಿ ನೈರ್ಮಲ್ಯ ಉಲ್ಲಂಘನೆ ಮತ್ತು ಅನೇಕ ರೋಗಿಗಳಿಗೆ ಉಪಕರಣಗಳ ಮರುಬಳಕೆಯನ್ನು ಬಹಿರಂಗಪಡಿಸಿದೆ. ಇದು ಅಸುರಕ್ಷಿತ ವೈದ್ಯಕೀಯ ಪದ್ಧತಿಗಳಿಗೆ ಸಂಬಂಧಿಸಿದ ಎಚ್‌ಐವಿ ಏಕಾಏಕಿ ವ್ಯಾಪಕ ಬಿಕ್ಕಟ್ಟಿಗೆ ಕಾರಣವಾಗಿದೆ. ಎಂಟು ವರ್ಷದ ಮೊಹಮ್ಮದ್ ಅಮೀನ್ ಎಚ್‌ಐವಿ ಪರೀಕ್ಷೆಯಲ್ಲಿ ಪಾಸಿಟಿವ್ ಬಂದ ಸ್ವಲ್ಪ ಸಮಯದಲ್ಲೇ ನಿಧನರಾಗಿದ್ದು, ಅಂತಿಮ ದಿನಗಳಲ್ಲಿ ತೀವ್ರ ಜ್ವರ ಮತ್ತು ತೀವ್ರ ನೋವಿನಿಂದ ಬಳಲಿದ್ದಾನೆ ಎಂದು ಅವರ ತಾಯಿ ನೋವು ಹಂಚಿಕೊಂಡಿದ್ದಾರೆ. ಇನ್ನೂ ಆಘಾತಕಾರಿಯಂತೆ ಸಹೋದರಿ ಅಸ್ಮಾಳಿಗೆ ಕೂಡ ಎಚ್‌ಐವಿ ಪಾಸಿಟಿವ್ ಬಂದಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ವಾಡಿಕೆಯ ಚಿಕಿತ್ಸೆಯ ವೇಳೆ ನೀಡಲಾದ ಕಲುಷಿತ ಚುಚ್ಚುಮದ್ದಿನ ಮೂಲಕ ಎರಡೂ ಮಕ್ಕಳಿಗೆ ವೈರಸ್ ತಗುಲಿದೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ. ಸ್ಥಳೀಯ ವೈದ್ಯ ಡಾ. ಗುಲ್ ಕೈಸ್ರಾನಿ ಅವರು ತಮ್ಮ ಕ್ಲಿನಿಕ್‌ಗೆ ಭೇಟಿ ನೀಡುವ ಮಕ್ಕಳಲ್ಲಿ ಎಚ್‌ಐವಿ ಪ್ರಕರಣಗಳಲ್ಲಿ ಅಸಾಮಾನ್ಯ ಹೆಚ್ಚಳವನ್ನು ಗಮನಿಸಿದಾಗ ಈ ಸಾಂಕ್ರಾಮಿಕ ರೋಗವು ಮೊದಲ ಬಾರಿಗೆ 2024ರ ಕೊನೆಯಲ್ಲಿ ಬೆಳಕಿಗೆ ಬಂದಿದೆ.

ಗೋರ್ಖಾ ಸಮಸ್ಯೆಗೆ ಪರಿಹಾರದ ಭರವಸೆ

• **ಗಂಗಾರಾಂಪುರ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯವನ್ನು ವಿಭಜಿಸದೆ ಸಾಂವಿಧಾನಿಕವಾಗಿ ಗೋರ್ಖಾ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಘೋಷಿಸಿದ್ದಾರೆ.

ಗಂಗಾರಾಂಪುರ ಮತ್ತು ಮಾಣಿಕ್‌ಚಕ್‌ನಲ್ಲಿ ನಡೆದ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದ ಶಾ, ಉತ್ತರ ಬಂಗಾಳದ ಅಭಿವೃದ್ಧಿಗಾಗಿ ಎಕೋ-ಅಡ್ವೆಂಚರ್ ಹಬ್, ಏಮ್ಸ್, ಕ್ಯಾನ್ಸರ್ ಆಸ್ಪತ್ರೆ ಹಾಗೂ ಐಐಟಿ ಮತ್ತು ಐಐಎಂ ಕ್ಯಾಂಪಸ್‌ಗಳ ಸ್ಥಾಪನೆಯನ್ನು ಒಳಗೊಂಡ ಯೋಜನೆಗಳ ಪಟ್ಟಿ ಮಾಡಿದರು. ಅಲ್ಲದೆ, ರಾಜಬಂಶಿ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲಾಗುವುದು ಎಂದು ಅವರು ತಿಳಿಸಿದರು. ಅಕ್ರಮ ವಲಸೆ ಮತ್ತು ರಾಜಕೀಯ ಹಿಂಸಾಚಾರವನ್ನು ಕೊನೆಗಾಣಿಸುವುದು ಪಕ್ಷದ ಪ್ರಾಥಮಿಕ ಉದ್ದೇಶ, ಎಂದು ಸಚಿವರು ಒತ್ತಿಹೇಳಿದರು.

ರಾಜಕೀಯ ಹಿನ್ನೆಲೆ: ಗೋರ್ಖಾಲ್ಯಾಂಡ್ ಪ್ರತ್ಯೇಕ ರಾಜ್ಯದ ಬೇಡಿಕೆ ಈ ಹಿಂದೆ 2017ರವರೆಗೆ ಹಿಂಸಾತ್ಮಕ ಪ್ರತಿಭಟನೆಗಳಿಗೆ ಸಾಕ್ಷಿಯಾಗಿತ್ತು. ಇದೇ ವೇಳೆ ಶಾ, ಹುಮಾಯೂನ್ ಕಬೀರ್ ಪ್ರಸ್ತಾಪಿಸಿರುವ ಮಸೀದಿ ನಿರ್ಮಾಣವನ್ನು ಬಿಜೆಪಿ ತಡೆಯಲಿದೆ ಎಂದು ಹೇಳಿದ್ದಾರೆ. ಏಪ್ರಿಲ್ 23 ಮತ್ತು 29 ರಂದು ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ, ತೃಣಮೂಲ ಕಾಂಗ್ರೆಸ್ ಮತ್ತು ಭಾರತೀಯ ಗೋರ್ಖಾ ಪ್ರಜಾತಾಂತ್ರಿಕ ಮೋರ್ಚಾ ಮೈತ್ರಿಕೂಟವನ್ನು ಎದುರಿಸಲಿದೆ. ಮೇ 4 ರಂದು ಮತ ಎಣಿಕೆ ನಡೆಯಲಿದೆ.

ಹಿಂದುಗಳ ವಿವಾಹವಾಗಿ, ಮತಾಂತರಗೊಳಿಸಿ!

• **ಮುಂಬೈ:** ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್ ಕಚೇರಿಯಲ್ಲಿ ನಡೆದ ಲೈಂಗಿಕ ಕಿರುಕುಳ ಹಾಗೂ ಬಲವಂತ ಮತಾಂತರ ಆರೋಪ ಪ್ರಕರಣ ಹೊಸ ತಿರುವು ಪಡೆದಿದ್ದು, ಸಾಕ್ಷಿದಾರರ ಹೇಳಿಕೆ ಪ್ರಕರಣದ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿದ ಒಬ್ಬ ಸಾಕ್ಷಿದಾರ, ಆರೋಪಿಗಳು ಸಹೋದ್ಯೋಗಿಗಳಿಗೆ 'ಹಿಂದು ಹುಡುಗಿಯರೊಂದಿಗೆ ಸ್ನೇಹ ಬೆಳೆಸಿ, ಅವರನ್ನು ಮದುವೆಯಾಗಿರಿ ಮತ್ತು ಮತಾಂತರಗೊಳಿಸಿ' ಎನ್ನುತ್ತಿದ್ದರು ಎಂದು ಆರೋಪಿಸಿದ್ದಾರೆ. ಈ ಆರೋಪದ ಜತೆಗೆ ಹಣಕಾಸು ಪ್ರೋತ್ಸಾಹ ಕೂಡ ನೀಡಲಾಗುತ್ತಿತ್ತು ಎಂಬ ಗಂಭೀರ ಅಂಶವೂ ಹೊರಬಂದಿದೆ.ದೂರುದಾರ ಮಹಿಳೆಯರು ನೀಡಿದ ಮಾಹಿತಿಯಂತೆ, ಕಚೇರಿಯಲ್ಲಿ ಲೈಂಗಿಕ ಕಿರುಕುಳ ಮಾತ್ರವಲ್ಲದೆ ಧಾರ್ಮಿಕ ಒತ್ತಡ ಹಾಗೂ ಅವಮಾನಕಾರಿ ವರ್ತನೆ ಕೂಡ ನಡೆದಿತ್ತು. ಕೆಲವರನ್ನು ನಮಾಜ್ ಮಾಡಲು ಬಲವಂತ ಮಾಡಲಾಗಿದೆ, ಧಾರ್ಮಿಕ ಆಚರಣೆಗಳನ್ನು ಬದಲಾಯಿಸಲು ಒತ್ತಡ ಹೇರಲಾಗಿದೆ ಎಂಬ ಆರೋಪಗಳೂ ಕೇಳಿಬಂದಿವೆ. ಇನ್ನೂ, ಮಹಿಳೆಯರು ಮೇಲಾಧಿಕಾರಿಗಳಿಗೆ ದೂರು ನೀಡಿದರೂ ಸೂಕ್ತ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಕೆಲ ಸಂದರ್ಭಗಳಲ್ಲಿ ದೂರುಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

ಬ್ಯಾಂಕ್ ಖಾತೆ ಮೇಲೆ ಕಣ್ಣು: ಅಕ್ರಮ ಚಟುವಟಿಕೆಗಳನ್ನು ನಡೆಸಲು ಬಂಧಿತ ಆರೋಪಿಗಳ ಬ್ಯಾಂಕ್ ಖಾತೆಗಳು ಹಣವನ್ನು ಪಡೆದಿದೆಯೇ ಎಂದು ಪರಿಶೀಲಿಸಲು ತನಿಖೆ ನಡೆಸಲಾಗುತ್ತಿದೆ. ಹಣದ ಮೂಲವನ್ನು ನಿರ್ಧರಿಸಲು ಆರೋಪಿಗಳ ಖಾತೆಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಈ ಪ್ರಕರಣವನ್ನು ಎಸ್‌ಐಟಿ ತನಿಖೆ ನಡೆಸುತ್ತಿದೆ.

ಛತ್ತೀಸ್‌ಗಢದಲ್ಲಿ ಬಾಯ್ಲರ್ ಸ್ಫೋಟಕ್ಕೆ 10 ಮಂದಿ ಬಲಿ

• **ಸಕ್ತಿ (ಛತ್ತೀಸ್‌ಗಢ):** ರಾಜ್ಯದ ವೇದಾಂತ ವಿದ್ಯುತ್ ಘಟಕದಲ್ಲಿ ಮಂಗಳವಾರ ಸಂಭವಿಸಿದ ಬಾಯ್ಲರ್ ಸ್ಫೋಟಕ್ಕೆ 10 ಮಂದಿ ಬಲಿಯಾಗಿದ್ದು, ಸುಮಾರು 15 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಕ್ತಿ ಜಿಲ್ಲೆಯ ಸಿಂಘಿ ತರೈ ಪ್ರದೇಶದಲ್ಲಿನ ವೇದಾಂತ ವಿದ್ಯುತ್ ಸ್ಥಾವರದಲ್ಲಿ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ 9 ಮಂದಿ ಮೃತಪಟ್ಟಿದ್ದು, 15 ಗಾಯಾಳುಗಳಿಗೆ ರಾಯ್‌ಗಢದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಕ್ತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಫುಲ್ ಠಾಕೂರ್ ಹೇಳಿದ್ದಾರೆ. ದುರ್ಘಟನೆಯ ಬಗ್ಗೆ ಕೂಲಂಕುಶ ತನಿಖೆಯನ್ನು ನಡೆಸಲಾಗುವುದು ಎಂದು ರಾಯ್‌ಗಢ ಜಿಲ್ಲಾ ನ್ಯಾಯಾಧೀಶ ಮಹೇಶ್ ಶರ್ಮಾ ಹೇಳಿದ್ದಾರೆ. ವೇದಾಂತ ವಿದ್ಯುತ್ ಸ್ಥಾವರದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕಾರ್ಮಿಕರೂ ಗಾಯಗೊಂಡಿದ್ದಾರೆ. ತನಿಖೆ ಪ್ರಗತಿಯಲ್ಲಿದೆ ಎಂದು ನ್ಯಾ.ಶರ್ಮಾ ತಿಳಿಸಿದ್ದಾರೆ. ಮಂಗಳವಾರ ಮಧ್ಯಾಹ್ನ ಈ ದುರಾದೃಷ್ಟಕರ ಘಟನೆ ಸಂಭವಿಸಿದೆ. ಸಿಂಘಿತರೈ ಘಟಕದ ಬಾಯ್ಲರ್ ಯೂನಿಟ್‌ವೊಂದರಲ್ಲಿ ಸ್ಫೋಟ ಸಂಭವಿಸಿದ್ದು, ಎನ್‌ಜಿಎಸ್‌ಎಲ್ ಸಿಬ್ಬಂದಿ ಸ್ಥಳದಲ್ಲಿದ್ದರು.

ಎಕ್ಸ್‌ಪ್ರೆಸ್‌ವೇ ಲೋಕಾರ್ಪಣೆ ಮಾಡಿ ಪ್ರಧಾನಿ ನರೇಂದ್ರ ಮೋದಿ ನೀಡಿದ ಭರವಸೆ

ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸಲು ಬದ್ಧ

• **ಡೆಹ್ರಾಡೂನ್:** 370ನೇ ವಿಧಿ ರದ್ದತಿ ನಂತರದಲ್ಲಿ ಸಂವಿಧಾನವೀಗ ದೇಶಾದ್ಯಂತ ಸಮಸ್ತರಿಗೂ ಸಮಾನವಾಗಿ, ಪರಿಪೂರ್ಣವಾಗಿ ಅನ್ವಯಿಸುತ್ತಿದೆ. ಎನ್‌ಡಿಎ ಸರಕಾರ ಪ್ರತಿಯೋರ್ವ ಬಡವರಿಗೂ ನೈಜ ಸಾಮಾಜಿಕ ನ್ಯಾಯ ನೀಡಲು ಸಂಕಲ್ಪ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.



ಇಂದಿನ ದಿನ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮ ವರ್ಧಂತಿ ದಿನವಾಗಿದೆ. ದೇಶದ ಜನರ ಪರವಾಗಿ ತಾನು ಬಾಬಾಸಾಹೇಬರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ಕಳೆದ ದಶಕದಲ್ಲಿ ತನ್ನ ನೇತೃತ್ವದ ಸರಕಾರ ಕೈಗೊಂಡ ನಿರ್ಧಾರಗಳು, ರೂಪಿಸಿರುವ ನಿಯಮಗಳು ಸಂವಿಧಾನದ ಘನತೆ ಗೌರವಗಳ ಎತ್ತಿಹಿಡಿದಿವೆ ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು. ದಿಲ್ಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್ ಉದ್ಘಾಟನೆ ನಂತರ ಡೆಹ್ರಾಡೂನ್‌ನಲ್ಲಿ ನಡೆದ ಸಾರ್ವಜನಿಕ ಸಭೆ ಉದ್ದೇಶಿಸಿ ಪ್ರಧಾನಿ ಮಾತನಾಡಿದರು. ಡಾ. ಅಂಬೇಡ್ಕರ್ ಬಡವರು, ಶೋಷಿತರು ಮತ್ತು ಅವಕಾಶವಂಚಿತರಿಗೆ ನ್ಯಾಯ ನೀಡಲು ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದರು ಎಂದು ಸ್ಮರಿಸಿದರು.

ನಕ್ಸಲ್ ಪಿಡುಗು, ಮಾವೋವಾದ ಅಂತ್ಯಗೊಂಡ ಅದೆಷ್ಟೋ ಜಿಲ್ಲೆಗಳಲ್ಲಿ ಜನಪರ ಕಾರ್ಯಚಟುವಟಿಕೆಗಳು ಸಂವಿಧಾನದ ಸ್ಫೂರ್ತಿಗನುಗುಣವಾಗಿ ನಡೆದಿವೆ ಎಂದು ಮಾಹಿತಿ ನೀಡಿದ ಪ್ರಧಾನಿ ಮೋದಿ, ದೇಶದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಯನ್ನು ಸಂವಿಧಾನ ಅಪೇಕ್ಷಿಸಿದೆ. ಈ ನಿಟ್ಟಿನಲ್ಲಿ ಸಂವಿಧಾನವು ನಿರೀಕ್ಷಿಸಿರುವ ಸ್ಫೂರ್ತಿಯಲ್ಲಿ ಮುನ್ನಡೆದು ಉತ್ತರಾಖಂಡವು ದೇಶಕ್ಕೊಂದು ಸನ್ಮಾರ್ಗ ತೋರಿದೆ ಎಂದು ಪ್ರಶಂಸಿಸಿದರು. ಇಂದೀಗ ಇದೇ ಸ್ಫೂರ್ತಿಯಲ್ಲಿ ನಮ್ಮ ಸರಕಾರ ಪ್ರತೀ ಬಡವರು ಮತ್ತು ಅವಕಾಶ ವಂಚಿತ ಜನರಿಗೆ ಸಾಮಾಜಿಕ ನ್ಯಾಯ ನೀಡಲು ಸಂಕಲ್ಪಬದ್ಧವಾಗಿದೆ.

ಪ್ರತಿಯೋರ್ವರಿಗೂ ಪ್ರಾಥಮಿಕ ಸೌಲಭ್ಯ: ಎಲ್ಲರಿಗೂ ಪ್ರಾಥಮಿಕ ಆವಶ್ಯಕತೆಗಳು ಅಥವಾ ಮೂಲಭೂತ ಸೌಕರ್ಯ ಕಲ್ಪಿಸುವುದು ಮತ್ತು ಪ್ರತಿಯೋರ್ವರ ಸಂಪನ್ನತೆ ಮುಖೇನ ದೇಶದ ಸಮತೋಲಿತ ಅಭಿವೃದ್ಧಿಯು , ಸಾಮಾಜಿಕ ನ್ಯಾಯದಾನ ಸಾಕಾರಕ್ಕಿರುವ ಬೃಹತ್ ಮಾಧ್ಯಮವಾಗಿದೆ. ಬಾಬಾಸಾಹೇಬರು ಅತ್ಯಾಧುನಿಕ ಮೂಲಸೌಕರ್ಯ ಮತ್ತು ಕೈಗಾರಿಕೀಕರಣವನ್ನು ಬಲವಾಗಿ ಪ್ರತಿಪಾದಿಸಿದ್ದು ಕೂಡ ಇದೇ ಕಾರಣಕ್ಕಾಗಿ. ಪ್ರಸ್ತುತ ದಶಕವು ಉತ್ತರಾಖಂಡದ್ದಾಗಲಿದೆ ಮತ್ತು ಈ ಕಾರಿಡಾರ್ ರಾಜ್ಯದ ಬೆಳವಣಿಗೆಗೆ ತುಂಬು ವೇಗ ನೀಡಲಿದೆ ಎಂದು ಪ್ರಧಾನಿ ಮೋದಿ ಭರವಸೆ ವ್ಯಕ್ತಪಡಿಸಿದರು.


ಪ್ರವಾಸೋದ್ಯಮದಿಂದ ಎಲ್ಲರಿಗೂ ಪ್ರಯೋಜನ: ಪ್ರವಾಸೋದ್ಯಮದ ಅಭಿವೃದ್ಧಿಯಿಂದ ಸಮಸ್ತರಿಗೂ ಪ್ರಯೋಜನವಾಗುವುದು. ಉತ್ತರಾಖಂಡವು ಚಳಿಗಾಲದ ಪ್ರವಾಸೋದ್ಯಮ ಮತ್ತು ಕ್ರೀಡೆಗಳಿಗೆ ಪ್ರಮುಖ ಕೇಂದ್ರವಾಗಿ ರೂಪುಗೊಳ್ಳುತ್ತಿರುವುದ ಕಂಡು ತನಗೆ ಸಂತಸವಾಗಿದೆ. ಆನೆಗಳ ಸುರಕ್ಷೆ ಮತ್ತು ಭದ್ರತೆಯನ್ನು ಪರಿಗಣಿಸಿ, ದಿಲ್ಲಿ-ಡೆಹ್ರಾಡೂನ್ ಎಕ್ಸ್‌ಪ್ರೆಸ್‌ವೇ ಉದ್ದಕ್ಕೂ 12ಕಿಮೀ ಎತ್ತರದ ಕಾರಿಡಾರ್ ನಿರ್ಮಿಸಲಾಗಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು. ಮುಂದಿನ ವರ್ಷ ಹರಿದ್ವಾರದಆತಿಥೇಯದಲ್ಲಿ ನಡೆಯುವ ಹರಿದ್ವಾರ ಕುಂಭವು ಒಂದು ದೈವೀಕ, ಪರಿಶುದ್ಧ ಉತ್ಸವವಾಗಿ ಮೇಳೈಸಲು ನಾವು ತುಂಬು ಪರಿಶ್ರಮಿಸಬೇಕೆಂದು ಕರೆ ನೀಡಿದರು.

ಬಿಹಾರದಲ್ಲಿ ಬಿಜೆಪಿಗೆ ಮೊದಲ ಮುಖ್ಯಮಂತ್ರಿ ಗದ್ದುಗೆ

ನೂತನ ಸಿಎಂ ಸಾಮ್ರಾಟ್ ಚೌಧರಿ

• **ಪಾಟ್ನಾ:** ಬಿಹಾರದ ನೂತನ ಮುಖ್ಯಮಂತ್ರಿಯಾಗಿ ಸಾಮ್ರಾಟ್ ಚೌಧರಿ ಆಯ್ಕೆಯಾಗಿದ್ದು, ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಸಿಎಂ ನಿತೀಶ್ ಕುಮಾರ್ ರಾಜ್ಯಸಭೆಗೆ ಸ್ಪರ್ಧಿಸುವ ನಿರ್ಧಾರದಿಂದ ತೆರವಾಗಿರುವ ಬಿಹಾರ ಮುಖ್ಯಮಂತ್ರಿ ಗಾದಿಯನ್ನು ಬಿಜೆಪಿ ನಾಯಕ, ಬಿಹಾರದ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ತುಂಬಲಿದ್ದಾರೆ ಮತ್ತು ಇದಕ್ಕಾಗಿ ವೇದಿಕೆ ಸಜ್ಜಾಗಿದೆ. ಚೌಧರಿ ಅವರಿಗೆ ದೊರೆತಿರುವ ಬಡ್ತಿಯಿಂದ, ರಾಜ್ಯದಲ್ಲಿ ತನ್ನ ಮೊದಲ ಮುಖ್ಯಮಂತ್ರಿಯನ್ನು ಹೊಂದಿದ ಹಿರಿಮೆ ಬಿಜೆಪಿಯದ್ದಾಗಲಿದೆ. ಒಬಿಸಿ ಸಮುದಾಯದ ಪ್ರಮುಖ ನಾಯಕ, ಈ ಹಿಂದೆ ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥನಾಗಿ ದುಡಿದಿರುವ ಚೌಧರಿ ಅವರು ಬುಧವಾರ ಲೋಕಭವನದಲ್ಲಿ ನಡೆಯುವ ಸಮಾರಂಭದಲ್ಲಿ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.



ನಿತೀಶ್‌ಕುಮಾರ್ ರಾಜ್ಯಸಭೆಗೆ ಸ್ಪರ್ಧಿಸಲು ತೀರ್ಮಾನಿಸಿದ ಬೆನ್ನಲ್ಲೇ, ಮುಂದಿನ ಮುಖ್ಯಮಂತ್ರಿ ಯಾರೆಂಬ ಜಿಜ್ಞಾಸೆಗೆ ಅವಕಾಶವಿಲ್ಲದ ತೆರ ಚೌಧರಿ ಅವರ ಹೆಸರು ಮುಂಚೂಣಿಯಲ್ಲಿ ಕೇಳಿಬಂದಿತ್ತು. ಬಿಹಾರದ ಮುಂದಿನ ಮುಖ್ಯಮಂತ್ರಿಯಾಗಿ ಚೌಧರಿ ಆಯ್ಕೆಯನ್ನು ಬಿಜೆಪಿಯ ಬಹುತೇಕ ಹಿರಿಯ ನಾಯಕರು ಬೆಂಬಲಿಸಿದ ಪರಿಣಾಮ, ಚೌಧರಿ ಆಯ್ಕೆ ಸರ್ವಾನುಮತದ ಆಯ್ಕೆಯಾಗಿ ಪರಿವರ್ತಿತವಾಗಿತ್ತು.

ಅನುಮೋದಿಸಿದ್ದು ಸಚಿವ ಚೌಹಾಣ್: ಮಹತ್ವದ ಶಾಸಕಾಂಗ ಪಕ್ಷ ಸಭೆಯಲ್ಲಿ ಹಿರಿಯ ಬಿಜೆಪಿ ನಾಯಕರಾದ ಮಂಗಲ್ ಪಾಂಡೆ, ದಿಲೀಪ್ ಜೈಸ್ವಾಲ್, ರೇಣುದೇವಿ ಜತೆಗೂಡಿ ಉಪ ಮುಖ್ಯಮಂತ್ರಿ ವಿಜಯ ಸಿನ್ಹಾ, ಚೌಧರಿ ಅವರ ಹೆಸರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಔಪಚಾರಿಕವಾಗಿ ಪ್ರಸ್ತಾವಿಸಿದ್ದರು. ಕೇಂದ್ರೀಯ ವೀಕ್ಷಕ ಮತ್ತು ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅನುಮೋದಿಸಿದ್ದರು.

ಚೌಧರಿ ಕೃತಜ್ಞತೆ: ಶಾಸಕಾಂಗ ಪಕ್ಷ ನಾಯಕನೆಂಬ ಪ್ರಕಟಣೆಯಾಗುತ್ತಲೇ, ಬಿಹಾರದ ಜನತೆಯ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಬಿಜೆಪಿಗೆ ಚೌಧರಿ ಅವರು ಕೃತಜ್ಞತೆ ಸಲ್ಲಿಸಿದರು. ಇದು ತನಗೊಂದು ಹುದ್ದೆಯಷ್ಟೇ ಅಲ್ಲ, ಬಿಹಾರದ ಜನತೆಯ ವಿಶ್ವಾಸ ಮತ್ತು ಕನಸುಗಳ ಸಾಕಾರ ಜತೆಗೆ ಅವರ ಸೇವೆಗೆ ಸಿಕ್ಕಿರುವ ಪವಿತ್ರ ಅವಕಾಶವಾಗಿದೆ ಎಂದಿದ್ದಾರೆ.

ಕಿರುಸುದ್ದಿ

ಆರ್ಮ್ ರಸ್ಲಿಂಗ್ ಚಾಂಪಿಯನ್ ಶಿಪ್: ಸುರೇಶ್ ಪೂಜಾರಿಗೆ ಎರಡು ಚಿನ್ನದ ಪದಕ

ಕೋಟ: ಮಂಗಳೂರಿನ ಟೌನ್ ಹಾಲ್‌ನಲ್ಲಿ ಏ.11 ರಿಂದ 12ವರೆಗೆ ನಡೆದ ಕರ್ನಾಟಕ ಸ್ಟೇಟ್ ಆರ್ಮ್ ರಸ್ಲಿಂಗ್ ಚಾಂಪಿಯನ್ ಶಿಪ್ –2026ರಲ್ಲಿ 90 ಕೆಜಿ ವಿಭಾಗದಲ್ಲಿ ಬಲ ಕೈ ಹಾಗೂ ಎಡ ಕೈ ವಿಭಾಗದಲ್ಲಿ ಸುರೇಶ್ ಪೂಜಾರಿ ಪಾಂಡೇಶ್ವರ ಸ್ಪರ್ಧಿಸಿ ಎರಡರಲ್ಲೂ ಚಿನ್ನದ ಪದಕ ಪಡೆದು ಮೇ ತಿಂಗಳಿನಲ್ಲಿ ಗುಜರಾತ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



ಇವರು ಬ್ರಹ್ಮಾವರದ ಬಾಡಿ ಜೋನ್ ಜಿಮ್ ನಾ ಸದಸ್ಯರಾಗಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಬಾರಿ ಪ್ರಶಸ್ತಿಗಳನ್ನು ಮಡಿಲಿಗೇರಿಸಿಕೊಂಡಿದ್ದಾರೆ.

ಕಲಾವಿದ ರಾಜೇಶ್ ಕೆಂಚನಕೆರೆಗೆ ಕೋಡು ಗುರುರಾಜ ಭಟ್ ಪ್ರಶಸ್ತಿ

ಕಿನ್ನಿಗೋಳಿ : ರಂಗಭೂಮಿ ಯಲ್ಲಿ ಮಹೋನ್ನತ ಸಾಧನೆ ಮಾಡಿದ ಕಲಾವಿದರಿಗೆ ಪ್ರತೀ ವರ್ಷ ನೀಡಲಾಗುವ ಕೋಡು ಗುರುರಾಜ ಭಟ್ ಪ್ರಶಸ್ತಿಯನ್ನು ಈ ಬಾರಿ ರಂಗನಟ ರಾಜೇಶ್ ಕೆಂಚನಕೆರೆಯವರಿಗೆ ನೀಡಲಾಗುವುದು. ಸುರಗಿರಿ ಯುವಕ ಮಂಡಲದ ನೇತೃತ್ವದಲ್ಲಿ ಈ ಪ್ರಶಸ್ತಿಯನ್ನು ಪ್ರತೀ ವರ್ಷ ನೀಡಲಾಗುತ್ತಿದ್ದು, ಏ. 27 ರಂದು ನಡೆಯುವ 56ನೇ ವಾರ್ಷಿಕೋತ್ಸವದ ಸಂದರ್ಭ ನೀಡಲಾಗುವುದೆಂದು ಯುವಕ ಮಂಡಲದ ಪ್ರಕಟಣೆ ತಿಳಿಸಿದೆ. ರಾಜೇಶ್ ಕೆಂಚನಕೆರೆಯವರು ರಂಗಭೂಮಿ ಕಲಾವಿದರಾಗಿ ಸುಮಾರು 35 ವರ್ಷಗಳಿಂದ ಸಕ್ರಿಯರಾಗಿದ್ದಾರೆ. ಮಂಗಳೂರಿನ ಚಾ ಪರ್ಕ, ಕಿನ್ನಿಗೋಳಿಯ ವಿಜಯಾ ಕಲಾವಿದರು, ಮಂಗಳೂರಿನ ಲಕುಮಿ ತಂಡ ಸಹಿತ ವಿವಿಧ ನಾಟಕ ತಂಡಗಳಲ್ಲಿ ಅಭಿನಯ ಮಾಡಿದ್ದಾರೆ. ಹಲವು ತುಳು ಸಿನಿಮಾಗಳಲ್ಲಿಯೂ ಅಭಿನಯಿಸಿರುವ ಇವರು ಹವ್ಯಾಸಿ ಯಕ್ಷಗಾನ ಕಲಾವಿದರಾಗಿದ್ದು ಸೂಡ ಮಯೂರ ವಾಹನ ಯಕ್ಷಗಾನ ಮೇಳದಲ್ಲಿ ಸಕ್ರಿಯರಾಗಿದ್ದಾರೆ. ಕಿನ್ನಿಗೋಳಿ ರೋಟರಿ ಸದಸ್ಯರಾಗಿರುವ ರಾಜೇಶ್ ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಜನಪ್ರಿಯರಾಗಿದ್ದಾರೆ.



ಎನ್‌ಎಫ್‌ಡಿಸಿ ಅಧ್ಯಕ್ಷರಾಗಿ ನಟ ಜಿ.ಕೃಷ್ಣಕುಮಾರ್ ನೇಮಕ

ಕಾಸರಗೋಡು: ನ್ಯಾಶನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಶನ್ ಲಿಮಿಟೆಡ್‌ನ ತಾತ್ಕಾಲಿಕ ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರೇತರ ನಿರ್ದೇಶಕರನ್ನಾಗಿ ಮಲೆಯಾಳ ಸಿನಿಮಾ ನಟ ಹಾಗೂ ಬಿಜೆಪಿ ನೇತಾರ ಜಿ.ಕೃಷ್ಣಕುಮಾರ್ ಅವರನ್ನು ರಾಷ್ಟ್ರಪತಿಯವರು ನೇಮಿಸಿದ್ದಾರೆ. ಇದು ಮೂರು ವರ್ಷಗಳ ಅವಧಿಯ ತನಕದ ನೇಮಕಾಗಿಯಾಗಿದೆ. ಮಲೆಯಾಳ ಸಿನಿಮಾ ರಂಗಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿರುವ ಕೃಷ್ಣಕುಮಾರ್ ಬಿಜೆಪಿಯ ಕೇರಳ ಘಟಕದ ಓರ್ವ ನೇತಾರರೂ ಆಗಿದ್ದಾರೆ.



ಶ್ರೀ ಕ್ಷೇತ್ರ ಕಟೀಲು ಜಾತ್ರೆ ಆರಂಭ



ಕಟೀಲು : ಶ್ರೀ ದುರ್ಗಾಪರ ಮೇಶ್ವರೀ ದೇವಸ್ಥಾನದಲ್ಲಿ ವರ್ಷಾ ವಧಿ ಉತ್ಸವಕ್ಕೆ ಮಂಗಳವಾರ ಧ್ವಜಾರೋಹಣದೊಂದಿಗೆ ಚಾಲನೆ ನೀಡಲಾಯಿತು. ದೈವ ದೇವರ ದರ್ಶನದ ಬಳಿಕ ಮಹಾಪೂಜೆ ನಡೆಯಿತು. ನೂರಾರು ಮಂದಿ ಪಾನಕ ಪ್ರಸಾದವನ್ನು ಸ್ವೀಕರಿಸಿ, ಮನೆಗಳಿಗೂ ಕೊಂಡೊಯ್ದರು.

ಸರಸ್ವತೀ ಸದನದಲ್ಲಿ ದಿನವಿಡೀ ಭಜನೆ, ಭರತನಾಟ್ಯ, ಸಂಗೀತ ಹೀಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ರಾತ್ರಿ ಬಲಿ, ರಾಜಾಂಗಣ ಪ್ರಸಾದ ವಿತರಣೆ, ಚಿನ್ನದ ರಥ ಉತ್ಸವ, ಬೆಳ್ಳಿ ಪಲ್ಲಕಿ ಉತ್ಸವ, ವಸಂತ ಮಂಟಪ ಪೂಜೆ ಅಷ್ಟಾವಧಾನ ನಡೆಯಿತು. ಇಂದು ಮುಂಜಾನೆ ಯುಗಾದಿ ವಿಷು ದೀಪದ ಬಲಿ, ರಾತ್ರಿ ಉತ್ಸವ ಬಲಿ, ಪಂಚಾಂಗ ಪೂಜೆ, ಪಠನ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಕಟೀಲು ಭ್ರಾಮರಿ ಕಲಾಮಾತೆಯಾಗಿಯೂ ಪ್ರಸಿದ್ಧಳು. ಹಾಗಾಗಿ ದೇವಿಯ ಸನ್ನಿಧಿಯಲ್ಲಿ ಕಲಾವಿದರು ಸೇವೆ ಸಲ್ಲಿಸಿ ಧನ್ಯರಾಗಲು ಬಯಸುತ್ತಾರೆ. ಭಜನೆ, ನೃತ್ಯ ಸಂಗೀತ ಸೇವೆ ಹೀಗೆ ನಾನಾ ರೀತಿಯಲ್ಲಿ ಸೇವೆ ಸಲ್ಲಿಸಲು ನೂರಾರು ಮಂದಿ ಕೇಳಿಕೊಳ್ಳುತ್ತಿದ್ದು, ಪ್ರತಿ ಭಾನುವಾರ, ಶುಕ್ರವಾರ, ನವರಾತ್ರಿಯಂತಹ ವಿಶೇಷ ದಿನಗಳಲ್ಲಿ ಅವಕಾಶ ನೀಡಲಾಗುತ್ತಿದೆ. ಕಟೀಲು ಉತ್ಸವದ ದಿನಗಳಲ್ಲಿ ಸರಸ್ವತೀ ಸದನ ಹಾಗೂ ದೇಗುಲದ ಒಳಾಂಗಣದಲ್ಲಿ, ಮೆರವಣಿಗೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ನಾನಾ ಕಲಾವಿದರು ಭಾಗವಹಿಸುತ್ತಾರೆ ಎಂದು ಕಟೀಲು ದೇಗುಲದ ಅರ್ಚಕ ಶ್ರೀಹರಿನಾರಾಯಣದಾಸ ಆಸ್ರಣ್ಣ ಹೇಳಿದರು. ಅವರು ಮಂಗಳವಾರ ಕಟೀಲು ದೇವಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಟೀಲು ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಕೊಡೆತ್ತೂರುಗುತ್ತು ಸನತ್ ಕುಮಾರ ಶೆಟ್ಟಿ, ಬಿಪಿನ್‌ಚಂದ್ರ ಶೆಟ್ಟಿ, ಪ್ರವೀಣ್‌ದಾಸ್ ಭಂಡಾರಿ, ಸಿದ್ಧಾರ್ಥ ಶೆಟ್ಟಿ, ಪ್ರಸಾದ್ ಶೆಟ್ಟಿ ಪೆರ್ಮಾಜೆ, ಭಜನಾ ಸಂಘಟಕರಾದ ಜ್ಯೋತಿ ಉಡುಪ, ಎಕ್ಕಾರು ಭಾರತಿ ಶೆಟ್ಟಿ ಮತ್ತಿತರರಿದ್ದರು. ದುರ್ಗಾಪ್ರಸಾದ್ ನಿರೂಪಿಸಿದರು.

ಚೆಲ್ಯಡ್ಕ ಸೇತುವೆಯು ಶಿಥಿಲಗೊಂಡ ಹಿನ್ನೆಲೆ | ಸರ್ವಋತು ಸೇತುವೆಯಾಗಿ ನಿರ್ಮಾಣ

ವಾಹನ ಸಂಚಾರಕ್ಕೆ ಮುಕ್ತ

ಪುತ್ತೂರು: ತಾಲೂಕಿನ ಮುಳುಗು ಸೇತುವೆ ಎಂದೇ ಹೆಸರಾಗಿದ್ದ ಚೆಲ್ಯಡ್ಕ ಸೇತುವೆಯು ಶಿಥಿಲಗೊಂಡ ಹಿನ್ನೆಲೆಯಲ್ಲಿ, ಇದೀಗ ಸುಮಾರು ರೂ.4.50 ಕೋಟಿ ವೆಚ್ಚದಲ್ಲಿ ಸರ್ವಋತು ಸೇತುವೆ ನಿರ್ಮಾಣಗೊಂಡಿದ್ದು, ಮಂಗಳವಾರ ಸೇತುವೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಸೇತುವೆಯ ಕಾಮಗಾರಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಂಗಳವಾರ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ನೂತನ ಸೇತುವೆಯಲ್ಲಿ ಮತ್ತೆ ಬಸ್ಸು ಸಂಚಾರಕ್ಕೆ ಚಾಲನೆ ನೀಡುವ ಮೂಲಕ ಸೇತುವೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಿದರು.

ಹೀಗಾಗಿ ಪುತ್ತೂರಿನಿಂದ ಕುಂಜೂರುಪಂಜ–ರೆಂಜ ಮಾರ್ಗವಾಗಿ ಪಾಣಾಜೆಗೆ ಬಸ್ಸು ಸಂಚಾರವು ಪುನರಾರಂಭಗೊಳ್ಳಲಿದೆ. ಪ್ರತಿ ಮಳೆಗಾಲದ ಸಂದರ್ಭದಲ್ಲೂ ನೆರೆ ನೀರು ಹರಿದು ಬಂದಾಗ ಚೆಲ್ಯಡ್ಕ ಸೇತುವೆಯು ನೀರಿನಿಂದ ಮುಳುಗುತ್ತಿದ್ದು, ಹೀಗಾಗಿ ಅದು ಮುಳುಗು ಸೇತುವೆ ಎಂಬ ಹೆಸರನ್ನು ಪಡೆದಿತ್ತು. ಮಳೆಗಾಲದಲ್ಲಿ ಪದೇ ಪದೇ ಸೇತುವೆ ಮುಳುಗಡೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಜನಸಂಚಾರಕ್ಕೆ ತೊಂದರೆ ಉಂಟಾಗುತ್ತಿತ್ತು. ಆದರೂ ಅನಿವಾರ್ಯವಾದ ಕಾರಣ ನೀರು ಇಳಿದ ಬಳಿಕ ಸೇತುವೆಯಲ್ಲಿ ಸಂಚಾರ ಸಾಗುತ್ತಿತ್ತು.

ತೀರಾ ಹಳೆಯದಾಗಿದ್ದ ಚೆಲ್ಯಡ್ಕ ಸೇತುವೆಯು ಶಿಥಿಲಗೊಂಡ ಕಾರಣ 2024ರ ಜೂನ್ ತಿಂಗಳಲ್ಲಿ ಅಂದಿನ ಜಿಲ್ಲಾಧಿಕಾರಿಗಳು ಸೇತುವೆಯಲ್ಲಿ ವಾಹನ ಸಂಚಾರ ನಿಷೇಧಿಸಿದ್ದು, ಬಳಿಕ ಸ್ಥಳೀಯರ ಒತ್ತಾಯದ ಮೇರೆಗೆ ಲಘು ವಾಹನಗಳ ಸಂಚಾರ ಆರಂಭಗೊಂಡು ಮುನ್ನೆಚ್ಚರಿಕಾ ಕ್ರಮವಾಗಿ ರಾತ್ರಿ ಹೊತ್ತು ಸಂಚಾರವನ್ನು ನಿಷೇಧಿಸಲಾಗಿತ್ತು. ಮುಳುಗು ಸೇತುವೆಯ ಬದಲಾಗಿ ಚೆಲ್ಯಡ್ಕದಲ್ಲಿ ಸರ್ವಋತು ಸೇತುವೆ ನಿರ್ಮಾಣದ ದೃಷ್ಟಿಯಿಂದ ಸುಮಾರು 3 ಕೋಟಿಗಳ ಅನುದಾನದಲ್ಲಿ ಕಾಮಗಾರಿಗೆ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಶಿಲಾನ್ಯಾಸ ನೆರವೇರಿಸಿದ್ದರು. ಜತೆಗೆ ಸಂಪರ್ಕ ರಸ್ತೆ, ತಡೆಗೋಡೆಗೆ ಸುಮಾರು ರೂ.1.50 ಕೋಟಿ ಅನುದಾನ ಬಿಡುಗಡೆಗೊಂಡು ಅದರ ಕಾಮಗಾರಿಯು ಪ್ರಗತಿಯಲ್ಲಿದೆ.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ಬ್ಲಾಕ್ ಮಹಿಳಾ ಕಾಂಗ್ರೆಸ್ ಕಾರ್ಯಾಧ್ಯಕ್ಷೆ ಚಂದ್ರಪ್ರಭಾ ಗೌಡ ನೀರ್ಪಾಡಿ ಸೇರಿದಂತೆ ಸ್ಥಳೀಯರು ಉಪಸ್ಥಿತರಿದ್ದರು.



> **ಸೇತುವೆಯಲ್ಲಿ ವಾಹನ ಸಂಚಾರಕ್ಕೆ ಚಾಲನೆ ನೀಡಿ ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ, ಮಳೆಗಾಲದಲ್ಲಿ ಪ್ರತಿಬಾರಿಯೂ ಮೂರ್ನಾಲ್ಕು ಗಂಟೆ ಮುಳುಗುತ್ತಿದ್ದ ಚೆಲ್ಯಡ್ಕ ಸೇತುವೆಯ ಬಳಿ ಸರ್ವಋತು ಸೇತುವೆ ನಿರ್ಮಾಣ 15-20 ವರ್ಷಗಳ ಬೇಡಿಕೆಯಾಗಿದ್ದು, ಗೆದ್ದ ಆರೇ ತಿಂಗಳಲ್ಲಿ ಅನುದಾನ ಇಟ್ಟು ಪ್ರಸ್ತುತ ಸೇತುವೆ ನಿರ್ಮಾಣಗೊಂಡಿದೆ. ಜತೆಗೆ ಸೇತುವೆಯ ಎರಡೂ ಭಾಗದಲ್ಲೂ ಒಂದೊಂದು ಕಿ.ಮೀ.ಗಳ ಸಂಪರ್ಕ ರಸ್ತೆ–ತಡೆಗೋಡೆಗೂ ಅನುದಾನ ಇಡಲಾಗಿದೆ.**
>
> ■ ಅಶೋಕ್ ಕುಮಾರ್ ರೈ

ಏ.11ರಂದು ನಂತೂರಿನಲ್ಲಿ ನಡೆದ ಅಪಘಾತ

ಗಾಯಾಳು ಫೋಟೋಗ್ರಾಫರ್ ಚಿಕಿತ್ಸೆ ಫಲಕಾರಿಯಾಗದೆ ಮೃತ್ಯು



ಮಂಗಳೂರು: ನಗರದ ನಂತೂರು–ಪಂಪ್‌ವೆಲ್ ನಡುವಿನ ತಾರಾಯಿತೋಟ ಎಂಬಲ್ಲಿ ಏ.11ರಂದು ರಾತ್ರಿ ಸಂಭವಿಸಿದ್ದ ಅಪಘಾತದಲ್ಲಿ ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸ್ಕೂಟರ್ ಸವಾರ, ಹಿರಿಯ ಛಾಯಾಗ್ರಾಹಕ ಕೆ.ಮೋಹನ್ ಚಂದರ್ (64) ಅವರು ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಮೃತಪಟ್ಟಿದ್ದಾರೆ.



ಮೋಹನ್ ಚಂದರ್ ಅವರ ಮನೆಯಲ್ಲಿ ಮದುವೆಯ ಸಂಭ್ರಮವಿತ್ತು. ಮೇ 10ರಂದು ಹಿರಿಯ ಪುತ್ರಿಗೆ ವಿವಾಹ ನಿಶ್ಚಯವಾಗಿತ್ತು. ಆದರೆ ಅವರ ಅಕಾಲಿಕ ನಿಧನ ಮನೆ ಮಂದಿಯನ್ನು ಶೋಕಸಾಗರದಲ್ಲಿ ಮುಳುಗಿಸಿದೆ. ಸಂಭ್ರಮವಿರಬೇಕಾಗಿದ್ದ ಮನೆಯಲ್ಲಿ ಸೂತಕದ ಛಾಯೆ ಆವರಿಸಿದೆ. ಕಳೆದ ಹಲವು ವರ್ಷಗಳಿಂದ ಪದವಿನಂಗಡಿಯಲ್ಲಿ ಸ್ವಂತ ಸ್ಟುಡಿಯೋ ಹೊಂದಿದ್ದ ಅವರು ಉತ್ತಮ ಫೋಟೋಗ್ರಾಫರ್ ಎಂದು ಗುರುತಿಸಿಕೊಂಡಿದ್ದರು. ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್‌ನ ಸದಸ್ಯರೂ ಆಗಿದ್ದರು.

ಏ.11ರಂದುರಾತ್ರಿನಡೆದಅಪಘಾತದಲ್ಲಿ ಗುರುಪುರದ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಧರ್ಮಸ್ಥಳ ಮೂಲದ, ನಗರದ ಜಪ್ಪಿನಮೊಗರು ಬಳಿ ವಾಸವಿದ್ದ ಗೋಪಾಲಕೃಷ್ಣ (27) ಘಟನೆಯಲ್ಲಿ ಸ್ಥಳದಲ್ಲೇ ಮೃತಪಟ್ಟಿದ್ದರು. ಗೋಪಾಲಕೃಷ್ಣ ಅವರು ಶನಿವಾರ ರಾತ್ರಿ ಕೆಲಸ ಮುಗಿಸಿ ಬೈಕ್‌ನಲ್ಲಿ ಜಪ್ಪಿನಮೊಗರು ಕಡೆಗೆ ತೆರಳುತ್ತಿದ್ದಾಗ, ರಸ್ತೆಯ ಎಡಭಾಗದಲ್ಲಿ ಸಾಗುತ್ತಿದ್ದ ಮೋಹನ್ ಅವರ ಸ್ಕೂಟರನ್ನು ಓವರ್ ಟೇಕ್ ಮಾಡುವ ಭರದಲ್ಲಿ ಅವರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾರೆ. ಇದರಿಂದ ನಿಯಂತ್ರಣ ಕಳೆದುಕೊಂಡು ವೇಗವಾಗಿ ಮುಂದಕ್ಕೆ ಸಾಗಿ ಬಲಭಾಗದಲ್ಲಿ ಸಾಗುತ್ತಿದ್ದ ಟಿಪ್ಪರ್‌ಗೆ ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದರು. ಘಟನೆಯಲ್ಲಿ ತಲೆಗೆ ಗಂಭೀರ ಗಾಯಗೊಂಡು ರಸ್ತೆಗೆ ಎಸೆಯಲ್ಪಟ್ಟಿದ್ದ ಸ್ಕೂಟರ್ ಸವಾರ ಮೋಹನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ.

ಏ.16 ರಿಂದ 19ರವರೆಗೆ ಉರ್ವ ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ ನೇಮೋತ್ಸವ

ಕೊರಗಜ್ಜನಿಗೆ ನೂತನ ಬಂಗಾರದ ಮುಟ್ಟಾಲೆ ಸಮರ್ಪಣೆ

ಮಂಗಳೂರು: ಬೋಳೂರು ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ ಏ.16 ರಿಂದ 19ರವರೆಗೆ 20ನೇ ವಾರ್ಷಿಕ ನೇಮೋತ್ಸವ ಜರಗಲಿದೆ. ಏ.16ರ ಸಂಜೆ 6ಕ್ಕೆ ಕ್ಷೇತ್ರದ ಪ್ರಧಾನ ದೈವ ಸಾರಲ ಪಟ್ಟದ ಕೊರಗಜ್ಜನಿಗೆ ನೂತನ ಬಂಗಾರದ ಮುಟ್ಟಾಲೆ ಸಮರ್ಪಣೆ. ಉರ್ವ ಮೈದಾನದಲ್ಲಿ ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ,ರಾತ್ರಿ8ಕ್ಕೆ ಜಿಲ್ಲೆಯ ಪ್ರಸಿದ್ಧ ಕಲಾವಿದರ ಸಮಾಗಮದೊಂದಿಗೆ ಯಕ್ಷ ತೆಲಿಕೆ ಯಕ್ಷ ಹಾಸ್ಯ ವೈಭವ ನಟೆಯಲಿದೆ.



ಏ.17ರ ಬೆಳಗ್ಗೆ 6ಕ್ಕೆ ಪ್ರಾರ್ಥನೆ, ಪುಣ್ಯಾಹ, ಗಣಹೋಮ, ನವಕ ಕಲಶ,ಪರ್ವ ಪೂಜೆ,ತೋರಣ ಮುಹೂರ್ತ ಬೊಕ್ಕಪಟ್ಣದ ಶ್ರೀ ವೆಂಕಟರಮಣ ದೇವಸ್ಥಾನದ ಕೆ.ಪುರುಷೋತ್ತಮ ಭಟ್ ನೇತೃತ್ವದಲ್ಲಿ ಜರಗಲಿದೆ. ಬೆಳಗ್ಗೆ 10ಕ್ಕೆ ಕ್ಷೇತ್ರದ ಪ್ರಧಾನ ಸಾರಲ ಪಟ್ಟದ ಕೊರಗಜ್ಜನಿಗೆ ಸೀಯಾಳಭಿಷೇಕ ಅನಂತರ ಪರ್ವ ಸೇವೆ, ಪ್ರಸಾದ ವಿತರಣೆ ನಡೆಯಲಿದೆ.

ಏ.18ರಂದು ಸಂಜೆ 6.30ಕ್ಕೆ ಶ್ರೀಚಾಮುಂಡೇಶ್ವರಿ–ಕತ್ತಲೆಕಾನ ಗುಳಿಗ ದೈವಗಳ ಸಿರಿಸಿಂಗಾರದ ನೇಮೋತ್ಸವ, ರಾತ್ರಿ 7.30ಕ್ಕೆ ಸಾರ್ವಜನಿಕ ಮಹಾ ಅನ್ನಸಂತರ್ಪಣೆ, ಗಂಧ ಪ್ರಸಾದ ವಿತರಣೆ ನಡೆಯಲಿದೆ.

ಏ.19ರಂದು ರಾತ್ರಿ 7ಕ್ಕೆ ಕೊರಗಜ್ಜನಿಗೆ ದೊಂದಿ ಬೆಳಕಿನ ಸೇವೆ ನಡೆಯಲಿದೆ. ಬಳಿಕ ಅಗೇಲು ಸೇವೆ ಗಂಧ ಪ್ರಸಾದ ವಿತರಣೆ ನಡೆದು ರಾತ್ರಿ 8.30ರಿಂದ ಅನ್ನಸಂತರ್ಪಣೆ ನಡೆಯಲಿದೆ ಎಂದು ಕ್ಷೇತ್ರದ ಅಧ್ಯಕ್ಷರಾದ ರಾಜೇಶ್ ಉರ್ವ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಎಂಡೋಸಲ್ಫಾನ್ ಸಂತ್ರಸ್ತರಿಗೆ ಶಿಬಿರ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗೆ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಏ. 15ರಿಂದ ಜಿಲ್ಲೆಯ ಖಾಸಗಿ ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

ಏ.15 ರಂದು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹಾಗೂ ಏ 18 ರಂದು ಪುತ್ತೂರು ತಾಲೂಕಿನ ಪಾಣಾಜೆ ಹಾಗೂ ಏ.21 ರಂದು ಬೆಳ್ತಂಗಡಿ ತಾಲೂಕಿನ ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಉಪ್ಪಿನಂಗಡಿ, ಸುಳ್ಯ ತಾಲೂಕಿನ ಬೆಳ್ಳಾರೆ ಆರೋಗ್ಯ ಕೇಂದ್ರಗಳಲ್ಲಿ ಏರ್ಪಡಿಸಲಾಗಿದೆ. ಶಿಬಿರದ ಸದುಪಯೋಗವನ್ನು ಎಂಡೋಸಲ್ಫಾನ್ ಸಂತ್ರಸ್ತರು ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲ್ಲಿ ನೀರಿನ ಸಮಸ್ಯೆ ಇಲ್ಲ | ಸಮತಟ್ಟು ಪ್ರದೇಶದಲ್ಲಿ ನೀರು ಸರಾಗ

ಬೆಂದೂರ್‌ನಲ್ಲಿ ನೀರು ಸರಬರಾಜು ಸಮರ್ಪಕ

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

▶ ಹರೀಶ ಕುಲ್ಕುಂದ



ಮಂಗಳೂರು: ನಗರದ ಮಧ್ಯೆ ಇರುವ ಸಮತಟ್ಟಾದ ಪ್ರದೇಶವನ್ನಷ್ಟೇ ಹೊಂದಿರುವ ಬೆಂದೂರ್ ವಾರ್ಡ್‌ನಲ್ಲಿ ನೀರಿನ ಸರಬರಾಜು ಸಮರ್ಪಕವಾಗಿ ಆಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್ ಪೂರ್ತಿ ನಗರದ ಲಕ್ಷಣವನ್ನಷ್ಟೇ ಹೊಂದಿದ್ದು, ಇಲ್ಲಿ ಪ್ರತ್ಯೇಕ ಪ್ರತ್ಯೇಕ ಮನೆಗಳು ಕಡಿಮೆ. ಅತಿ ಹೆಚ್ಚು ಜನರು ಫ್ಲ್ಯಾಟ್‌ಗಳಲ್ಲಿ ವಾಸಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆ, ಆಸ್ಪತ್ರೆಗಳು, ವಾಣಿಜ್ಯ ಸಂಕೀರ್ಣಗಳು ಇವೆ. ಎತ್ತರ ತಗ್ಗು ಪ್ರದೇಶ ಇಲ್ಲದ ಕಾರಣ ಪೈಪ್‌ಲೈನ್‌ನಲ್ಲಿ ನೀರು ಸರಾಗವಾಗಿ ಪೂರೈಕೆ ಆಗುತ್ತಿದೆ. ದಿನಬಳಕೆಗೆ ಆಗತ್ಯ ಇರುವಷ್ಟು ನೀರು ಸರಬರಾಜು ಆಗುತ್ತಿದೆ.

ಮರ್ಕರ ಹಿಲ್ ಬಲಭಾಗ, ಸಂತ ಆಗ್ನೆಸ್ ಕಾಲೇಜು, ಸಂತ ತೆರೆಸಾ ಸಂಸ್ಥೆ ಇಎಸ್‌ಐ ಆಸ್ಪತ್ರೆ ರಸ್ತೆ, ಶಿವಭಾಗ್ ಎರಡನೇ ಅಡ್ಡರಸ್ತೆ ಅಪ್ಪರ್ ಬೆಂದೂರು, ಲೋವರ್ ಬೆಂದೂರು, ಎಸ್‌ಸಿಎಸ್ ಆಸ್ಪತ್ರೆ ರಸ್ತೆ ಮಿಷನ್ ಕಂಪೌಂಡ್, ಬಲ್ಮಠ ನ್ಯೂರೋಡ್, ಆರ್ಯ ಸಮಾಜ ರಸ್ತೆ ಕಂಕನಾಡಿ ಮಾರ್ಕೆಟ್ ಪ್ರದೇಶಗಳನ್ನು ವ್ಯಾಪಿಸಿಕೊಂಡಿರುವ ಬೆಂದೂರು ವಾರ್ಡ್‌ನಲ್ಲಿ ನೀರಿನ ವಿಚಾರದಲ್ಲಿ ಜನತೆಗೆ ನೆಮ್ಮದಿ ಇದೆ.

ಈ ವಾರ್ಡ್‌ಗೆ ಬೆಂದೂರುವಿನ ಎರಡು ಟ್ಯಾಂಕ್‌ಗಳಿಂದ ನೀರು ಪೂರೈಕೆ ಆಗುತ್ತಿದೆ. ಮೊದಲ ಟ್ಯಾಂಕ್ 1.10 ಲೀಟರ್ ಸಾಮರ್ಥ್ಯ, ಎರಡನೇ ಟ್ಯಾಂಕ್ 1 ಲಕ್ಷ ಲೀಟರ್ ಸಾಮರ್ಥ್ಯ ಹೊಂದಿದೆ. ಇಡೀ ವಾರ್ಡ್‌ಗೆ ಇವೆರಡು ಟ್ಯಾಂಕ್‌ಗಳಿಂದ ಗ್ರ್ಯಾವಿಟಿ ಮೂಲಕ ನೀರು ಪೂರೈಕೆ ಆಗುತ್ತಿದೆ.

ತುಂಬೆಯಿಂದ ನೀರು ಪೂರೈಕೆ ಸ್ಥಗಿತಗೊಂಡರೆ, ಪೈಪ್‌ಲೈನ್‌ಗೆ ಹಾನಿ ಉಂಟಾದರೆ, ವಿದ್ಯುತ್ ನಿಲುಗಡೆ ಆದರೆ ಮಾತ್ರ ಈ ವಾರ್ಡ್‌ಗೆ ನೀರು ಪೂರೈಕೆ ಸ್ಥಗಿತಗೊಳ್ಳುತ್ತದೆ. ಉಳಿದಂತೆ ಪ್ರತಿದಿನ ಮೂರ್ನಾಲ್ಕು ಗಂಟೆಗಳ ಕಾಲ ಆಗತ್ಯ ಇರುವಷ್ಟು ಪ್ರಮಾಣದಲ್ಲಿ ಇಲ್ಲಿಗೆ ನೀರು ಸರಬರಾಜು ಮಾಡಲಾಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ನೀರಿನ ಪೂರೈಕೆ ಸುಸೂತ್ರವಾಗಿ ಆಗುತ್ತಿರುವ ಕಾರಣ ಬೆಂದೂರು ವಾರ್ಡ್‌ಗೆ ಟ್ಯಾಂಕರ್ ಮೂಲಕ ನೀರು ಒದಗಿಸುವ ಪ್ರಮೇಯ ಈ ಬೇಸಿಗೆಯಲ್ಲಿ ಇದುವರೆಗೆ ಎದುರಾಗಿಲ್ಲ. ಈ ವಾರ್ಡ್ ನಲ್ಲಿ ಸರಕಾರಿ ಬಾವಿಗಳಿಲ್ಲ. ಶಾಂತಿನಿಲಯದಲ್ಲಿ ಕೊಳವೆಬಾವಿ ಇದ್ದು, ಈ ಬಾರಿ ಇದುವರೆಗೆ ನೀರಿನ ಬಳಕೆ ಆಗತ್ಯತೆ ಕಂಡುಬಂದಿಲ್ಲ. ಈ ಹಿಂದಿನ ವರ್ಷಗಳಲ್ಲಿ ತುಂಬೆಯಿಂದ ನೀರು ಸ್ಥಗಿತಗೊಂಡಾಗ ಶಾಂತಿನಿಲಯ ಬೋರ್‌ವೆಲ್ ನೀರು ಬಳಸಲಾಗಿತ್ತು. ಕೆಲ ಫ್ಲ್ಯಾಟ್ ನಿವಾಸಿಗಳು ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ.



ಕಂಕನಾಡಿ ಮಾರುಕಟ್ಟೆ ಕಟ್ಟಡ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.

> **ನಮ್ಮ ವಾರ್ಡ್‌ನಲ್ಲಿ ಪ್ರಸ್ತುತ ನೀರಿನ ಯಾವುದೇ ಸಮಸ್ಯೆ ಇಲ್ಲ. ಆಗತ್ಯ ಇರುವಷ್ಟು ಪ್ರಮಾಣದ ನೀರು ಮಂಗಳೂರು ಮಹಾನಗರ ಪಾಲಿಕೆಯಿಂದ ಪೂರೈಕೆ ಆಗುತ್ತಿದೆ. ಕಳೆದ ಬಾರಿ ನೀರಿನ ಸಮಸ್ಯೆ ಆದಾಗ ಶಾಂತಿನಿಲಯ ಬಳಿಯ ಬೋರ್‌ನಿಂದ ನೀರು ಒದಗಿಸಲಾಗಿತ್ತು. ಜಲಸಿರಿ ಪೈಪ್‌ಲೈನ್ ಕೂಡಾ ಆಗಿದ್ದು, ಅದರಲ್ಲೂ ನೀರು ಒದಗಿಸಿದರೆ ನಮಗೆ ನೀರಿನ ತೊಂದರೆ ಕಾಣಿಸಲಾರದು. ಈ ಬಾರಿ ಇದುವರೆಗೆ ಟ್ಯಾಂಕರ್ ನೀರಿನ ಅವಶ್ಯಕತೆ ಕಂಡುಬಂದಿಲ್ಲ.**
>
> ■ ಡಾ. ದೇವಿಪ್ರಭಾ ಆಳ್ವ, ಬಲ್ಮಠ ಮಿಷನ್ ಕಂಪೌಂಡ್ ನಿವಾಸಿ



ಬೆಂದೂರು ವಾರ್ಡ್‌ನಲ್ಲಿ ಜಲಸಿರಿ ಪೈಪ್‌ಲೈನ್ ಬಹುತೇಕ ಪೂರ್ಣಗೊಂಡಿದೆ. ನೀರಿನ ಸಂಪರ್ಕ ಆಗಿಲ್ಲ. ಜಲಸಿರಿ ಯೋಜನೆಯಡಿ ಹೊಸ ಟ್ಯಾಂಕ್ ನಿರ್ಮಾಣವಾಗಿಲ್ಲ.

ಮುಂದಿನ ವಾರ್ಡ್ -39
ಫಳ್ನೀರ್ ಪರಿಸರದ ಸ್ಥಿತಿಗತಿ

> **ಬೆಂದೂರು ವಾರ್ಡ್ ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಸಮಸ್ಯೆ ಕಂಡುಬಂದಿಲ್ಲ. ವಾರ್ಡ್‌ನ ಎಲ್ಲ ಪ್ರದೇಶಗಳಿಗೆ ಸರಾಗವಾಗಿ ನೀರು ಪೂರೈಕೆ ಆಗುತ್ತಿದೆ. ಎಸ್‌ಸಿಎಸ್ ಆಸ್ಪತ್ರೆ ರಸ್ತೆ, ಲೋವರ್ ಬೆಂದೂರ್‌ವೆಲ್‌ನಲ್ಲಿ ಡ್ರೈನೇಜ್ ಸಮಸ್ಯೆಯನ್ನು ಬಗೆಹರಿಸಲಾಗಿದೆ. ವಾಸ್ ಲೇನ್ ರಸ್ತೆಯಲ್ಲಿ ಡ್ರೈನೇಜ್, ನೀರಿನ ಪೈಪ್ ಅಳವಡಿಸಿ ರಸ್ತೆ ಕಾಂಕ್ರೀಟೀಕರಣ ಮಾಡಲಾಗಿದೆ. ಮಿಷನ್ ಕಂಪೌಂಡ್ ಬಳಿ, ಆರ್ಯ ಸಮಾಜ ರಸ್ತೆ, ಬಲ್ಮಠ ನ್ಯೂರೋಡ್, ಕಲ್ಪನಾ ರೋಡ್‌ಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಕಂಕನಾಡಿ ಮಾರ್ಕೆಟ್ ಕಟ್ಟಡ ಹೊಸದಾಗಿ ನಿರ್ಮಿಸಲಾಗುತ್ತಿದ್ದು, ಎರಡು ತಿಂಗಳೊಳಗೆ ಕಾಮಗಾರಿ ಪೂರ್ಣವಾಗಲಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಎಲ್ಲ ರಸ್ತೆಗಳಲ್ಲಿ ಎಲ್‌ಇಡಿ ಬಲ್ಬ್ ಹಾಕಲಾಗಿದೆ. ಸಂತ ಆಗ್ನೆಸ್ ಕಾಲೇಜಿನಿಂದ ಬೆಂದೂರುವೆಲ್ ಹಾಗೂ ಎಸ್‌ಸಿಎಸ್ ಆಸ್ಪತ್ರೆ ರಸ್ತೆ ವಿಭಾಜಕಗಳಲ್ಲಿ ಖಾಸಗಿ ಪ್ರಾಯೋಜಕತ್ವದಲ್ಲಿ ಗಾರ್ಡನಿಂಗ್ ನಡೆಸಲಾಗಿದೆ.**
>
> ■ ನವೀನ್ ಡಿಸೋಜ, ಬೆಂದೂರ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್




ದಿನಪತ್ರಿಕೆ ಎಡವಟ್ಟು: ತೀವ್ರಗೊಂಡ ಪ್ರತಿಭಟನೆ



• ಬೆಳಗಾವಿ: ಮಹಾಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಎನ್ನುವುದು ಜನಜಾತ್ರೆ. ಆದರೆ, ಬೆಳಗಾವಿಯ ಅನ್ಯಭಾಷಿಕ ಸ್ಥಳೀಯ ದಿನಪತ್ರಿಕೆಯೊಂದು ಮಾಡಿದ ಗಂಭೀರ ಲೋಪದಿಂದ ಪ್ರತಿಭಟನೆ ನಡೆಸಲು ಕಾರಣವಾಗಿದೆ.

ಮಂಗಳವಾರ ನಗರದ ಮರಾಠಿ ಭಾಷಿಕ ಪತ್ರಿಕೆ ತನ್ನ ಬರಹದಲ್ಲಿ ಡಾ.ಅಂಬೇಡ್ಕರ್ ಜಯಂತಿ ಬದಲಾಗಿ ಬೇರೆ ಅರ್ಥ ಹೊಲುವ ಪದ ಬಳಕೆ ಮಾಡಿ ಬರೆದಿರುವುದರಿಂದ ಇಡೀ ದಲಿತ ಸಮಾಜ ದಿನಪತ್ರಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಮರಾಠಿ ಭಾಷಿಕರಲ್ಲಿ ಹೆಚ್ಚಿನ ಪ್ರಸರಣ ಹೊಂದಿರುವ ದಿನಪತ್ರಿಕೆ ಮಾಡಿರುವ ಈ ಎಡವಟ್ಟು ಪೊಲೀಸರಿಗೆ ಪೀಕಲಾಟ ತಂದಿದೆ. ನಗರದ ಖಡೇಬಜಾರ್ ಪೊಲೀಸ್ ಠಾಣೆಯ ಎದುರಲ್ಲೇ ಇರುವ ಪತ್ರಿಕಾ ಮುಖ್ಯ ಕಾರ್ಯಾಲಯ ರಣರಂಗವಾಗಿ ಏರ್ಪಟ್ಟಿತು. ಸ್ಥಳಕ್ಕೆ ಪೊಲೀಸ್ ಆಯುಕ್ತ ಭೂಷಣ ಭೊರಸೆ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪ್ರತಿಭಟನಾಕಾರರನ್ನು ಶಾಂತಗೊಳಿಸುವ ಪ್ರಯತ್ನಿಸಿದರು.

ರಾಮಬಾಣ



ರಷ್ಯಾದ ಸೇನಾ ನೆಲೆ ವಶಕ್ಕೆ ಪಡೆದ ಉಕ್ರೇನ್ ರೋಬೋಟಿಕ್ ವ್ಯವಸ್ಥೆ

ಪುಟ ೧➡ಉಕ್ರೇನ್ ರಕ್ಷಣಾ ಉದ್ಯಮ ಪ್ರಸ್ತುತ ಲಕ್ಷಾಂತರ ಫಸ್ಟ್-ಪರ್ಸನ್ ವ್ಯೂ(ಎಫ್‌ಪಿವಿ) ಡ್ರೋನ್‌ಗಳನ್ನು ಮತ್ತು ನೆಪ್ಚೂನ್ ಹಾಗೂ ಪಾಲಿಯಾನಿತ್ಸ ಯಾನಂತಹ ದೂರಗಾಮಿ ಕ್ಷಿಪಣಿಗಳನ್ನು ಉತ್ಪಾದಿಸುತ್ತಿದೆ. ಕೆಲವು ಡ್ರೋನ್‌ಗಳು ಈಗ 1,750 ಕಿಮೀ ದೂರದವರೆಗೆ ದಾಳಿ ಮಾಡುವ ಸಾಮರ್ಥ್ಯ ಹೊಂದಿವೆ. ಇದರೊಂದಿಗೆ, ಕಪ್ಪು ಸಮುದ್ರದಲ್ಲಿನ ಯಶಸ್ವಿ ಕಾರ್ಯಾಚರಣೆಗಳ ನಂತರ, ಉಕ್ರೇನ್ ತನ್ನ ಸೀ ಬೇಬಿ ಮತ್ತು ಮಗುರಾ ನೌಕಾ ಡ್ರೋನ್ ತಂತ್ರಜ್ಞಾನವನ್ನು ರಫ್ತು ಮಾಡಲು ಮತ್ತು ಅಂತಾರಾಷ್ಟ್ರೀಯ ಕಡಲ ಭದ್ರತಾ ಸಹಕಾರಕ್ಕಾಗಿ ನೀಡಲು ಮುಂದಾಗಿದೆ.

ಹೆತ್ತ ಮಗನನ್ನೇ ನದಿಗೆ ಎಸೆದ ತಂದೆ

• ವಿಜಯಪುರ: ತನ್ನ ಮಗ ತನ್ನಂತಿಲ್ಲ ಎಂದು ಹೇಳುತ್ತಿದ್ದ ಸ್ನೇಹಿತರ ಕುಚೇಷ್ಟೆಗೆ ರೋಸಿಹೋಗಿ ಹೆತ್ತ ಮಗನ್ನೇ ಕೃಷ್ಣಾ ನದಿಗೆ ಎಸೆದು ಹತ್ಯೆ ಮಾಡಿದ ಅಮಾನವೀಯ ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಅರಕೇರಿ ಬಂಧಿತ ಆರೋಪಿ.

ಮಲ್ಲಿಕಾರ್ಜುನ ಅರಕೇರಿ ತನ್ನ ಹೆತ್ತ ಮಗ ಸಿದ್ಧಾರ್ಥ (6) ತನ್ನ ಮುಖದ ಹೋಲಿಕೆ ಹೊಂದಿಲ್ಲ ಎಂದು ಆತನ ಸ್ನೇಹಿತರು ಚೇಡಿಸುತ್ತಿದ್ದರು. ಈ ರೀತಿ ದಿನ ನಿತ್ಯ ಕುಚೇಷ್ಟೆ ಮಾಡುತ್ತಿದ್ದ ಸ್ನೇಹಿತರ ಮಾತಿಗೆ ರೋಸಿ ಹೋದ ಮಲ್ಲಿಕಾರ್ಜುನ ಅರಕೇರಿ, ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ಬಳಿ ಕೃಷ್ಣಾ ನದಿಗೆ ಮಗುವನ್ನು ಎಸೆದಿದ್ದಾನೆ. ಆರೋಪಿ ಮಲ್ಲಿಕಾರ್ಜುನ ಅರಕೇರಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಸಂಪುಟ ಪುನಾರಚನೆ ಸಂಬಂಧ ಅನಗತ್ಯ ಹೇಳಿಕೆಗಳನ್ನು ನೀಡಿದರೆ ಶಿಸ್ತು ಕ್ರಮ ಜರುಗಿಸಲಾಗುವುದು
– ಶಾಸಕರಿಗೆ ಡಿಕೆಶಿ ಎಚ್ಚರಿಕೆ

-ಒಬ್ಬರಿಗೆ ಅಗತ್ಯ ಅಂತ ಕಂಡದ್ದು ಇನ್ನೊಬ್ಬರಿಗೆ ಅನಗತ್ಯ ಅಂತ ಅನಿಸಬಹುದು. ಹಾಗಾಗಿ ಅನಗತ್ಯ ಎಂದರೆ ಏನು ಅರ್ಥ ಎಂಬುದರ ವಿವರಣೆಯನ್ನು ಅಗತ್ಯವಾಗಿ ವಿವರಿಸುವುದು ಒಳ್ಳೆಯದು!

ದಿನ ಭವಿಷ್ಯ

ಮೇಷ
ದೈಹಿಕವಾಗಿ, ಮಾನಸಿಕವಾಗಿ ಇಂದು ಬಳಲುವಷ್ಟು ಕೆಲಸ. ಆತ್ಮೀಯರ ಸಂಗ ನೆಮ್ಮದಿ ತರಲಿದೆ. ಧನವ್ಯಯ ಅಧಿಕ.ಉಳಿತಾಯ ಹೆಚ್ಚಿಸಿ.

ವೃಷಭ
ನಿಮ್ಮ ಸಾಧನೆ ಕೆಲವರಿಗೆ ಹೊಟ್ಟೆಯುರಿ ತರಲಿದೆ. ನೀವು ತಲೆ ಕೆಡಿಸಿಕೊಳ್ಳದಿರಿ. ಪ್ರೀತಿಯ ವಿಷಯದಲ್ಲಿ ಪ್ರಮುಖ ಬೆಳವಣಿಗೆ ಆದೀತು.

ಮಿಥುನ
ಇತ್ತೀಚಿನ ಕೆಲ ಕೆಲಸಗಳ ಪರಾಮರ್ಶೆ ನಡೆಸಿ. ತಪ್ಪಿದ್ದರೆ ತಿದ್ದಿಕೊಳ್ಳಿ. ಟೀಕೆಗಳಿಗೆ ನೋಯದಿರಿ. ಕೌಟುಂಬಿಕ ಬಿಕ್ಕಟ್ಟು ಜಾಣ್ಮೆಯಿಂದ ಪರಿಹರಿಸಿ.

ಕಟಕ
ಅಧಿಕ ಕೆಲಸದ ಒತ್ತಡ. ಸಂಗಾತಿ ಜತೆ ವಿರಸ. ಮನಸ್ಸು ಅಶಾಂತ. ಸ್ವಂತ ಉದ್ದಿಮೆಯಲ್ಲಿ ಹಿನ್ನಡೆ ಉಂಟಾದೀತು. ಈ ದಿನ ಆದಷ್ಟು ತಣ್ಣಗಿರಿ.

ಸಿಂಹ
ವೃತ್ತಿ ಕ್ಷೇತ್ರದಲ್ಲಿ ಎಲ್ಲರನ್ನು ಪೂರ್ಣವಾಗಿ ನಂಬದಿರಿ. ಹರಿತ ವಸ್ತು ಬಳಕೆಯಲ್ಲಿ ಎಚ್ಚರವಿರಲಿ. ಆಧ್ಯಾತ್ಮಿಕ ಚಿಂತನೆ ಆವರಿಸಬಹುದು.

ಕನ್ಯಾ
ಸಾಮಾಜಿಕ, ಖಾಸಗಿ ಬದ್ಧತೆ ಈಡೇರಿಸಬೇಕಾದ ಒತ್ತಡ. ಎಡೆಬಿಡದ ಕೆಲಸದಿಂದ ವಿರಾಮ ಸಿಗದು. ಕೌಟುಂಬಿಕ ಶಾಂತಿಗೆ ಭಂಗ ಬಂದೀತು.

ತುಲಾ
ನಿಮ್ಮ ಇಂದಿನ ನಿರ್ಧಾರ ದೀರ್ಘಾವಧಿ ಪರಿಣಾಮ ಬೀರಬಹುದು. ಯೋಚಿಸಿ ನಿರ್ಧರಿಸಿ. ಸಣ್ಣ ವಿಷಯವೊಂದು ಮನಸ್ಸಿಗೆ ಕಿರಿಕಿರಿ ಸೃಷ್ಟಿಸಲಿದೆ.

ವೃಶ್ಚಿಕ
ಗ್ರಹಗತಿ ನಿಮಗೆ ಪೂರಕ. ವೃತ್ತಿಯಲ್ಲಿ ಉನ್ನತಿ. ವೈಯಕ್ತಿಕ ಚಿಂತೆಗೆ ಪರಿಹಾರದ ಲಕ್ಷಣ ತೋರುತ್ತಿದೆ. ಮುನಿಸು ದೂರ, ಸಂಬಂಧ ಹತ್ತಿರ.

ಧನು
ಅಂತಃಪ್ರೇರಣೆ ಪ್ರಕಾರ ನಡಕೊಳ್ಳಿ. ಅದು ನಿಮ್ಮನ್ನು ಉನ್ನತಿಗೆ ಕೊಂಡೊಯ್ಯಲಿದೆ. ಸಣ್ಣ ವಿಷಯಕ್ಕೆ ಜಗಳ ಕಾಯಲು ಹೋಗಬೇಡಿ.

ಮಕರ
ಭಾವನಾತ್ಮಕ ಸವಾಲು ಎದುರಿಸುವಿರಿ. ಮನೋನಿಗ್ರಹ ಅವಶ್ಯ. ಬಹುಮುಖ್ಯ ಬಯಕೆ ಈಡೇರುವ ಕಾಲ ಬಂದಿದೆ. ಧನಪ್ರಾಪ್ತಿ.

ಕುಂಭ
ಹೊಸತಾದುದನ್ನು ಅಳವಡಿಸಲು ಸಕಾಲ. ಕೆಲ ವಿಚಾರಗಳಲ್ಲಿ ಬದಲಾವಣೆ ತಂದುಕೊಳ್ಳಿ. ಸಂಘರ್ಷದ ಮನೋಭಾವ ಬಿಡಿ. ಹೊಂದಾಣಿಕೆ ಒಳಿತು.

ಮೀನ
ಇಂದು ತಾಳ್ಮೆ ಮುಖ್ಯ. ಪ್ರತಿಕೂಲ ಸನ್ನಿವೇಶ ಎದುರಾದರೂ ಧೃತಿಗೆಡದಿರಿ. ಬಳಿಕ ಎಲ್ಲವೂ ತಾನಾಗಿ ಸರಿಹೋಗಲಿದೆ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00
ಅದೃಷ್ಟ ಸಂಖ್ಯೆ : 0,6,1,7

ಮೋದಿ ಇಚ್ಛಾಶಕ್ತಿಯಿಂದ ಮಹಿಳಾ ಮೀಸಲಾತಿ: ಬಿವೈವಿ
ಆಡಳಿತ ಯಂತ್ರ ಕುಸಿತ

• ಶಿವಮೊಗ್ಗ: ಮುಖ್ಯಮಂತ್ರಿ ಕುರ್ಚಿಗಾಗಿ ರಾಜ್ಯದಲ್ಲಿ ನಡೆಯುತ್ತಿರುವ ಬಡದಾಟದಿಂದ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ಬೆಂಗಳೂರು ಸಂಪೂರ್ಣವಾಗಿ ಬಣಗುಡುತ್ತಿದೆ. ಮುಖ್ಯಮಂತ್ರಿಗಳೂ ಇಲ್ಲ, ಉಪಮುಖ್ಯಮಂತ್ರಿಗಳೂ ಇಲ್ಲ. ಅವರ ಕುರ್ಚಿ ಬಡಿದಾಟ ಹೆಚ್ಚಾಗಿದೆ. ಅವರಿಬ್ಬರ ಬಡಿದಾಟದಲ್ಲಿ ಜನ ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರಕ್ಕೆ ಮಾನ ಮರ್ಯಾದೆ ಅದರ ಅರ್ಥವೂ ಗೊತ್ತಿಲ್ಲ. ಉಪಚುನಾವಣೆ ಬಂದಾಗ ಮುಖ್ಯಮಂತ್ರಿಗಳು ಬಾಗಲಕೋಟೆಯಲ್ಲಿ ಬೀಡು ಬಿಟ್ಟಿದ್ದನ್ನು ನೋಡಿದ್ದೀರಿ. ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಬಿದ್ದಿದೆ. 30 ಶಾಸಕರು ದೆಹಲಿಗೆ ಹೋಗಿ ಕುಳಿತು ಲಾಬಿ ಮಾಡುತ್ತಿದ್ದಾರೆ ಎಂದರು.

ಮಹಿಳಾ ಮೀಸಲಾತಿ ...: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಇಚ್ಛಾಶಕ್ತಿ ಹಾಗೂ ಸಂಕಲ್ಪದಿಂದ ಮಹಿಳಾ ಮೀಸಲಾತಿ ತರಲು ಮುಂದಾಗಿದ್ದಾರೆ. ಎಲ್ಲಾ ಕಡೆಯಿಂದಲೂ ಅವರಿಗೆ ಶೇ.33 ಸ್ಥಾನಗಳನ್ನು ನೀಡಬೇಕು ಎಂಬ ಸದುದ್ದೇಶ ಇಟ್ಟುಕೊಂಡು ಲೋಕಸಭಾ ಅಧಿವೇಶನದಲ್ಲಿ ಮಂಡನೆ ಮಾಡಲಿದ್ದಾರೆ. ಅದನ್ನು ಅನುಷ್ಠಾನಗೊಳಿಸುವ ದಿಟ್ಟ ನಿರ್ಧಾರದೊಂದಿಗೆ ದಾಪುಗಾಲು ಹಾಕುತ್ತಿದ್ದಾರೆ ಎಂದರು.

ಮೊಸರಲ್ಲಿ ಕಲ್ಲು ಹುಡುಕಬೇಡಿ: ಭಾರತ 2047ರಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ ಮಹಿಳೆಯರ ಪಾತ್ರ ಮುಖ್ಯವಾಗಿದೆ ಎಂದು ಪ್ರಧಾನ ಮಂತ್ರಿಗಳು ನಂಬಿದ್ದಾರೆ. ಹಾಗಾಗಿ ಅವರಿಗೆ ರಾಜಕೀಯ ಶಕ್ತಿಯನ್ನು ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ. ಕಾಂಗ್ರೆಸ್‌ನವರು ಮಲ್ಲಿಕಾರ್ಜುನ ಖರ್ಗೆ ಆದಿಯಾಗಿ ಇದೊಂದು ರಾಜಕೀಯ ಗಿಮಿಕ್ ಎಂದು ಹೇಳುತ್ತಿದ್ದಾರೆ. ಈ ರೀತಿ ಹೇಳಿಕೆ ಕೊಡುವುದರ ಮುಖಾಂತರ ದೇಶದ ತಾಯಂದಿರಿಗೆ ಅಪಚಾರ ಎಸಗಿದ್ದಾರೆ ಎಂದು ಆರೋಪಿಸಿದರು.

ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು: ವಿಜಯೇಂದ್ರ

• ಬೆಂಗಳೂರು: ಕಾಂಗ್ರೆಸ್ ಸರಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುವ ಮತ್ತು ಹಿಂದುಗಳ ಅಪಮಾನ ಮಾಡುವ ಕೆಲಸ ಮಾಡುತ್ತಿದೆ. ಇವೆಲ್ಲದರ ಪರಿಣಾಮವಾಗಿ ಜನರು ಬಿಜೆಪಿಗೆ ಆಶೀರ್ವಾದ ಮಾಡಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ಸಿನವರ ಮತ್ತು ಸಿದ್ದರಾಮಯ್ಯ ಅವರು ಎಷ್ಟೇ ಪುಂಗಿ ಬಾರಿಸಿದರೂ ಉಪ ಚುನಾವಣೆ ನಡೆದ ರಾಜ್ಯದ ಎರಡೂ ಕ್ಷೇತ್ರಗಳಲ್ಲಿ ಅವರು ಗೆಲುವು ಸಾಧಿಸಲು ಸಾಧ್ಯವಿಲ್ಲ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದೇ ಗೆಲ್ಲಲಿದೆ ಎಂದರು. ಕಾಂಗ್ರೆಸ್ ಸರ್ಕಾರದ ಬಗ್ಗೆ ಜನರು ಇವತ್ತು ಬೇಸತ್ತಿದ್ದಾರೆ. ಆಡಳಿತ ಯಂತ್ರ ಕುಸಿದಿದೆ. ಮುಖ್ಯಮಂತ್ರಿ ಕುರ್ಚಿಗೆ ಬೀದಿಕಾಳಗ ನಡೆಯುತ್ತಿದೆ. ಅಭಿವೃದ್ಧಿ ಇಲ್ಲವಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಮತ್ತು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಶಿವಮೊಗ್ಗ ಜಿಲ್ಲೆಯಲ್ಲಾದ ಅಭಿವೃದ್ಧಿ ಕಾರ್ಯ ಹಾಗೂ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಏನೇನು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂಬ ಕುರಿತು ಬಹಿರಂಗ ಚರ್ಚೆ ಮಾಡಲಿ ಎಂದು ಸವಾಲು ಹಾಕಿದರು. ಮೈಸೂರಿನಲ್ಲಿ ಮೈಸೂರು ರೇಷ್ಮೆ ಸೀರೆ ಎಂಎಸ್ ಐಎಲ್ ಅನ್ನು ಉಳಿಸಿಕೊಳ್ಳುವ ಯೋಗ್ಯತೆಯೂ ಕಾಂಗ್ರೆಸ್ ಸರ್ಕಾರಕ್ಕಿಲ್ಲ. ಎಂಎಸ್‌ಐಎಲ್ ಅನ್ನು ಮುಚ್ಚಿ ಹಾಕಿ ಅದನ್ನು ಸ್ಟೇಡಿಯಂ ಮಾಡಲು ಹುನ್ನಾರ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಇವರೇನೇ ಭಾಷಣ ಬಿಗಿದರೂ ಮೇ 4ರಂದು ಮತ ಎಣಿಕೆ ಆಗಲಿದೆ. ಜನರು ಏನು ಉತ್ತರ ನೀಡಿದ್ದಾರೆಂಬುದು ಗೊತ್ತಾಗಲಿದೆ ಎಂದು ತಿಳಿಸಿದರು.

ಎಲ್ಲರ ಸಾರ್ವಭೌಮತ್ವ ಗೌರವಿಸಿ

ಪುಟ ೧➡ಪಶ್ಚಿಮ ಏಷ್ಯಾದಲ್ಲಿ ಉತ್ತಮ ವಾತಾವರಣ ನಿರ್ಮಾಣಕ್ಕಾಗಿ ಎಲ್ಲಾ ರಾಷ್ಟ್ರಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದಿದ್ದಾರೆ.

ಹಾರ್ಮುಜ್ ಸೇರಿದಂತೆ ಇರಾನ್ ಬಂದರುಗಳು ಮತ್ತು ವ್ಯಾಪಾರ ಮಾರ್ಗಗಳ ಮೇಲೆ ಅಧ್ಯಕ್ಷ ಟ್ರಂಪ್ ದಿಗ್ಬಂಧನ ಘೋಷಿಸಿದ ಬೆನ್ನಲ್ಲೇ ಜಿನ್‌ಪಿಂಗ್ ಮಾತನ್ನಾಡಿದ್ದಾರೆ. ಯುಎಇ ರಾಜಕುಮಾರ, ಅಮೆರಿಕ-ಇಸ್ರೇಲ್ ಮತ್ತು ಇರಾನ್ ಯುದ್ಧ ಬಳಿಕ ಚೀನಾಗೆ ಭೇಟಿ ನೀಡಿದ ಮೊದಲ ಮಧ್ಯಪ್ರಾಚ್ಯದ ನಾಯಕರೆನಿಸಿದ್ದಾರೆ.

ಅಮೆರಿಕ ಮೂಗು ತೂರಿಸಬೇಕಿಲ್ಲ: ಹಾರ್ಮುಜ್ ಜಲಸಂಧಿಯಲ್ಲಿ ಚೀನಾ ಹಡಗುಗಳ ಮೇಲೆ ಅಮೆರಿಕ ಹೇರಿದ್ದ ನಿರ್ಬಂಧ ಕುರಿತು ಚೀನಾ ರಕ್ಷಣಾ ಸಚಿವ ಅಡ್ಮಿರಲ್ ಡೊಂಗ್ ಜೂನ್ ಖಾರ ಪ್ರತಿಕ್ರಿಯೆ ನೀಡಿದ್ದಾರೆ. ಇರಾನ್–ಚೀನಾ ದ್ವಿಪಕ್ಷೀಯ ಸಂಬಂಧದಲ್ಲಿ ಅಮೆರಿಕ ಮಧ್ಯಪ್ರವೇಶ ಸರಿಯಲ್ಲ. ನಾವು ಇರಾನ್‌ನೊಂದಿಗೆ ತೈಲ ಮತ್ತು ವಿದ್ಯುತ್ ಒಪ್ಪಂದಗಳನ್ನು ಹೊಂದಿದ್ದೇವೆ. ನಮ್ಮ ವಿಚಾರದಲ್ಲಿ ಇನ್ಯಾವುದೇ ರಾಷ್ಟ್ರಗಳು ಮೂಗು ತೂರಿಸಬೇಕಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಅಮೆರಿಕ ನೌಕಾ ದಿಗ್ಬಂಧನ ಲೆಕ್ಕಿಸದ ಚೀನಾ ತೈಲ ನೌಕೆ!

• ಟೆಹ್ರಾನ್: ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ಅಮೆರಿಕ ನೌಕಾ ದಿಗ್ಬಂಧನದ ಹೊರತಾಗಿಯೂ ಅಮೆರಿಕ ನಿರ್ಬಂಧ ಹೇರಲ್ಪಟ್ಟಿದ್ದ ಚೀನಾ ಮಾಲೀಕತ್ವದ ತೈಲ ಹಡಗು ಸೋಮವಾರ ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಅಮೆರಿಕ ನಿರ್ಬಂಧ ಹೇರಲ್ಪಟ್ಟಿದ್ದ ಶಾಂಘೈ ಕ್ಸುವಾನ್‌ರನ್ ಶಿಪ್ಪಿಂಗ್ ಕಂಪನಿ ಒಡೆತನದ ರಿಚ್ ಸ್ಟಾರಿ ತೈಲ ಹಡಗು ಸೋಮವಾರ ಹಾರ್ಮುಜ್ ದಾಟಿದೆ ಎಂದು ಕೆಪ್ಲರ್ ಮತ್ತು ಮರೈನ್‌ಟ್ರಾಫಿಕ್ ಮಾಹಿತಿ ಆಧಾರದಲ್ಲಿ ರಾಯ್ಟರ್ಸ್ ವರದಿ ಮಾಡಿದೆ. ಸುಮಾರು 2,50,000 ಬ್ಯಾರೆಲ್‌ನಷ್ಟು ಮೆಥನಾಲ್ ಅನ್ನು ಚೀನಾ ತೈಲ ಹಡಗು ಹೊತ್ತೊಯ್ದಿದೆ.

ಇರಾನ್ ಬಂದರುಗಳಲ್ಲೆಡೆ ಅಮೆರಿಕ ಸೇನೆ ವಿಧಿಸಿದ್ದ ನೌಕಾ ದಿಗ್ಬಂಧನದ ಹೊರತಾಗಿಯೂ ಹಾರ್ಮುಜ್ ಮೂಲಕ ಲಕ್ಷಗಟ್ಟಲೆ ಬ್ಯಾರೆಲ್ ತೈಲವನ್ನು ಹೊತ್ತೊಯ್ದಿದೆ. ಇರಾನ್ ಕಚ್ಚಾ ತೈಲವನ್ನು ಸಾಗಣೆ ಮಾಡುತ್ತಿದ್ದ ಕಾರಣಕ್ಕಾಗಿ ಚೀನಾ ತೈಲ ಹಡಗನ್ನು ಗುರಿಯಾಗಿಸಿ ಅಮೆರಿಕ ನಿರ್ಬಂಧವನ್ನು ಹೇರಿತ್ತು. ಇದಲ್ಲದೆ ಇನ್ನೊಂದು ಹಡಗು ಮುರಲಿಕಿಶನ್ ಇರಾನ್‌ನಿಂದ ಇರಾಕ್‌ನತ್ತ ತೈಲ ಸಾಗಿಸಲು ಹೊರಟಿದ್ದರೂ ಅದರ ಮೇಲೆ ಅಮೆರಿಕ ಸೇನೆ ಯಾವುದೇ ನಿರ್ಬಂಧ ಹೇರಿರಲಿಲ್ಲ. ಈ ಹಿಂದೆ ಮುರಳಿಕಿಶನ್ ಹಡಗು ಇರಾನಿ ಮತ್ತು ರಷ್ಯಾ ತೈಲ ಸಾಗಣೆ ಮಾಡುತ್ತಿತ್ತು.

ಅರಬ್ಬಿ ಸಮುದ್ರ ಮತ್ತು ಗಲ್ಫ್ ಒಮಾನ್ ನಡುವಿನ ಎಲ್ಲಾ ಇರಾನಿ ಬಂದರುಗಳ ಸಹಿತ ಇರಾನ್ ಬಂದರುಗಳು ಅಥವಾ ಇರಾನ್ ಕರಾವಳಿ ಪ್ರದೇಶದತ್ತ ಸಾಗುವ ಎಲ್ಲಾ ರಾಷ್ಟ್ರಗಳ ತೈಲ ಹಡಗುಗಳ ಮೇಲೆ ಯಾವುದೇ ನಿಷ್ಪಕ್ಷಪಾತವಿಲ್ಲದೆ ನಿರ್ಬಂಧ ಹೇರುತ್ತಿದ್ದೇವೆ ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಎಕ್ಸ್ ಪೋಸ್ಟ್ ಮಾಡಿತ್ತು.

ಭೈರವೈಕ್ಯ ಮಂದಿರ ಉದ್ಘಾಟನೆ ಇಂದು

ಪುಟ ೧➡ನಂತರ 1.5 ಕಿ.ಮೀ. ದೂರದವರೆಗೆ ವಿಶೇಷ ಭದ್ರತಾ ಪಡೆಯ(ಎಸ್‌ಪಿಜಿ) ಬಿಗಿ ಭದ್ರತೆಯಲ್ಲಿ ರಸ್ತೆ ಮಾರ್ಗವಾಗಿ ಕಾರಿನಲ್ಲಿ ಬಂದು ಶ್ರೀ ಕ್ಷೇತ್ರದ ಕಾಲಭೈರವೇಶ್ವರ ಸ್ವಾಮಿ ದೇವಾಲಯದ ಪಕ್ಕದಲ್ಲಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರವನ್ನು ಉದ್ಘಾಟಿಸಲಿದ್ದಾರೆ.

ಮಂದಿರ ಉದ್ಘಾಟನೆ ನಂತರ ಭೈರವೈಕ್ಯ ಡಾ.ಬಾಲಗಂಗಾಧರನಾಥ ಶ್ರೀಗಳ ಪಾದುಕೆಗೆ ನಮಸ್ಕರಿಸಿ ಪುತ್ಥಳಿ ಇರುವ ಭವ್ಯ ಧ್ಯಾನ ಮಂದಿರ ಹಾಗೂ ನೆಲಮಹಡಿಯಲ್ಲಿರುವ ಗರ್ಭಗುಡಿಯಲ್ಲಿ ಪೂಜೆ ಸಲ್ಲಿಸಿ ಪ್ರದಕ್ಷಿಣೆ ಹಾಕಿದ ನಂತರ ಕ್ಷೇತ್ರದ ಅಧಿದೇವರು ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ಕೊಟ್ಟು ವಿಶೇಷ ಪೂಜೆ ಸಲ್ಲಿಸಿ ಕ್ಷೇತ್ರಾಧಿದೇವತೆಗಳ ದರ್ಶನಾಶೀರ್ವಾದ ಪಡೆದುಕೊಳ್ಳುವರು. ಬಳಿಕ ಶ್ರೀಕ್ಷೇತ್ರದ ಆದಿಚುಂಚನಗಿರಿ ಕ್ರೀಡಾಂಗಣದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಾರ್ಗದ ಪ್ರಾಯೋಗಿಕ ಸಂಚಾರ: ಪ್ರಧಾನಿ ನರೇಂದ್ರ ಮೋದಿ ಅವರು ರಸ್ತೆ ಮೂಲಕ ಕಾರಿನಲ್ಲಿ ಸಂಚರಿಸುವ ಶ್ರೀಗುರು ಭೈರವೈಕ್ಯ ಮಂದಿರ, ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಾಲಯ ಸೇರಿದಂತೆ ಆದಿಚುಂಚನಗಿರಿ ಕ್ರೀಡಾಂಗಣದ ವೇದಿಕೆವರೆಗಿನ ರಸ್ತೆಯಲ್ಲಿ ಭದ್ರತಾ ವಾಹನಗಳೊಂದಿಗೆ ಎಸ್‌ಪಿಜಿ ತಂಡ ಮತ್ತು ಹಿರಿಯ ಅಧಿಕಾರಿಗಳು ಎರಡು ಸುತ್ತು ಪ್ರಾಯೋಗಿಕ ಸಂಚಾರ ನಡೆಸಿದರು.

ಎಸ್‌ಪಿಜಿ ಹಿಡಿತದಲ್ಲಿ ಶ್ರೀಮಠ: ಪ್ರಧಾನಿ ನರೇಂದ್ರ ಮೋದಿ ಅವರು ಬಂದು ಹೋಗುವವರೆಗೆ ಶ್ರೀಮಠವನ್ನು ಮಂಗಳವಾರವೇ ಹಿಡಿತಕ್ಕೆ ತೆಗೆದುಕೊಂಡಿರುವ ಎಸ್‌ಪಿಜಿ ತಂಡ ಶ್ರೀಕ್ಷೇತ್ರದೆಲ್ಲೆಡೆ ಹದ್ದಿನ ಕಣ್ಣಿಟ್ಟಿದೆ. ಐಜಿ, ಡಿಐಜಿ, ಎಸ್‌ಪಿ ದರ್ಜೆಯ ಅಧಿಕಾರಿಗಳನ್ನೊಳಗೊಂಡ ಎಸ್‌ಪಿಜಿ ಮೋದಿ ಸಂಚರಿಸುವ ಮಾರ್ಗದಲ್ಲಿ ಎಡೆಬಿಡದೆ ಗಸ್ತು ನಡೆಸುತ್ತಿದೆ.

ಆರ್.ಅಶೋಕ ಭೇಟಿ, ಪರಿಶೀಲನೆ: ಪ್ರಧಾನಿ ನರೇಂದ್ರ ಮೋದಿ ಅವರು ಆದಿಚುಂಚನಗಿರಿಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ವಿಪಕ್ಷ ನಾಯಕ ಆರ್. ಅಶೋಕ ಮಂಗಳವಾರ ಬೆಳಗ್ಗೆ ಕ್ಷೇತ್ರಕ್ಕೆ ಭೇಟಿ ಕೊಟ್ಟು ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಶ್ರೀಗಳೊಂದಿಗೆ ಮಂದಿರ ಹಾಗೂ ವೇದಿಕೆಗೆ ತೆರಳಿ ಪರಿಶೀಲನೆ ನಡೆಸಿದರು.

ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಶ್ರೀ ಮಠದ ಸ್ತಂಭಗಳ ಮಾದರಿಯಲ್ಲಿಯೇ ವೇದಿಕೆ ನಿರ್ಮಾಣ ಮಾಡಲಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತಿದೆ ಎಂದು ಬಣ್ಣಿಸಿದರು.

ಪ್ರಜಾಪ್ರಭುತ್ವಕ್ಕೆ ನಾರೀಶಕ್ತಿ

ಪುಟ ೧➡ಈ ಮುಂದಿನ ಕೆಲವು ದಿನಗಳಲ್ಲಿ ಸಂವಿಧಾನ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ಅಂಗೀಕಾರವಾಗುವ ನಿರೀಕ್ಷೆಯಲ್ಲಿ ದೇಶದ ಮಹಿಳೆಯರು ಇದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಶಾಸಕಾಂಗಗಳಲ್ಲಿ ಮಹಿಳೆಯರ ಪ್ರತಿನಿಧಿತ್ವವನ್ನು ಶೀಘ್ರದಲ್ಲೇ ಪೂರ್ಣವಾಗಿ ಜಾರಿಗೆ ತರಲು ನಾವು ಎಲ್ಲರೂ ಒಗ್ಗೂಡಬೇಕು. ಶಾಸಕಾಂಗಗಳಲ್ಲಿ ಮಹಿಳೆಯರ ಧ್ವನಿ ಬಲವಾಗುವಾಗ, ಪ್ರಜಾಪ್ರಭುತ್ವದ ಧ್ವನಿಯೇ ಇನ್ನಷ್ಟು ಬಲವಾಗುತ್ತದೆ ಎಂದು ಅವರು ಹೇಳಿದ್ದಾರೆ. ಸಂಸತ್ ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿ ಮಾಡಿ, 2029ರ ಲೋಕಸಭೆ ಚುನಾವಣೆ ಮತ್ತು ವಿವಿಧ ವಿಧಾನಸಭೆ ಚುನಾವಣೆಗಳು ನಡೆದಲ್ಲಿ, ಭಾರತೀಯ ಪ್ರಜಾಸತ್ತೆ ಬಲಿಷ್ಠವಾಗಬಲ್ಲದು ಮತ್ತು ಅತ್ಯಂತ ಸ್ಪಂದನಶೀಲವಾಗಬಲ್ಲದು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರತಿಪಾದಿಸಿದ್ದಾರೆ.

ಲೋಕಸಭೆ ಸ್ಥಾನ ಸಂಖ್ಯೆ 850ಕ್ಕೆ ಹೆಚ್ಚಳ ಶೀಘ್ರ

ಪುಟ ೧➡ಪ್ರಸ್ತುತ 2011ರ ಜನಗಣತಿ ಅಂಕಿ–ಅಂಶಗಳು ಲಭ್ಯವಿದ್ದು, 2027ರ ಜನಗಣತಿ ಪ್ರಕ್ರಿಯೆ ಆರಂಭವಾಗಿದೆ. ಹೊಸ ಅಂಕಿ–ಅಂಶಗಳ ಆಧಾರದ ಮೇಲೆ ಕ್ಷೇತ್ರಗಳ ಮರುರಚನೆ ನಡೆಯಲಿದೆ. ಈ ಕಾನೂನು ಜಾರಿಗೆ ಬಂದ ನಂತರ ಮಹಿಳಾ ಮೀಸಲಾತಿ 15 ವರ್ಷಗಳ ಕಾಲ ಮಾನ್ಯವಾಗಿದ್ದು, ನಂತರ ಸಂಸತ್ತು ಅಗತ್ಯವಿದ್ದರೆ ಅವಧಿಯನ್ನು ವಿಸ್ತರಿಸಬಹುದು. ಈ ತಿದ್ದುಪಡಿಯಿಂದ ಲೋಕಸಭೆಯಲ್ಲಿ ಸುಮಾರು 273 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುವ ಸಾಧ್ಯತೆ ಇದೆ. ಒಟ್ಟಾರೆ, ಈ ಕ್ರಮವು ಮಹಿಳೆಯರ ರಾಜಕೀಯ ಪ್ರತಿನಿಧಿತ್ವವನ್ನು ವೇಗವಾಗಿ ಹೆಚ್ಚಿಸಲು ಮತ್ತು 2029ರ ಚುನಾವಣೆಗೆ ಮುನ್ನ ಸಮಾನ ಅವಕಾಶಗಳನ್ನು ಕಲ್ಪಿಸಲು ಮಹತ್ವದ ಹೆಜ್ಜೆಯಾಗಿದೆ.

ನೋಯ್ಡಾ ಹಿಂಸೆ ಯೋಜಿತ ಕೃತ್ಯ

• ಹೊಸದಿಲ್ಲಿ: ನೋಯ್ಡಾದೆಲ್ಲೆಡೆ ವೇತನ ಹೆಚ್ಚಳಕ್ಕಾಗಿ ಕಾರ್ಖಾನೆ ಕಾರ್ಮಿಕರು ಸೋಮವಾರ ನಡೆಸಿದ್ದ ಹಿಂಸಾತ್ಮಕ ಪ್ರತಿಭಟನೆಯು ಪೂರ್ವನಿಯೋಜಿತ ಕೃತ್ಯ ಮತ್ತು ಇದರ ಹಿಂದೆ ಸುಸಜ್ಜಿತ ಸಿಂಡಿಕೇಟ್ (ಸಂಘಟನೆ) ಕೈವಾಡದ ಸಾಧ್ಯತೆಯಿದೆ. ಪ್ರಕರಣದಲ್ಲಿ ಪಾಕಿಸ್ತಾನದ ಸಂಪರ್ಕ ಕುರಿತು ತನಿಖೆ ನಡೆಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತೆ ಲಕ್ಷ್ಮಿ ಸಿಂಗ್ ತಿಳಿಸಿದ್ದಾರೆ.

ವೇತನ ಹೆಚ್ಚಳಕ್ಕೆ ಒತ್ತಾಯಿಸಿ ಕಾರ್ಖಾನೆ ಕಾರ್ಮಿಕರು ಸೋಮವಾರ ನಡೆಸಿದ ಪ್ರತಿಭಟನೆ ಹಿಂಸಾತ್ಮಕ ರೂಪ ತಾಳಿತ್ತು. ಈ ವೇಳೆ ನೋಯ್ಡಾದ ಸೆಕ್ಟರ್–84, ಫೇಸ್ –2ರಲ್ಲಿ ಪ್ರತಿಭಟನಾಕಾರರು ಹಿಂಸಾತ್ಮಕವಾಗಿ ವರ್ತಿಸಿದ್ದರು. ಭಾರೀ ಕಲ್ಲು ತೂರಾಟ ನಡೆಸಿದ್ದು, ವಾಹನಗಳಿಗೆ ಬೆಂಕಿಹಚ್ಚಿ ಆಕ್ರೋಶ ಹೊರಹಾಕಿದ್ದರು. ಇಲ್ಲಿಯವರೆಗೆ 7 ಎಫ್ ಐಆರ್‌ಗಳನ್ನು ಪೊಲೀಸರು ದಾಖಲಿಸಿದ್ದು, ಸುಮಾರು 400 ಪ್ರತಿಭಟನಾ ಕಾರರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರತಿಭಟನೆ ನೆಪದಲ್ಲಿ ಹಿಂಸಾಚಾರ ನಡೆಸಲು ವ್ಯವಸ್ಥಿತ ಸಂಚು ರೂಪಿಸಿದ್ದು, ಇದಕ್ಕೆ ವಾಟ್ಸ್ಆ್ಯಪ್ ಗ್ರೂಪ್‌ಗಳು ಮತ್ತು ಕಾಲ್ ಸೆಂಟರ್‌ನಂತಹ ವ್ಯವಸ್ಥೆ ಬಳಸಲಾಗಿತ್ತು.

ಸಿಎಂ ರಾಜಕೀಯ ಕಾರ್ಯದರ್ಶಿ ವಜಾ

ಪುಟ ೧➡ಪಕ್ಷದ ಅಭ್ಯರ್ಥಿಯನ್ನೇ ಸೋಲಿಸಲು ಷಡ್ಯಂತ್ರ ಮಾಡಿದ್ದರು ಎಂದು ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರುಗಳೇ ಆರೋಪಿಸಿ, ಈ ಬಗ್ಗೆ ಹೈಕಮಾಂಡ್‌ಗೆ ದೂರು ನೀಡಿದ್ದರು.ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡದ ಆರೋಪ ನಜೀರ್ ಅಹ್ಮದ್ ಮೇಲೆ ಇತ್ತು. ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ನಜೀರ್ ಅಹ್ಮದ್‌ಗೆ ರಾಜೀನಾಮೆ ನೀಡುವಂತೆ ಎರಡು ದಿನಗಳ ಹಿಂದೆಯೇ ಸೂಚಿಸಿದ್ದರೂ ಅವರು ರಾಜೀನಾಮೆ ನೀಡಿರಲಿಲ್ಲ. ಈಗ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡದವರ ವಿರುದ್ಧ ಕ್ರಮ

ಪುಟ ೧➡**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಈ ಬಗ್ಗೆ ಮಾಹಿತಿ ಇತ್ತು ಹಾಗಾಗಿ ಅವರನ್ನು ವಜಾಗೊಳಿಸುವ ತೀರ್ಮಾನ ಕೈಗೊಂಡಿದ್ದಾರೆ ಎಂದು ಹೇಳಿದರು.**


ರಾಜ್ಯದಲ್ಲೇ ಬೀದರ್‌ನಲ್ಲಿ ಅತಿ ಹೆಚ್ಚು | ಏ.17ರವರೆಗೆ ಆರೆಂಜ್ ಅಲರ್ಟ್ ಘೋಷಣೆ
ಬಿಸಿಲಿಗೆ ಬಸವ ಕಲ್ಯಾಣದ ಮಂದಿ ಹೈರಾಣ

▸ ರಾಚಪ್ಪಾ ಜಂಬಗಿ

• ಕಲಬುರಗಿ: ಬಿಸಿಲು ನಾಡು ಎಂದು ಖ್ಯಾತಿ ಪಡೆದಿರುವ ಕಲ್ಯಾಣ ಕರ್ನಾಟಕ ಭಾಗದ ಹೆಬ್ಬಾಗಿಲು ಬೀದರ್ ಜಿಲ್ಲೆಯಲ್ಲೇ ರಾಜ್ಯದ ಅತಿ ಹೆಚ್ಚು ತಾಪಮಾನ ಅಂದರೆ ಗರಿಷ್ಠ 43.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಸೇರಿದಂತೆ ಭಾಗದ ಮಂದಿ ಬಿಸಿಲಿನ ತಾಪಮಾನಕ್ಕೆ ಅಕ್ಷರಶಃ ಹೈರಾಣಾಗಿದ್ದಾರೆ.

ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದರೆ, ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಈಗಾಗಲೇ 40ರ ಗಡಿ ದಾಟಿದ್ದು, ಮುಂಬರುವ ದಿನಗಳಲ್ಲಿ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಾಖದ ಅಲೆ: ಆರೆಂಜ್ ಅಲರ್ಟ್: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಕಲಬುರಗಿ



ಸೇರಿದಂತೆ ರಾಜ್ಯದ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಕಲಬುರಗಿ, ವಿಜಯಪುರ,ಬೀದರ್ ಜಿಲ್ಲೆ ಸೇರಿದಂತೆ ವಿವಿಧೆಡೆ ಏ.15ರಿಂದ 17ರವರೆಗೆ ಶಾಖದ ಅಲೆಗಳು (ಹೀಟ್‌ವೇವ್) ಹೆಚ್ಚಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಅಗತ್ಯ ಸಲಹೆಗಳನ್ನು ನೀಡಿದೆ.

ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ತಾಪಮಾನ: ಕಲ್ಯಾಣ ಕರ್ನಾಟಕದ ಭಾಗದ ಹೆಬ್ಬಾಗಿಲು ಬೀದರ್ ಜಿಲ್ಲೆಯ ಕಮಲನಗರ ತಾಲೂಕಿನ ದಬಕಾ ಹೋಬಳಿಯಲ್ಲಿ ಸೋಮವಾರ ರಾಜ್ಯದಲ್ಲೇ ಹೆಚ್ಚು ಗರಿಷ್ಠ 43.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದರೇ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ 42 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಜೊತೆಗೆ ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ 42 ಸೆಲ್ಸಿಯಸ್‌ದಿಂದ 43.6 ಸೆಲ್ಸಿಯಸ್ ನಡುವೆ ಗರಿಷ್ಠ ತಾಪಮಾನ ದಾಖಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ಮಾಹಿತಿಯನ್ವಯ ರಾಯಚೂರಿನ 16, ಕಲಬುರಗಿಯ 9, ಬೀದರ್ ಮತ್ತು ಯಾದಗಿರಿಯ ತಲಾ 6 ವಿಜಯಪುರಿನ 3, ಬಾಗಲಕೋಟೆಯ 2 ಹಾಗೂ ಕೊಪ್ಪಳದಲ್ಲಿ 1 ಸ್ಥಳದಲ್ಲಿ 42 ಸೆಲ್ಸಿಯಸ್ ಗಿಂತ ಹೆಚ್ಚು ತಾಪಮಾನ ದಾಖಲಾಗಿದೆ.

ರಾಜ್ಯದ ತುಮಕೂರು, ವಿಜಯಪುರ, ಬೆಳಗಾವಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಂಗಳವಾರ ಏ.14ರಂದು ಗರಿಷ್ಠ ತಾಪಮಾನ 42ರಿಂದ 44.30 ಡಿಗ್ರಿ ಸೆಲ್ಸಿಯಸ್ ನಡುವೆ ತಾಪಮಾನ ದಾಖಲಾಗಿದೆ.

ಏನು ಮಾಡಬಾರದು?

ಸಾರ್ವಜನಿಕರು ಬಿಸಿಲಿನ ಅವಧಿಯಲ್ಲಿ ಕೊಡೆ ಇಲ್ಲದೆ ಹೊರ ಹೋಗದಿರಿ. ಸಿಂಥೆಟಿಕ್ ಉಡುಪು ಧರಿಸಿ, ಹೆಚ್ಚೆಚ್ಚು ನೀರು ಸೇವಿಸಿ ಶ್ರಮದಾಯಕ ಕೆಲಸ ಮಾಡದಿರಿ. ಬಿಸಿಲಿನಿಂದ ರಕ್ಷಿಸಿಕೊಳ್ಳಿ.

ಏ.13ರಂದು 42 ಡಿಗ್ರಿ ಮೇಲ್ಪಟ್ಟ ತಾಪಮಾನ ದಾಖಲಾಗಿರುವ ರಾಜ್ಯದ ಪ್ರಮುಖ ಸ್ಥಳ

ಬೀದರ್–ಕಮಲನಗರ	43.6 ಡಿಗ್ರಿ ಸೆಲ್ಸಿಯಸ್
ಕಲಬುರಗಿ–ಚಿರಾಡ್	43 ಡಿಗ್ರಿ ಸೆಲ್ಸಿಯಸ್
ಬೀದರ್–ಚಿರಾಡ್	42.3 ಡಿಗ್ರಿ ಸೆಲ್ಸಿಯಸ್
ಬಾಗಲಕೋಟೆ– ಮುಧೋಳ	42.7 ಡಿಗ್ರಿ ಸೆಲ್ಸಿಯಸ್
ಬೀದರ್–(ಜನವಾಡಾ)	42.0 ಡಿಗ್ರಿ ಸೆಲ್ಸಿಯಸ್
ಬೀದರ್– ಚಿರಾಡ್ (ಸಂತಪುರ)	42.5 ಡಿಗ್ರಿ ಸೆಲ್ಸಿಯಸ್

ಏ.15 ರಿಂದ 17ರ ವರೆಗೆ ಶಾಖ ಅಲೇ ಹಿನ್ನೆಲೆ ಆರೆಂಜ್ ಅಲರ್ಟ್ ಘೋಷಣೆಯಾಗಿದ್ದು, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಸಾರ್ವಜನಿಕರು ಮಧ್ಯಾಹ್ನ 12ರಿಂದ ಸಂಜೆ 4 ಗಂಟೆ ವರೆಗೆ ಮನೆಯಿಂದ ಹೊರ ಹೋಗುವುದು ಸಾಧ್ಯವಾದಷ್ಟು ತಪ್ಪಿಸಬೇಕು. ಛತ್ರಿ, ಟೋಪಿ ಬಳಸಲು ಸೂಚಿಸಲಾಗಿದೆ. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕೆಂದು ಸಾರ್ವಜನಿಕರಿಗೆ ಈಗಾಗಲೇ ಸಲಹೆ ನೀಡಲಾಗಿದೆ.

■ **ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿ,ಕಲಬುರಗಿ**

ಮೋದಿಗೆ ಕರೆ ಮಾಡಿ 40 ನಿಮಿಷ ಟ್ರಂಪ್ ಚರ್ಚೆ



ಪುಟ ೧➡ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿ ತೆರೆಯುವ ಪ್ರಾಮುಖ್ಯತೆ ಕುರಿತು ಚರ್ಚಿಸಿದ್ದೇವೆ ಎಂದು ಮೋದಿ ಎಕ್ಸ್‌ನಲ್ಲಿ ಹೇಳಿಕೊಂಡಿದ್ದಾರೆ.

ಮೋದಿ ಜತೆ ಧನಾತ್ಮಕ, ಫಲಪ್ರದ ಕರೆ: ಪ್ರಧಾನಿ ಮೋದಿ ಅವರೊಂದಿಗಿನ ಅಧ್ಯಕ್ಷ ಟ್ರಂಪ್ ಅವರ ದೂರವಾಣಿ ಕರೆ ಬಹಳ ಧನಾತ್ಮಕ ಮತ್ತು ಫಲಪ್ರದವಾಗಿತ್ತೆಂದು ಅಮೆರಿಕ ರಾಯಭಾರಿ ಸರ್ಜಿಯೊ ಗೋರ್ ಬಣ್ಣಿಸಿದ್ದಾರೆ. ಮಧ್ಯಪ್ರಾಚ್ಯದ ಪರಿಸ್ಥಿತಿಯ ಬಗ್ಗೆ ಇಬ್ಬರು ನಾಯಕರು ಮಾತುಕತೆ ನಡೆಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಗೊಳಿಸುವಲ್ಲಿ ಭಾರತವೂ ಪ್ರಮುಖ ಪಾತ್ರ ವಹಿಸುತ್ತಿದೆ. ಅಮೆರಿಕವೂ ಭಾರತದ ಭಾಗವಹಿಸುವಿಕೆ ಬಯಸುತ್ತದೆ. ಮಾತುಕತೆ ವೇಳೆ, ನಾವೆಲ್ಲರೂ (ಟ್ರಂಪ್ ಆಡಳಿತ) ನಿಮ್ಮನ್ನು ಪ್ರೀತಿಸುತ್ತೇವೆಂದು ಮೋದಿಯವರಿಗೆ ಟ್ರಂಪ್ ಹೇಳಿರುವುದಾಗಿ ಸರ್ಜಿಯೊ ತಿಳಿಸಿದ್ದಾರೆ.

ದಿನಾಚರಣೆ...



ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಸಂಭ್ರಮದಿಂದ ನಡೆಯಿತು.

ಹಿಂದುಗಳ ಸಹನೆ ಪರೀಕ್ಷೆ ಮಾಡಬೇಡಿ

ಹುಬ್ಬಳ್ಳಿ: ಲವ್ ಜಿಹಾದ್ ನಡೆಯುತ್ತಿದ್ದವು. ಈಗ ಜಿಮ್ ಜಿಹಾದ್ ಸಹ ನಡೆಯುತ್ತಿವೆ. ಕಾಲೇಜ್‌ಗಳಲ್ಲಿ ಇಂತಹ ಘಟನೆಗೆ ಹೆಚ್ಚಾಗಿವೆ. ಡ್ರಗ್ಸ್ ಮಾರಾಟ ಅವ್ಯಾಹತವಾಗಿ ನಡೆಯುತ್ತಿದೆ. ಈಗಲಾದರೂ ಜನ ಹಾಗೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಹಾಗೂ ಇಲಾಖೆ ಯಾರನ್ನು ರಕ್ಷಿಸಲು ಹೋಗಿ ಅಮಾಯಕರು ಬಲಿಯಾಗಬಾರದು. ಹಿಂದು ಸಮಾಜದ ಸಹನೆ ಪರೀಕ್ಷೆ ಮಾಡಬಾರದು. ಮುಂದೆ ಆಗುವ ಅನಾಹುತಕ್ಕೆ ಸರ್ಕಾರ ಹೊಣೆಯಾಗಲಿದೆ ಎಂದು ಎಚ್ಚರಿಕೆ ನೀಡಿದರು. ಸರ್ಕಾರದಲ್ಲಿ ಮುಖ್ಯಮಂತ್ರಿ, ಸಚಿವರ ಈ ಬಗ್ಗೆ ಮಾತನಾಡುತ್ತಿಲ್ಲ. ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ, ತುಷ್ಟೀಕರಣ ನೀತಿ ಅನುಸರಿಸುತ್ತಿದ್ದಾರೆ. ಇಂತಹ ಘಟನೆಗಳು ಸಮಾಜದಲ್ಲಿ ನಡೆದಾಗ ಎಲ್ಲ ಪಕ್ಷಗಳು, ಸಮಾಜ, ಜಾತಿಗಳು ವಿರೋಧಿಸಬೇಕು. ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಈ ಬಗ್ಗೆ ನಾವು ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳುತ್ತೇವೆ. ಗೃಹ ಸಚಿವರ ಒಳ್ಳೆಯವರಿದ್ದು, ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು ಎಂದು ಆಗ್ರಹಿಸಿದರು.

ಏ.18ರಂದು ಸಮನ್ವಯ ಕಲಾ ಉತ್ಸವ

ಬೆಂಗಳೂರು: ಶ್ರೀ ರಾಜರಾಜೇಶ್ವರಿ ಕಲಾನಿಕೇತನ್ ನೃತ್ಯ ಸಂಸ್ಥೆ ವತಿಯಿಂದ ಏ.18 ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ಸಮನ್ವಯ ಕಲಾ ಉತ್ಸವವನ್ನು ಆಯೋಜಿಸಲಾಗಿದೆ.

ಭಾರತೀಯ ನಾಟ್ಯರಂಗದಲ್ಲಿ ಡಾ.ವೀಣಾ ಮೂರ್ತಿ ವಿಜಯ್ ಹಿರಿಯ ನೃತ್ಯಗುರುಗಳಾಗಿದ್ದು, ಐದು ದಶಕಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇವರ ನೇತೃತ್ವದ ಶ್ರೀ ರಾಜರಾಜೇಶ್ವರಿ ಕಲಾನಿಕೇತನ್ ನೃತ್ಯ ಸಂಸ್ಥೆಗೆ ಈ ವರ್ಷ ಸುವರ್ಣ ಸಂಭ್ರಮ. ಕಲಾವಿದರಿಗೆ ವೇದಿಕೆ ಒದಗಿಸಿ ಅವರನ್ನು ಪ್ರೋತ್ಸಾಹಿಸಲು ಅನೇಕಾ ನೃತ್ಯೋತ್ಸವಗಳನ್ನು ನಡೆಸುತ್ತಾ ಬಂದಿದ್ದಾರೆ. ಸಮಕಾಲೀನ ವಿಷಯ, ವಸ್ತುಗಳನ್ನು ಆಯ್ದುಕೊಂಡು ನೃತ್ಯರೂಪಕಗಳನ್ನು, ವಿನೂತನ ನೃತ್ಯಪ್ರಯೋಗಗಳನ್ನು ಸಮನ್ವಯದ ಶೀರ್ಷಿಕೆಯಡಿ ಆಯೋಜಿಸುತ್ತ ಬಂದಿದ್ದು, ಅದರಂತೆ ಕಲೋತ್ಸವದಲ್ಲಿ ವೈವಿಧ್ಯಪೂರ್ಣ ವಿವಿಧ ಕಲಾವಿಧರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ.ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಅನಾರೋಗ್ಯವನ್ನು ಸೃಷ್ಟಿಸುತ್ತಿರುವ ಕಸದ ಸಮಸ್ಯೆಯ ಬಗ್ಗೆ ಉತ್ತಮ ಸಂದೇಶಾತ್ಮಕ ಕಥಕ್ -ಸಮಕಾಲೀನ ನೃತ್ಯ ಶೈಲಿಯ ನೃತ್ಯರೂಪಕ ಗಬ್ಬು ಕಥೆ, ಪುರುಷನರ್ತಕರಾಗಿ ಗಮನ ಸೆಳೆದಿರುವ ನೃತ್ಯಕಲಾವಿದ ಸೂರ್ಯ ಎಸ್ ರಾವ್ ಅವರು, ವಿಶಿಷ್ಟ ರಾವಣ ವ್ಯಕ್ತಿತ್ವದ ಬಗ್ಗೆ ನೂತನ ಆಯಾಮವನ್ನು ತೆರೆದಿಡುವ ಕುತೂಹಲ ಭರಿತವಾದ ಅಂಶಗಳ ಸುತ ಪರಿಭ್ರಮಿಸುವ ರಾವಣ ಏಕವ್ಯಕ್ತಿ ನೃತ್ಯರೂಪಕವನ್ನು ಅನಾವರಣಗೊಳಿಸಲಿದ್ದಾರೆ.

14 ವರ್ಷದ ಮಗಳ ಕೊಂದು ತಾಯಿ ಆತ್ಮಹತ್ಯೆ

ಬೆಂಗಳೂರು: ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಾಯಿ-ಮಗಳ ಸಾವಿನ ದಾರುಣ ಘಟನೆಯೊಂದು ನಡೆದಿದೆ. 14 ವರ್ಷದ ಮಗಳನ್ನು ಕೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೈಟ್‌ಫೀಲ್ಡ್‌ನ ಇಮ್ಮಡಿಹಳ್ಳಿಯ ನಿವಾಸದಲ್ಲಿ ಈ ಘಟನೆ ಸಂಭವಿಸಿದೆ. ಮೃತ ತಾಯಿಯನ್ನು ಸುವರ್ಣ (40) ಮತ್ತು ಮಗಳನ್ನು ಕಾರುಣ್ಯ (14) ಎಂದು ಗುರುತಿಸಲಾಗಿದೆ. ಮನೆಯ ಕೋಣೆಯಲ್ಲಿ ಮಗಳು ಕಾರುಣ್ಯಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ ಸುವರ್ಣ, ನಂತರ ತಾವೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಗೆ ನಿಖರವಾದ ಕಾರಣ ಇನ್ನು ತಿಳಿದುಬಂದಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ವೈಟ್‌ಫೀಲ್ಡ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಿರುಸುದ್ದಿ

ಸಂಪುಟ ವಿಸ್ತರಣೆ ಖಚಿತ: ಶಾಸಕ ತನ್ವೀರ್‌ಸೇಠ್

ಮೈಸೂರು: ಸಚಿವ ಸಂಪುಟಕ್ಕೆ ಸರ್ಜರಿ ಆಗುವುದು ಖಚಿತವಾಗಿದೆ ಎಂದು ಶಾಸಕ ತನ್ವೀರ್‌ಸೇಠ್ ಹೇಳಿದರು. ಸಚಿವ ಸ್ಥಾನಕ್ಕಾಗಿ ಆಗ್ರಹಿಸಿ ಹಿರಿಯ ಶಾಸಕರು ಹೈಕಮಾಂಡ್ ಭೇಟಿ ಮಾಡಲು ದಿಲ್ಲಿಗೆ ತೆರಳಿರುವ ಸಂಬಂಧ ಪ್ರತಿಕ್ರಿಯಿಸಿ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನನ್ನು ದಿಲ್ಲಿಗೆ ಕರೆದಿದ್ದರು. ನಾನು ದಿಲ್ಲಿಗೆ ಹೋಗಲ್ಲ, ನಾನು ಸಚಿವ ಸ್ಥಾನದ ಆಕಾಂಕ್ಷಿ ಎಂದರು. ಸಿಎಂ ಆಪ್ತರ ಟಾರ್ಗೆಟ್ ಮಾಡಲಾಗುತ್ತಿದೆ ಎಂಬ ಆರೋಪ ಕುರಿತು ಪ್ರತಿಕ್ರಿಯಿಸಿ, ಯಾರನ್ನು ಟಾರ್ಗೆಟ್ ಮಾಡಿಲ್ಲ ಮಾಡುವುದೂ ಇಲ್ಲ. ಯಾರಿಗೆ ಜವಾಬ್ದಾರಿ ನೀಡಲಾಗಿತ್ತು. ಅವರ ಮೇಲೆ ಕ್ರಮ ಆಗಿದೆ. ಕ್ರಮ ಸರಿಯಿದೆಯೆಂದು ಈ ಬಗ್ಗೆ ಕ್ರಮ ಕೈಗೊಂಡವರು ಹೇಳಲಿ ಎಂದು ಹೇಳಿದರು.

ಕೊರಳಿಗೆ ಜೋಕಾಲಿ ಸುತ್ತಿಕೊಂಡು ಬಾಲಕಿ ಸಾವು

ಚಿಕ್ಕಮಗಳೂರು: ಮನೆಯಲ್ಲಿ ಜೋಕಾಲಿ ಆಡುತ್ತಿದ್ದ ಬಾಲಕಿ ಕೊರಳಿಗೆ ಆಕಸ್ಮಿಕವಾಗಿ ಸೀರೆ ಬಿಗಿದುಕೊಂಡ ಪರಿಣಾಮ ಮೃತಪಟ್ಟಿರುವ ಧಾರುಣ ಘಟನೆ ತಾಲೂಕಿನ ಮಲ್ಲೇನಹಳ್ಳಿ ಬಳಿ ಹೆಬ್ಬಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ. 10 ವರ್ಷದ ಬಾಲಕಿ ಲೇಖನ ಮೃತ ದುರ್ದೈವಿಯಾಗಿದ್ದಾಳೆ. ಶಾಲೆಗೆ ರಜೆಯಿದ್ದ ಹಿನ್ನೆಲೆಯಲ್ಲಿ ಆಕೆಯನ್ನು ಮನೆಯಲ್ಲಿ ಬಿಟ್ಟು ಪೋಷಕರು ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಆಕೆ ಸೀರೆಯನ್ನು ಜೋಕಾಲಿ



ಮಾಡಿಕೊಂಡು ಆಟವಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ. ವಿಷಯ ತಿಳಿಯುತ್ತಿದ್ದಂತೆ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದು, ಮಗುವನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಗುಂಡಿನ ದಾಳಿ: ಗ್ರಾಪಂ ಸದಸ್ಯ ಭೀಕರ ಹತ್ಯೆ

ವಿಜಯಪುರ: ದುಷ್ಕರ್ಮಿಗಳ ಗುಂಡಿನ ದಾಳಿಗೆ ಗ್ರಾಪಂ ಸದಸ್ಯ ಭೀಕರವಾಗಿ ಸಾವಿಗೀಡಾದ ಘಟನೆ ಗುಮ್ಮಟ ನಗರಿಯ ಹೊರ ವಲಯ ಅಲಿಯಾಬಾದ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ಮಂಗಳವಾರ ಸಂಜೆ ನಡೆದಿದೆ. ಅಲಿಯಾಬಾದ ಗ್ರಾಪಂ ಸದಸ್ಯ, ಪಾಂಗರುನ ದೊಡ್ಡಿ ನಿವಾಸಿ ರಾಜು ಕರೆ (48) ಮೃತಪಟ್ಟ ವ್ಯಕ್ತಿ. ರಾಜು ಕರೆ ತಮ್ಮ ಥಾರ್ ವಾಹನದಲ್ಲಿ ತೆರಳುತ್ತಿದ್ದಾಗ, ದುಷ್ಕರ್ಮಿಗಳು ಟಿಪ್ಪರ್ ಮೂಲಕ ಡಿಕ್ಕಿ ಹೊಡೆಸಿದ್ದು, ಬಳಿಕ ಜೀಪಿನ ಮೇಲೆ ಮನಬಂದಂತೆ 6 ಸುತ್ತಿನ ಗುಂಡಿನ ದಾಳಿ ನಡೆಸಿದ್ದು, ಜೀಪ್ ಡೋರ್ ಓಪನ್ ಆಗದಕ್ಕೆ ನಂತರ ಜೀಪಿನ ಮೇಲೆ ಕಲ್ಲು ಎತ್ತಿ



ಹಾಕಿದ್ದಾರೆ. ದುಷ್ಕರ್ಮಿಗಳ ಭೀಕರ ದಾಳಿಯಿಂದ ರಾಜು ಕರೆ ಥಾರ್ ಜೀಪಿನಲ್ಲಿಯೇ ಗಂಭೀರ ಗಾಯಗೊಂಡು ಸ್ಥಳದಲ್ಲಿಯೇ ಅಸುನೀಗಿದ್ದಾನೆ. ಈ ಹತ್ಯೆಗೆ ಹಳೇ ವೈಷಮ್ಯವೇ ಕಾರಣ ಇರಬಹುದು ಎಂದು ಶಂಕಿಸಲಾಗಿದೆ. ಘಟನೆ ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಆರ್ಥಿಕ ಶಕ್ತಿ ಎಲ್ಲರಿಗೂ ಲಭಿಸಿದಾಗ ಸ್ವಾವಲಂಬನೆ ಸಾಧ್ಯ: ಸಿಎಂ

ಜಾತಿ ವಿಮುಕ್ತಿಗೆ ಶಿಕ್ಷಣ ಅಸ್ತ್ರ

ಬೆಂಗಳೂರ: ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಎಲ್ಲರಿಗೂ ಲಭಿಸಿದಾಗ ಮಾತ್ರ ಸ್ವಾವಲಂಬನೆ ಸಾಧ್ಯ. ಎಲ್ಲ ಸಂಕೋಲೆಗಳಿಂದ ವಿಮುಕ್ತರಾಗಲು ಶಿಕ್ಷಣವೊಂದೇ ಪ್ರಬಲ ಅಸ್ತ್ರವೆಂದು ಡಾ. ಬಿ.ಆರ್. ಅಂಬೇಡ್ಕರ್ ಸಾರಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು, ಜಾತಿ ವ್ಯವಸ್ಥೆ ಇರುವವರೆಗೂ ಅಸ್ಪೃಶ್ಯತೆ ಇರುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಇರುವ ವರೆಗೆ ಜಾತೀಯತೆ ಇರಲಿದೆ. ಈ ಸಮಾಜದಲ್ಲಿ ಇವುಗಳನ್ನು ಹೋಗಲಾಡಿಸದಿದ್ದರೆ ದೇಶಕ್ಕೆ ಸ್ವಾತಂತ್ರ ಬಂದಿರುವುದು ಯಶಸ್ವಿಯಾಗಲಾರದು ಎಂದು ಸ್ಪಷ್ಟವಾಗಿ ಹೇಳಿದ್ದರು. ಇವತ್ತಿಗೂ ಸಂಪೂರ್ಣವಾಗಿ ಸಮಾನತೆಯನ್ನು ಸಾಧಿಸಲಾಗಿದೆ ಇರುವುದು ನೋವಿನ ಸಂಗತಿ ಎಂದು ಸಿದ್ದರಾಮಯ್ಯ ವಿಷಾಧಿಸಿದರು.

ವೈಜ್ಞಾನಿಕತೆಯುಳ್ಳ ಶಿಕ್ಷಣ ಬೇಕು: ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನದ ಮೂಲಕ ಎಲ್ಲಾ ಭಾರತೀಯರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದಲೇ ದೇಶದ ಸಂವಿಧಾನವನ್ನು ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಎಂದು ಪರಿಗಣಿಸಲಾಗುತ್ತದೆ. ಅಂಬೇಡ್ಕರ್ ಅವರು ವಿದ್ಯಾವಂತರಾಗದೆ ಹೋಗಿದ್ದರೆ, ಅವರಲ್ಲಿ ಹೋರಾಟದ ಮನೋಭಾವ ಇರದೇ ಹೋಗಿದ್ದರೆ ಇಂಥ ಸಂವಿಧಾನ ಸಿಗಲು ನಮಗೆ ಸಾಧ್ಯವಿರಲಿಲ್ಲ. ಅದಕ್ಕಾಗಿಯೇ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಅಂಬೇಡ್ಕರ್, ರಾಮ್ ಮನೋಹರ್ ಲೋಹಿಯಾ, ಜವಾಹರ್ ಲಾಲ್ ನೆಹರು ಅವರು ಪಡೆದಂತಹ ಶಿಕ್ಷಣ ಪಡೆಯಬೇಕು. ವೈಚಾರಿಕತೆ, ವೈಜ್ಞಾನಿಕತೆ, ಮಾನವೀ ಯತೆಯಿಂದ ಕೂಡಿರುವ ಶಿಕ್ಷಣ ನಮಗೆ ಸಿಗಬೇಕು ಎಂದರು.

ಸರ್ಕಾರ ನಡೆಸುವ ವಸತಿಶಾಲೆಗಳಲ್ಲಿ ಶೇ. 97.22 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪಿಯು ಪರೀಕ್ಷೆಯಲ್ಲಿಯೂ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿರುವುದು ಇದು ಸರ್ಕಾರದ ಹೆಗ್ಗಳಿಕೆ ಎಂದರು. ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕರಾದ ರಿಜ್ವಾನ್ ಅರ್ಷದ್, ಭೋಜೇಗೌಡ, ಗೋವಿಂದರಾಜು, ಮಾಜಿ ಸಂಸದ ಚಂದ್ರಪ್ಪ, ಮಾಜಿ ಸಚಿವ ಆಂಜನೇಯ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮುಂತಾದವರು ಉಪಸ್ಥಿತರಿದ್ದರು.



ಶೋಷಿತರಿಗೆ ಹಕ್ಕು ಕೊಟ್ಟವರು ಅಂಬೇಡ್ಕರ್: ಮಹದೇವಪ್ಪ

ಅಸ್ಪೃಶ್ಯತೆಯ ಕಾರಣಕ್ಕೆ ಕುಡಿಯಲು ನೀರು ಸಿಗದೇ ಶಿಕ್ಷಣ ದೂರವಾಗಿ, ಜನರು ತಮ್ಮ ಹಕ್ಕುಗಳಿಗಾಗಿ ಒದ್ದಾಟ ನಡೆಸುತ್ತಿದ್ದ ಸಂದರ್ಭವನ್ನು ಕಣ್ಣಾರೆ ಕಂಡು, ತಾವೂ ಅದನ್ನು ಅನುಭವಿಸಿ ಮುಂದೆ ಶಿಕ್ಷಣ ಎಂಬ ಸಂಜೀವಿನಿಯ ಮೂಲಕವೇ ದೇಶದ ಜನರಿಗೆ ಅದರಲ್ಲೂ ಶೋಷಿತ ವರ್ಗದ ಜನರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ಕೆಲಸ ಮಾಡಿದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಸಚಿವ ಡಾ. ಎಚ್.ಸಿ.ಮಹದೇವಪ್ಪ ಹೇಳಿದರು. ಬಾಬಾ ಸಾಹೇಬರು ದೇಶದ ಬಹು ಜನರ ಬದುಕಿನ ಆಶಯಕ್ಕೆ ವಿರುದ್ಧವಾಗಿದ್ದ ಮನುಸ್ಮೃತಿಯನ್ನು ಸುಟ್ಟು, ಕುಡಿಯುವ ನೀರಿಗಾಗಿ ನಡೆದ ಜಗತ್ತಿನ ಮೊದಲ ಹೋರಾಟವಾದ ಮಹಾಡ್ ಚಳವಳಿಯ ನೇತೃತ್ವ ವಹಿಸಿದ್ದರು. ಬಹು ಜನರ ಪರವಾಗಿ, ಪ್ರಜಾಪ್ರಭುತ್ವ ಉಳಿವಿಗಾಗಿ ಬಹುದೊಡ್ಡ ಧರ್ಮಯುದ್ಧ ಮಾಡಿದ ಜಗತ್ತಿನ ಮಹಾನ್ ನಾಯಕ ಎಂದರೆ ಅದು ಬಾಬಾಸಾಹೇಬರು ಎಂದು ಬಣ್ಣಿಸಿದರು.

ಅಂಬೇಡ್ಕರ್ ಕೊಡುಗೆ ಅಪಾರ: ಬೊಮ್ಮಾಯಿ

ಬಿ.ಆರ್.ಅಂಬೇಡ್ಕರ್ ಕಾಲಾತೀತ ನಾಯಕ

ಬೆಂಗಳೂರು: ಕೆಲವರು ಕಾಲಕ್ಕೆ ಸೀಮಿತವಾದ ನಾಯಕರಿರುತ್ತಾರೆ. ಆದರೆ, ಡಾ. ಅಂಬೇಡ್ಕರ್ ಹಾಗಲ್ಲ. ಅವರು ಕಾಲಾತೀತ ನಾಯಕ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾ ಯಪಟ್ಟರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಏರ್ಪಡಿಸಿದ ಸಂವಿಧಾನ ಕರ್ತೃ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಮಹಾನ್ ಚಿಂತಕರು ಸದಾ ಜೀವಂತರಾಗಿರುತ್ತಾರೆ. ಅಂಥವರಲ್ಲಿ ಡಾ.ಅಂಬೇಡ್ಕರ್ ಅವರೂ ಒಬ್ಬರು. ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಇವೆರಡನ್ನೂ ಪಡೆದವರು ಡಾ. ಅಂಬೇಡ್ಕರ್ ಅವರು ಎಂದು ವಿಶ್ಲೇಷಿಸಿದರು. ಭಾರತಕ್ಕೆ ಸಮಾನತೆ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿರುವ ಶ್ರೇಷ್ಠ ವ್ಯಕ್ತಿ ಬಾಬಾಸಾಹೇಬ ಅಂಬೇಡ್ಕರ್ ಅವರು ಎಂದು ವಿವರಿಸಿದರು.

ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಅಂಬೇಡ್ಕರ್ ಅವರ ಜನ್ಮದಿನವನ್ನು ದಲಿತರು ಮಾತ್ರ ಕೊಂಡಾಡಬೇಕೇ? ಅಂಬೇಡ್ಕರ್ ಅವರು ನಮ್ಮ ಅಸ್ಮಿತೆ, ನಮ್ಮ ಬೆಳಕು; ನಮಗೆ ದಾರಿದೀಪ ಎಂದು ಕೊಂಡಾಡುತ್ತೇವೆ. ಬಾಬಾಸಾಹೇಬರನ್ನು ಗೌರವಿಸುವಲ್ಲಿ ಬಿಜೆಪಿ ಮೊದಲ ಸ್ಥಾನದಲ್ಲಿದೆ. ಬಿಜೆಪಿ ಮೀಸಲಾತಿ ವಿರೋಧಿ; ಮೀಸಲಾತಿಯನ್ನು ಕಿತ್ತು ಬಿಡುತ್ತಾರೆ ಎಂದು ತಪ್ಪು ಮಾಹಿತಿ ಹರಡುತ್ತಾರೆ. ಮೀಸಲಾತಿ ರದ್ದು ಮಾಡುವುದಾದರೆ ನಾವು ಇಷ್ಟು ದಿನ ಯಾಕೆ ಕಾಯಬೇಕಿತ್ತು ಎಂದು ಪ್ರಶ್ನಿಸಿದರು.



ಮಹಿಳಾ ವಿಧೇಯಕಕ್ಕೆ ಬೆಂಬಲ ಕೊಡಿ

ಎಲ್ಲರೂ ಒಂದಾಗಿ ಭಾರತದ ಭವಿಷ್ಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲಾ ರಾಜಕೀಯ ಬದಿಗೊತ್ತಿ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಬೆಂಬಲ ಕೊಡಿ ಎಂದು ಸಂಸದ ಬಸವರಾಜ್ ಬೊಮ್ಮಾಯಿ ಮನವಿ ಮಾಡಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏ.16ರಿಂದ ಲೋಕಸಭಾ ವಿಶೇಷ ಅಧಿವೇಶನ ನಡೆಯುತ್ತಿದೆ. ಅತ್ಯಂತ ಸಂತೋಷದಿಂದ ಪಾರ್ಲಿಮೆಂಟ್ ನೋಡುತ್ತಿದ್ದೇವೆ. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರು ವಿಂಗಡನೆ ವಿಚಾರ ಚರ್ಚೆಗೆ ಬರುತ್ತಿದೆ. ಅಂಬೇಡ್ಕರ್ ಅವರ ಚಿಂತನೆಯಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಯಾಗಿದೆ. ಕಾಂಗ್ರೆಸ್‌ನ ಹಿಂದಿನ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಅಪೇಕ್ಷೆ ಕೂಡ ಇದಾಗಿತ್ತು. ಭಾರತದ ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಅನ್ನುವುದು ಎಲ್ಲರ ಅಪೇಕ್ಷೆ ಎಂದರು.

ಸುಪ್ರೀಂ ಕೊಲೀಜಿಯಂನಿಂದ ಶಿಫಾರಸು

ರಾಜ್ಯಕ್ಕೆ ಹೈ ಜಡ್ಜ್ ನೇಮಕ

ಹೊಸದಿಲ್ಲಿ: ದೇಶದ ಉನ್ನತ ನ್ಯಾಯಾಂಗದಲ್ಲಿ ಮಹಿಳಾ ಪ್ರತಿನಿಧಿತ್ವವನ್ನು ಹೆಚ್ಚಿಸುವತ್ತ ಮಹತ್ವದ ಹೆಜ್ಜೆಯಾಗಿ ಸುಪ್ರೀಂ ಕೋರ್ಟ್ ಕೊಲೀಜಿಯಂ ಕೇರಳ ಮತ್ತು ಕರ್ನಾಟಕ ಹೈಕೋರ್ಟ್‌ಗಳಿಗೆ ಹೊಸ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡಿದೆ.

ಕೊಲೀಜಿಯಂ ತನ್ನ ಇತ್ತೀಚಿನ ಸಭೆಯಲ್ಲಿ ಕರ್ನಾಟಕ ಹೈಕೋರ್ಟ್‌ಗೆ ಮೂವರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಸಹ ಒಪ್ಪಿಗೆ ನೀಡಲಾಗಿದೆ. ಇವರಲ್ಲಿ ರಾಜೇಶ್ವರಿ ನಾರಾಯಣ ಹೆಗಡೆ, ಕೆಡಂಬಾಡಿ ಗಣೇಶ್ ಶಾಂತಿ ಹಾಗೂ ಮಹದೇವಪ್ಪ ಬ್ರುಂಗೇಶ್ ಸೇರಿದ್ದಾರೆ.

ಕೇರಳ ಹೈಕೋರ್ಟ್‌ಗೆ ಇಬ್ಬರು ಮಹಿಳಾ ವಕೀಲರನ್ನು ನ್ಯಾಯ ಮೂರ್ತಿಗಳಾಗಿ ನೇಮಕ ಮಾಡಲು ಶಿಫಾರಸು ಮಾಡಿದೆ. ಇವರಲ್ಲಿ ಪ್ರೀತಾ ಅರವಿಂದನ್ ಕೃಷ್ಣಮ್ಮ ಮತ್ತು ಲಿಜ್ ಮ್ಯಾಥ್ಯೂ ಅಂತ್ರಾಪರ್ ಹೆಸರುಗಳು ಸೇರಿವೆ.

ಈ ಶಿಫಾರಸುಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಿರುವುದು ಗಮನಾರ್ಹವಾಗಿದೆ.

ಈ ಕ್ರಮವನ್ನು ಉನ್ನತ ನ್ಯಾಯಾಂಗದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವ ಮಹತ್ವದ ಹೆಜ್ಜೆಯಾಗಿ ಪರಿಗಣಿಸ ಲಾಗುತ್ತಿದೆ. ದೀರ್ಘಕಾಲ ದಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮಟ್ಟದಲ್ಲಿ ಮಹಿಳಾ ಪ್ರತಿನಿಧಿತ್ವ ಕಡಿಮೆ ಇರುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಕೊಲೀಜಿಯಂ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಂತಿಮವಾಗಿ ಅಂಗೀಕರಿಸಿದ ಬಳಿಕ ಈ ನೇಮಕಾತಿಗಳು ಜಾರಿಗೆ ಬರಲಿವೆ.

ಬಂಧಿತರ ಬಿಡುಗಡೆಗೆ ರವಿಕುಮಾರ್ ಒತ್ತಾಯ

ಬೆಂಗಳೂರು: ಧಾರವಾಡದಲ್ಲಿ ಬಂಧಿತ ಪ್ರತಿಭಟನಾನಿರತ ನಿರುದ್ಯೋಗಿ ಯುವಜನರನ್ನು ಕೂಡಲೇ ಬಿಡುಗಡೆ ಮಾಡದಿದ್ದರೆ ಬಿಜೆಪಿ ಕೂಡ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ವಿಧಾನಪರಿಷತ್ ಪ್ರತಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಎಚ್ಚರಿಸಿದ್ದಾರೆ.

ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಿರುದ್ಯೋಗಿ ಯುವಜನರು ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಹೋರಾಟ ಮಾಡಿದ್ದಾರೆ. ಸರ್ಕಾರ ಕೋರ್ಟಿನ ನೆಪ ಹೇಳಿ ಉದ್ಯೋಗ ಭರ್ತಿ ಮಾಡುತ್ತಿಲ್ಲ. ಕೂಡಲೇ ಉದ್ಯೋಗ ನೀಡಬೇಕು; ನಿರುದ್ಯೋಗಿ ಯುವಜನರನ್ನು ಮಾತುಕತೆಗೆ ಕರೆದು ಉದ್ಯೋಗ ಭರ್ತಿ ಮಾಡಿ ಎಂದು ಒತ್ತಾಯಿಸಿದರು.

ಸರ್ಕಾರ 56 ಸಾವಿರ ಜನರನ್ನು ಉದ್ಯೋಗಕ್ಕೆ ಭರ್ತಿ ಮಾಡುವುದಾಗಿ ತಿಳಿಸಿತ್ತು.

> **ಸರ್ಕಾರ ನಿರುದ್ಯೋಗಿ ಯುವಕರಿಗೆ ನಿರುದ್ಯೋಗ ಭತ್ಯೆಯನ್ನೂ ನೀಡಿಲ್ಲ. ಸುಮಾರು 3 ಲಕ್ಷ ಹುದ್ದೆಗಳು ಖಾಲಿ ಇದ್ದರೂ ಅವನ್ನು ಭರ್ತಿ ಮಾಡಿಲ್ಲ, ಪ್ರತಿಭಟನೆಯ ಅವಕಾಶವನ್ನೂ ಕೊಡದೇ ಬಂಧಿಸಿದ್ದನ್ನು ಖಂಡಿಸುತ್ತೇನೆ.**
> ■ **ಗೋವಿಂದ ಕಾರಜೋಳ,** ಸಂಸದ

ಏ.30ರಿಂದ ಪಿಯು ಪರೀಕ್ಷೆ-2

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಅನುತ್ತೀರ್ಣಗೊಂಡಿರುವ ಅಥವಾ ಪರೀಕ್ಷೆಗೆ ಗೈರಾದ ಅಭ್ಯರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸದೇ ಏ.30 ರಿಂದ ಆರಂಭವಾಗಲಿರುವ ಪರೀಕ್ಷೆ-2ಕ್ಕೆ ಹಾಜರಾಗಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಪರೀಕ್ಷಾ ಮಂಡಳಿಯು ಪರೀಕ್ಷೆ-2ಕ್ಕೆ ನೋಂದಣಿಯಾಗಲು ಏ. 17 ಕೊನೆಯ ದಿನವಾಗಿದ್ದು, ಮೊದಲನೇ ಪರೀಕ್ಷೆಯಲ್ಲಿ ಫಲಿತಾಂಶ ಪೂರ್ಣಗೊಳಿಸದ ವಿದ್ಯಾರ್ಥಿಗಳು ಯಾವುದೇ ಪರೀಕ್ಷಾ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಇಂತಹ ವಿದ್ಯಾರ್ಥಿಗಳು ಉಚಿತವಾಗಿ ಪರೀಕ್ಷೆ-2ಕ್ಕೆ ನೋಂದಾಯಿಸಿಕೊಳ್ಳಬಹುದು ಎಂದು ಮಂಡಳಿ ತಿಳಿಸಿದೆ.

ವಿದ್ಯಾರ್ಥಿಗಳು ಮಂಡಳಿಯ ಅಧಿಕೃತ ಲಿಂಕ್ http://tinyurl.com/mvp9k6es ಬಳಸಿ ನೇರವಾಗಿ ನೋಂದಾಯಿಸಿಕೊಳ್ಳಬಹುದು ಅಥವಾ ತಮ್ಮ ಕಾಲೇಜಿನ ಪ್ರಾಂಶುಪಾಲರನ್ನು ಸಂಪರ್ಕಿಸಿ ಪಿಯು ಎಕ್ಸಾಂ ಪೋರ್ಟಲ್ ಮೂಲಕವೂ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಕಾರಣಾಂತರಗಳಿಂದ ಮೊದಲನೇ ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳಿಗೂ ಸಹ ಪ್ರಾಂಶುಪಾಲರ ಲಾಗಿನ್ ಮೂಲಕ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಮಂಡಳಿ ಹೇಳಿದೆ. ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಕಾಲೇಜಿನ ಪ್ರಾಂಶುಪಾಲರ ಲಾಗಿನ್‌ನಲ್ಲಿ ಪ್ರವೇಶಪತ್ರ ಲಭ್ಯವಾಗಲಿದೆ.

ಪ್ರಶ್ನೆ ಕೋಠಿ ಬಳಸಿಕೊಳ್ಳಿ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಶಾಂತಚಿತ್ತದಿಂದ ಸಿದ್ಧತೆ ಮಾಡಿಕೊಳ್ಳುವಂತೆ ಹಾಗೂ ಹೆಚ್ಚಿನ ನೆರವಿಗಾಗಿ ಮಂಡಲಿಯ ಜಾಲತಾಣದಲ್ಲಿ ಲಭ್ಯವಿರುವ ಪ್ರಶ್ನೆ ಕೋಠಿ ಮತ್ತು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

ಎಲೆಚುಕ್ಕಿ ರೋಗ, ಕೊಳೆರೋಗ ನಿಯಂತ್ರಣಕ್ಕಾಗಿ ಔಷಧ ಸಿಂಪಡಣೆ ಅನಿವಾರ್ಯ

ಮೈಲುತುತ್ತ ದರ ಏರಿಕೆ, ಬೆಳೆಗಾರರಿಗೆ ಸಂಕಷ್ಟ

▸ ರಮೇಶ್ ಕರುವಾನೆ

ಶೃಂಗೇರಿ: ಮಲೆನಾಡಿನ ಅಡಕೆ ಬೆಳೆಗಾರರಿಗೆ ಅದೇನೋ ಶಾಪವೋ ಗೊತ್ತಿಲ್ಲ ಒಂದಿಲ್ಲೊಂದು ತಾಪತ್ರಯಗಳು ಅಡಕೆ ತೋಟಗಳಲ್ಲಿ ಕೊಳೆರೋಗ ಎಲೆ ಚುಕ್ಕಿ ಬಾಧೆ ಈಗ ಮತ್ತೊಂದು ಸಂಕಷ್ಟ ಎದುರಾಗಿದೆ. ಕಳೆದ ವರ್ಷಕ್ಕಿಂತ ಶೇ.35ರಷ್ಟು ಮೈಲುತುತ್ತಕ್ಕೆ ದರ ಏರಿಕೆಯಾಗಿ ಬೆಳೆಗಾರರ ಮೇಲೆ ಬರೆಯ ಮೇಲೆ ಬರೆ ಬಿದ್ದಿದೆ.

ಕಳೆದ ವರ್ಷ ಮೈಲುತುತ್ತ ದರ 330 ಇದ್ದಿದ್ದು ಈ ವರ್ಷ 490 ರಿಂದ 500 ದರ ತಲುಪಿದೆ ಹೀಗಾಗಿ ಔಷಧ ಸಿಂಪಡಣೆಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ.

ಬೋರ್ಡೋ ಔಷಧ ಸಿಂಪಡಣೆ: ಅಡಕೆ ತೋಟಗಳಲ್ಲಿ ಕೊಳೆ ರೋಗ ನಿಯಂತ್ರಣಕ್ಕೆ ಬೋರ್ಡೋ ಮಿಶ್ರಣ ಅತ್ಯವಶ್ಯಕವಾಗಿದ್ದು ಮೈಲುತುತ್ತ ಇಲ್ಲದೆ ಔಷಧ ಸಿಂಪಡಣೆ ಸಾಧ್ಯವಿಲ್ಲ. ಹಿಂಗಾರು ಉದುರುವಿಕೆ, ಎಲೆ ಚುಕ್ಕಿ ರೋಗ, ಕೊಳೆರೋಗ ನಿಯಂತ್ರಣಕ್ಕಾಗಿ ಕನಿಷ್ಠ ಮೂರು ಬಾರಿಯಾದರೂ ಔಷಧ ಸಿಂಪಡಿಸಬೇಕಾಗಿದೆ. ಕಳೆದ ಎರಡು ವರ್ಷದಂತೆ ತಾಲೂಕಿನಲ್ಲಿ ಅತಿವೃಷ್ಟಿಯಾದರೆ ಈ ವರ್ಷವೂ ನಾಲ್ಕು ಬಾರಿಯಾದರೂ ಸಿಂಪಡಿಸುವ ಸ್ಥಿತಿ ಇದೆ.

ವಿಪರೀತ ಬಿಸಿಲು ಮಳೆಗೆ ರೈತ ಕಂಗಾಲು: ಒಂದೆಡೆ ಸುಡುವ ವಿಪರೀತ ಬಿಸಿಲು ಇದರ ನಡುವೆ ತುಂತುರು ಮಳೆ. ಇನ್ನು ಕೆಲವೆಡೆ ಸಿಡಿಲು ಗಾಳಿ ವಿಪರೀತ ಮಳೆಯಾದ್ದರಿಂದ ಇದರಿಂದಾಗಿ ಅಡಕೆ ಬೆಳೆಗಾರರು ಬೆಂದು ಕಂಗಾಲಾಗಿದ್ದಾರೆ. ಬಿಸಿಲಿನಿಂದ ಬಳಲಿ ಬೆಂಡಾಗಿದ್ದ ಅಡಕೆ ಮರಗಳಿಗೆ ಇತ್ತೀಚೆಗೆ ಸುರಿದ ಮಳೆ ಅಮೃತವಾಗುವ ಬದಲು ವಿಷವಾಗಿದೆ. ಕಳೆದ ವಾರ ಏಕಾಏಕಿ ಅಬ್ಬರದ ಮಳೆ ಸುರಿದಾಗ ಒಮ್ಮೆ ತೋಟಕ್ಕೆ ತಂಪಾಯಿತು. ಈಗ ವಿಪರೀತ ಬಿಸಿಲಿನಿಂದಾಗಿ ಅಡಕೆ ಮರಗಳ ತಲೆ ನೋಡಿದರೆ ಹಿಂಗಾರವೆಲ್ಲ ಕರಟಿ ಹೋಗಿ ಕೆಂಪಾಗಿದೆ.

ದರ ಹೆಚ್ಚಳ: ಈಗ ಮೈಲುತುತ್ತ ಏಕಾಏಕಿ ದರ ಏರಿಸಿ ರೈತರು ಕಂಗಾಲಾಗಿದ್ದು ಇನ್ನು ಎರಡು ತಿಂಗಳು ಮಳೆಗಾಲಕ್ಕೆ ಬಾಕಿ ಇರುವಾಗಲೇ ಇಷ್ಟೊಂದು ಪ್ರಮಾಣದಲ್ಲಿ ದರ ಏರಿಕೆ ಆಗಿರುವುದು ಮುಂದಿನ ದಿನಗಳಲ್ಲಿ ಇನ್ನೇನು ಎಂಬ ಆತಂಕ ಹುಟ್ಟಿಸಿದೆ.



> **ಮಲೆನಾಡಿನ ಜೀವನಾಡಿಯಾಗಿದ್ದ ಅಡಕೆ ಕೃಷಿಕರ ಮುಖ್ಯ ಆರ್ಥಿಕ ಶಕ್ತಿಯಾಗಿದೆ ಕಳೆದ ವರ್ಷ ತೋಟಗಳಿಗೆ ಕೊಳೆರೋಗ ವ್ಯಾಪಿಸಿದೆ. ನಿರಂತರ ಸುರಿದ ಮಳೆ ಅಡಿಕೆ ಬೆಳೆಯ ಮೇಲೆ ನೇರ ಪರಿಣಾಮ ಬೀರಲಿದೆ. ಇದೀಗ ಮೈಲುತುತ್ತ ದರ ಏರಿಕೆಯಿಂದಾಗಿ ಔಷಧ ಸಿಂಪಡಣೆ ಮಾಡುವುದು ತುಂಬಾ ಕಷ್ಟವಾಗಿದೆ. ಸಹಾಯಧನ ನೀಡಬೇಕು.**
> ■ **ರಾಘವೇಂದ್ರ ಕಾವಡಿ,** ಗ್ರಾಮ ಹಂಚಲಿ ಶೃಂಗೇರಿ.

ಸರಕಾರದಿಂದ ಮೂಗಿಗೆ ತುಪ್ಪ: ಕಳೆದ ಎರಡು ವರ್ಷದಿಂದ ತಾಲೂಕಿನಲ್ಲಿ ಅತಿವೃಷ್ಟಿ ಆಗಿದ್ದರೂ ಸರ್ಕಾರ ಅತಿವೃಷ್ಟಿ ಪೀಡಿತ ಪ್ರದೇಶವೆಂದು ಗುರುತಿಸದೇ ಅನ್ಯಾಯ ಎಸಗಿದೆ. ಈ ಹಿಂದೆ ಮೈಲುತುತ್ತಕ್ಕೆ ದೊರೆಯುತ್ತಿದ್ದ ಸಹಾಯಧನ ಇತ್ತೀಚಿನ ವರ್ಷಗಳಲ್ಲಿ ಸಿಗದಿರುವುದು ಸಮಸ್ಯೆಯನ್ನು ಗಂಭೀರಗೊಳಿಸಿದೆ. ಗ್ಯಾರಂಟಿ ಭಾಗ್ಯಗಳನ್ನು ಕೊಡುವುದರಲ್ಲಿ ಮುಳುಗಿ ಹೋಗಿದ್ದ ಸರ್ಕಾರ ರೈತರ ನೆರವಿಗೆ ಧಾವಿಸದೆ ಬಜೆಟ್‌ನಲ್ಲಿ ಅಡಿಕೆ ಬೆಳೆಗಾರರ ನೆರವಿಗೆ ಧಾವಿಸದೆ ವಂಚಿತರನ್ನಾಗಿಸಿದೆ. ಮೈಲುತುತ್ತ ದರ ಏರಿಕೆಗೆ ಸ್ಪಷ್ಟ ಕಾರಣ ತಿಳಿಯದಿಲ್ಲ. ಸರಕಾರಗಳು ಮಧ್ಯಪ್ರವೇಶಿಸಿ ಮೈಲುತುತ್ತ ದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂಬುದು ಬೆಳೆಗಾರರ ಆಗ್ರಹವಾಗಿದೆ.

ಯುವ ವೈದ್ಯೆ ಕೊಂದಿದ್ದ ನೀರಾನೆ ಸಾವು

ಶಿವಮೊಗ್ಗ: ತ್ಯಾವರೆಕೊಪ್ಪದ ಹುಲಿ-ಸಿಂಹಧಾಮದಲ್ಲಿ ಇತ್ತೀಚೆಗೆ ತರಬೇತಿ ಯುವ ವೈದ್ಯೆಯ ಸಾವಿಗೆ ಕಾರಣವಾಗಿದ್ದ ನೀರಾನೆ ಕೂಡ ಮಂಗಳವಾರ ಮಧ್ಯಾಹ್ನ ಮೃತಪಟ್ಟಿದೆ.

ಕಳೆದ ಕೆಲವು ದಿನಗಳಿಂದ 8 ವರ್ಷದ ಹೆಣ್ಣು ನೀರಾನೆ ಹಂಸಿಣಿ ತೀವ್ರ ಅನಾರೋಗ್ಯದಿಂದ ಬಳಲುತ್ತಿತ್ತು. ನೀರಾನೆಗೆ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮಧ್ಯಾಹ್ನ 3.08ಕ್ಕೆ ಮೃತಪಟ್ಟಿದೆ ಎಂದು ಮೃಗಾಲಯದ



ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಂಸಿಣಿ ಗರ್ಭಿಣಿಯಾಗಿದ್ದ ಲಕ್ಷಣಗಳು ಕಾಣಿಸಿಕೊಂಡಿದ್ದವು. ಎಂಟು ತಿಂಗಳ ಗರ್ಭಧಾರಣೆಯ ಅವಧಿ ಮಾರ್ಚ್ ಮಧ್ಯಭಾಗದಲ್ಲೇ ಪೂರ್ಣಗೊಂಡಿತ್ತು. ಆದರೆ ಪ್ರಸವದ ಲಕ್ಷಣಗಳು ಕಾಣಿಸಿರಲಿಲ್ಲ. ಇನ್ನೊಂದೆಡೆ ಕಳೆದ ಕೆಲವು ದಿನಗಳಿಂದ ಆಹಾರ ಸೇವನೆ ಕಡಿಮೆ ಮಾಡಿದ್ದ ನೀರಾನೆ, ಮಂದವಾಗಿ ವರ್ತಿಸುತ್ತಿತ್ತು. ಏಪ್ರಿಲ್ 10ರಂದು ಮೈಸೂರಿನ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಪಶುವೈದ್ಯರ ತಂಡ ನೀರಾನೆ ಆರೋಗ್ಯ ತಪಾಸಣೆ ನಡೆಸಿ, ರಕ್ತದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿತ್ತು. ಈ ವೇಳೆ ನೀರಾನೆಯ ಗರ್ಭಾಶಯದಲ್ಲಿ ಗಂಭೀರವಾದ ಸೋಂಕು ಇರುವುದು ಪತ್ತೆಯಾಗಿತ್ತು. ಗರ್ಭಾಶಯದ ಒಳಗಿನ ಭ್ರೂಣ ಮರಣ ಹೊಂದಿದ್ದೇ ಈ ಸೋಂಕಿಗೆ ಪ್ರಮುಖ ಕಾರಣ ಎಂದು ವೈದ್ಯರು ಮಾಹಿತಿ ನೀಡಿದ್ದರು. ಭ್ರೂಣ ಗರ್ಭದಲ್ಲೇ ಮೃತಪಟ್ಟಿದ್ದರಿಂದ ನೀರಾನೆಯ ದೇಹದ ಪ್ರಮುಖ ಅಂಗಾಂಗಗಳಿಗೆ ಸೋಂಕು ತಗುಲಿತ್ತು. ಅದರ ಚೇತರಿಕೆ ಸಾಧ್ಯತೆ ಕಡಿಮೆ ಇತ್ತು. ಮೈಸೂರಿನ ವನ್ಯಜೀವಿ ಪಶುವೈದ್ಯರು ಹಾಗೂ ಸ್ತ್ರೀರೋಗ ತಜ್ಞ ಪಶುವೈದ್ಯರ ಸಲಹೆಯಂತೆ ಸತತ ಔಷಧೋಪಚಾರ ಮತ್ತು ಆರೈಕೆ ನೀಡಲಾಗಿತ್ತು. ಆದರೂ ಸೋಂಕಿನ ತೀವ್ರತೆಯಿಂದಾಗಿ ಹಂಸಿಣಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದೆ ಎಂದು ತಿಳಿಸಿದ್ದಾರೆ.

ಮೈಸೂರಿಂದ ಬಂದಿತ್ತು ಹಂಸಿಣಿ

ಹಂಸಿಣಿಯನ್ನು 2022ರಲ್ಲಿ ಮೈಸೂರಿನಿಂದ ತ್ಯಾವರೆಕೊಪ್ಪ ಮೃಗಾಲಯಕ್ಕೆ ತರಲಾಗಿತ್ತು. ಇಲ್ಲಿ ಬಂದಾಗ ಎರಡು ಬಾರಿ ಗರ್ಭ ಧರಿಸಿದ್ದ ಹಂಸಿಣಿ, ಎರಡೂ ಬಾರಿ ವಿವಿಧ ಕಾರಣಕ್ಕೆ ಮರಿ ಹಾಕಿರಲಿಲ್ಲ. ಈ ಬಾರಿ ಮೂರನೆ ಸಲ ಗರ್ಭ ಧರಿಸಿತ್ತು. ಆದರೆ ಮಾರ್ಚ್ 18ರಿಂದ ಆಹಾರ ತ್ಯಜಿಸಿತ್ತು. ಮಾರ್ಚ್ 19ರಂದು ಚಿಕಿತ್ಸೆ ನೀಡಲು ಹೋದಾಗ ಬೆಂಗಳೂರು ಮೂಲದ ಡಾ. ಸಮೀಕ್ಷಾ ರೆಡ್ಡಿ ಅವರ ಮೇಲೆ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡಿದ್ದ ವೈದ್ಯೆ ಸಮೀಕ್ಷಾ ಮಾರ್ಚ್ 20ರಂದು ಮೃತಪಟ್ಟಿದ್ದರು. ಇದೀಗ ದಾಳಿ ನಡೆಸಿದ್ದ ನೀರಾನೆಯೂ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಮೃಗಾಲಯದ ಆವರಣದಲ್ಲಿ ಸೂತಕದ ಛಾಯೆ ಮೂಡಿಸಿದೆ.

ಸಂಪಾದಕೀಯ

ಈಗಲಾದರೂ ಜಾರಿಯಾಗಲಿ

ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಮಂಡಿಸುವುದಕ್ಕಾಗಿ ಸಂಸತ್ತಿನ ಮೂರು ದಿನಗಳ ವಿಶೇಷ ಅಧಿವೇಶನವನ್ನು ಕರೆಯಲಾಗಿದ್ದು, ಇದು ಮೋದಿ ಸರಕಾರವು ಶಾಸಕಾಂಗದಲ್ಲಿ ಮಹಿಳೆಯರ ಮೀಸಲಾತಿಗೆ ಕಟಿಬದ್ಧವಾಗಿರುವುದನ್ನು ಸೂಚಿಸುತ್ತದೆ. ಏಪ್ರಿಲ್ 16ರಿಂದ ಆರಂಭಗೊಳ್ಳಲಿರುವ ಈ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಸಾಧಕಬಾಧಕಗಳ ಕುರಿತಂತೆ ಅರ್ಥಪೂರ್ಣ ಹಾಗೂ ರಚನಾತ್ಮಕ ಚರ್ಚೆ ನಡೆದು ಮಸೂದೆಯು ಸರ್ವಸಮ್ಮತವಾಗಿ ಅಂಗೀಕಾರ ಪಡೆಯಲೆಂದು ಆಶಿಸಬೇಕಾಗಿದೆ. ಈ ವಿಚಾರದಲ್ಲಿ ಹಿಂದಿನಂತೆ ರಾಜಕೀಯ ಮಾಡುವುದು,



ಕುಂಟು ನೆಪಗಳನ್ನೊಡ್ಡಿ ಅದನ್ನು ನನೆಗುದಿಗೆ ಹಾಕುವಂತಹ ಬೆಳವಣಿಗೆ ನಡೆಯದಿರಲಿ ಎಂಬುದು ಎಲ್ಲರ ಆಶಯವಾಗಿದೆ.

ನಿಜವಾಗಿ ಸಂವಿಧಾನ ರಚನೆಯ ಸಂದರ್ಭದಲ್ಲೇ ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿಯ ಕುರಿತಂತೆ ಪ್ರಸ್ತಾಪವಿತ್ತು. ಆದರೆ ಸಂವಿಧಾನ ರಚನಾ ಸಮಿತಿಯಲ್ಲಿದ್ದ ಕೆಲವು ಪ್ರಮುಖ ಮಹಿಳೆಯರೇ ಅದನ್ನು ವಿರೋಧಿಸಿದ್ದರು. ಮಹಿಳೆಯರು ಸ್ವಂತ ಬಲದಿಂದಲೇ ಸಮಾನ ಹಕ್ಕುಗಳನ್ನು ಪಡೆಯಲಿದ್ದಾರೆ ಎಂಬುದು ಅವರ ವಿಶ್ವಾಸವಾಗಿತ್ತು. ಆದರೆ ಮುಂದಿನ ದಿನಗಳಲ್ಲಿ ಆ ವಿಶ್ವಾಸ ಉಳಿಯಲಿಲ್ಲ. ರಾಜಕೀಯದಲ್ಲಿ ಕೆಲವೇ ಕೆಲವು ಮಹಿಳೆಯರು ಪ್ರವರ್ಧಮಾನಕ್ಕೆ ಬಂದರೂ, ಒಟ್ಟು ಸಂಖ್ಯೆಯು ಕಡಿಮೆಯೇ ಆಗಿತ್ತು. 1952ರ ಮೊದಲ ಲೋಕಸಭೆಯಲ್ಲಿ ಶೇ.5ರಷ್ಟು ಮಹಿಳಾ ಪ್ರತಿನಿಧಿಗಳಿದ್ದರೆ, ಇತ್ತೀಚೆಗೆ 2004ರಲ್ಲಿ ಈ ಸಂಖ್ಯೆ ಕೇವಲ ಶೇ.9ಕ್ಕೇರಿತ್ತಷ್ಟೆ. ಪ್ರಸಕ್ತ ಲೋಕಸಭೆಯಲ್ಲಿ ಸುಮಾರು ಶೇ.15ರಷ್ಟಿದೆಯಷ್ಟೆ.

ಶಾಸಕಾಂಗದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಪ್ರಯತ್ನಗಳು ಹಿಂದೆ ನಡೆದಿಲ್ಲವೆಂದಲ್ಲ. 1992ರಲ್ಲಿ ತಂದ ಸಂವಿಧಾನ ತಿದ್ದುಪಡಿಯ ಮೂಲಕ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕಲ್ಪಿಸುವುದು ಜಾರಿಗೆ ಬಂದಿತ್ತು. ಆದರೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವುದಕ್ಕೆ ಕೆಲವು ರಾಜಕೀಯ ಪಕ್ಷಗಳು ತೀವ್ರ ವಿರೋಧ ಸೂಚಿಸಿ, ಅಂತಹ ಪ್ರಯತ್ನವನ್ನು ಹಳಿ ತಪ್ಪಿಸಿದ್ದವು. ಕೆಲವು ಪಕ್ಷ ಗಳಂತೂ ಮಹಿಳಾ ಮೀಸಲಾತಿಯಲ್ಲಿ ಮತ್ತೆ ಪರಿಶಿಷ್ಟರಿಗೆ ಒಳ ಮೀಸಲಾತಿ ಬೇಕು ಎಂದೂ ಬೇಡಿಕೆ ಸಲ್ಲಿಸಿದ್ದವು. ಮನಮೋಹನ ಸಿಂಗ್ ಸರಕಾರವು 2010ರಲ್ಲಿ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಪಡೆದಿದ್ದರೂ ಬಳಿಕ ಕೆಲವು ಪಕ್ಷಗಳ ವಿರೋಧಕ್ಕೆ ಮಣಿದು ಆ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವ ಗೋಜಿಗೇ ಹೋಗಲಿಲ್ಲ. ಈ ಬಾರಿಯಾದರೂ ಮಸೂದೆಯು ಅಂಗೀಕಾರಗೊಳ್ಳಲು ಇರುವ ಅಡ್ಡಿ ಆತಂಕಗಳು ತೊಲಗಲಿ ಎಂದು ಎಲ್ಲರು ನಿರೀಕ್ಷಿಸುತ್ತಿದ್ದಾರೆ. ಹಾಗಾದಲ್ಲಿ ಕ್ಷೇತ್ರ ಮರುವಿಂಗಡಣೆಯ ಬಳಿಕ, ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಗೊಂಡೀತು.

ಏಕಾತ್ಮತೆಯ ಸೂತ್ರದಿಂದ ಸಮನ್ವಯ ಸಾಧಿಸಿದ ಶಂಕರರು



ಜಗತ್ತಿಗೆ ಅಧ್ಯಾತ್ಮದ ಬೆಳಕನ್ನು ನೀಡಿದ ಭಾರತವರ್ಷವು, ಪ್ರತಿಯೊಬ್ಬರೂ ಪೂರ್ಣತೆ ಹಾಗೂ ಆನಂದದ ಸ್ವರೂಪರೇ ಆಗಿದ್ದಾರೆಂದು ಪ್ರತಿಪಾದಿಸಿದ ಅನೇಕ ಮಹಾತ್ಮರಿಗೆ ಅವತಾರದ ನೆಲವಾಗಿದೆ. ಸರ್ವಕಾಲಕ್ಕೂ, ಸರ್ವದೇಶಕ್ಕೂ ಹಾಗೂ ಸರ್ವಜನರಿಗೂ ಒದಗುವ ನಿತ್ಯತತ್ತ್ವದ ಉಪದೇಶವು ಪ್ರಪಂಚಕ್ಕೆ ದೊರಕಿದ್ದು ಇದೇ ನೆಲದಿಂದ ಮತ್ತು ಈ ನೆಲದ ತತ್ತ್ವಜ್ಞಾನಿಗಳಿಂದಲೇ ಆಗಿದೆ. ಸುಮಾರು ಸಾವಿರದ ಇನ್ನೂರು ವರ್ಷಗಳ ಹಿಂದೆ ಅವತರಿಸಿದ ಶ್ರೀಶಂಕರ ಭಗವತ್ಪಾದರು ಇಂಥ ತತ್ತ್ವಜ್ಞಾನಿಗಳ ಪರಂಪರೆಗೆ ಮುಕುಟಪ್ರಾಯರೂ, ಸನಾತನ ಧರ್ಮದ ಪುನಃಪ್ರತಿಷ್ಠಾಪನಾಚಾರ್ಯರೂ, ಸಮನ್ವಯಸೂತ್ರದಿಂದ ಇಡೀ ದೇಶವನ್ನು ಒಗ್ಗೂಡಿಸಿದವರೂ ಆಗಿದ್ದಾರೆ. ಪ್ರತಿಯೊಬ್ಬ ಮಹಾತ್ಮನ ಅವತಾರವೂ ಯಾವುದೋ ಒಂದು ಉದ್ದೇಶಕ್ಕಾಗಿಯೇ ಆಗಿರುತ್ತದೆ. ಅವರಿಂದ ಪ್ರಪಂಚಕ್ಕೆ ಅನಿತರಸಾಧಾರಣವಾದ ಯಾವುದೋ ಒಂದು ಕೊಡುಗೆಯನ್ನು ಬಯಸಿಯೇ ಪ್ರಕೃತಿಯು ಅಂಥವರನ್ನು ಸೃಷ್ಟಿಸಿಕೊಳ್ಳುತ್ತದೆ. ಶ್ರೀಶಂಕರಭಗವತ್ಪಾದರ ಅವತಾರವಾದ ಕಾಲಘಟ್ಟವೂ ಕೂಡ ಅಂಥ ಒಬ್ಬ ಮಹಾತ್ಮನ ನಿರೀಕ್ಷೆಯಲ್ಲಿತ್ತು. ಒಂದು ಕಡೆ ಯಾವುದು ಸಮ್ಯಕ್ ಜ್ಞಾನ, ಯಾವುದಲ್ಲ ಎಂಬ ವಿವೇಕವನ್ನು ಸಮಾಜ ಕಳೆದುಕೊಂಡ ಸ್ಥಿತಿಯದು. ಇನ್ನೊಂದು ಕಡೆ ಪರಸ್ಪರ ವಿದ್ವೇಷ ಮತ್ತು ಅಸಹನೆಗಳಿಂದಾಗಿ ಸಮಾಜವು ಒಡೆದು ಹೋಗಿದ್ದ ಕಾಲಘಟ್ಟ. ಇಂತಹ ಸಮಯದಲ್ಲಿ ಇಡೀ ಮನುಕುಲಕ್ಕೆ ಜಗದ್ಗುರುವಿನ ಸ್ಥಾನದಲ್ಲಿ ನಿಂತು ಮಾರ್ಗವನ್ನು ತೋರಿಸುವ ಒಬ್ಬ ಮಹಾತ್ಮನ ಅಗತ್ಯವಿತ್ತು. ಸನಾತನ ಧರ್ಮವು ಜಗತ್ತಿನಲ್ಲಿ ಧರ್ಮಹ್ರಾಸಗೊಂಡಾಗ ಮತ್ತು ಅಧರ್ಮವು ಎಲ್ಲೆ ಮೀರುವಾಗ ಒಬ್ಬ ಮಹಾತ್ಮನ ಅವತಾರವಾಗುತ್ತದೆ ಎಂದು ನಂಬುತ್ತದೆ. ಅದಕ್ಕೆ ದೃಷ್ಟಾಂತವೋ ಎಂಬಂತೆ ಶ್ರೀಶಂಕರರ ಉದಯವಾಯಿತು.

ಶ್ರೀಶಂಕರರು ಪರಸ್ಪರ ವಿದ್ವೇಷಗಳಲ್ಲಿ, ಅವಿಶ್ವಾಸದಲ್ಲಿ, ಭಿನ್ನಾಭಿಪ್ರಾಯಗಳಲ್ಲಿ, ಅಶಾಂತಿಯಲ್ಲಿ ಮಸುಕಾಗಿದ್ದ ಭಾರತವರ್ಷಕ್ಕೆ ಸಮನ್ವಯಸೂತ್ರವನ್ನು ಕರುಣಿಸಿ ಭಾರತವನ್ನು ಮತ್ತೆ ಅಧ್ಯಾತ್ಮದ ವಿಶ್ವಗುರುವನ್ನಾಗಿಸಿದವರು. ಸನಾತನಧರ್ಮವು ಚಿರಂತನವಾಗಿರುವಂತೆ ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡಿದವರು. ಸಾವಿರದ ಇನ್ನೂರು ವರ್ಷಗಳ ಹಿಂದೆಯೇ ಇಡೀ ಭಾರತವರ್ಷವನ್ನು ಸಂಚರಿಸಿದವರು. ಧರ್ಮವು ಈ ನೆಲದ ಜನರ ಜೀವನದಲ್ಲಿ ಯಾವತ್ತೂ ಇರುವಂತೆ ನೋಡಿಕೊಳ್ಳಲು ದೇಶದ ನಾಲ್ಕು ದಿಕ್ಕುಗಳಲ್ಲಿ ಮಠವನ್ನು ಸ್ಥಾಪಿಸಿದವರು. ಜೊತೆಗೆ ಧರ್ಮಮಾರ್ಗದಿಂದ ಅಧ್ಯಾತ್ಮದೆತ್ತರಕ್ಕೆ ಪ್ರತಿಯೊಬ್ಬನೂ ಸಾಗಲು ಮಾರ್ಗೋಪದೇಶವನ್ನು ಮಾಡಿದವರು. ಶ್ರೀಶಂಕರರ ಅವತಾರ ಆಗದೇ ಇದ್ದಿದ್ದರೆ ಇಂದಿಗೆ ಭಾರತ ಹೀಗಿರುತ್ತಿರಲಿಲ್ಲ. ಜಗತ್ತಿನ ಅತ್ಯಂತ ಪ್ರಾಚೀನ ನಾಗರಿಕತೆಯೊಂದು ಅವಸಾನ ಹೊಂದಿ ಎಷ್ಟೋ ಕಾಲವಾಗುತ್ತಿತ್ತು. ಶ್ರೀಶಂಕರರು ಕೇವಲ ಅಧ್ಯಾತ್ಮದ ಬೋಧನೆಯನ್ನು ಮಾಡಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಯಾವ ಶಂಕರರು ಭೌತಿಕ ಜಗತ್ತನ್ನು ಮಿಥ್ಯೆಯೆಂದು ಕರೆದರೋ ಅದೇ ಶಂಕರರು ವ್ಯಾವಹಾರಿಕ ಜಗತ್ತಿನ ಎಲ್ಲ ವೈಷಮ್ಯಗಳಿಗೆ ಪರಿಹಾರವನ್ನೂ ಹೇಳಿ, ಅಭ್ಯುದಯದ ಮಾರ್ಗವನ್ನೂ ಉಪದೇಶಿಸಿದರು. ಹೀಗೆ ಎಲ್ಲ ವಿಷಯಗಳಲ್ಲೂ, ಎಲ್ಲ ರೀತಿಯಲ್ಲಿಯೂ ಸಮನ್ವಯವನ್ನು ಸಾಧಿಸುತ್ತಲೇ ಶ್ರೇಯೋಮಾರ್ಗದ ತುತ್ತತುದಿಯನ್ನು ತಲುಪುವ ಸಾಧನವನ್ನೂ ತಿಳಿಸಿಕೊಟ್ಟರು.

ಶ್ರೀಶಂಕರರ ಸಮನ್ವಯಸೂತ್ರವು ಎಲ್ಲ ಕಾಲಕ್ಕೂ, ಎಲ್ಲ ಕ್ಷೇತ್ರಕ್ಕೂ ಅನ್ವಯಿಸುವಂಥದು. ಅವರ ಜೀವನವೇ ಒಂದು ಸಮನ್ವಯದ ರೂಪಕವಾಗಿದೆ. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಭೌತಿಕವಾಗಿ, ವ್ಯಾವಹಾರಿಕವಾಗಿ, ಎಲ್ಲ ರೀತಿಯಲ್ಲಿಯೂ ಸಮನ್ವಯತೆಯ ಸೂತ್ರವನ್ನು ನಮಗೆ ಕರುಣಿಸಿದ್ದಾರೆ. ಯಾವ ಶಂಕರರು ಪ್ರಸ್ಥಾನತ್ರಯಕ್ಕೆ ಭಾಷ್ಯವನ್ನು ಬರೆದರೋ, ಯಾರು "ಅಹಂ ಬ್ರಹ್ಮಾಸ್ಮಿ", "ತತ್ತ್ವಮಸಿ" ಎಂಬ ಜೀವ-ಬ್ರಹ್ಮೈಕ್ಯವನ್ನು ಉಪದೇಶಿಸುವ ಉಪನಿಷತ್ತತ್ತ್ವವನ್ನು ಎತ್ತಿಹಿಡಿದರೋ, ಯಾವ ಶಂಕರರು ಎಲ್ಲ ಭೇದಗಳನ್ನೂ ಧಿಕ್ಕರಿಸಿದರೋ ಅದೇ ಶಂಕರರು ವ್ಯಾವಹಾರಿಕವಾದ ಎಲ್ಲ ಭೇದಗಳನ್ನೂ ಒಪ್ಪಿಕೊಂಡೇ ಅವುಗಳಿಗೆ ಪರಸ್ಪರ ವಿರೋಧವಾಗದಂತೆ, ಒಂದು ಮತ್ತೊಂದನ್ನು ನಾಶ ಮಾಡದಂತೆ ಸಮನ್ವಯಸೂತ್ರದಲ್ಲಿ ಪೋಣಿಸಿದರು. ನಾಮ, ರೂಪಗಳನ್ನೇ ಆಶ್ರಯಿಸಿ ಅವುಗಳನ್ನೇ ಪಾರಮಾರ್ಥಿಕವೆಂದು ವಾದಿಸುತ್ತಾ, ಅವುಗಳ ಸಹಜವಾದ ಅನೇಕತ್ವವೆಂಬ ದ್ವಂದ್ವದಲ್ಲೇ ಕಳೆದುಹೋಗಿದ್ದ ಪಂಡಿತವರ್ಗವನ್ನೂ ಅವರು ತಮ್ಮ ಅದ್ವೈತಸೂತ್ರದಿಂದ ಒಂದಾಗಿಸಿದರು. ನಾಮ-ರೂಪಗಳಿಂದ ಮೇಲೆದ್ದು ಅದಕ್ಕೆ ಮೀರಿದ ನಿರಾಕಾರ, ನಿರ್ಗುಣದ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವನ್ನು ಇನ್ನಷ್ಟು ಸ್ಪಷ್ಟಗೊಳಿಸಿದರು.

ಶಂಕರರು ತಾವೇನನ್ನೂ ಹೊಸದನ್ನು ಹೇಳಲು ಹೋಗಲಿಲ್ಲ. ಈ ನೆಲಕ್ಕೆ ಪರಮಪ್ರಮಾಣವಾಗಿರುವ ವೇದದ ತಾತ್ಪರ್ಯವನ್ನೇ ಮತ್ತಷ್ಟು ಸ್ಪಷ್ಟವಾಗಿ ಪ್ರತಿಪಾದಿಸಿದರು, ಅದನ್ನು ಸ್ವಜೀವನದಲ್ಲಿಯೂ, ಸ್ವಕೃತಿಗಳಲ್ಲಿಯೂ ಅನುಸರಿಸಿದರು. ಶಂಕರರು ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ, ಆದರೆ ತತ್ತ್ವಕ್ಕೆ ವಿರುದ್ಧವಾಗಿ ತಮ್ಮ ತಮ್ಮ ಸಿದ್ಧಾಂತಗಳನ್ನು ಸಮಾಜದಲ್ಲಿ ಹರಡುತ್ತಾ ಲೋಕವನ್ನು ಸಂಭ್ರಾಂತಗೊಳಿಸುತ್ತಿದ್ದ ಪಂಡಿತಪರಂಪರೆಯ ಸಂದೇಹಗಳನ್ನು ಮತ್ತು ಅಜ್ಞಾನವನ್ನು ಮೊದಲು ನಿವಾರಿಸಿದರು. ಶಾಸ್ತ್ರವಾಕ್ಯಾರ್ಥಗಳೆಂಬ ಬೌದ್ಧಿಕವಾದ ಸಮರದಲ್ಲಿ ಎಲ್ಲ ಪಂಥಾನುಯಾಯಿಗಳನ್ನೂ ಎದುರಿಸಿದರು. ಆ ಮೂಲಕ ಎಲ್ಲರನ್ನೂ ಒಂದೇ ವೇದಿಕೆಗೆ ಸೇರಿಸಿದರು. ಅಲ್ಲಿಂದಲೇ ಅವರ ಸಮನ್ವಯದ ಹಾದಿ ಆರಂಭವಾಗುತ್ತದೆ.

ಎಲ್ಲಿಯವರೆಗೆ ವಿಶೇಷವನ್ನೇ ಪಾರಮಾರ್ಥಿಕವೆಂದು ಕಾಣುತ್ತೇವೆಯೋ ಅಲ್ಲಿಯವರೆಗೆ ಪರಸ್ಪರ ವಿರೋಧವೇ ಮುನ್ನೆಲೆಗೆ ಬರುತ್ತದೆ ಎಂಬುದನ್ನು ಅವರು ಮನಗಾಣಿಸಿದರು. ಜೊತೆಗೆ ಅದರಲ್ಲಿ ಉಪನಿಷತ್ತುಗಳಿಗೆ ತಾತ್ಪರ್ಯವಿಲ್ಲವೆಂದು ನಿರ್ಭಿಡೆಯಿಂದ ಸಾಧಿಸಿ ತೋರಿಸಿದರು. ಎಲ್ಲ ವಿಶೇಷಗಳಲ್ಲೂ ಇರುವ ಸಾಮಾನ್ಯವೊಂದನ್ನು ಕಂಡುಕೊಂಡರೆ ಆಗ ಎಲ್ಲ ವಿಶೇಷ ಅಥವಾ ಭೇದಗಳಲ್ಲೂ ಸಮನ್ವಯ ಉಂಟಾಗಿ ಅದು ಶ್ರೇಯಸ್ಸಿಗೆ ಸಾಧನವಾಗುತ್ತದೆ ಎಂದು ಉಪದೇಶಿಸಿದರು. ನಾನಾ ಮಣಿಗಳಿಂದ ಕೂಡಿದ ಸರವನ್ನು ಮಾಡಲು, ಆ ಎಲ್ಲ ಮಣಿಗಳನ್ನು ಪೋಣಿಸುವ ಸಾಮಾನ್ಯವಾದ ಸೂತ್ರ ಅಥವಾ ದಾರವೊಂದು ಬೇಕಾಗುತ್ತದೆ. ಆ ದಾರವು ಎಲ್ಲ ಮಣಿಗಳಲ್ಲೂ ಸಾಮಾನ್ಯವಾಗಿರುವುದರಿಂದಲೇ ಮಣಿಗಳೆಂಬ ವಿಶೇಷಗಳು ಒಂದು ಸರವಾಗಿ ಮಾರ್ಪಡುತ್ತವೆ. ಮಣಿಗಳಿಗೆ ತಮ್ಮೊಳಗೆ ಹಾಸುಹೊಕ್ಕಾಗಿರುವ, ಓತಪ್ರೋತವಾಗಿರುವ ಆ ಸೂತ್ರವೇ ಆಧಾರ. ಇದೇ ರೀತಿಯಲ್ಲಿ ಎಲ್ಲ ವಿಭಿನ್ನತೆಗಳಿಗೂ ಏಕತೆಯೇ ಆಧಾರ. ಏಕತೆಯ ಬೇರು ಇಲ್ಲದ ಗಿಡವು ವಿಭಿನ್ನತೆಯೆಂಬ ಪುಷ್ಪಗಳಿಂದ ಕಂಗೊಳಿಸಲು ಸಾಧ್ಯವಿಲ್ಲ. ಹಾಗಾಗಿ ಏಕತೆಯೇ ಮೂಲ, ವಿಭಿನ್ನತೆ ಅದರ ಬಾಹ್ಯ ಅಭಿವ್ಯಕ್ತಿ ಅಷ್ಟೇ ಎಂಬ ತತ್ತ್ವವನ್ನು ಅವರು ತಮ್ಮ ಭಾಷ್ಯಗಳ ಮೂಲಕ, ತಮ್ಮ ಉಪದೇಶಗಳ ಮೂಲಕ, ತಮ್ಮ ಕೃತಿಗಳ ಮೂಲಕ, ತಮ್ಮ ಕಾರ್ಯಗಳ ಮೂಲಕ ಮತ್ತು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಜಗತ್ತಿಗೆ ಸ್ವಸ್ವರೂಪದ ದರ್ಶನವನ್ನು ಮಾಡಿಸಿದರು.

ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ ಮೊದಲಾದವುಗಳಲ್ಲಿ "ನಾನೆಂಬ" ಭ್ರಮೆಯನ್ನು ಮತ್ತು ಅಭಿಮಾನವನ್ನು ಕಳಚಿಕೊಳ್ಳದೆಯೇ, ಅದರಾಚೆಗೆ ಇರುವ ಮತ್ತು ಈ ಎಲ್ಲವನ್ನು ಮಣಿಗಳಂತೆ ಪೋಣಿಸಿರುವ, ಎಲ್ಲ ದೇಹಗಳಲ್ಲೂ ನೆಲೆಸಿ, ಅವೆಲ್ಲವನ್ನೂ ಧರಿಸಿರುವ ಆತ್ಮಸ್ವರೂಪವನ್ನು ಮನಗಾಣದೇ ಮನುಷ್ಯನ ಜೀವನ ಸಾರ್ಥಕವಾಗುವುದಿಲ್ಲ ಎಂದು ಅವರು ತಿಳಿಸಿದರು. "ನಾನು ಬೇರೆ, ನೀನು ಬೇರೆ" ಎಂಬ ಭಾವವು ಭೌತಿಕವಾಗಿ ಸತ್ಯವೆಂದು ಕಂಡರೂ, ಕಾರ್ಯ ಮತ್ತು ಕಾರಣಗಳಲ್ಲಿ ಕಾರಣದ ಹೊರತಾಗಿ ಇರಲಾಗದ ಕಾರ್ಯವು ತತ್ತ್ವತಃ ಹೇಗೆ ಕಾರಣಕ್ಕಿಂತ ಅತ್ಯಂತ ಭಿನ್ನವಲ್ಲವೋ ಮತ್ತು ಕಾರಣಕ್ಕಿಂತ ಹೊರತಾಗಿ ಇರಲು ಸಾಧ್ಯವಿಲ್ಲವೋ, ಅದೇ ರೀತಿಯಲ್ಲಿ ದೇಹಾದಿಗಳೆಲ್ಲವೂ ಅನಿತ್ಯವಾಗಿದ್ದು, ಆತ್ಮವೇ ಸತ್ಯವಾಗಿದೆ ಎಂದು ತಿಳಿಸಿದರು. ಹಾಗಾಗಿ ಈ ದೇಹಾದಿ ನಿಮಿತ್ತವಾದ ಎಲ್ಲ ಅಭಿಮಾನವೂ ಅನರ್ಥಕ್ಕೇ ಕಾರಣವೆಂದು ಉಪದೇಶಿಸಿದರು. "ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ, ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ" ಎಂಬಂತೆ ಎಲ್ಲರಲ್ಲೂ ಆ ಆತ್ಮತತ್ತ್ವವನ್ನೇ ಕಾಣುವ ಏಕಾತ್ಮತೆಯನ್ನು ಬೋಧಿಸಿದರು.

ಇಲ್ಲಿ ಯಾರೂ ಮೇಲೂ ಅಲ್ಲ, ಕೀಳೂ ಅಲ್ಲ. ಎಲ್ಲರೂ ಆ ಪರಮಾತ್ಮನ ಸ್ವರೂಪಿಗಳೇ ಆಗಿದ್ದಾರೆ. ಪಾರಮಾರ್ಥಿಕವಾಗಿ ಎಲ್ಲರೂ ಆ ಪರಬ್ರಹ್ಮಸ್ವರೂಪಿಗಳೇ ಆಗಿದ್ದಾರೆ ಎಂಬುದನ್ನು ಪ್ರತಿಪಾದಿಸಿದರು. ಜೊತೆಗೆ ಈ ತತ್ತ್ವವೇ ಉಪನಿಷತ್ತುಗಳ ಮುಖ್ಯ ಪ್ರತಿಪಾದ್ಯವಾದ ತತ್ತ್ವವಾಗಿದೆ ಎಂಬುದನ್ನೂ ಎತ್ತಿಹಿಡಿದರು.

ಏಕತೆಯೆಂಬುದು ವಿಭಿನ್ನತೆಯ ನಾಶಕವಲ್ಲ, ಬದಲಿಗೆ ವಿಭಿನ್ನತೆಯ ಪೋಷಕ ಹಾಗೂ ಆಶ್ರಯ ಎಂಬುದೇ ಶಂಕರರ ಮುಖ್ಯ ಪ್ರತಿಪಾದ್ಯವಾಗಿದೆ. ವ್ಯಾವಹಾರಿಕವನ್ನು ಪಾರಮಾರ್ಥಿಕದ ಸಾಧನವಾಗಿಸಿಕೊಳ್ಳುವುದರಲ್ಲಿಯೇ ಜೀವನದ ಸಾರ್ಥಕ್ಯ ಅಡಗಿದೆಯೇ ಹೊರತು ಇದರ ವಿಪರೀತವಲ್ಲ. ಸಾಧನವೇ ಸಾಧ್ಯವಾದರೆ, ಪುರುಷಾರ್ಥದಿಂದ ವ್ಯಕ್ತಿಯು ವಂಚಿಸಲ್ಪಡುತ್ತಾನೆ. ಹಾಗಾಗಿ ನಿಃಶ್ರೇಯಸ್ಸಿನ ಪ್ರಾಪ್ತಿಗಾಗಿನ ಸಾಧನವನ್ನಾಗಿ ತಮಗೆ ದೊರೆತಿರುವ ಮನುಷ್ಯಜನ್ಮವನ್ನು ಬಳಸಿಕೊಳ್ಳಬೇಕೆಂಬ ಅವರ ಉಪದೇಶವು ಎಲ್ಲ ವೈಷಮ್ಯಗಳಿಗೂ, ಎಲ್ಲ ಭೇದಭಾವಕ್ಕೂ, ಎಲ್ಲ ಸಂಘರ್ಷಗಳಿಗೂ, ಎಲ್ಲ ಅಶಾಂತಿಗೂ ಪರಿಹಾರವಾಗಿದೆ.

ಭಾವಾದ್ವೈತಕ್ಕೆ ನೆಲೆ ಸಿಕ್ಕಾಗ ಮಾತ್ರ ಭೌತಿಕವಾದ ಭೇದಗಳು ಸಾಧಕವಾಗುತ್ತವೆ, ಅನ್ಯಥಾ ವಿಷಮತೆಗೆ ಕಾರಣವಾಗಬಹುದು ಎಂಬುದು ಅವರು ನೀಡಿರುವ ಎಚ್ಚರಿಕೆಯೂ ಹೌದು. ಪರಸ್ಪರ ಸೌಹಾರ್ದದ ಬದುಕನ್ನು ಎಲ್ಲರೂ ಬದುಕುವಂತಾಗಬೇಕೆಂದರೆ ಏಕಾತ್ಮತೆಯ ಸೂತ್ರವನ್ನು ತನ್ನ ಅಂತರಂಗ ಮತ್ತು ಬಹಿರಂಗದಲ್ಲಿ ಪ್ರತಿಯೊಬ್ಬರೂ ಕಂಡುಕೊಳ್ಳಬೇಕೆಂಬ ಅವರ ಉಪದೇಶವು ಇಂದಿಗೆ ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಇಂಥ ಶಂಕರರ ತತ್ತ್ವವನ್ನು ನೆನಪಿಸಿಕೊಂಡು ನಮ್ಮ ಜೀವನದಲ್ಲಿ ಆಚರಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ದೇಶವು ಮುಂದಿನ ಮಂಗಳವಾರ (21-04-2026) ತತ್ತ್ವಜ್ಞಾನಿಗಳ ದಿನವನ್ನು ಆಚರಿಸುತ್ತಿದೆ.

ಅಹಂಕಾರ ಎಲ್ಲವನ್ನೂ ನಾಶಪಡಿಸುತ್ತದೆ

ವಿತ್ತಂ ಜ್ಞಾನಂ ಕುಲಂ ವಾಪಿ ನ ಭವೇದ್ ಗರ್ವಕಾರಣಮ್।
ಗರ್ವಃ ಪತನಹೇತುಃ ಸ್ಯಾತ್ ಗರ್ವಃ ಸರ್ವಂ ವಿನಾಶಯೇತ್ ॥

-ಸುವಚನ ಶತಕಮ್

ಆಸ್ತಿ, ತಿಳಿವು, ಮನೆತನ- ಇವು ಯಾವುವೂ ಗರ್ವಕ್ಕೆ ಕಾರಣ ಆಗಬಾರದು. ಗರ್ವವು ಕೆಳಗೆ ಬೀಳುವುದಕ್ಕೆ ಕಾರಣ. ಅದು ಉಳಿದ ಎಲ್ಲವನ್ನೂ ಹಾಳುಗೆಡವುತ್ತದೆ -ಎಂಬುದು ಶ್ಲೋಕಾರ್ಥ.

ಜಂಬ ಕೊಚ್ಚಿಕೊಳ್ಳುವುದು ಅಸಂಸ್ಕೃತರ ಸ್ವಭಾವ. ಇದೆಂದೂ ಮನುಷ್ಯರಿಗೆ ಶೋಭೆ ತರುವುದಿಲ್ಲ. ಅಲ್ಪಜ್ಞಾನಿ ಅಥವಾ ಕಡಿಮೆ ತಿಳಿದುಕೊಂಡವರು ಕೆಲವೊಮ್ಮೆ ಮಹಾ ಜ್ಞಾನಿಗಳಂತೆ ಮಾತನಾಡುತ್ತಾರೆ. ತಮ್ಮ ಮೌಢ್ಯವನ್ನೂ ಅಜ್ಞಾನವನ್ನೂ ಪ್ರದರ್ಶಿಸುತ್ತಾರೆ. ತಾವು ಕಂಡ ಮೊಲಕ್ಕೆ ಮೂರೇ ಕಾಲು ಎಂದು ವಾದಿಸುವ ಅಲ್ಪಜ್ಞರೂ ಇರುತ್ತಾರೆ. ಅಹಂಕಾರಿಗಳಾದ ಜ್ಞಾನಿಗಳೂ ಕೆಲವೊಮ್ಮೆ ಅಲ್ಪರಂತೆ ವ್ಯವಹರಿಸುತ್ತಾರೆ.

ತಾವು ಗಳಿಸದಿದ್ದರೂ ಹಿರಿಯರು ಮಾಡಿಟ್ಟ ಆಸ್ತಿಯ ಮದದಲ್ಲಿ ಅಹಂಕಾರಿಗಳಾಗುವವರನ್ನೂ ನೋಡುತ್ತೇವೆ. ದೊಡ್ಡವರ ಹೆಸರಿನ ಹಿನ್ನೆಲೆಯಿದ್ದರೆ ಯಾರು ಏನು ಬೇಕಾದರೂ ಆಗಬಹುದು. ನೆಟ್ಟಗೆ ಕನ್ನಡ ಓದಲು ಬರದವರು ಶಿಕ್ಷಣ ಮಂತ್ರಿಯಾಗುತ್ತಾರೆ. ಐಟಿ,ಬಿಟಿಗಳ ಗಂಧವಿಲ್ಲದವನು ಜಾತಿಯ ಹಿನ್ನೆಲೆಯಿಂದಲೋ, ಅಪ್ಪ ಉನ್ನತ ಸ್ಥಾನದಲ್ಲಿದ್ದಾರೆ ಎಂಬ ಕಾರಣಕ್ಕೂ ಅದೇ ವಿಭಾಗದ ಸಚಿವರೂ ಆಗುತ್ತಾರೆ. ಸಂಸ್ಕೃತಿಯ ಗಂಧವಿಲ್ಲದವರು ಸಂಸ್ಕೃತಿ ಇಲಾಖೆಯ ಮಂತ್ರಿಯಾಗುತ್ತಾರೆ. ಹೆತ್ತವರು ದೊಡ್ಡ ಸ್ಥಾನದಲ್ಲಿದ್ದರೆ, ಅಧಿಕಾರಿಗಳಾಗಿದ್ದರೆ ಮಕ್ಕಳೂ ಅಧಿಕಾರ ಚಲಾಯಿಸುತ್ತಾರೆ. ವಸ್ತುಸ್ಥಿತಿ ಹೀಗಿರುವುದನ್ನು ನಾವು ಸುತ್ತೆಲ್ಲ ಕಾಣುತ್ತೇವೆ. ಯಾರಿಗೆಲ್ಲ ಶಿಕ್ಷಣದ ಜತೆಗೆ ಸಂಸ್ಕಾರವಿರುವುದಿಲ್ಲವೋ, ಅಹಂಕಾರ ತಲೆಯಲ್ಲಿರುತ್ತದೆಯೋ ಇಂಥವರಲ್ಲಿ ಇದೆಲ್ಲ ಸಹಜ. ಆದರೆ ಇದಾವುದೂ ಶಾಶ್ವತವಲ್ಲ ಎಂಬುದು ತಿಳಿದಿದ್ದರೆ ಒಳ್ಳೆಯದು.



ಮನುಷ್ಯ ಅವನತಿ ಹೊಂದುವುದಕ್ಕೆ ಅಹಂಕಾರವೇ ಮೂಲ ಕಾರಣ. ಸಂಪತ್ತು, ಜ್ಞಾನ, ಮನೆತನ, ಶಕ್ತಿ ಇತ್ಯಾದಿಗಳಿದ್ದರೆ ಅಲ್ಪರಿಗೆ ಅದು ಅಹಂಕಾರವನ್ನು ಉಂಟು ಮಾಡುತ್ತದೆ. ಇವುಗಳೆಂದೂ ಅಹಂಕಾರಕ್ಕೆ ಕಾರಣವಾಗಬಾರದು.

ಸಂಪತ್ತೆಂದೂ ಶಾಶ್ವತವಲ್ಲ. ಅದಕ್ಕೆ ಏರಿಳಿತವಿದ್ದೇ ಇರುತ್ತದೆ. ಸಂಪತ್ತು ಬಂದಾಗ ಸದ್ವಿನಿಯೋಗ ಮಾಡಬೇಕು. ಈ ರೀತಿ ಯೋಚಿಸಿ ತೊಡಗಿಕೊಂಡರೆ ಅವನೆಂದೂ ಕೆಳಕ್ಕೆ ಬೀಳಲಾರ. ಜ್ಞಾನಿಯೆಂದೂ ಅಹಂಕಾರದಿಂದ ವರ್ತಿಸಬಾರದು. ತನ್ನ ಅರಿವಿನಿಂದ ಇನ್ನೊಬ್ಬರ ಅರಿವನ್ನು ಅರಳಿಸಲು ಪ್ರಯತ್ನಿಸಬೇಕು. ತನ್ನಲ್ಲಿರುವ ಉತ್ತಮ ಜ್ಞಾನವನ್ನು ಹಂಚಿ ಖುಷಿಪಡಬೇಕೇ ವಿನಾ ತಾನೇ ಜ್ಞಾನಿ, ತನಗಿಂತ ಬುದ್ಧಿವಂತರಿಲ್ಲ ಎಂದು ಬೀಗಿದರೆ ಅಧಃಪತನಕ್ಕೆ ಅದುವೇ ಹೇತುವಾಗುತ್ತದೆ. ಕುಲಾಭಿಮಾನ ಬಿಡಬೇಕು. ತಮ್ಮ ಮನೆತನ ಇರುವುದೇ ಅಧಿಕಾರ ಚಲಾಯಿಸುವುದಕ್ಕೆ ಎಂದು ಗರ್ವದಿಂದ ವ್ಯವಹರಿಸಬಾರದು. ಇದೇ ಸೋಲಿಗೆ ಕಾರಣವಾಗುತ್ತದೆ. ಅಂಥವನು ಸಜ್ಜನರ ಅವಕೃಪೆಗೆ ಕಾರಣನಾಗುತ್ತಾನೆ. ಇಂತಹ ಕೆಟ್ಟ ಸ್ವಭಾವಗಳು ಅಂಟಿಕೊಂಡರೆ ಮುಂದೊಂದು ದಿನ ಅದು ನಮ್ಮನ್ನಷ್ಟೇ ಅಲ್ಲ, ಎಲ್ಲವನ್ನೂ ಹಾಳು ಮಾಡುತ್ತದೆ. ಆದ್ದರಿಂದ ಕ್ಷಣಿಕವಾದ ಸಂಪತ್ತು ಮೊದಲಾದವುಗಳು ಇವೆ ಎಂದು ಸರ್ವಥಾ ಗರ್ವ ತಾಳಬಾರದು. ಗರ್ವದಿಂದ ವ್ಯವಹರಿಸಿದರೆ ಮುಂದೊಂದು ದಿನ ಅದೇ ನಮ್ಮ ಬೀಳಿಗೆ ಕಾರಣವಾಗುತ್ತದೆ.

ಧುರಂಧರ್: ಅಪಪ್ರಚಾರದ ಹಿಂದಿನ ಮನಸ್ಥಿತಿ

ಉತ್ಪಲ್ ಕುಮಾರ್

ಧುರಂಧರ್ ಸಿನಿಮಾ ಕುರಿತಾದ ಕೆಲವರ ಆಕ್ರೋಶವು ಅದರ ಕತೆ ಅಥವಾ ಅದರ ನಿರೂಪಣೆಯ ಕುರಿತಾಗಿಯಲ್ಲ. ಅದಕ್ಕಿಂತಲೂ ಮುಖ್ಯವಾಗಿ ನಿಯಂತ್ರಣದ ಕುರಿತಾಗಿ. ಅಂದರೆ ಆ ಕತೆಯನ್ನು ಹೇಳುವ ನಿಯಂತ್ರಣ ಯಾರ ಕೈಯಲ್ಲಿದೆ ಎಂಬ ಕುರಿತಾಗಿ. ಯಾರ ನೋವು ಅಧಿಕೃತವಾಗಿದೆ, ಯಾರ ರಾಷ್ಟ್ರೀಯತೆಯು ನ್ಯಾಯಾರ್ಹವಾಗಿದೆ ಎಂಬುದರಲ್ಲಿ.

ಕೆಲವು ದಶಕಗಳಿಂದ ಸಿನಿಮಾ ಮತ್ತು ಸಾಹಿತ್ಯಿಕ ಮಾಧ್ಯಮಗಳು ಎಡಪಂಥೀಯರ ಏಕಾಧಿಪತ್ಯದಲ್ಲಿತ್ತು. ಈ ಎಡಪಂಥೀಯರು ತಮ್ಮನ್ನು ಲಿಬರಲ್‌ಗಳು ಎಂದು ಕರೆಸಿಕೊಳ್ಳುತ್ತಿದ್ದರು. ಅವರು ಸಿನಿಮಾ ಮತ್ತು ಸಾಹಿತ್ಯವನ್ನು ತಮ್ಮ ಪ್ರಚಾರ ಸಾಧನವಾಗಿ ಬಳಸಿಕೊಳ್ಳುತ್ತಿದ್ದರು.

ಬಹುಕಾಲದಿಂದ ಹಿಂದಿ ಸಿನಿಮಾಗಳು ಎಡಪಂಥೀಯ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದವು. ಹಣೆಯಲ್ಲಿ ತಿಲಕ ಧರಿಸಿದ ವ್ಯಕ್ತಿ ಯಾವಾಗಲೂ ಖಳನಾಯಕನಾಗುತ್ತಿದ್ದ. ಮೇಲ್ವರ್ಗದವರು ಖಳರಂತೆ ಚಿತ್ರಿಸಲ್ಪಡುತ್ತಿದ್ದರು. ಹಿಂದುಗಳನ್ನು ಮತ್ತು ಹಿಂದು ಧರ್ಮವನ್ನು ಹೀಯಾಳಿಸುವುದು, ಅಣಕವಾಡುವುದು ಪ್ರಗತಿಪರ ಚಿಂತನೆಯೆಂಬಂತೆ ಬಿಂಬಿಸಲಾಗುತ್ತಿತ್ತು. ಹಾಗೆಂದು ಹಿಂದುಯೇತರ ಧರ್ಮಗಳ ಮೇಲೆ ಜಾತ್ಯತೀತ ಮಾನದಂಡಗಳು ಎಂದೂ ಅನ್ವಯವಾಗುತ್ತಿರಲಿಲ್ಲ.

ಈ ವಿಷಯದಲ್ಲಿ ಹಾಲಿವುಡ್ ಸ್ವಲ್ಪ ಭಿನ್ನವೆನ್ನಬಹುದು. ಯಾರು ಹೀರೋಗಳು, ಯಾರ ಮೇಲೆ ಬಾಂಬ್ ಹಾಕಬೇಕು, ಯಾರನ್ನು ಅಣಕಿಸಬೇಕು ಎಂಬುದನ್ನು ಅದು ನಿರ್ಧರಿಸು ತ್ತಿತ್ತು. ರಷ್ಯನ್ನರು ಖಳನಾಯಕರಾಗುತ್ತಿದ್ದರು. ಅರಬರು ಭಯೋತ್ಪಾದಕರಾಗುತ್ತಿದ್ದರು. ಭಾರತೀಯರು ತೀರಾ ಮೂಢನಂಬಿಕೆ ತುಂಬಿದ , ಅಭಿವೃದ್ಧಿ ಕಾಣದ ಸಮುದಾಯವಾಗುತ್ತಿದ್ದರು.

ರ್‍ಯಾಂಬೋ ವಿಯೆಟ್ನಾಂನಲ್ಲಿ ಅಮೆರಿಕದ ಶೌರ್ಯವನ್ನು ತೋರಿ ತಾನೇ ರಕ್ಷಕನೆಂಬಂತೆ ಬಿಂಬಿಸಲ್ಪಟ್ಟಾಗ ಅದನ್ನು ಯಾರೂ 'ಪ್ರಚಾರದ ಸಿನೆಮಾ' ಅನ್ನಲಿಲ್ಲ. ಜೇಮ್ಸ್ ಬಾಂಡ್ ತನ್ನ ಸಿನಿಮಾಗಳಲ್ಲಿ ಬ್ರಿಟಿಷರ ಸಾರ್ವಭೌಮತೆಯನ್ನು ಪ್ರತಿಪಾದಿಸಿದಾಗಲೂ ಅದನ್ನು ಪ್ರಚಾರವೆನ್ನಲಿಲ್ಲ. ಕೆಲವು ಪ್ರಳಯದ ಚಿತ್ರಗಳಲ್ಲಿ ಅಮೆರಿಕವೇ ಜಗತ್ತಿನ ರಕ್ಷಕ ಎಂಬಂತೆ ಚಿತ್ರಿಸಿದಾಗಲೂ ಅದನ್ನು ಪ್ರಚಾರ ಎನ್ನಲಿಲ್ಲ.

ಇಂತಹ ಚಿತ್ರಗಳ ಪ್ರಚಾರ ತಂತ್ರ ಎಷ್ಟು ಪ್ರಭಾವಶಾಲಿ ಯಾಗಿತ್ತೆಂದರೆ 1985ರಲ್ಲಿ ಬೆರೂತ್ ಒತ್ತೆಯಾಳು ಪ್ರಕರಣದ ಕೊನೆಯ ವೇಳೆ ಅಮೆರಿಕದ ಅಧ್ಯಕ್ಷ ರೇಗನ್ "ಕಳೆದ ರಾತ್ರಿ ನಾನು ರ್‍ಯಾಂಬೋ ಸಿನಿಮಾ ನೋಡಿದ ಬಳಿಕ, ಇನ್ನು ಮುಂದೆ ಇಂತಹ ಒತ್ತೆಯಾಳು ಪ್ರಸಂಗ ಒದಗಿದರೆ, ಏನು ಮಾಡಬೇಕೆಂಬುದನ್ನು ನಾನು ಕಂಡುಕೊಂಡೆ" ಎಂದು ನುಡಿದಿದ್ದರು.

ಈ ರೀತಿ ಹಾಲಿವುಡ್‌ನ ಕೆಲವು ಚಿತ್ರಗಳು ತಮ್ಮ ತಮ್ಮ ದೇಶದ ಸಾಮರ್ಥ್ಯವನ್ನು ಅತಿಯಾಗಿ ಬಿಂಬಿಸಿದ ಪ್ರಚಾರ ಚಿತ್ರಗಳನ್ನು ನಿರ್ಮಿಸಿದಾಗ ಅದನ್ನು ಯಾರೂ ಟೀಕಿಸಲಿಲ್ಲ. ಅದರ ಬದಲಾಗಿ ಅದು ರಾಷ್ಟ್ರೀಯ ಅಸ್ಮಿತೆಯನ್ನು ಎತ್ತಿ ಹಿಡಿಯುವ, ದೇಶಪ್ರೇಮವನ್ನು ಅಭಿವ್ಯಕ್ತಿಸುವ ಸಿನಿಮಾಗಳು ಎಂದು ಹೊಗಳಲಾಯಿತು.

ಆದರೆ 'ಧುರಂಧರ' ಭಾರತದ ಅಸ್ಮಿತೆಯನ್ನು ಪ್ರತಿಬಿಂಬಿಸು ವಾಗ ಎಡಪಂಥೀಯ, ಲಿಬರಲ್‌ವಾದಿಗಳು ಅದನ್ನು ಪ್ರಚಾರದ ಸಿನಿಮಾ ಎಂದು ಹೀಗಳೆಯುತ್ತಿದ್ದಾರೆ. ಅದು ಮೋದಿಯವರನ್ನು ಹೊಗಳಲು ನಿರ್ಮಿಸಲ್ಪಟ್ಟ ಪ್ರಚಾರದ ಸಿನಿಮಾ ಎಂದು ಟೀಕಿಸಲಾಗುತ್ತಿದೆ.

ಇತ್ತೀಚೆಗೆ ಆಂಗ್ಲ ಪತ್ರಿಕೆಯೊಂದಂತೂ ಧುರಂಧರ್ ಸಿನಿಮಾವು ಮೋದಿಯವರನ್ನೇ ಪ್ರಚಾರದ ಪ್ರಮುಖ ಕೇಂದ್ರವಾಗಿಸಿದೆ ಎಂದು ಆರೋಪಿಸಿತು. "ಈ ಸಿನಿಮಾದಲ್ಲಿ ಇರುವುದು ಒಬ್ಬನೇ ಒಬ್ಬ ಹೀರೋ. ಅದು ಭಾರತದ ಗೂಢಚಾರನಲ್ಲ. ಬದಲಾಗಿ ಮೋದಿ. ತೆರೆಯ ಮೇಲೆ ಮೋದಿಯವರು ಬಂದಾಗ ಚಿತ್ರಮಂದಿರದಲ್ಲಿ ಅತಿಯಾದ ಕರತಾಡನ



ಕೇಳಿಸಿತು" ಎಂದು ಅದರಲ್ಲಿ ಬರೆಯಲಾಯಿತು. "ಈ ಚಿತ್ರದಲ್ಲಿ ವೈರಿಗಳು ಎಲ್ಲೆಡೆಯೂ ಇದ್ದಾರೆ. ಕೇವಲ ಪಾಕಿಸ್ತಾನದಲ್ಲಲ್ಲ. ಭಾರತದ ವಿರೋಧ ಪಕ್ಷಗಳು, ಮುಸ್ಲಿಂ ಹಂತಕರು, ಸಿಖ್ ಪ್ರತ್ಯೇಕತಾವಾದಿಗಳು, ಎನ್‌ಜಿಒಗಳು ಮತ್ತು ಎಡಪಂಥೀಯರು ಎಲ್ಲರೂ ವೈರಿಗಳೆ" ಎಂದು ಅದು ಬರೆಯಿತು.

ಬಿಬಿಸಿ ಸೇರಿದಂತೆ ಇನ್ನಿತರ ಕೆಲವು ಪಾಶ್ಚಿಮಾತ್ಯ ಮಾಧ್ಯಮಗಳು ಕೂಡಾ ಇದೇ ಧ್ವನಿಯಲ್ಲಿ ಮಾತನಾಡುತ್ತಿವೆ. "ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಿನಿಮಾಗಳು ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತಿವೆ. ಸರಕಾರದ ನೀತಿಗಳನ್ನು ಮತ್ತು ಐತಿಹಾಸಿಕ ಘಟನೆಗಳನ್ನು ವೈಭವೀಕರಿಸುವ ಚಿತ್ರಗಳು ಭಾರೀ ಯಶಸ್ಸು ಸಾಧಿಸುತ್ತಿವೆ" ಎಂದು ಬಿಬಿಸಿ ಬರೆದಿತ್ತು.

ಇಲ್ಲಿರುವುದು ಕೇವಲ ರಾಜಕೀಯ ವಿಷಯವಲ್ಲ. ಧುರಂಧರ್ ಬೇರೆ ಕೆಲವು ವಿಚಾರಗಳಲ್ಲೂ ಅವರ ನೆಮ್ಮದಿ ಕೆಡಿಸಿದೆ. ಅದು ಸಿನಿಮಾ ಕ್ಷೇತ್ರದ ಮೇಲಿನ ಅವರ ಏಕಾಧಿಪತ್ಯವನ್ನು ಕಿತ್ತೊಗೆದಿದೆ. ಕೆಲವು ವ್ಯಕ್ತಿಗಳಷ್ಟೆ ಸಿನಿಮಾ ಮಾಡಬಲ್ಲವರು, ಕೆಲವು ದೇಶಗಳಷ್ಟೇ ಉತ್ತಮ ಚಿತ್ರ ಕೊಡಬಲ್ಲವರು, ಕೇವಲ ಒಂದು ಬಗೆಯ ನರೇಟಿವ್‌ಗಳು ಮಾತ್ರ ಸಫಲವಾಗಬಲ್ಲವು ಮುಂತಾದ ಮಿಥ್ಯೆಗಳನ್ನು ಒಡೆದುಹಾಕಿದೆ.

ಧುರಂಧರ್ ಈ ದೃಷ್ಟಿಕೋನವನ್ನೆ ಭಂಗಿಸಿದೆ. ಏಕೆಂದರೆ ಇದು ಭಾರತದ ಕತೆಯನ್ನು ಹೇಳುವಾಗ ಪಾಶ್ಚಿಮಾತ್ಯ ದೃಷ್ಟಿಕೋನವನ್ನು

> ಧುರಂಧರ್ ಮೋದಿಯವರ 'ಪ್ರಚಾರದ ಚಿತ್ರ' ಎಂದು ಟೀಕಿಸುವವರು ನೆಮ್ಮದಿ ಕಳಕೊಂಡಿದ್ದಾರೆ. ಧುರಂಧರ್ ಅವರ ಏಕಾಧಿಪತ್ಯ ಕಿತ್ತು ಹಾಕಿದ್ದು ಅವರಿಗೆ ಅಸಹನೀಯವಾಗಿದೆ.

ತಿರಸ್ಕರಿಸಿತು. ಅದು ಖಳನಾಯಕರನ್ನು ಲಿಬರಲ್‌ಗಳ ಇಚ್ಛೆಗೆ ತಕ್ಕಂತೆ ಮೃದುವಾಗಿಸಲು ಹೋಗಲಿಲ್ಲ. ಪಾಶ್ಚಿಮಾತ್ಯರು ಮತ್ತು ಅವರ ಗಾರ್ಡಿಯನ್‌ಗಳ ಅಧಿಕೃತ ಮುದ್ರೆ ಪಡೆಯಲು ಹೋಗಲಿಲ್ಲ.

ಕಳೆದ ಕೆಲವು ದಶಕಗಳಿಂದ ಜಾಗತಿಕ ಸಂಸ್ಕೃತಿಯ ಸ್ವೀಕಾರಾರ್ಹತೆಯನ್ನು ಸ್ವಘೋಷಿತ ಲಿಬರಲ್‌ಗಳು ನಿರ್ಧರಿಸುತ್ತಿದ್ದರು. ಯಾವ ಕತೆಗಳು ಪ್ರಗತಿಗಾಮಿ, ಯಾವುದು ಪ್ರತಿಗಾಮಿ, ಯಾವುದನ್ನು ಸಂಪೂರ್ಣವಾಗಿ ಹತ್ತಿಕ್ಕಬೇಕು ಎಂಬುದನ್ನೆಲ್ಲ ಅವರೇ ನಿರ್ಧರಿಸುತ್ತಿದ್ದರು. ಕಾಶ್ಮೀರ್ ಫೈಲ್ಸ್ ಇದನ್ನು ಪ್ರತಿರೋಧಿಸಿ, ಇತಿಹಾಸದ ಕಹಿಸತ್ಯಗಳನ್ನು ಜನರ ಮುಂದೆ ತೆರೆದಿಟ್ಟಿತು. ಧುರಂಧರ್ ಈ ನಿಟ್ಟಿನಲ್ಲಿ ಇನ್ನೂ ಕೆಲವು ಹೆಜ್ಜೆಗಳನ್ನು ಮುಂದಿಟ್ಟಿತು. ಇಂತಹ ನರೇಟಿವ್‌ಗಳು ವಾಣಿಜ್ಯಕಾಗಿಯೂ ಲಾಭತರಬಲ್ಲವು, ತಾಂತ್ರಿಕ ಕೌಶಲ ಹೊಂದಿರಬಲ್ಲವು ಹಾಗೂ ಜಾಗತಿಕವಾಗಿ ಮನ್ನಣೆ ಪಡೆಯಬಲ್ಲವು ಎಂದು ತೋರಿಸಿಕೊಟ್ಟಿತು. ತಾವೇ ಶ್ರೇಷ್ಠರು ಎಂದು ಭಾವಿಸಿಕೊಂಡಿದ್ದ ಹಲವರ ಹೆಮ್ಮೆಯ ಬಲೂನಿಗೆ ಇದು ಸೂಜಿ ಚುಚ್ಚಿದೆ.

ಹಾಗಾಗಿಯೇ ಅವರೀಗ ಧುರಂಧರ್‌ಗೆ 'ಪ್ರಚಾರದ ಚಿತ್ರ, ಹಿಂದುತ್ವ ರಾಷ್ಟ್ರೀಯವಾದಿ ಚಿತ್ರ ಮುಂತಾದ ಹಣೆಪಟ್ಟಿ ಕಟ್ಟುತ್ತಿದ್ದಾರೆ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಕತೆ ಬೇಕು. ರ್‍ಯಾಂಬೋ, ಜೇಮ್ಸ್ ಬಾಂಡ್‌ಗಳಿಗೆ ಅದು ಸಮ್ಮತವಾದರೆ, ಧುರಂಧರ್ ಭಾರತೀಯ ಹಿತಾಸಕ್ತಿ ರಕ್ಷಿಸಲು ಹಿಂಸಾತಾಂಡವ ನಡೆಸುವುದೂ ಸರಿಯಾಗಿಯೇ ಇದೆ.

ಒಂದು ರೀತಿಯಲ್ಲಿ ಧುರಂಧರ್ ಕೇವಲ ಸಿನಿಮಾವಲ್ಲ, ಅದೊಂದು ಬಗೆಯ ಸ್ಥಿತ್ಯಂತರ. ಕಹಿಸತ್ಯಗಳನ್ನು, ನಮಗೆ ಸ್ವೀಕಾರಾರ್ಹವಾದುದನ್ನು ಇತರರ ಅನುಮತಿ ಪಡೆಯದೆ ಜನರಿಗೆ ಹೇಳುವ ಸ್ವಾತಂತ್ರ್ಯದ ಅಭಿವ್ಯಕ್ತಿ ಇಲ್ಲಿದೆ. ಜತೆಗೇ ಇದು ಕಮರ್ಷಿಯಲ್ ಆಗಿಯೂ ಗೆಲುವು ಸಾಧಿಸಿದೆ.

ಧುರಂಧರ್ ಕುರಿತ ಆಕ್ರೋಶವು ಆ ಸಿನಿಮಾ ಏನು ಹೇಳುತ್ತದೆ ಎಂಬುದರ ಬಗೆಗಲ್ಲ. ಅದನ್ನು ಜನರು ಕೇಳಿಸಿಕೊಳ್ಳುತ್ತಿದ್ದಾರೆ, ಒಪ್ಪಿಕೊಳ್ಳುತ್ತಿದ್ದಾರೆ ಎಂಬ ನಿಟ್ಟಿನಲ್ಲಿ ಮೂಡಿದ ಆಕ್ರೋಶವದು. ಧುರಂಧರ್ ಕೂಡಾ ರ್‍ಯಾಂಬೋ, ಜೇಮಸ್ ಬಾಂಡ್‌ರಂತೆ ಭಾರತದ ಕುರಿತಾದ ಪ್ರಚಾರ ಸಿನಿಮಾ. ನಿಜಕ್ಕಾದರೆ ಭಾರತೀಯ ಗೂಢಚಾರಿಯು ಅಮೆರಿಕನ್ ಹೀರೋ ಅಥವಾ ಬ್ರಿಟಿಷ್ ಗೂಢಚಾರಿಗಿಂತ ವಾಸ್ತವಕ್ಕೆ ಹೆಚ್ಚು ಹತ್ತಿರವಿದ್ದಾನೆ.

ಧುರಂಧರ್‌ನ ಪ್ರಭಾವ ಮತ್ತು ಅದು ಮೂಡಿಸಿದ ಜಾಗತಿಕ ಕೋಲಾಹಲ ಗಮನಿಸುವಾಗ ಇನ್ನು ಮುಂದೆ ಹಿಂದಿ ಸಿನಿಮಾಗಳನ್ನು ಎರಡು ವಿಭಾಗಗಳಲ್ಲಿ ವರ್ಗೀಕರಿಸಬಹುದು. 'ಧುರಂಧರ್‌ಗಿಂತ ಮೊದಲಿನ ಯುಗ' ಮತ್ತು 'ಧುರಂಧರ್ ನಂತರದ ಯುಗ' ಎಂಬುದಾಗಿ. ಎಲ್ಲಕ್ಕಿಂತ ಮುಖ್ಯವಾಗಿ ಧುರಂಧರ್ ಭಾರತಕ್ಕೊಂದು ಧ್ವನಿ ನೀಡಿದೆ. ಅತ್ಯಂತ ಆತ್ಮವಿಶ್ವಾಸದ ಮತ್ತು ತಪ್ಪೊಪ್ಪಿಕೆಯಿಲ್ಲದ ಧ್ವನಿಯದು.

ಹಿಂದೂ ವಿರೋಧವೇ ಇವರ ಸಾಹಿತ್ಯವೇ?

ಅರುಣ ಜೋಶಿ

ಧಾರವಾಡದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನ ಸಮಾರೋಪದಲ್ಲಿ ಡಾ॥ ವಿನಯಾ ವಕ್ಕುಂದ ಎಂಬ ಎಡಪಂಥೀಯ ಲೇಖಕಿ ತಮ್ಮ ಭಾಷಣದುದ್ದಕ್ಕೂ ಹಿಂದೂ ವಿರೋಧಿ ನಿಲುವು ಪ್ರದರ್ಶಿಸಿ, ಒಂದು ಕೋಮಿನ ಪರ ಮಾತನಾಡಿದ್ದರಿಂದ ಸಭಿಕರಲ್ಲಿ ಡಾ॥ ರಾಜೇಂದ್ರ ಕುಮಾರ್ ಮಠ ಎಂಬ ಪ್ರಾಧ್ಯಾಪಕರು ತೀವ್ರ ವಿರೋಧ ವ್ಯಕ್ತಪಡಿಸಿದರು. ಅವರೊಟ್ಟಿಗೆ ಹಲವು ಜನ ಧ್ವನಿ ಸೇರಿಸಿದ್ದು ಕಂಡು ತಕ್ಷಣ ಕ.ಸಾ.ಪ ಪದಾಧಿಕಾರಿಗಳು ಈ ವಿಷಯವನ್ನು ನಿಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭಿಸಿದರು.

ಕೆಲವು ವರ್ಷಗಳ ಹಿಂದೆ ಧಾರವಾಡದ ಒಂದು ಖಾಸಗಿ ಸಾಹಿತ್ಯಿಕ ಸಂಸ್ಥೆಯ ಸಮ್ಮೇಳನದಲ್ಲಿ ಮಾತನಾಡಿದ ಪ್ರೊಫೆಸರ್ ದೇವಿ ಎಂಬ ಎಡಪಂಥೀಯ ಲೇಖಕರು ಭಾರತೀಯ ಸೈನಿಕರನ್ನು ಅತ್ಯಾಚಾರಿಗಳು ಎಂದು ಬಹಿರಂಗವಾಗಿ ದೂಷಿಸಿದ್ದು ಆಕ್ರೋಶಕ್ಕೆ ಕಾರಣವಾಗಿತ್ತು. ಮಾಜಿ ಸೈನಿಕರು ಮತ್ತು ದೇಶಭಕ್ತ ಸಂಘಟನೆಗಳು ವೇದಿಕೆಯನ್ನು ಕಿತ್ತೆಸೆದು ಸಮ್ಮೇಳನವನ್ನೇ ರದ್ದು ಮಾಡಿಸಿದ್ದರು. ಇಂಥ ಘಟನೆಗಳು ಬಾರಿ ಬಾರಿ ನಡೆಯುತ್ತಿದ್ದರೂ ಸಂಬಂಧಿತರು ಎಚ್ಚರಿಕೆ ವಹಿಸದೆ ಹಿಂದೂ ವಿರೋಧಿ ಮತ್ತು ದೇಶವಿರೋಧಿ ವ್ಯಕ್ತಿಗಳನ್ನೇ ಅತಿಥಿಗಳಾಗಿ ಭಾಷಣಕ್ಕೆ ಕರೆಯುವುದು ಏಕೆ?

ಧಾರವಾಡ ಸಾಹಿತ್ಯ ಸಮ್ಮೇಳನದಲ್ಲಿ ವಿನಯಾ ವಕ್ಕುಂದ ಮಾತನಾಡುತ್ತಾ ಇಂದು ಸಾಹಿತ್ಯಕ್ಕೆ ಬಹುದೊಡ್ಡ ಸವಾಲು ಎದುರಾಗಿದೆ. ದೇಶದಲ್ಲಿ ಸಾಹಿತ್ಯದ ಮೇಲೆ ಸರ್ವಾಧಿಕಾರ ತಾಂಡವವಾಡುತ್ತಿದೆ ಎಂದು, ಎರಡು ವರ್ಷಗಳ ಹಿಂದೆ ಶ್ರೀ ನುಗ್ಗಿಕೇರಿಯ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿದ್ದ ಅನ್ಯಕೋಮಿನ ಒಬ್ಬ ವ್ಯಕ್ತಿಯ ಕಲ್ಲಂಗಡಿ ಹಣ್ಣಿನ ಅಂಗಡಿಯನ್ನು ಕೆಲವರು ಹಾಳುಗೆಡವಿದ ಘಟನೆ ಉಲ್ಲೇಖಿಸಿದ್ದರು. ಇದು ಧಾರವಾಡದ ಅಸಹಿಷ್ಣುತೆಯ ಪ್ರತೀಕವಾಗಿದೆ ಎಂಬರ್ಥದಲ್ಲಿ ಮಾತನಾಡಿದ ಅವರು, ಉತ್ತರ ಭಾರತದ ಒಂದು ಹಳ್ಳಿಯಲ್ಲಿ ಅಲ್ಪಸಂಖ್ಯಾತ ಮಹಿಳೆಯ ಮೇಲೆ ಆದ ದೌರ್ಜನ್ಯವನ್ನು ಪ್ರಸ್ತಾಪಿಸಿ ಇಂಥವರ ವಿರುದ್ಧ ಸಾಹಿತಿಗಳು ಧ್ವನಿ ಎತ್ತಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಇದನ್ನು ಆಕ್ಷೇಪಿಸಿದ ಡಾ. ರಾಜೇಂದ್ರ ಅವರು ಇದು ಸಾಹಿತ್ಯಗೋಷ್ಠಿ. ಇಲ್ಲಿ ಒಂದು ಸಮುದಾಯವನ್ನು ಏಕೆ ಎತ್ತಿಕಟ್ಟಿ ಮಾತನಾಡುತ್ತೀರಿ? ಅಲ್ಪಸಂಖ್ಯಾತರ ಕಲ್ಲಂಗಡಿ ಹಣ್ಣುಗಳ ಮೇಲೆ ನಿಮಗಿರುವ ಪ್ರೀತಿ ಹುಬ್ಬಳ್ಳಿಯಲ್ಲಿ ಕಾಲೇಜ್ ಕ್ಯಾಂಪಸ್‌ನಲ್ಲಿ ಕೊಲೆಯಾದ ವಿದ್ಯಾರ್ಥಿನಿಯ ಬಗ್ಗೆ ಏಕೆ ಇಲ್ಲ? ಮತ್ತು ಉತ್ತರಪ್ರದೇಶದ ಒಂದು ಘಟನೆಯನ್ನು ಹೇಳುವ ನೀವು ಕಾಶ್ಮೀರ, ಕೇರಳ ಮತ್ತು ಇದೇ ವಿಜಯಪುರದಲ್ಲಿ ಆದ ದಲಿತ ಮಹಿಳೆಯ ಮೇಲಿನ ದೌರ್ಜನ್ಯದ ಬಗ್ಗೆ ಏಕೆ ಮಾತನಾಡುವುದಿಲ್ಲ ಎಂದು ಪ್ರಶ್ನಿಸಿದರು.

ಮೂಲತಃ ಇದೊಂದು ಸಾಹಿತ್ಯ ಸಮ್ಮೇಳನವಾಗಿದ್ದ ಅಲ್ಲಿ ಇಂತಹ ವಿಷಯಗಳನ್ನು ಪ್ರಸ್ತಾಪಿಸುವ ಯಾವ ಸಂದರ್ಭವೂ ಇರಲಿಲ್ಲ. ಬಹುಸಂಖ್ಯಾತರನ್ನು ವಿನಾಕಾರಣ ಹೀಯಾಳಿಸುವ ಉದ್ದೇಶದಿಂದಲೇ ಈ ರೀತಿ ಮಾತನಾಡಿದರು ಎಂಬುದು ಸ್ಪಷ್ಟವಾಗುತ್ತದೆ. ಧಾರವಾಡದಲ್ಲಿ ಕಳೆದ 3-4 ವರ್ಷಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷಣಕಾರರ ಪಟ್ಟಿಯನ್ನು ನೋಡಿದರೆ ಸತ್ಯ ಯಾರಿಗಾದರೂ ತಿಳಿಯುತ್ತದೆ. ರಾಜ್ಯ ಕಮ್ಯುನಿಷ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿರುವ ವ್ಯಕ್ತಿ ಪ್ರತಿವರ್ಷ ಅತಿಥಿಯಾಗಿ ಮಾತನಾಡಿ ತಮ್ಮ ವಿಚಾರವನ್ನು ಪ್ರಚಾರ ಮಾಡಿರುವುದು ಸಾಹಿತ್ಯ ಸಮ್ಮೇಳನಗಳ ಉದ್ದೇಶಗಳ ಬಗ್ಗೆ ಪ್ರಶ್ನೆ ಏಳುವಂತೆ ಮಾಡಿದೆ. ಸಾಹಿತ್ಯ ಸಮ್ಮೇಳನದ ಭಾಷಣ ಎಡಪಂಥೀಯರಿಂದಲೇ ಆಗಬೇಕು ಎಂಬ ನಿಯಮವಿದೆಯೆ? ಒಂದು ಸಾಲೂ ಬರೆಯದಿರುವವರನ್ನು ಕೂಡಾ ಸಾಹಿತಿಗಳು ಎಂದು ಅತಿಥಿಗಳಾಗಿ ಕರೆಯಲಾಗಿದೆ ಎಂಬ ದೂರುಗಳೂ ಇವೆ. ಈ ಸಮ್ಮೇಳನಗಳಿಗೆ ಎಲ್ಲ ವಿಚಾರಧಾರೆ ಇರುವ ವ್ಯಕ್ತಿಗಳು ಬರಬೇಕೆಂದು ಅಧ್ಯಕ್ಷರು ನುಡಿಯುತ್ತಾರೆ. ಆದರೆ ಎಡಪಂಥೀಯರನ್ನು ಬಿಟ್ಟು ಯಾರನ್ನೂ ವೈಚಾರಿಕ ಭಾಷಣಕ್ಕೆ ಕರೆಯೋದಿಲ್ಲ ಎಂಬುದು ಧಾರವಾಡದಂತಹ ಸಾಹಿತ್ಯ ನಗರದ ದೊಡ್ಡ ಕೊರಗು.

ಈಗ ಚರ್ಚೆಯಲ್ಲಿರುವ ಸಮ್ಮೇಳನದಲ್ಲಿ ಮಾತನಾಡಿದ ಡಾ॥ ವಕ್ಕುಂದರವರು, 'ಕಲ್ಲಂಗಡಿ ಹಣ್ಣಿನ ಅಂಗಡಿ ನಾಶದ ಬಗ್ಗೆ ಕೋಮು ಕಾರಣದಿಂದ ಪ್ರಸ್ತಾಪಿಸಿಲ್ಲ, ಬೆವರು ಮತ್ತು ಶ್ರಮದ ಕಾರಣದಿಂದ ಪ್ರಸ್ತಾಪಿಸಿದ್ದೇನೆ' ಎಂದು ಪಕ್ಕಾ ಮಾರ್ಕ್ಸ್‌ವಾದಿ ಉತ್ತರವನ್ನು ನೀಡಿದ್ದಾರೆ. ನಗರದಲ್ಲಿ ಎರಡು ವರ್ಷಗಳಲ್ಲಿ ಹಾನಿಗೀಡಾದ ಇತರ ಅಂಗಡಿ ಮನೆಗಳ ಬಗ್ಗೆ, ದಾಳಿಗೀಡಾದ ಇಂಡಿಪಂಪ್ ಪೋಲಿಸ್ ಸ್ಟೇಷನ್ ಬಗ್ಗೆ ಮತ್ತು ಇತರ ಜನಾಂಗದ ಬೆವರು ಕಣ್ಣೀರಿನ ಬಗ್ಗೆ ಇವರಿಗೇಕೆ ನೆನಪಾಗುವುದಿಲ್ಲ? ಭಜರಂಗಿ ಭಾಯಿಜಾನ್ ಎಂಬ ಪಾಕಿಸ್ತಾನ ವೈಭವೀಕರಣದ ಕಾಲ್ಪನಿಕ ಚಿತ್ರವನ್ನು ಕಾರಣವಿಲ್ಲದೇ ಹೊಗಳಿದ ಈ ಸಾಹಿತಿಗೆ ಕೇರಳ ಫೈಲ್ಸ್, ಕಾಶ್ಮೀರ ಫೈಲ್ಸ್‌ಗಳಂತಹ ಚಿತ್ರಗಳು ಯಾಕೆ ಕಾಣುವುದಿಲ್ಲ ಎಂದು ಸಭಿಕರು ಪ್ರಶ್ನಿಸಿದ್ದು ಸಹಜವಾಗಿದೆ.

ಉತ್ತರ ಭಾರತದ ಒಂದು ಊರಲ್ಲಿ ಆದ ಅಲ್ಪಸಂಖ್ಯಾತ ಮಹಿಳೆ ಮೇಲಿನ ದೌರ್ಜನ್ಯವನ್ನು ಭಾಷಣದಲ್ಲಿ ಪ್ರತಿಪಾದಿಸಿ ದೇಶ ಸಂಕಷ್ಟದಲ್ಲಿದೆ ಎಂದು ಚೀರಾಡುವ ಲೇಖಕಿಗೆ ಕೇರಳ, ಕಾಶ್ಮೀರ, ಬಂಗಾಳದಲ್ಲಿ ಹಿಂದುಗಳ ಮೇಲೆ ನಡೆಯುವ ಹಿಂಸಾಚಾರ ನೆನಪಾಗುವುದಿಲ್ಲ. ಹೋಗಲಿ, ಪಕ್ಕದಲ್ಲೇ ಕಾಲೇಜ್ ಕ್ಯಾಂಪಸ್‌ನಲ್ಲಿ ಕೊಲೆಯಾದ ನೇಹಾ ಹೀರೇಮಠ, ಅಮಾನವೀಯವಾಗಿ ಕೊಲೆಯಾದ ಬಿಜಾಪುರದ ದಲಿತ ಮಹಿಳೆ, ಸಹಪಾಠಿಗಳಿಂದಲೇ ಕೊಲೆಯಾದ ಅಪ್ರಾಪ್ತ ಬಾಲಕ ಶಿವಮೊಗ್ಗದ ಸಾಕೇತ್ ಇವರ ಮಾನವೀಯತೆಯ ಪರಿಧಿಯೊಳಗೆ ಬರುವುದಿಲ್ಲವೇಕೆ? ಏಕೆಂದರೆ ಈ ಎಲ್ಲ ಪ್ರಕರಣಗಳಲ್ಲಿ ಆರೋಪಿಗಳಾಗಿರುವವರು ಒಂದು ನಿರ್ದಿಷ್ಟ ಕೋಮಿನ ಜನ.

ಈ ವರ್ಷ ಯಾವುದೇ ಸಾಹಿತ್ಯ ಸಮ್ಮೇಳನದಲ್ಲಿ 'ವಂದೇ ಮಾತರಂ' ಗೀತೆಯ ಶತಮಾನೋತ್ಸವದ ಬಗ್ಗೆ ಮಾತು ಬರುವುದಿಲ್ಲ. ಲೆನಿನ್-ಸ್ಟಾಲಿನ್, ಮ್ಯಾಕ್ಸಿಂ ಗೋರ್ಕಿ, ಲಿಯೋ ಟಾಲ್‌ಸ್ಟಾಯ್ ಬರಹಗಳ ಬಗ್ಗೆಯೇ ಮಾತು. ಧಾರವಾಡದ ಸಾಹಿತ್ಯ ಪರಿಷತ್ ಸಮ್ಮೇಳನಕ್ಕೆ ಈ ವರ್ಷದಲ್ಲಿ ಮಹಾನಗರ ಪಾಲಿಕೆ ತೆರಿಗೆದಾರರ ಹಣದಲ್ಲಿ 2 ಲಕ್ಷ ರೂ. ಅನುದಾನ ನೀಡಿದೆ. ಪ್ರಾಥಮಿಕ ಸೌಲಭ್ಯಗಳಿಗೆ ಕೊರತೆಯಿರುವ ನಗರದಲ್ಲಿ, ತೆರಿಗೆದಾರರ ಹಣವು ಇಂಥ ಬಹುಸಂಖ್ಯಾತ ವಿರೋಧಿ ವಿಚಾರಗಳನ್ನು ಹರಡುವ ಸಮಾವೇಶಗಳಿಗೆ ವಿನಿಯೋಗವಾಗಬೇಕೇ ಎಂಬುದು ಪಾಲಿಕೆ ಅಧಿಕಾರಿಗಳಿಗೆ ಮತ್ತು ಚುನಾಯಿತ ಸದಸ್ಯರಿಗೆ ಕರದಾತರ ಪ್ರಶ್ನೆ.

ಕಿರುಸುದ್ದಿ

ಸಾಮೂಹಿಕ ಗಾಯತ್ರಿ ಜಪ ಅನುಷ್ಠಾನ

ಬಂಟ್ವಾಳ: ಇಲ್ಲಿನ ರುದ್ರ ಪಠಣ ಸಮಿತಿ ವತಿಯಿಂದ ಲೋಕಕಲ್ಯಾಣಾರ್ಥವಾಗಿ ಅಂಗನ್ಯಾಸ ಕರನ್ಯಾಸ ಸಹಿತ ಏಕ ಶ್ರುತಿಯಲ್ಲಿ ಸಾಮೂಹಿಕ ಗಾಯತ್ರಿ ಜಪ ಅನುಷ್ಠಾನ ಸೋಮವಾರದಂದು ಜರಗಿತು. ರುದ್ರ ನಮಕ ಚಮಕ, ಗಣಪತಿ ಅಥರ್ವ ಶೀರ್ಷ, ಪುರುಷ ಸೂಕ್ತ, ಭಾಗ್ಯ ಸೂಕ್ತ ಪಠಿಸಲಾಯಿತು. ಸಜೀಪ ಮಾಗಣೆತಂತ್ರಿ ಎಂ.ಸುಬ್ರಹ್ಮಣ್ಯ ಭಟ್. ಕಾರ್ಯಕ್ರಮದ ರೂವಾರಿ ರಾಜರಾಮ ಐತಾಳ, ಎ.ರವಿ ಶಂಕರ ಮಯ್ಯ, ಪದ್ಮನಾಭ ಹೊಳ್ಳ, ನವೀನರಾವ್, ಕೆರಮೇಶ್ ರಾವ್, ಸೀತಾರಾಮ ಮಯ್ಯ, ಶಾಂತ ರಾಮರಾವ್, ರಾಮಚಂದ್ರ ಮಯ್ಯ. ಧನೇಶ್ವರ ರಾವ್, ಮಿಥುನರಾವ್, ಪದ್ಮನಾಭ ರಾವ್, ಕೃಷ್ಣ ಸೋಮಾಯಾಜಿ, ರಮೇಶ ಮಯ್ಯ, ಶ್ರೀನಿವಾಸ ಹೊಳ್ಳ, ಚಂದ್ರಮೋಹನರಾವ್, ಸೀತಾರಾಮ ಮಯ್ಯ ಮೊದಲಾದವರಿದ್ದರು.

ಹೆಬ್ರಿಯ ಶಾಲೆಯಲ್ಲಿ ಶಿಕ್ಷಕರಿಗೆ ತರಬೇತಿ

ಹೆಬ್ರಿ: ಇತ್ತೀಚಿನ ದಿನಗಳಲ್ಲಿ ಶಿಕ್ಷಕರು ಬಹು ಸವಾಲುಗಳನ್ನು ಎದುರಿಸಬೇಕಾದ ಪರಿಸ್ಥಿತಿಯಿದೆ. ಇಂತಹ ಸವಾಲುಗಳ ನಡುವೆ ಹೊಂದಾಣಿಕೆಯೊಂದಿಗೆ ವೃತ್ತಿಯನ್ನು ನಿಭಾಯಿಸುವ ಅನಿವಾರ್ಯತೆಯೂ ಇದೆ ಎಂದು ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್.ನಾಗರಾಜ್ ಶೆಟ್ಟಿ ಹೇಳಿದರು. ಸಿಬಿಎಸ್‌ಇ ಬೋರ್ಡಿನ ಸೆಂಟರ್ ಆಫ್ ಎಕ್ಸಲೆನ್ಸ್ ಬೆಂಗಳೂರು ಮತ್ತು ಹೆಬ್ರಿಯ ಎಸ್.ಆರ್ ಪಬ್ಲಿಕ್ ಸ್ಕೂಲಿನ ಜಂಟಿ ಆಶ್ರಯದಲ್ಲಿ ನಡೆದ ಎರಡು ದಿನದ ತರಬೇತಿ ಕಾರ್ಯಕ್ರಮದ ಎರಡನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಲಕ್ಷ್ಮೀ ಜನಾರ್ದನ ಇಂಟರ್ ನ್ಯಾಷನಲ್ ಸ್ಕೂಲ್ ಬೆಳ್ಮಣ್ ಇದರ ಪ್ರಾಂಶುಪಾಲ ಭುಜಂಗ ಪಿ. ಶೆಟ್ಟಿ ಮತ್ತು ಮಾಧವ ಕೃಪಾ ಸ್ಕೂಲಿನ ಶಿಕ್ಷಕಿ ಸುಪ್ರಿಯಾ ಎಸ್. ಶೆಟ್ಟಿ ಭಾಗವಹಿಸಿದ್ದರು. ಎಸ್‌ಆರ್ ಪಬ್ಲಿಕ್ ಸ್ಕೂಲಿನ ಪ್ರಾಂಶುಪಾಲೆ ಭಗವತಿ, ಉಪಪ್ರಾಂಶುಪಾಲ ದೀಪಕ್ ಎನ್, ಸಂಯೋಜಕ ಗೋಪಾಲಾಚಾರಯ ಉಪಸ್ಥಿತರಿದ್ದರು. ನಿವೇದಿತ ಸ್ವಾಗತಿಸಿ, ಶಕುಂತಲಾ ವಂದಿಸಿದರು. ಆಂಗ್ಲ ಭಾಷಾ ಶಿಕ್ಷಕಿ ಸುಪ್ರೀತಾ ನಿರೂಪಿಸಿದರು.

ಪಿಲಿಕುಳ: ಎಲ್ಲಾ ವಿಭಾಗಗಳು ಪ್ರವಾಸಿಗರ ವೀಕ್ಷಣೆಗೆ ಲಭ್ಯ

ಮಂಗಳೂರು: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವಿಭಾಗಗಳಾದ ಮೃಗಾಲಯ, ಪ್ರಾದೇಶಿಕ ವಿಜ್ಞಾನ ಕೇಂದ್ರ, ತಾರಾಲಯ, ಲೇಕ್ ಗಾರ್ಡನ್, ಬೊಟಾನಿಕಲ್ ಮ್ಯೂಸಿಯಂ ಮತ್ತು ಸಂಸ್ಕೃತಿ ಗ್ರಾಮ ಇತ್ಯಾದಿಗಳು ಎಂದಿನಂತೆ ಸಾರ್ವಜನಿಕರ ವೀಕ್ಷಣೆಗೆ ತೆರೆದಿರುತ್ತದೆ ಎಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'90 ಎಂ ಎಲ್' ಸಿನಿಮಾಗೆ ಕರಾವಳಿಯಾದ್ಯಂತ ಉತ್ತಮ ಪ್ರತಿಕ್ರಿಯೆ

ಪುತ್ತೂರು: '90 ಎಂ ಎಲ್' ತುಳು ಸಿನಿಮಾ ಎ. 10 ರಂದು ತೆರೆಗೆ ಬಂದಿದ್ದು, ಕರಾವಳಿಆದ್ಯಂತ ಚಿತ್ರರಸಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮತ್ತೂರು ಜಾತ್ರೋತ್ಸವ ನಡೆಯುತ್ತಿರುವುದರಿಂದ ಈ ಸಂದರ್ಭದಲ್ಲಿ ಮತ್ತೂರಿನಲ್ಲೂ ಉತ್ತಮ ಪ್ರೇಕ್ಷಕರನ್ನು ಸೆಳೆಯುವ ನಿರೀಕ್ಷೆಯಿದೆ ಎಂದು ನಾಯಕ ನಟ ವಿನಿತ್ ಕುಮಾರ್ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ ಡಿ ಪ್ರೊಡಕ್ಷನ್ ಲಾಂಛನದಲ್ಲಿ ರಂಜಿತ್ ಸಿ. ಬಜಾಲ್ ನಿರ್ದೇಶನದಲ್ಲಿ ಡೊಲ್ಲಿ ಡಿಸೋಜಾ ನಿರ್ಮಾಣದಲ್ಲಿ ತಯಾರಾದ '90 ಎಂ ಎಲ್' ತುಳು ಚಲನಚಿತ್ರವು ಕೌಟುಂಬಿಕ, ಹಾಸ್ಯದ ಹೂರಣ ಹೊಂದಿರುವ ಚಿತ್ರವಾಗಿದ್ದು, ಮಂಗಳೂರು, ಉಡುಪಿ, ಪುತ್ತೂರು, ಬೆಳ್ತಂಗಡಿ, ಕಾರ್ಕಳ, ಸುಳ್ಯ, ದೇರಳಕಟ್ಟೆ, ಸುರತ್ಕಲ್, ಪಡುಬಿದ್ರಿ ಮೊದಲಾದೆಡೆ ಬಿಡುಗಡೆಗೊಂಡಿದೆ. ಸಿನಿಮಾವು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ. ವಿನೀತ್ ಕುಮಾರ್ ಅಭಿನಯದ ಸಿನಿಮಾದಲ್ಲಿ ರೂಪಾನಿ ಶೆಟ್ಟಿ, ನವೀನ್ ಡಿ ಪಡೀಲ್, ಅರವಿಂದ ಬೋಳಾರ್, ರೋಹನ್ ಶೆಟ್ಟಿ, ದೀಪಕ್ ರೈ ಪಾಣಾಜೆ, ಉಮೇಶ್ ಮಿಜಾರ್, ಪುಷ್ಪರಾಜ್ ಬೊಳ್ಳೂರು, ನಮಿತ, ಶೈಲಾಶ್ರೀ, ಧೃತಿ ನಟಿಸಿದ್ದಾರೆ. ರಂಜಿತ್ ಸಿ. ಬಜಾಲ್ ಕಥೆ, ಚಿತ್ರಕಥೆ, ನಿರ್ದೇಶನ ಮಾಡಿದ್ದು, ಸಂಭಾಷಣೆ ತುಳಸಿದಾಸ್ ಮಂಜೇಶ್ವರ. ಸುದ್ದಿಗೋಷ್ಠಿಯಲ್ಲಿ ಸಿನಿಮಾದ ನಿರ್ದೇಶಕ ರಂಜಿತ್ ಸಿ. ಬಜಾಲ್, ಖಳನಟ ರೋಶನ್ ಶೆಟ್ಟಿ, ಪ್ರಚಾರಕ ಜಿತೇಶ್, ಚಿತ್ರ ವಿತರಕ ಬಾಲಕೃಷ್ಣ ಕುಕ್ಕಾಜೆ ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶಾಂತ ರಘುನಾಥ ಶೆಟ್ಟಿ, ಕುದೆಪದವು, ಮೂಡು ಹೊಸಮನೆ, ಶಿವಾನಂದ ದೇವಸ್ಥಾನ ವಠಾರ.
2. ಶ್ರೀ ಕೊಡಮಣಿತ್ತಾಯ ದೈವಸ್ಥಾನ, ಪಂಜಾಣಿಗುತ್ತು, ಕಲ್ಲಮುಂಡ್ಕೂರು.
3. ಶ್ರೀ ಉಮಾಮಹೇಶ್ವರ ದೇವಸ್ಥಾನ, ಬಲ್ಯ, ಕಡಬ (ತಾ).
4. ಕುಕ್ಕುಡು ಚೆಲಿಯಂದ ಮತ್ತು ಸಮುದ್ರ, ಕದಿರುದ್ಯಾವರ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರ.
5. ಇಂದಿರಾ ಮತ್ತು ಸಂಜೀವ ಡಿ. ಶೆಟ್ಟಿ, "ಮಾತೃ ಛಾಯ", ಪಯ್ಯಾರು, ಮಜಲಕೋಡಿ ಹೌಸ್, ಕುತ್ತೆತ್ತೂರು.
6. ದಾಸ ಜಗದೀಶ್, "ಪಾಲಾಣ", ಬಟ್ಟಾರಡ್ಡಿ, ಏತ್ತೆ ಕದ್ರಿ ಕ್ಷೇತ್ರದ ರಾಜಾಂಗಣದಲ್ಲಿ.
7. ವಿಶ್ವನಾಥ ಗೌಡ, ಶಿವಾನಾರಾಣಿ ಭುವನ ಮಂದಿರ, ಅರಿಯಡ್ಕ ನಗರ, ಬಿಲ್ಲಾವು, ಪುತ್ತೂರು (ತಾ).

ಶ್ರೀ ಧರ್ಮಸ್ಥಳ ಮೇಳ
ಆಳದಂಗಡಿ ಮನೆ ಸಮ್ಮಾನದಲ್ಲಿ
ಶ್ರೀಮತಿ ಮತ್ತು ಶ್ರೀ ಕುಮಾರ್ ಮಯ್ಯ ಮತ್ತು ಮಕ್ಕಳು
ಆಳದಂಗಡಿ ಮನೆ

ಶ್ರೀ ಸಾಲಿಗ್ರಾಮ ಮೇಳ
ಬಾಂಡ್ಯಾಕುಳೆ (ತೀರ್ಥಹಳ್ಳಿ) ಬಯಲಾಟ
ಸತ್ಯ ಮಂಟಪ

ಶ್ರೀ ಪೆರ್ಡೂರು ಮೇಳ
ಕಾರ್ಕಳದಲ್ಲಿ - ಚಂದ್ರಹಾಸ-ರತಿಕಲ್ಯಾಣ

ಶ್ರೀ ಹನುಮಗಿರಿ ಮೇಳ
ಬಜ್ಜಿಲ್‌ನಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ದೇವಸ್ಥಾನ, ಮೂಡುಬಿದಿರೆ
ಪಾಪಣ್ಣವಿಜಯ - ಗುಣಸುಂದರಿ



ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಅವರು ಸೋಮವಾರ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ಸಂದರ್ಭ ಪ್ರಧಾನ ಅರ್ಚಕರಾದ ಪರಮೇಶ್ವರ ಭಟ್, ದೇವಳದ ಕಾರ್ಯನಿರ್ವಹಣಾಧಿಕಾರಿ ಕೆ.ಪಿ.ಚಂದ್ರಮೋಹನ್, ಮಂಗಳೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಸವರಾಜ್, ಹಿರಿಯ ಸಿವಿಲ್ ನ್ಯಾಯಾಧೀಶ ಅನಿಲ್ ಕುಮಾರ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ರಾಜೇಂದ್ರ ಪ್ರಸಾದ್, ಉಳಿಪಾಡಿಗುತ್ತು ಸುಭಾಷ್ ಚಂದ್ರ ನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

ಕೊಡಗು: ಕಾಡಾನೆ ದಾಳಿಯಿಂದ ಸಾಲು ಸಾಲು ಸಾವು
ಎಚ್ಚೆತ್ತುಕೊಳ್ಳದ ಸರಕಾರ: ನಾಣಯ್ಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಸಾಲು ಸಾಲು ಸಾವುಗಳಾಗುತ್ತಿದ್ದರೂ ರಾಜ್ಯ ಸರಕಾರ ಮಾತ್ರ ಎಚ್ಚೆತ್ತುಕೊಳ್ಳುತ್ತಿಲ್ಲವೆಂದು ಕೊಡಗು ಜಿಲ್ಲಾ ಬಿಜೆಪಿಯ ಸಾಮಾಜಿಕ ಜಾಲತಾಣದ ಪ್ರಧಾನ ಸಂಚಾಲಕ ತೇಲಪಂಡ ಶಿವಕುಮಾರ್ ನಾಣಯ್ಯ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ದಕ್ಷಿಣ ಕೊಡಗಿನ ಕಾಯಿಮಾನಿಯಲ್ಲಿ ಮೂಕಳಮಾಡ ರತ್ತು ಅವರು ಕಾಡಾನೆ ದಾಳಿಯಿಂದ ಸಾವನ್ನಪ್ಪಿದ್ದು, ಇದು ಅರಣ್ಯ ಇಲಾಖೆಯ ನಿರ್ಲಕ್ಷ್ಯ ಮನೋಭಾವಕ್ಕೆ ಸಾಕ್ಷಿಯಾಗಿದೆ. ಅರಣ್ಯ ಸಚಿವರು ಸಂತಾಪ ಸೂಚಿಸಿ ಸುಮ್ಮನಾದರೆ ಸಾಲದು, ಕೊಡಗು ಜಿಲ್ಲೆಗೆ ಬಂದು ಇಲ್ಲಿ ನಡೆಯುತ್ತಿರುವ ವನ್ಯಜೀವಿ ಮತ್ತು ಮಾನವ ಸಂಘರ್ಷದ ಕುರಿತು ಅಧ್ಯಯನ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಕಳೆದ ಮೂರೂವರೆ ತಿಂಗಳಿನಲ್ಲಿ ಜಿಲ್ಲೆಯಲ್ಲಿ ಕಾಡಾನೆಯಿಂದ 6ಕ್ಕೂ ಹೆಚ್ಚು ಸಾವುಗಳಾಗಿದ್ದರೂ ಅರಣ್ಯ ಸಚಿವರು ಇತ್ತ ಮುಖ ಮಾಡಿಲ್ಲ, ನೊಂದವರ ಅಹವಾಲು ಸ್ವೀಕರಿಸಿಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವ ಜಿಲ್ಲೆಯ ಶಾಸಕರುಗಳು ಕಾಡಾನೆ ದಾಳಿಯ ಗಂಭೀರತೆಯನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಮತ್ತು ಸಚಿವರನ್ನು ಕರೆ ತರುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದಾರೆ.



ಈಗಿನ ಕಾಂಗ್ರೆಸ್ ಸರಕಾರ ಕಾಡಾನೆ ಉಪಟಳ ತಡೆಗೆ ಮುಂದಿನ ಐದು ವರ್ಷಗಳ ಯೋಜನೆ ರೂಪಿಸಿರುವುದು ಹಾಸ್ಯಾಸ್ಪದವಾಗಿದೆ. ಈ ಅವಧಿಯಲ್ಲಿ ಪ್ರಾಣ ಮತ್ತು ಕೃಷಿ ಫಸಲು ಕಳೆದುಕೊಳ್ಳುವವರಿಗೆ ಹೊಣೆ ಯಾರು ಎಂದು ಶಿವಕುಮಾರ್ ನಾಣಯ್ಯ ಪ್ರಶ್ನಿಸಿದ್ದಾರೆ.

ಬಿಜೆಪಿ ಕಾಡಾನೆ ಹಾವಳಿ ವಿರುದ್ಧ ಜನಪರವಾಗಿ ಹೆದ್ದಾರಿ ಬಂದ್ ಮಾಡಿ ಪ್ರತಿಭಟಿಸಿದನ್ನು ಟೀಕಿಸಿರುವ ಶಾಸಕರು, ಮೊದಲು ಅರಣ್ಯ ಸಚಿವರನ್ನು ಕೊಡಗು ಜಿಲ್ಲೆಗೆ ಕರೆ ತಂದು ಜನಸಂಪರ್ಕ ಸಭೆ ನಡೆಸಲಿ ಎಂದು ಶಿವಕುಮಾರ್ ನಾಣಯ್ಯ ಒತ್ತಾಯಿಸಿದ್ದಾರೆ.

ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಹಸ್ತಪ್ರತಿಗಳ ಸಮೀಕ್ಷೆಯ ಭಿತ್ತಿಪತ್ರ ಬಿಡುಗಡೆಗೊಳಿಸಿ ಜಿಲ್ಲಾಧಿಕಾರಿ ಸೋಮಶೇಖರ್
ಹಸ್ತಪ್ರತಿಗಳ ಸಮೀಕ್ಷೆ-ಡಿಜಿಟಲೀಕರಣಕ್ಕೆ ಕೈಜೋಡಿಸಿ

ಮಡಿಕೇರಿ: ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಹಸ್ತಪ್ರತಿಗಳ ಸಮೀಕ್ಷೆ ಕಾರ್ಯ ಈಗಾಗಲೇ ಆರಂಭವಾಗಿದ್ದು, ಮೇ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಸೂಚಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯಯೋಜನೆ ಅನುಷ್ಠಾನ ಕುರಿತು ಶುಕ್ರವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಸ್ತಪ್ರತಿಗಳು ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಮತ್ತು ಜ್ಞಾನದ ಮೂಲ ಆಕರವಾಗಿದ್ದು, ಹಸ್ತಪ್ರತಿಗಳು ಪೂರ್ವಜರ ಬೌದ್ಧಿಕ ಸಂಪತ್ತನ್ನು ದಾಖಲಿಸುತ್ತವೆ. ಆದ್ದರಿಂದ ತಾಳೆಗರಿ, ಕಾಗದ ಅಥವಾ ಇತರೆ ವಸ್ತುಗಳ ಮೇಲೆ ಕೈಯಲ್ಲಿ ಬರೆದ ದಾಖಲೆಗಳನ್ನು ಜತನ ಮಾಡುವುದು ಅತ್ಯಗತ್ಯವಾಗಿದೆ. ಆ ನಿಟ್ಟಿನಲ್ಲಿ ಪ್ರಾಚ್ಯವಸ್ತು ಮತ್ತು ಪ್ರವಾಸೋದ್ಯಮ ಇಲಾಖೆಗಳು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅವರು ನಿರ್ದೇಶನ ನೀಡಿದರು.

ಹಸ್ತಪ್ರತಿಗಳು ಆಯಾಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಸಹಕಾರಿಯಾಗಿದೆ. ಪುರಾಣ, ಕಾವ್ಯ, ವ್ಯಾಕರಣ, ಆಯುರ್ವೇದ ಮತ್ತು ದರ್ಶನಶಾಸ್ತ್ರಗಳ ಅಪೂರ್ವ ಜ್ಞಾನವನ್ನು ಒಳಗೊಂಡಿದೆ. ಹಳೆಗನ್ನಡ ಮತ್ತು ಇತರೆ ಭಾಷೆಗಳ ಲಿಪಿ, ಶೈಲಿ ಮತ್ತು ಆಡು ಮಾತಿನ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಹಸ್ತಪ್ರತಿಗಳು ಅನುಕೂಲವಾಗಿದ್ದು, ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವಂತೆ ಸಲಹೆ ಮಾಡಿದರು.

ಕೊಡಗು ಜಿಲ್ಲೆಗೆ ಐತಿಹಾಸಿಕ ಇತಿಹಾಸವಿದ್ದು, ಇಲ್ಲಿನ ಪುರಾತನ ಹಾಗೂ ಪ್ರಾಚೀನ ಕಾಲದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಡಿಜಿಟಲೀಕರಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಹೇಳಿದರು.

ಪೂರ್ವಜರ ನಂಬಿಕೆಗಳು, ಆಚರಣೆಗಳು ಮತ್ತು ಜೀವನ ಶೈಲಿಯನ್ನು ಮುಂದಿನ ಪೀಳಿಗೆಗೂ ತಿಳಿಸುವಂತಾಗಲು ಹಸ್ತಪ್ರತಿಗಳು ಕೊಂಡಿಯಾಗಿವೆ ಎಂದು ಅವರು ಅಭಿಪ್ರಾಯ ಪಟ್ಟರು.

ಈ ಸಂಬಂಧ ಇತಿಹಾಸ ತಜ್ಞರು, ಸಾಹಿತ್ಯಾಸಕ್ತರು, ಹಿರಿಯರು ಸೇರಿದಂತೆ ಹಲವರನ್ನು ಆಹ್ವಾನಿಸಿ ಹಸ್ತಪ್ರತಿ ಪಡೆದು ಸ್ಕ್ಯಾನ್ ಮಾಡಿ ಮತ್ತೆ ವಾಪಸ್ಸು ನೀಡುವಂತಾಗಲು ಕ್ರಮಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಶೀಘ್ರ ಪೂರ್ವಭಾವಿ ಸಭೆ ಆಯೋಜಿಸುವಂತೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ಮನೆಯಲ್ಲಿ ಅಥವಾ ಹತ್ತಿರದ ಸ್ಥಳದಲ್ಲಿ ದೊರೆಯುವ ಹಸ್ತಪ್ರತಿಗಳನ್ನು ಜ್ಞಾನ ಭಾರತಂ ಆ್ಯಪ್ ಬಳಸಿ ಅದರಲ್ಲಿ ಅಪ್ಲೋಡ್ ಮಾಡುವ ಮೂಲಕ ಸರ್ವೆ ಕಾರ್ಯದಲ್ಲಿ ನೇರವಾಗಿ ಭಾಗವಹಿಸಬಹುದು ಅಥವಾ ಜಿಲ್ಲಾ ಮಟ್ಟದ ಸರ್ವೇ ಸದಸ್ಯರಿಗೆ ನಿಮ್ಮ ಬಳಿ ಇರುವ ಹಸ್ತಪ್ರತಿಗಳ ಮಾಹಿತಿಯನ್ನು ನೀಡಬಹುದಾಗಿದೆ. ಹಸ್ತ ಪ್ರತಿಗಳ ಡಿಜಿಟಲೀಕರಣದ ಮೂಲಕ ಮುಂದಿನ ಪೀಳಿಗೆಗೆ ಇತಿಹಾಸದ ಮಹತ್ವ ತಿಳಿಸಲು ಸಹಕರಿಸುವಂತೆ ಜಿಲ್ಲಾಧಿಕಾರಿ ಕೋರಿದರು.

> ▸▸ ಹಸ್ತಪ್ರತಿಗಳು ಪೂರ್ವಜರ ಬೌದ್ಧಿಕ ಸಂಪತ್ತನ್ನು ದಾಖಲಿಸುತ್ತವೆ.
>
> ▸▸ ಹಸ್ತಪ್ರತಿಗಳು ಆಯಾಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಸಹಕಾರಿಯಾಗಿದೆ.
>
> ▸▸ ಹಳೆಗನ್ನಡ ಮತ್ತು ಇತರೆ ಭಾಷೆಗಳ ಲಿಪಿ, ಶೈಲಿ ಮತ್ತು ಆಡು ಮಾತಿನ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಹಸ್ತಪ್ರತಿಗಳು ಅನುಕೂಲ

ಪುರಾತತ್ವ ಹಾಗೂ ಪ್ರಾಚ್ಯವಸ್ತು ಇಲಾಖೆಯ ಕ್ಯೂರೇಟರ್ ರೇಖಾ ಅವರು ಮಾತನಾಡಿ, ಓಂಕಾರೇಶ್ವರದೇವಾಲಯ, ಪಾಲೂರುಮಹಾಲಿಂಗೇಶ್ವರ ದೇವಾಲಯ, ಅರಮೇರಿ ಮಠ, ಕಿರಿಕೊಡ್ಲಿ ಮಠ, ಐನ್‌ಮನೆಗಳು, ದವಸ ಭಂಡಾರಗಳು ಸೇರಿದಂತೆ ಮತ್ತಿತರ ಕಡೆಗಳಲ್ಲಿ ಹಸ್ತಪ್ರತಿಗಳು ಸಿಗಬಹುದು ಎಂದು ವಿವರಿಸಿದರು.

ಸರ್ಕಾರವು ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಮೂಲಕ ಜ್ಞಾನ ಭಾರತಂ ಮಿಷನ್ ಯೋಜನೆಯನ್ನು ಜಾರಿಗೊಳಿಸಿದೆ ಎಂದು ಅವರು ತಿಳಿಸಿದರು.

ಇತಿಹಾಸದ ಜೀವಂತ ದಾಖಲೆಗಳು, ಅಪರೂಪದ ಜ್ಞಾನ ಸಂಪತ್ತು, ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬ, ಸಂಶೋಧನೆಗೆ ಮೂಲವಾಗಿದೆ. ಹಳೆಯ ಭಾಷೆ ಮತ್ತು ಲಿಪಿಗಳ ಸಂರಕ್ಷಣೆ, ಭವಿಷ್ಯದ ಪೀಳಿಗೆಗೆ ಅಮೂಲ್ಯ ಕೊಡುಗೆ ಎಂದು ರೇಖಾ ಅವರು ವರ್ಣಿಸಿದರು.

ಜ್ಞಾನ ಭಾರತ ಮಿಷನ್‌ನ ಜಿಲ್ಲಾ ಸಮನ್ವಯಾಧಿಕಾರಿ ಕಾರ್ತಿಕೇಯನ್ ಅವರು ಮಾತನಾಡಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಕಾರದಲ್ಲಿ ಜ್ಞಾನ ಭಾರತಂ ಮಿಷನ್ ಅಡಿಯಲ್ಲಿ ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಮೇ. ಪ್ರೊ.ರಾಘವ ಅವರು ಹಸ್ತಪ್ರತಿ ಸಂಗ್ರಹಣೆ, ಹಸ್ತಪ್ರತಿ ಚಾರಿತ್ರಿಕ ಮಹತ್ವ, ಅಧ್ಯಯನ, ಸಂಪಾದನೆ, ಮತ್ತಿತರ ಬಗ್ಗೆ ಹಲವು ಮಾಹಿತಿ ನೀಡಿದರು.

ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ ಜತೀನ್, ಇತರರು ಇದ್ದರು.

ವಿಶೇಷ ಮಕ್ಕಳ ಬಗ್ಗೆ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮ



ಮಂಗಳೂರು: ವಿಶೇಷ ಮಕ್ಕಳೆಂದರೆ ಯಾರು? ವಿಶೇಷ ಮಕ್ಕಳ ಜನನ ಹೇಗೆ ಆಗುತ್ತದೆ? ಇದನ್ನು ತಡೆಗಟ್ಟಲು ಸಾಧ್ಯವೇ? ಬುದ್ಧಿಮಾಂದ್ಯ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ವಿಶೇಷ ಮಕ್ಕಳ ಬಗ್ಗೆ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮ 'ಸಾನಿಧ್ಯ ಸಂಭ್ರಮ ಶಕ್ತಿನಗರ -2026' ಮಂಗಳೂರಿನ ಶಕ್ತಿನಗರದಲ್ಲಿರುವ ನಾಲ್ಯಪದವು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಪ್ರೌಢ ಶಾಲೆಯ ಮೈದಾನದಲ್ಲಿ ಏ. 12ರಂದು ನಡೆಯಿತು. ಮಂಗಳೂರಿನ ಶಕ್ತಿನಗರದಲ್ಲಿರುವ ಸಾನಿಧ್ಯ ವಸತಿ ಶಾಲೆಯ ಆಡಳಿತ ಮಂಡಳಿ, ಶಕ್ತಿನಗರ ಪದವು ಗ್ರಾಮದ ಸಂಘ ಸಂಸ್ಥೆ, ಕ್ಲಬ್‌ಗಳ ನೆರವಿನೊಂದಿಗೆ ಈ ಕಾರ್ಯಕ್ರಮವನ್ನು ಸಂಘಟಿಸಿತು.

ಸಾನಿಧ್ಯದ ಮಹಾಪೋಷಕರಾದ ಮುಂಬೈನ ಸಿ.ಎ. ಸುಧೀರ್ ಶೆಟ್ಟಿ ದಂಪತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರವಿ ಶೆಟ್ಟಿಕತಾರ್, ದ.ಕ.ಜಿಲ್ಲಾಹೆಚ್ಚುವರಿಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಬೊಮ್ಮರೆಡ್ಡಿ, ನಿಕಟಪೂರ್ವ ಕಾರ್ಪೊರೇಟರ್‌ಗಳಾದ ಕಿಶೋರ್ ಕೊಟ್ಟಾರಿ, ಶಕಿಲಾ ಕಾವಾ, ಜಗದೀಶ್ ಶೆಟ್ಟಿ ಕಾರ್ಯಕ್ರಮದಸಂಚಾಲಕ ದೀಕ್ಷಿತ್ ಮುಗ್ರೋಡಿ ಹಾಗೂ ಚಂದ್ರಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶೇಕಡಾ 100 ಫಲಿತಾಂಶವನ್ನು ಪಡೆದ ಮಂಗಳೂರಿನ ಶಕ್ತಿನಗರದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲ ಜಯಾನಂದ ಸುವರ್ಣರನ್ನು ಅಭಿನಂದಿಸಲಾಯಿತು. ಸಾನಿಧ್ಯದ ಅಧ್ಯಕ್ಷ ಮಹಾಬಲ ಮಾರ್ಲ ಸ್ವಾಗತಿಸಿದರು. ಸಹಾಯಕ ಆಡಳಿತಾಧಿಕಾರಿ ಸುಮಾ ಡಿಸಿಲ್ವಾ ವಂದಿಸಿದರು. ಕಿರುತೆರೆಯ ನಟ ಸುಜಿತ್ ಶೆಟ್ಟಿ ನಿರೂಪಿಸಿದರು. ಸಾನಿಧ್ಯದ ಆಡಳಿತಾಧಿಕಾರಿ ಡಾ. ವಸಂತ್ ಕುಮಾರ್ ಶೆಟ್ಟಿ ಬುದ್ಧಿಮಾಂದ್ಯತೆಯ ಬಗ್ಗೆ, ಆ ಮಕ್ಕಳ ಜನನದ ಬಗ್ಗೆ ಹಾಗೂ ಬುದ್ಧಿಮಾಂದ್ಯತೆಯನ್ನು ತಡೆಗಟ್ಟುವ ಬಗ್ಗೆ ಮಾಹಿತಿ ನೀಡಿದರು, ಸಾನಿಧ್ಯದ ವಿಶೇಷ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಶಿಬಿರದಿಂದ ವಿದ್ಯಾರ್ಥಿಗಳಿಗೆ ಆಸಕ್ತಿಯ ವಿಷಯಗಳನ್ನು ಕಲಿಯಲು ಅವಕಾಶ



ಬೈಂದೂರು: ಶಾಲೆಯ ಔಪಚಾರಿಕ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಾಗದ ಅವರ ಆಸಕ್ತಿಯ ಅನೇಕ ವಿಷಯಗಳನ್ನು ಕಲಿಯಲು ಬೇಸಿಗೆ ಶಿಬಿರ ಅವಕಾಶ ಮಾಡಿಕೊಡುತ್ತದೆ. ರಜಾ ಸಮಯ ವ್ಯರ್ಥವಾಗುವುದನ್ನು ತಪ್ಪಿಸಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಕೌಶಲ್ಯ ಅರ್ಜನೆಗೆ ವೇದಿಕೆ ಒದಗಿಸುತ್ತವೆ. ಈ ನಿಟ್ಟಿನಲ್ಲಿ ಸೇವಾ ಸಂಗಮ ಶಿಶುಮಂದಿರ ಪುಟ್ಟ ಮಕ್ಕಳಲ್ಲಿ ಸಂಸ್ಕೃತಿಯ ಅರಿವನ್ನು ಕೊಡುವ, ಅವರನ್ನು ಸಂಸ್ಕಾರವಂತ ನಾಗರಿಕರಾಗಿಸುವ ಪುಣ್ಯ ಕಾರ್ಯಮಾಡುತ್ತಿವೆ ಎಂದು ಸಾಹಿತಿ, ಮಾಜಿ ಯೋಧ ಬೈಂದೂರು ಚಂದ್ರಶೇಖರ ನಾವಡ ಹೇಳಿದರು.

ಇಲ್ಲಿನ ಸೇವಾ ಸಂಗಮ ಶಿಶುಮಂದಿರದಲ್ಲಿ ಆರಂಭಗೊಂಡ ಒಂದು ವಾರದ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸೇವಾ ಸಂಗಮದ ಅಧ್ಯಕ್ಷ ಮಂಜುನಾಥ ಶೆಟ್ಟಿ ಮಾತನಾಡಿ, ರಜಾ ದಿನಗಳಲ್ಲಿ ಮಕ್ಕಳು ದೈಹಿಕ ಕ್ಷಮತೆ ಕಳೆದುಕೊಳ್ಳುತ್ತಿರುವ ಆತಂಕದ ನಡುವೆ ಬೇಸಿಗೆ ಶಿಬಿರದಲ್ಲಿ ವಿವಿಧ ಬಗೆಯ ಕಲಿಕೆಯನ್ನು ಒದಗಿಸುವ ಮೂಲಕ ನಿರಂತರತೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿದೆ. ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ರಜೆಯನ್ನು ಅರ್ಥಪೂರ್ಣವಾಗಿ ಕಳೆಯಲಿದ್ದಾರೆ ಎಂದರು. ಗಿರೀಶ್ ಗಾಣಿಗ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ರವೀಂದ್ರ ಶಾನುಭೋಗ್, ರಶ್ಮಿ ಕಿಣಿ ಉಪಸ್ಥಿತರಿದ್ದರು. ಆಶಾ ದಿನೇಶ್ ಸ್ವಾಗತಿಸಿದರು. ಆಶಾ ಕಿಶೋರ್ ವಂದಿಸಿದರು. ಶಿಕ್ಷಕ ಪಿ ಸುಧಾಕರ ನಿರೂಪಿಸಿದರು.

> ▸▸ ರಜಾ ಸಮಯ ವ್ಯರ್ಥವಾಗುವುದನ್ನು ತಪ್ಪಿಸಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಕೌಶಲ್ಯ ಅರ್ಜನೆಗೆ ವೇದಿಕೆ.
>
> ▸▸ ಸೇವಾ ಸಂಗಮ ಶಿಶುಮಂದಿರ ಪುಟ್ಟ ಮಕ್ಕಳಲ್ಲಿ ಸಂಸ್ಕೃತಿಯ ಅರಿವನ್ನು ಕೊಡುವ, ಅವರನ್ನು ಸಂಸ್ಕಾರವಂತ ನಾಗರಿಕರಾಗಿಸುವ ಪುಣ್ಯ ಕಾರ್ಯಮಾಡುತ್ತಿವೆ

ತಲಪಾಡಿಯಲ್ಲಿ ಹಿರಿಯರ ನೆನಪು ಕಾರ್ಯಕ್ರಮ, ಯಕ್ಷಗಾನ ಬಯಲಾಟ



ಉಳ್ಳಾಲ: ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು ಇದರ ವತಿಯಿಂದ ಕಿನ್ಯಾ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಯುವಕ ಮಂಡಲದ ಸಹಯೋಗದಲ್ಲಿ ಹಿರಿಯರ ನೆನಪು ಕಾರ್ಯಕ್ರಮ ಮತ್ತು ಯಕ್ಷಗಾನ ಬಯಲಾಟ ಪ್ರದರ್ಶನ ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಠಾರದಲ್ಲಿ ನಡೆಯಿತು.

ಕಿನ್ಯಾ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಯುವಕ ಮಂಡಲದ ಗೌರವಾಧ್ಯಕ್ಷರಾದ ಟಿ.ರಾಮಯ್ಯ ಕಿಲ್ಲೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಸದಸ್ಯರಾದ ಕೃಷ್ಣಪ್ಪ ಕಿನ್ಯಾ ಮಾತನಾಡಿ ಯಕ್ಷಗಾನ ಸಂಘವು ಪ್ರತಿ ವರ್ಷ ಹಿರಿಯರ ನೆನಪು ಹಾಗೂ ಹಿರಿಯ ಕಲಾವಿದರನ್ನು ಗುರುತಿಸುವ ಕಾರ್ಯಕ್ರಮವನ್ನು ಮಾಡಿಕೊಂಡು ಬರುತ್ತಿದ್ದು ಈ ಸಂದರ್ಭ ನಮ್ಮ ಸಂಘದ ಹಿರಿಯ ಮಾರ್ಗದರ್ಶಕರಾದ ತಲಪಾಡಿ ದೇವಿಪುರದ ಆನಂದ ಆಳ್ವರ ಸಂಸ್ಮರಣಾ ಕಾರ್ಯಕ್ರಮವನ್ನು ನಡೆಸಿದ್ದೇವೆ. ಬೆಂಗಳೂರು ಯಕ್ಷಗಾನ ಅಕಾಡೆಮಿಯ ವತಿಯಿಂದ ಸಿಗುವ ಸವಲತ್ತು ಸೌಲಭ್ಯಗಳ ಬಗ್ಗೆ ಅವರು ಮಾಹಿತಿ ನೀಡಿದರು. ಕಿನ್ಯ ದುರ್ಗಾಪರಮೇಶ್ವರಿ ಯಕ್ಷಗಾನ ಯುವಕ ಮಂಡಲದ ಸಂಚಾಲಕರಾದ ಬಾಬು ಶಾಸ್ತ್ರ ಕಿನ್ಯ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಯುವಕ ಮಂಡಲದ ಅಧ್ಯಕ್ಷರಾದ ಮೋಹನ್ ದಾಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ರಾಜೇಂದ್ರ ಶೆಟ್ಟಿ ಕಿನ್ಯ ಉಪಸ್ಥಿತರಿದ್ದರು.

ಮೋಹನ್ ದಾಸ್ ಕಿನ್ಯಾ ಸ್ವಾಗತಿಸಿ ವಂದಿಸಿದರು.

> **ಗೌರವ**
> ಅಗಲಿದ ಹಿರಿಯ ಕಲಾವಿದ ಆನಂದ ಆಳ್ವರ ಪರವಾಗಿ ಅವರ ಧರ್ಮಪತ್ನಿ ದೇವಕಿ ಆಳ್ವ ಅವರು ಸಂಸ್ಮರಣಾ ಗೌರವ ಸ್ವೀಕರಿಸಿದರು.

ಏ.18ರಂದು ಉಡುಪಿ ಇನ್ಫೋಸಿಸ್ ಯಕ್ಷಗಾನ ಕಲಾರಂಗದಲ್ಲಿ ಕಾರ್ಯಕ್ರಮ | ಪ್ರಧಾನಿ ಮೋದಿಯಿಂದ ಭೇಷ್
ಪೂರ್ವಿಕಾ, ಗಾರ್ಗಿದೇವಿ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ

ಕುಂದಾಪುರ : ಕುಂದಾಪುರದ ಅಶೋಕ್ ಕುಮಾರ್ ಮತ್ತು ಭರತನಾಟ್ಯ ಗುರುಗಳಾದ ವಿದುಷಿ ಪ್ರವಿತಾ ಅಶೋಕ್ ಅವರ ಪುತ್ರಿಯರಾದ ಪೂರ್ವಿಕಾ ಮತ್ತು ಗಾರ್ಗಿದೇವಿ ಇವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಉಡುಪಿಯ ಇನ್ಫೋಸಿಸ್ ಯಕ್ಷಗಾನ ಕಲಾರಂಗದಲ್ಲಿ ಏ. 18ರಂದು ನಡೆಯಲಿದೆ ಎಂದು ಪ್ರವಿತಾ ಅಶೋಕ್ ಹೇಳಿದರು.

ಕುಂದಾಪುರಪ್ರೆಸ್‌ಕ್ಲಬ್‌ನಲ್ಲಿಸುದ್ದಿಗೋಷ್ಠಿಯಲ್ಲಿಮಾತನಾಡಿದ ಅವರು, ಮೂಡಬಿದಿರೆ ಆಳ್ವಾಸ್ ಶಿಕ್ಷಣ ಫೌಂಡೇಶನ್ ನಿರ್ದೇಶಕ ಡಾ. ಮೋಹನ ಆಳ್ವ, ನಾಟ್ಯನಿಕೇತನ ಕೋಲ್ಯ ಸೋಮೇಶ್ವರದ ಗುರು ಉಳ್ಳಾಲ ಮೋಹನ ಕುಮಾರ್, ಬೆಂಗಳೂರಿನ ಚಿತ್ಕಲಾ ಸ್ಕೂಲ್ ಆಫ್ ನೃತ್ಯದ ಪ್ರವೀಣ ಕುಮಾರ್, ಭರತನಾಟ್ಯ ಕಲಾವಿದೆ, ಎಸ್-ವ್ಯಾಸ (ಡೀಮ್ಡ್ ವಿಶ್ವವಿದ್ಯಾನಿಲಯ) ಇಲ್ಲಿನ ಯೋಗ ಮತ್ತು ಮಾನವೀಯ ಅಧ್ಯಯನ ಕೇಂದ್ರದ ಡೀನ್ ಡಾ.ಕರುಣಾ ವಿಜಯೇಂದ್ರ, ಶ್ರೀ ನಾಟ್ಯಾಂಜಲಿ ಕಲಾ ಅಕಾಡೆಮಿ ಸುರತ್ಕಲ್ ಇದರ ನಿರ್ದೇಶಕ ಕೆ. ಚಂದ್ರಶೇಖರ ನಾವಡ ಮೊದಲಾದವರು ರಂಗಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅವರು ಹೇಳಿದರು.

ಇವರಿಬ್ಬರ ಭರತನಾಟ್ಯದ ಅತ್ಯುನ್ನತವಾದ ರಂಗಪ್ರವೇಶ ಕಾರ್ಯಕ್ರಮವು ವಿದುಷಿ ಪ್ರವಿತಾ ಅಶೋಕ್ ಅವರ ನಿರ್ದೇಶನದಲ್ಲಿ ಉಡುಪಿಯ ಇನ್ಫೋಸಿಸ್ ಯಕ್ಷಗಾನ ಕಲಾರಂಗದಲ್ಲಿ ಏ.18 ರಂದು ನಡೆಯಲಿದೆ. ಹಾಡುಗಾರಿಕೆಯಲ್ಲಿ ಚೆನ್ನೈನ ಶ್ರೀಕಾಂತ ಗೋಪಾಲಕೃಷ್ಣನ್ ಮೃದಂಗದಲ್ಲಿ ವಿದ್ವಾನ್ ಹರ್ಷ ಸಾಮಗ ಬೆಂಗಳೂರು, ಕೊಳಲಿನಲ್ಲಿ ವಿದ್ವಾನ್ ನಿತೀಶ್ ಅಮ್ಮಣ್ಣಾಯ ಬೆಂಗಳೂರು ಮತ್ತು ವೀಣೆಯಲ್ಲಿ ವಿದ್ವಾನ್ ಪ್ರಶಾಂತ್ ರುದ್ರಪ್ಪ ಸಹಕರಿಸಲಿದ್ದಾರೆ ಎಂದು ಅವರು ಹೇಳಿದರು.



> **ಪ್ರಧಾನಿ ಮೋದಿ ಭೇಷ್ ಎಂದಿದ್ದರು**
> ಬಹುಮುಖ ಪ್ರತಿಭೆಯಾಗಿರುವ ಇವರು ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮ, ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಂದ ಭೇಷ್ ಎನಿಸಿಕೊಂಡಿದ್ದಾರೆ.

ಪೂರ್ವಿಕಾ: ಭರತನಾಟ್ಯ ಕಲಾವಿದೆ ಪೂರ್ವಿಕ ಇವರು ಅವರ ತಾಯಿ ಮತ್ತು ಗುರು ವಿದುಷಿ ಪ್ರವಿತಾ ಅಶೋಕ್ರ ಗರಡಿಯಲ್ಲಿ ಸುಮಾರು 10 ವರ್ಷಕ್ಕಿಂತ ಹೆಚ್ಚು ಕಾಲ ನಾಟ್ಯ ಸರಸ್ವತಿಯನ್ನು ಅಭ್ಯಸಿಸಿ ಭರತನಾಟ್ಯದಲ್ಲಿ ಪಳಗಿದ್ದಾರೆ. ಭರತನಾಟ್ಯ ಸೀನಿಯರ್ ಪರೀಕ್ಷೆ ಉತ್ತೀರ್ಣರಾಗಿ ಜೊತೆಯಲ್ಲಿ ಕರ್ನಾಟಿಕ್ ಸಂಗೀತವನ್ನು ವಿದ್ವಾನ್ ಉಷಾ ರಾಮಕೃಷ್ಣ ಭಟ್ ಅವರಲ್ಲಿ ಅಭ್ಯಸಿಸುತ್ತಿದ್ದಾರೆ.

ಇವರಿಗೆ ನೃತ್ಯಭೂಷಣ ಪ್ರಶಸ್ತಿ, ಕೇಂದ್ರ ಸರಕಾರದ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರದ ವಿದ್ಯಾರ್ಥಿವೇತನ, ಶ್ರೀ ಪಲ್ಲಡ್ಕ ಕೇಶವ ಭಟ್ ಸ್ಮಾರಕ ಟ್ರಸ್ಟ್‌ನಿಂದ ಪ್ರಮಾ ಪ್ರಶಸ್ತಿ, ಬಾಲನೃತ್ಯ ಪ್ರತಿಭೆ ಪ್ರಶಸ್ತಿಗಳು ದೊರೆತಿವೆ. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಪ್ರಸ್ತುತ ಶ್ರೀ ಮಧ್ವರಾಜ ಇನ್ಸಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ದ್ವಿತೀಯ ವರ್ಷದಲ್ಲಿ ಪದವಿ ಅಭ್ಯಸಿಸುತ್ತಿದ್ದಾರೆ.

ಗಾರ್ಗಿದೇವಿ: ಭರತನಾಟ್ಯ ಕಲಾವಿದೆ ಕುಮಾರಿ ಗಾರ್ಗಿದೇವಿ ಅವರ ತಾಯಿ ಮತ್ತು ಗುರು ವಿದುಷಿ ಪ್ರವಿತಾ ಅಶೋಕ್ರ ಗರಡಿಯಲ್ಲಿ ತನ್ನ 6ನೇ ವರ್ಷದಿಂದ ಇವರೆಗೂ ಭರತನಾಟ್ಯದಲ್ಲಿ ಪಳಗಿದ್ದಾರೆ. ಕರ್ನಾಟಿಕ್ ಸಂಗೀತವನ್ನು ವಿದ್ವಾನ್ ಉಷಾ ರಾಮಕೃಷ್ಣಭಟ್ ಅವರಲ್ಲಿ ಅಭ್ಯಸಿಸುತ್ತಿದ್ದು, ಕುಂದಾಪುರದ ಆರ್. ಎನ್.ಶೆಟ್ಟಿ ಕಾಲೇಜಿನಲ್ಲಿ ದ್ವಿತೀಯ ವರ್ಷದಲ್ಲಿ ಅಭ್ಯಸಿಸುತ್ತಿದ್ದಾರೆ. ಮೈಸೂರಿನ ಶ್ರೀದುರ್ಗಾ ನೃತ್ಯ ಅಕಾಡೆಮಿಯಿಂದ ನಾಟ್ಯ ಮಯೂರಿ, ಉಡುಪಿಯ ಹೆಜ್ಜೆಗೆಜ್ಜೆ ಅಕಾಡೆಮಿಯಿಂದ ನೃತ್ಯ ಪಲ್ಲವ, ಸರಕಾರದ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರದ ವಿದ್ಯಾರ್ಥಿವೇತನ, ಶ್ರೀ ಪಲ್ಲಡ್ಕ ಕೇಶವ ಭಟ್ ಸ್ಮಾರಕ ಟ್ರಸ್ಟ್‌ನಿಂದ ಪ್ರಮಾ ಪ್ರಶಸ್ತಿ, ಬೆಂಗಳೂರಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಕಲಾಶ್ರೀ ಪ್ರಶಸ್ತಿಗಳು ಲಭಿಸಿವೆ.

ನೃತ್ಯ ವಸಂತ ನಾಟ್ಯಾಲಯದ ಟ್ರಸ್ಟಿಗಳಾದ ಕಲ್ಪನಾ ಭಾಸ್ಕರ, ಚಂದ್ರಿಕಾ ಧನ್ಯ, ಶ್ರೀಕಾಂತಿ ಉಡುಪ, ಭರತನಾಟ್ಯ ಕಲಾವಿದರಾದ ಪೂರ್ವಿಕ ಮತ್ತು ಗಾರ್ಗಿದೇವಿ ಉಪಸ್ಥಿತರಿದ್ದರು.

ಕಿರುಸುದ್ದಿ

ಬೀಗಜಡಿದ ಮನೆಯ ಬಾಗಿಲು ಒಡೆದು ನಗ ನಗದು ಕಳವು

ಕಾಸರಗೋಡು: ಬೀಗ ಜಡಿದ ಮನೆಯ ಬಾಗಿಲು ಒಡೆದು ನಗ ನಗದು ಕಳವುಗೈದ ಬಗ್ಗೆ ಬೇಡಗಂ ಪೊಲೀಸರಿಗೆ ದೂರು ನೀಡಲಾಗಿದೆ. ಬೇಡಡ್ಕ ಸಮೀಪದ ಕಲ್ಲಡಕುಟ್ಟಿಯಲ್ಲಿರುವ ಮೊಹಮ್ಮದ್ ಹುಸೈನ್ ಎಂಬವರ ಮನೆಯಲ್ಲಿ ಕಳವು ನಡೆದಿದೆ. ಮೊಹಮ್ಮದ್ ಹುಸೈನ್ ಮತ್ತು ಕುಟುಂಬ ಕಳೆದ ಎರಡು ತಿಂಗಳುಗಳಿಂದ ದುಬಾಯಿಯಲ್ಲಿದ್ದಾರೆ. ಆದರಿಂದ ಆ ಮನೆಗೆ ಬೀಗ ಜಡಿಯಲಾಗಿತ್ತು. ಈ ಸಂದರ್ಭದಲ್ಲಿ ಕಳ್ಳರು ಮನೆಯ ಎದುರುಗಡೆ ಬಾಗಿಲ ಬೀಗ ಒಡೆದು ಒಳನುಗ್ಗಿ ಮಲಗುವ ಕೊಠಡಿಯೊಳಗಿನ ಕಪಾಟು ಒಡೆದು ಆದರಲ್ಲಿದ್ದ 12,000 ರೂ. ನಗದು ಮತ್ತು ಒಂದೂವರೆ ಪವನ್‌ನ ಚಿನ್ನದೊಡವೆ ಮಾತ್ರವಲ್ಲದೆ ಮನೆಯ ಸಿಸಿ ಟಿವಿ ಹಾರ್ಡ್ ಡಿಸ್ಕ್ ದೋಚಿದ್ದಾರೆ. ಈ ಬಗ್ಗೆ ಮೊಹಮ್ಮದ್ ಹುಸೈನ್‌ರ ಸಹೋದರ ಸಿ.ಎ.ಮೊಹಮ್ಮದ್ ಕುಂಞಿ ನೀಡಿದ ದೂರನಂತೆ ಬೇಡಗಂ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಎಸ್‌ಐ ಸಿ.ಎಂ. ಸಾಬು ನೇತೃತ್ವದ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಮಾತ್ರವಲ್ಲದೆ ಬೆರಳಚ್ಚು ತಜ್ಞರು ಆ ಮನೆಗೆ ಆಗಮಿಸಿ ಅಲ್ಲಿಂದ ಹಲವು ಬೆರಳಚ್ಚುಗಳನ್ನು ಸಂಗ್ರಹಿಸಿದ್ದಾರೆ. ಮೊಹಮ್ಮದ್ ಹುಸೈನ್‌ರ ಮನೆಯ ಪಕ್ಕದ ಮನೆಗಳಿಗೂ ಕಳ್ಳರು ನುಗ್ಗಿದ ಬಗ್ಗೆ ಮಾಹಿತಿ ಲಭಿಸಿದೆ ಎನ್ನಲಾಗಿದೆ.

ಹಲ್ಲೆ ಆರೋಪಿ ಸೆರೆ

ವಿಟ್ಲ: ಒಂದು ವರ್ಷದ ಹಿಂದಿನ ಗಲಾಟೆಯ ವಿಚಾರ ತಕರಾರು ತೆಗೆದು ವ್ಯಕ್ತಿಯನ್ನು ಕಲ್ಲಿನಿಂದ ಜಜ್ಜಿ ಹಲ್ಲೆ ನಡೆಸಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಮಾಣಿ ನಿವಾಸಿ ವಿಶ್ವನಾಥ (28) ಅವರು ಏ.12ರಂದು ಸಂಜೆ ಮನೆಯಲ್ಲಿದ್ದ ಸಮಯ ಪರಿಚಯವಿರುವ ವ್ಯಕ್ತಿ ನವೀನ್ ಎಂಬಾತ ಬಂದಿದ್ದು, ಒಂದು ವರ್ಷದ ಹಿಂದೆ ನಡೆದಿದ್ದ ಗಲಾಟೆ ಬಗ್ಗೆ ತಕರಾರು ತೆಗೆದು ಕಲ್ಲಿನಿಂದ ಹಲ್ಲೆ ನಡೆಸಿ, ಜೀವಬೆದರಿಕೆ ಹಾಕಿದ್ದಾರೆ. ಗಾಯಗೊಂಡ ವಿಶ್ವನಾಥ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬರಿಮಾರು ನಿವಾಸಿ ಪಿ. ನವೀನ (43)ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಅಪಹರಣ ಪ್ರಕರಣ: ಸಮಗ್ರ ತನಿಖೆಗೆ ನವಸಹಜ ಸಂಘಟನೆ ಆಗ್ರಹ

ಮಂಗಳೂರು: ಮೈಸೂರಿನ ವ್ಯಕ್ತಿಯೊಬ್ಬರನ್ನು ಮಂಗಳೂರಿನ ಮಂಗಳಮುಖಿಯರು ಅಪಹರಣಗೈದ ಪ್ರಕರಣ ಗಂಭೀರವಾಗಿದ್ದು, ಇದರ ಸಮಗ್ರ ತನಿಖೆಯಾಗಬೇಕು. ಇದರ ಹಿಂದೆ ಯಾರಿದ್ದಾರೆ ಎಂಬುದು ಬಯಲಾಗಬೇಕು ಎಂದು ಮಂಗಳೂರಿನ ನವಸಹಜ ಸಮುದಾಯ ಸಂಘಟನೆ ಆಗ್ರಹಿಸಿದೆ. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆ ಅಧ್ಯಕ್ಷೆ ನಿಖಿಲಾ, ಪ್ರಕರಣದ ಕೂಲಂಕಷ ತನಿಖೆ ನಡೆಸುವ ಮೂಲಕ ಆರೋಪಿಗಳಿಗೆ ಕಾನೂನಿನ ಸೂಕ್ತ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಸಾಮಾಜಿಕ ಜಾಲತಾಣದ ಮೂಲಕ ಪರಿಚಿವಾದ ಮೈಸೂರಿನ ವ್ಯಕ್ತಿಯನ್ನು ಮಂಗಳೂರಿನ ಮಂಗಳಮುಖಿ ಅಪಹರಣ ಮಾಡಿಕೊಂಡು ಆತನಿಗೆ ಜಿಲ್ಲೆಯಲ್ಲಿ ಆಧಾರ್‌ಕಾರ್ಡ್, ಟ್ರಾನ್ಸ್ ಜೆಂಡರ್ ಗುರುತಿನ ಚೀಟಿಯನ್ನು ಕೂಡಾ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸುಳ್ಳು ದಾಖಲೆಗಳನ್ನು ನೀಡಿ ಮಾಡಿಸಿರುತ್ತಾರೆ. ಇದು ಅಪರಾಧವಾಗಿದೆ. ಸಂಘಟನೆಯ ಪದಾಧಿಕಾರಿಗಳು ಹಾಗೂ ಸದಸ್ಯರ ಗಮನಕ್ಕೆ ಬಾರದೆ ಈ ತಪ್ಪು ನಡೆದಿದ್ದು, ಇದರ ವಿರುದ್ಧ ತನಿಖೆಯಾಗಲಿ ಎಂದು ಅವರು ಹೇಳಿದರು.

ಲಿಂಗತ್ವ ಅಲ್ಪಸಂಖ್ಯಾತರ ನಕಲಿ ಐಡಿಗಳನ್ನು ಮಾಡಿಸಿಕೊಂಡು ಕೆಲವರು ಇಂತಹ ಕೃತ್ಯಗಳನ್ನು ಎಸಗುತ್ತಿದ್ದಾರೆ. ನಕಲಿ ಮಂಗಳಮುಖಿಯರಿಂದ ನೈಜ ಮಂಗಳಮುಖಿಯರ ಅನ್ನದ ಬಟ್ಟಲಿಗೆ ಕನ್ನ ಹಾಕಲಾಗುತ್ತಿದೆ. ನಮ್ಮ ಸಂಘಟನೆಯಡಿ 106 ಮಂದಿ ಸದಸ್ಯರಿದ್ದು, 49 ಮಂದಿಗೆ ಟ್ರಾನ್ಸ್ ಜೆಂಡರ್ ಕಾರ್ಡ್ ಆಗಿದೆ ಎಂದು ಸಂಘಟನೆಯ ಕಾರ್ಯದರ್ಶಿ ಅರುಂಧತಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಕಾರ್ಯಕಾರಿ ಸಮಿತಿ ಸದಸ್ಯೆ ಪ್ರೇಮಾ, ಸದಸ್ಯರಾದ ಕುಶಿ, ವೃಂದಾ ನಾಯಕ್, ದೀಕ್ಷಾ ಉಪಸ್ಥಿತರಿದ್ದರು.

ವಾರ್ಷಿಕ ಮಾರಿಪೂಜೆ

ಬೆಳ್ತಂಗಡಿ :ಉಜಿರೆ ಶ್ರೀ ಮಹಮ್ಮಾಯಿ (ಮಾರಿಗುಡಿ) ದೇವಸ್ಥಾನದಲ್ಲಿ ವಾರ್ಷಿಕ ಮಾರಿಪೂಜೆ ,.ಗುಳಿಗ ದೈವದ ನೇಮೋತ್ಸವ ಹಾಗೂ ಗೊಂಬೆ ಕಳುಹಿಸುವ ಕಾರ್ಯಕ್ರಮ ಏ 13 ರಂದು ರಾತ್ರಿ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರ ನೇತೃತ್ವದಲ್ಲಿ ನಡೆಯಿತು. ದೈವದ ನರ್ತನ ಸೇವೆ ನಡೆದ ಬಳಿಕ ಅರ್ಚಕ ಪುರುಷೋತ್ತಮ ಆಚಾರ್ಯರು ಶ್ರೀ ಮಹಮ್ಮಾ ಯಿಗೆ ಪೂಜಾ ವಿ5 ನೆರವೇರಿಸಿ,ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು. ಬಳಿಕ ವಾರ್ಷಿಕವಾಗಿ ನಡೆಯುವ ಗೊಂಬೆ ಕಳುಹಿಸಿಕೊಡಲಾಯಿತು. ಪರಾರಿ ವೆಂಕಟ್ರಮಣ ಹೆಬ್ಬಾರ್, ಕೆ.ಮೋಹನ ಕುಮಾರ್,ಮೋಹನ ಶೆಟ್ಟಿಗಾರ್, ಭರತ್ ಕುಮಾರ್, ಲಕ್ಷ್ಮಣ ಸಫಲ್ಯ, ಪ್ರಶಾಂತ್ ಜೈನ್ , ರವೀಂದ್ರ ಶೆಟ್ಟಿ, ರಮೇಶ್ ಶೆಟ್ಟಿ, ಪ್ರಕಾಶ್ ಗೌಡ ಅಪ್ರಮೇಯ, ವಿಶ್ವನಾಥ ಶೆಟ್ಟಿ , ಶ್ರೀ ಮಹಮ್ಮಾಯಿ ಸೇವಾ ಸಮಿತಿ ಸದಸ್ಯರು ಹಾಗು ಗ್ರಾಮಸ್ಥರು ಭಾಗವಹಿಸಿದ್ದರು.

ಇಂದಿನಿಂದ 'ಕರುಂಬಿತ್ತಿಲ್' ಸಂಗೀತ ಸಂಭ್ರಮ

ಬೆಳ್ತಂಗಡಿ: ಕರುಂಬಿತ್ತಿಲ್‌ನ ಗ್ರಾಮೀಣ ವಾತಾವರಣದಲ್ಲಿ ಪ್ರತೀ ವರ್ಷ ಬೇಸಿಗೆ ರಜೆಯಲ್ಲಿ ಮಕ್ಕಳಿಗಾಗಿ ಒಂದು ಸಂಗೀತ ಲೋಕವೇ ಸೃಷ್ಟಿಯಾಗುತ್ತದೆ. ಸುತ್ತಮುತ್ತಲೂ ಸಂಗೀತ ವಾತಾವರಣ , ಮೂಲೆಮೂಲೆಗಳಲ್ಲೂ ಸಂಗೀತದ ಕಲರವ ಮಾರ್ದನಿಸುತ್ತದೆ. 2000 ದಿಂದ ಆರಂಭಗೊಂಡು ಕಳೆದ 26 ವರ್ಷಗಳಲ್ಲಿ ಧರ್ಮಸ್ಥಳದ ಸಮೀಪದ ನಿಡ್ಲೆ ಗ್ರಾಮದ 'ಕರುಂಬಿತ್ತಿಲ್' ಮನೆಯಂಗಳದಲ್ಲಿ ಪ್ರತಿ ವರ್ಷವೂ ಸಂಗೀತ ಶಿಬಿರ ನಡೆಯುತ್ತಿದೆ. ಈ ಬಾರಿಯ ಸಂಗೀತ ಶಿಬಿರವು ಏಪ್ರಿಲ್ 15 ರಿಂದ ಏಪ್ರಿಲ್ 19 ರ ವರೆಗೆ ನಡೆಯಲಿದೆ.

ಕರುಂಬಿತ್ತಿಲ್ ಕುಟುಂಬವೇ ಒಂದು ಸಂಪೂರ್ಣ ಸಂಗೀತಮಯ ಕುಟುಂಬ. ಪ್ರಖ್ಯಾತ ಪಿಟೀಲು ವಿದ್ವಾಂಸ ವಿದ್ವಾನ್ ವಿಠ್ಠಲ ರಾಮಮೂರ್ತಿ ಚೆನ್ನೈ ಹಾಗೂ ಅವರ ಸಹೋದರಿಯರು ಸೇರಿ ಕುಟುಂಬ ಸಮಾರಂಭದಂತೆ ಆರಂಭಗೊಂಡ ಸಂಗೀತ ಶಿಬಿರವು ಇದೀಗ ಸರ್ವ ಸಂಗೀತ ವಿದ್ಯಾರ್ಥಿಗಳು ಕಾತರದಿಂದ ನಿರೀಕ್ಷಿಸುತ್ತಿರುವ ಸಂಗೀತ ಶಿಬಿರವಾಗಿ ಮಾರ್ಪಟ್ಟಿದೆ. ಕೆಲವೇ ವಿದ್ಯಾರ್ಥಿಗಳಿಂದ ಆರಂಭಗೊಂಡ ಕರುಂಬಿತ್ತಿಲ್ ಶಿಬಿರ ಇದೀಗ 200ಕ್ಕೂ ಮಿಕ್ಕಿ ವಿದ್ಯಾರ್ಥಿಗಳನ್ನೊಳಗಂಡ ಬೃಹತ್ ಶಿಬಿರವಾಗಿ ಮಾರ್ಪಟ್ಟಿದೆ.

ಈ ಶಿಬಿರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲದೆ ಇತರ ದೂರದೂರಿಂದಲೂ, ವಿದೇಶದಿಂದಲೂ ವಿದ್ಯಾರ್ಥಿಗಳು ಭಾಗವಹಿಸುತ್ತಿರುವುದು ವಿಶೇಷವಾಗಿದೆ.. ವಿಶ್ವ ವಿಖ್ಯಾತ ಕಲಾವಿದರಾದ ಲಾಲ್ಗುಡಿ ಜಿ.ಜಯರಾಮನ್, ವಿದ್ವಾನ್ ಬಾಲಮುರಳಿಕೃಷ್ಣ ವಿದ್ವಾನ್ ಉಮಯಾಳಪುರಂ ಶಿವರಾಮನ್, ವಿದ್ವಾನ್ ಟಿ.ವಿ.ಗೋಪಾಲಕೃಷ್ಣವಿದ್ವಾನ್ ಎಂ.ಚಂದ್ರಶೇಖರ್, ವಿದ್ವಾನ್ ವಿ.ವಿ. ಸುಬ್ರಹ್ಮಣ್ಯಂ, ವಿದ್ವಾನ್ ಟಿ.ಎಂ.ಕೃಷ್ಣ ವಿದುಷಿ ಬಾಂಬೆ ಜಯಶ್ರೀ, ವಿದ್ವಾನ್ ನೈವೇಲಿ ಸಂತಾನಗೋಪಾಲನ್, ವಿದುಷಿ ಸೌಮ್ಯ, ವಿದ್ವಾನ್ ವಿಜಯಶಿವ, ಮುಂತಾದವರು ಭೇಟಿನೀಡಿ ಸಂಗೀತ ಕಾರ್ಯಕ್ರಮ ನೀಡಿದ ಹೆಗ್ಗಳಿಕೆ ಶಿಬಿರಕ್ಕಿದೆ..

ಈ ವರ್ಷದ ಕರುಂಬಿತ್ತಿಲ್ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪದ್ಮಶ್ರೀ ಎ.ಕನ್ಯಾಕುಮಾರಿ, ವಿದ್ವಾನ್ ಅಭಿಷೇಕ್ ರಘುರಾಮ್, ವಿದ್ವಾನ್ ಸುರೇಶ್ ವೈದ್ಯನಾಥನ್, ವಿದ್ವಾನ್ ಅರ್ಜುನ್ ಕುಮಾರ್, ವಿದ್ವಾನ್ ಬಿ.ಎಸ್. ಪುರುಷೋತ್ತಮ್, ವಿದ್ವಾನ್ ಎಸ್.ಆರ್. ಮಾರುತಿ ಪ್ರಸಾದ್, ವಿದ್ವಾನ್ ಬಾಲು ಮಾಸ್ತಿ ಹಾಗೂ ಇನ್ನಿತರ ಕಲಾವಿದರುಗಳು ಭಾಗವಹಿಸಿ ತಮ್ಮ ಸಂಗೀತ ಮಾಧುರ್ಯವನ್ನು ಅಭ್ಯಾಸಿಗಳಿಗೆ ಉಣಬಡಿಸಲಿದ್ದಾರೆ. ಈ ಸಲದ ಕರುಂಬಿತ್ತಿಲ್ ಶಿಬಿರವು ಅನೇಕ ವಿಸ್ಮಯಕರ ಅನುಭೂತಿಗಳನ್ನು ಸಂಗೀತಾಸಕ್ತ ಶಿಬಿರಾರ್ಥಿಗಳಿಗೆ ನೀಡಲಿದೆ. ವಿಶೇಷ ಕಚೇರಿಗಳು, ಶ್ರೇಷ್ಠ ಕಲಾವಿದರ ವಿಶೇಷ ಸಂದರ್ಶನಗಳು, ಪ್ರತಿ ಶಿಬಿರಾರ್ಥಿಗೂ ಮೃದಂಗ, ವಯೊಲಿನ್ ಜತೆ ಪ್ರದರ್ಶನ ನೀಡುವ ಅವಕಾಶ, ಸಂಗೀತ ಕ್ವಿಜ್, ಸಂಗೀತ ಪ್ರಾತ್ಯ ಕ್ಷಿಕೆ, ಯಕ್ಷಗಾನ ಹಾಗೂ ಇನ್ನಿತರ ನೂತನ ಚಟುವಟಿಕೆಗಳು ಈ ಸಲದ ಶಿಬಿರಾರ್ಥಿಗಳಿಗಾಗಿ ಕಾದಿವೆ . ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಸೋದೆ ವಾದಿರಾಜ ಮಠದ ಶ್ರೀ ವಿಶ್ವವಲ್ಲಭತೀರ್ಥ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, ಡಾ.ಎಂ. ಮೋಹನ್ ಆಳ್ವ, ಡಾ.ಜಿ.ರಾಮಕೃಷ್ಣ ಆಚಾರ್ ಶಿಬಿರದಲ್ಲಿ ಮುಖ್ಯ ಅಭ್ಯಾಗತರಾಗಿ ಭಾಗವಹಿಸಲಿದ್ದಾರೆ.

ಏ.15ರಂದು ವಿದ್ವಾನ್ ಮಾರುತಿ ಪ್ರಸಾದ್ ಅವರ ಸಂಗೀತ ಕಛೇರಿ, 16ರಂದು ಡಾ.ಸುರೇಶ್ ವೈದ್ಯನಾಥನ್ ಹಾಗೂ ತಂಡದವರಿಂದ ಮೃತ್ತಿಕಾ ವೈಭವಮ್ ಎನ್ನುವ ವಿಶಿಷ್ಟ ಕಾರ್ಯಕ್ರಮ, 17ರಂದು ಬಾಲು ಮಾಸ್ತಿ ಅವರ ವೀಣಾ ಕಛೇರಿ ಹಾಗೂ ವಿದುಷಿ ಶ್ರೇಯಾ ಕೊಳತ್ತಾಯ ಹಾಗೂ ವಿದ್ವಾನ್ ನಿರಂಜನ್ ದಿಂದೋಡಿ ಅವರ ಸಂಗೀತ ಕಾರ್ಯಕ್ರಮ, 18ರಂದು ಬೆಳಗ್ಗೆ ವಿದ್ವಾನ್ ಬಿ.ಎಸ್.ಪುರುಷೋತ್ತಮ್ ಅವರ ಲಯ ಕಾರ್ಯಾಗಾರ ಮತ್ತು ಸಂಜೆ ಗುರು ವಿದುಷಿ ಸಂಗೀತ ಕಲಾನಿಧಿ ಎ.ಕನ್ಯಾಕುಮಾರಿ ಹಾಗೂ ವಿದ್ವಾನ್ ವಿಠಲ್ ರಂಗನ್ ಅವರ ದ್ವಂದ್ವ ವಯಲಿನ್ ವಾದನ ಕಾರ್ಯಕ್ರಮ ನಡೆಯಲಿದ್ದು, ಶಿಬಿರದ ಕೊನೆಯ ದಿನ 19ರಂದು ವಿದ್ವಾನ್ ಅಭಿಷೇಕ್ ರಘುರಾಮ್ ನೇತೃತ್ವದಲ್ಲಿ ಶಿಬಿರಾರ್ಥಿಗಳ ಸಂಗೀತ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ https://www.facebook.com/KarunbithilShibira/ Email: karunbithilshibira@gmail.com ಜಾಲತಾಣವನ್ನು ಸಂಪರ್ಕಿಸಬಹುದು ಎಂದು ಶಿಬಿರದ ಆಯೋಜಕರಾದ ವಿದ್ವಾನ್ ವಿಠ್ಠಲ ರಾಮಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸರಕಾರದ ವಿರುದ್ಧ ಬಿಜೆಪಿಯಿಂದ ಪೋಸ್ಟ್ ಕಾರ್ಡ್ ಚಳುವಳಿ



ಮಡಿಕೇರಿ: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೊಡಗು ಜಿಲ್ಲಾ ಬಿಜೆಪಿ 'ಪೋಸ್ಟ್ ಕಾರ್ಡ್ ಚಳುವಳಿ' ಆರಂಭಿಸಿದೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆಯ ವಿರುದ್ಧ ಈ ಚಳುವಳಿ ಆರಂಭಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಹಿಂದೆ 6 ವಿಷಯಗಳಿಗೆ 625 ಅಂಕಗಳನ್ನು ನೀಡಲಾಗುತಿತ್ತು ಹಾಗೂ ಇದನ್ನು ಫಲಿತಾಂಶಕ್ಕೂ ಪರಿಗಣಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಸರಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ 'ತೃತೀಯ ಭಾಷೆಗೆ ಅಂಕದ ಬದಲು ಗ್ರೇಡ್ (ಶ್ರೇಣಿ) ರೂಪದಲ್ಲಿ ನೀಡಲು ತೀರ್ಮಾನಿಸಿದ್ದು, ಇದನ್ನು ಉತ್ತೀರ್ಣರಾಗಲು ಪರಿಗಣಿಸಲಾಗುವುದಿಲ್ಲ' ಎಂದು ಆದೇಶಿಸಲಾಗಿದೆ. ಈ ಅಧಿಸೂಚನೆಯಿಂದ ರಾಜ್ಯದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಕುಸಿಯಲಿದ್ದು, ಇದರಿಂದ ವಿದ್ಯಾರ್ಥಿಗಳಲ್ಲಿ ಭಾಷೆಯ ಮೇಲಿನ ಅಭಿಮಾನ ಕಡಿಮೆಯಾಗಲಿದೆ ಎಂದು ಬಿಜೆಪಿ ಆರೋಪಿಸಿದೆ.

ಈ ಅಧಿಸೂಚನೆಯನ್ನು ಹಿಂಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಲು ಕೊಡಗು ಜಿಲ್ಲಾ ಬಿಜೆಪಿ ಕಾರ್ಡ್ ಚಳುವಳಿಯನ್ನು ಪ್ರಾರಂಭಿಸಿದೆ ಎಂದು ಪ್ರಮುಖರು ತಿಳಿಸಿದ್ದಾರೆ.

ಈ ಸಂದರ್ಭ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಶಾಸಕ ಕೆ ಜಿ ಬೋಪಯ್ಯ, ಮಾಜಿ ಜಿಲ್ಲಾಧ್ಯಕ್ಷರುಗಳಾದ ರಾಬಿನ್ ದೇವಯ್ಯ, ಬಿ ಬಿ ಭಾರತೀಶ್, ಮನು ಮುತ್ತಪ್ಪ, ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ನಗರಸಭೆ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ರವಿ ಪಿ.ಎಂ ಮತ್ತಿತರರು ಇದ್ದರು.

ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಮಂಗಳೂರು: ಅಡುಗೆ ಅನಿಲ ಬೆಲೆ ಏರಿಕೆಯನ್ನು ಖಂಡಿಸಿ ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮಂಗಳವಾರ ನಗರದ ಕದ್ರಿ ಸರ್ಕಲ್ ಬಳಿ ನಡೆದ ಪ್ರತಿಭಟನೆ ನಡೆಯಿತು.

ಖಾಲಿ ಗ್ಯಾಸ್ ಸಿಲಿಂಡರ್‌ಗೆ ಹೂಮಾಲೆ ಹಾಕಿ ಅದನ್ನು ಚಟ್ಟದ ಮೇಲೆ ಕಟ್ಟಿ ಕಾಂಗ್ರೆಸ್ ಕಾರ್ಯಕರ್ತರು ಹೊತ್ತುಕೊಂಡು ಅಣಕು ಶವಯಾತ್ರೆ ನಡೆಸುವ ಮೂಲಕ ವಿಶಿಷ್ಟ ರೀತಿಯಲ್ಲಿ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಬಿ.ರಮಾನಾಥ ರೈ, ಕೇಂದ್ರ ಸರ್ಕಾರದ ವೈಫಲ್ಯದಿಂದಾಗಿ ದೇಶದಲ್ಲಿ ಅಡುಗೆ ಅನಿಲ ಸರಿಯಾಗಿ ಪೂರೈಕೆಯಾಗದ ವಾತಾವರಣ ಸೃಷ್ಟಿಯಾಗಿದೆ. ಬೆಲೆಯೂ ತೀವ್ರ ಏರಿಕೆಯಾಗಿದೆ. ಕೇಂದ್ರದ ಬಾಲಿಶ ವಿದೇಶಾಂಗ ನೀತಿಯೇ ಇದಕ್ಕೆ ಕಾರಣ ಎಂದರು.

ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಮಾತನಾಡಿ, ವಾಣಿಜ್ಯ ಉದ್ದೇಶದ ಅಡುಗೆ ಅನಿಲ ಬೆಲೆ ಕಾಳಸಂತೆಯಲ್ಲಿ ನಾಲ್ಕೈದು ಸಾವಿರ ರೂ.ಗೆ ಏರಿಕೆಯಾಗಿ. ಇದರ ಪರಿಣಾಮ ಹೊಟೇಲ್‌ಗಳಲ್ಲಿ ತಿಂಡಿ- ಊಟದ ದರ ಏರಿಕೆಯಾಗಿದೆ ಎಂದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಇಬ್ರಾಹಿಂ ನವಾಝ್, ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಅಭಿನಂದನ್ ಹರೀಶ್, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷರಾದ ಬಶೀರ್, ಸುನೀತ್ ದೇಸಾಯಿ, ಮುಖಂಡರಾದ ಫಾರೂಕ್ ಪೆರ್ನೆ, ಆಸೀಫ್ ಬಜಾಲ್, ಸಮರ್ಥ್ ಭಟ್, ಪೃಥ್ವಿರಾಜ್, ವೆಲ್ವಿನ್, ಚೇತನ್, ಮಹೇಶ್, ಪ್ರಜ್ವಲ್ ಮತ್ತಿತರರು ಪಾಲ್ಗೊಂಡಿದ್ದರು.

10 ಲಕ್ಷ ರೂಪಾಯಿ ವೆಚ್ಚದ ಶಾಲಾ ಅಡುಗೆ ಕೋಣೆಗೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗುದ್ದಲಿ ಪೂಜೆ



ಕಾಪು: ಕಾಪು ವಿಧಾನಸಭಾ ಕ್ಷೇತ್ರದ ಪೊಲಿಪು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೋಣೆ ನಿರ್ಮಾಣಕ್ಕೆ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ ಎಂ.ಆರ್.ಪಿ.ಎಲ್ ನ ಸಿ.ಎಸ್.ಆರ್ ಅನುದಾನದಿಂದ 10 ಲಕ್ಷ ರೂಪಾಯಿ ಮಂಜೂರಾಗಿದ್ದು ಇದರ ಗುದ್ದಲಿ ಪೂಜೆಯನ್ನು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಮಂಗಳವಾರ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಾಪು ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಕಿರಣ್ ಆಳ್ವ, ಪುರಸಭೆಯ ಸದಸ್ಯರಾದ ರಾ5ಕಾ, ಎಂ.ಆರ್.ಪಿ.ಎಲ್‌ನ ಸಿ.ಎಸ್.ಆರ್ ಮ್ಯಾನೇಜರ್ ಎಂ.ಕೆ. ರಾವ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶೋಭಾ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಸರ್ವೋತ್ತಮ ಕುಂದರ್, ಆಂಗ್ಲ ಮಾಧ್ಯಮ ಸಮಿತಿಯ ಅಧ್ಯಕ್ಷರಾದ ಪ್ರವೀಣ್ ಡಿ ಕುಂದರ್, ಪೊಲಿಪು ಮೊಗವೀರ ಸಮಿತಿಯ ಅಧ್ಯಕ್ಷರಾದ ಶೀಲರಾಜ್ ಪುತ್ರನ್, ಗಣೇಶೋತ್ಸವ ಸಮಿತಿ ಅಧ್ಯಕ್ಷರಾದ ಧನಂಜಯ್ ಸಾಲ್ಯಾನ್, ಉಮೇಶ್ ಕುಂದರ್, ಸಂದೀಪ್ ಕುಮಾರ್, ನರೇಶ್ ಮೆಂಡನ್, ದಾಮೋದರ ಸಾಲ್ಯಾನ್ ಹಾಗೂ ಶಾಲಾ ಶಿಕ್ಷಕ, ಶಿಕ್ಷಕಿಯರು ಉಪಸ್ಥಿತರಿದ್ದರು.

ಹಂಪನಕಟ್ಟೆ ವಿವಿ ಕಾಲೇಜಿನಲ್ಲಿ ಮಾದಕ ದ್ರವ್ಯ ಜಾಗೃತಿ ಕಾರ್ಯಕ್ರಮ



ಮಂಗಳೂರು: ಮೂಲತ್ವ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್, ಸೇವಾ ಭಾರತಿ ಕರ್ನಾಟಕ, ಮಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಕೇಶವ ಸ್ಮೃತಿ ಸಂವರ್ಧನ ಸಮಿತಿ ಮಂಗಳೂರು ಜಂಟಿ ಆಶ್ರಯದಲ್ಲಿ ಮಾದಕ ದ್ರವ್ಯ ಜಾಗೃತಿ ಕಾರ್ಯಕ್ರಮ ಮಂಗಳೂರು ಹಂಪನಕಟ್ಟೆಯ ವಿಶ್ವವಿದ್ಯಾಲಯ ಕಾಲೇಜಿನ ಸಭಾಂಗಣದಲ್ಲಿ ಜರುಗಿತು.

ವಿವಿ ಕಾಲೇಜು ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಸೇವಾ ಭಾರತಿಯ ಕೆ. ಚೆನ್ನಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮೂಲತ್ವ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಪ್ರಕಾಶ್ ಕೋಟ್ಯಾನ್, ಕೇಶವ ಸ್ಮೃತಿ ಸಂವರ್ಧನ ಸಮಿತಿಯ ಗಜಾನನ ಪೈ, ಮಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಸಂಯೋಜಕ ಪ್ರೊ. ಶೇಷಪ್ಪ ಅಮೀನ್ ಉಪಸ್ಥಿತರಿದ್ದರು. ಡಾ. ಕುಸುಮ್ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಮಾದಕ ದ್ರವ್ಯ ವ್ಯಸನ ತ್ಯಜಿಸಿದ ವ್ಯಕ್ತಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಸುಮಾರು 40 ಕಾಲೇಜಿನ ಎನ್‌ಎಸ್‌ಎಸ್‌ನ ಅಧಿಕಾರಿಗಳು ಭಾಗವಹಿಸಿದ್ದರು. ಶೈನಿ ವಂದಿಸಿದರು.

ಆರೋಗ್ಯ ಭಾರತಿ ಅಭ್ಯಾಸ ವರ್ಗದಲ್ಲಿ ವಿವಿಧ ಮಾಹಿತಿ



ಮಂಗಳೂರು: ಆರೋಗ್ಯ ಭಾರತಿ ಮಂಗಳೂರು ವಿಭಾಗದ ಅಭ್ಯಾಸ ವರ್ಗ ಮಂಗಳೂರಿನ ಸಂಘನಿಕೇತನದ ನೂತನ ಸಭಾಂಗಣದಲ್ಲಿ ನಡೆಯಿತು.

ವಿಭಾಗ ಸಂಯೋಜಕ ಪುರುಷೋತ್ತಮ ದೇವಸ್ಯರಿಂದ ಪ್ರಾರ್ಥನೆಯಿಂದ ಅಭ್ಯಾಸವರ್ಗದ ಸಭೆ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾದ ಡಾ.ಗೌತಮ ಕುಳವರ್ಮ, ಔಷಧೀಯ ತಯಾರಕರಾದ ಉದ್ಯಮಿ ಪ್ರಮೋದ ಹೆಗ್ಡೆ ಮತ್ತು ಡಾ. ಪುರುಷೋತ್ತಮ ರಾಜು,ರಾಜ್ಯ ಕಾರ್ಯಾಧ್ಯಕ್ಷ ಮತ್ತು ಉಪಾಧ್ಯಕ್ಷ ಡಾ.ಮುರಲಿ ಮೋಹನ ಚೂಂತಾರು, ದಕ್ಷಿಣ ಪ್ರಾಂತ ಅಧ್ಯಕ್ಷರು ಮತ್ತು ರಾಘವೇಂದ್ರ ರಾವ್ ಜೀ – ರಾಜ್ಯ ಪ್ರಾಂತ ಕಾರ್ಯದರ್ಶಿ ಇವರಿಂದ ದೀಪಪ್ರಜ್ವಲನ ಮತ್ತು ಪುಷ್ಪಾಂಜಲಿ ನಡೆಯಿತು.

ರಾಜ್ಯ ಕಾರ್ಯದರ್ಶಿ ರಾಘವೇಂದ್ರ ರಾವ್ ಆರೋಗ್ಯ ಭಾರತಿಯ ಉದ್ದೇಶ ಮತ್ತು ಚಟುವಟಿಕೆಗಳ ಪರಿಚಯ ನೀಡಿದರು. ಡಾ ಮುರಲಿ ಮೋಹನ ಚೂಂತಾರು ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಅಭ್ಯಾಸ ವರ್ಗದ ಮೊದಲ ಅವಧಿಯಲ್ಲಿ ಚಂದ್ರಹಾಸ ಅವರು ಪರ್ಯಾವರಣ ಸಂರಕ್ಷಣೆಯ ವಿಚಾರವನ್ನು ಪವರ್ ಪಾಯಿಂಟ್ ಮಾಧ್ಯಮದಿಂದ ವಿಶದವಾಗಿ ತಿಳಿಸುತ್ತಾ ಪ್ರಮುಖವಾಗಿ ಜಲ ಸಂರಕ್ಷಣೆ ಜಲ ಸಂವರ್ಧನೆ ಮತ್ತು ಜಲ ಸ್ರೋತಗಳ ಪ್ರದೂಷಣೆ ಮತ್ತು ಈ ಸಮಸ್ಯೆಗಳ ಪರಿಹಾರೋಪಾಯಗಳನ್ನು ವಿವರಿಸಿದರು . ಮಂಗಳೂರು ಜಿಲ್ಲಾ ಕಾರ್ಯದರ್ಶಿ ಉಮೇಶ ಪ್ರಭು ಬನ್ನೂರ್ ಅವರು ಚಂದ್ರಹಾಸರನ್ನು ಪರಿಚಯಿಸಿದರು.

ಎರಡನೇ ಅವಧಿಯ ವಕ್ತಾರ ವಿಶ್ರಾಂತ ಪ್ರಾಂಶುಪಾಲ, ಲೇಖಕ, ಅಂಕಣಕಾರ, ಮೂಲಿಕಾ ತಜ್ಞ ಡಾ.ಸತ್ಯನಾರಾಯಣ ಭಟ್ ಮಾಳ ಅವರನ್ನು ಉಡುಪಿಯ ಜಿಲ್ಲಾ ಕಾರ್ಯದರ್ಶಿ ಪ್ರಭಾಕರ ಭಟ್ ಪರಿಚಯಿಸಿದರು. ಡಾ. ಭಟ್ ಜೀಯವರು ವಾಗ್ಭಟನ ಅಷ್ಟಾಂಗ ಹೃದಯದಿಂದ ರೋಗ ನಿಧಾನ ಮತ್ತು ರೋಗನಿವಾರಣೆ ಬಗ್ಗೆ ಉಲ್ಲೇಖ ಮತ್ತು ಸಭಿಕರು ಕೇಳಿದ ಆರೋಗ್ಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿದರು.

ಮೂರನೇ ಅವಧಿಯಲ್ಲಿ ನಡೆದ ಜಿಲ್ಲಾ ಸಹ ಬೈಠಕ್ ಮತ್ತು ಮುಂದಿನ ವರ್ಷದ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಯಿತು. ಕೊಡಗು ಜಿಲ್ಲಾ ಕಾರ್ಯದರ್ಶಿ ಪ್ರಸಾದ ಗೌಡ , ಮಂಗಳೂರು ಮತ್ತು ಉಡುಪಿ ಜಿಲ್ಲಾ ಕಾರ್ಯದರ್ಶಿಗಳು ಪ್ರಸಕ್ತ ವರ್ಷದಲ್ಲಿ ನಡೆಸಿದ ಕಾರ್ಯಕ್ರಮಗಳು ಮುಂದಿನ ವರ್ಷದ ಯೋಜನೆಗಳನ್ನು ತಿಳಿಸಿದರು.

ಸಹಪ್ರಾಂತ ಕಾರ್ಯದರ್ಶಿ ಸು.ನಾಗರಾಜ್, ಪ್ರಾಂತ ಉಪಾಧ್ಯಕ್ಷ ಡಾ ಮುರಲಿ ಮೋಹನ ಚೂಂತಾರು ಮತ್ತು ರಾಜ್ಯ ಕಾರ್ಯದರ್ಶಿ ರಾಘವೇಂದ್ರ ರಾವ್ ಇವರು ಸಮಾರೋಪವನ್ನು ನಡೆಸಿ ಕೊಟ್ಟರು .

ಮಂಗಳೂರು ಜಿಲ್ಲಾ ಕಾರ್ಯದರ್ಶಿ ಉಮೇಶ ಪ್ರಭು ಬನ್ನೂರ್ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಜಿಲ್ಲಾ ಸಹ ಕಾರ್ಯದರ್ಶಿ ದಿನೇಶಚಂದ್ರ ಗಿರಿ ಧನ್ಯವಾದ ಸಮರ್ಪಣೆ ಮಾಡಿದರು.

ಪುತ್ತೂರು ಮಾರುಕಟ್ಟೆ ಧಾರಣೆ

14-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 445 - 485
ಚೋಲ್ ಅಡಿಕೆ	: 530 - 555
ಡಬಲ್ ಚೋಲ್	: 530 - 555
ಹೊಸ ಪಠೋರ	: 350 - 400
ಹಳೆ ಪಠೋರ	: 375 - 405
ಹೊಸ ಉಳ್ಳಿ	: 120 - 290
ಹಳೆ ಉಳ್ಳಿ	: 110 - 290
ಹೊಸ ಕೋಕಾ	: 325 - 345
ಹಳೆ ಕೋಕಾ	: 325 - 345
ಹೊಸ ಕರಿಗೋಟು	: 235 - 265
ಹಳೆ ಕರಿಗೋಟು	: 235 - 265
ಹಸಿ ಕೊಕ್ಕೋ	: 70 - 100
ಒಣ ಕೊಕ್ಕೋ	: 270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 690

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 226.00
ಆರ್‌ಎಸ್‌ಎಸ್ 2	- 196.00
ಸ್ಕ್ರಾಪ್ 1	- 137.50
ಸ್ಕ್ರಾಪ್ 2	- 125.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-515th) ಡ್ರಾ ಏಪ್ರಿಲ್ 14ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SU 127849 (NEYYATTINKARA)

Cons Prize-Rs: 5000/-
SN 127849 SO 127849 SP 127849 SR 127849
SS 127849 ST 127849 SV 127849 SW 127849
SX 127849 SY 127849 SZ 127849

2nd Prize Rs: 30,00,000/- [30 Lakhs]
SV 538078 (PATTAMBI)

3d Prize Rs: 5,00,000/- [5 Lakhs]
SO 238220 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0267 1238 1526 1565 2438 2553 2955 3468 3516 3527 4799 5195 6055 7008 7667 7864 8117 8290 8667

5th Prize Rs.2,000/-
0423 1426 3131 4112 5169 7832

6th Prize Rs.1,000/-
0015 0059 0375 0519 0984 1370 1945 3448 3707 4051 6135 6181 6611 6907 7070 7129 7157 8199 8235 8265 8387 9450 9527 9542 9900

7th Prize Rs.500/-
0121 0135 0376 0396 0413 0424 0663 0856 0968 1006 1097 1158 1220 1290 1325 1405 1440 1515 1608 1677 1773 2060 2097 2483 2638 2721 3238 3363 3670 4092 4225 4324 4507 4690 4813 4819 4897 5231 5276 5279 5348 5460 5618 5816 5849 6245 6812 6885 7350 7467 7523 7608 7610 7619 7959 8063 8509 8531 8556 8677 8692 8762 8765 8815 9004 9079 9177 9457 9459 9486 9606 9731 9788 9880 9914 9970

8th Prize Rs.200/-
0143 0260 0583 0772 1320 1353 1381 1458 1466 1479 1606 1760 1796 1996 2480 2595 2631 2871 2966 3019 3105 3327 3504 3533 3540 3593 3751 3779 3897 4243 4394 4409 4471 4490 4550 4581 4585 4617 4687 4763 4784 4972 5030 5174 5287 5311 5606 5647 5683 5695 5815 5860 6343 6392 6587 6737 6881 7020 7035 7043 7155 7228 7291 7388 7499 7672 7693 7787 7817 7850 7858 7935 7972 8004 8114 8153 8297 8379 8431 8530 8750 9032 9438 9525 9568 9727 9761 9801 9855 9987

9th Prize Rs.100/-
0181 0192 0306 0311 0326 0343 0393 0527 0667 0735 0778 0792 0804 0814 1043 1067 1088 1159 1215 1303 1323 1335 1350 1477 1556 1566 1605 1781 1788 1865 2063 2106 2159 2299 2342 2410 2430 2468 2601 2711 2735 2753 2754 2895 2929 2967 2972 3026 3028 3091 3120 3125 3405 3545 3594 3641 3678 3710 3742 3756 3814 3822 3830 3880 3918 3945 4041 4168 4352 4432 4462 4623 4706 4718 4742 4901 4934 4938 4958 4988 5256 5277 5316 5340 5431 5438 5452 5491 5896 5934 5994 6244 6249 6290 6330 6341 6344 6513 6623 6690 6868 6869 6952 7131 7154 7239 7308 7311 7486 7510 7526 7640 7655 7660 7685 7752 7806 7836 7924 7951 7963 8076 8082 8366 8405 8492 8538 8573 8587 8606 8702 8759 8851 8861 8909 8912 8917 8941 9011 9019 9066 9234 9252 9385 9674 9762 9766 9819 9948 9985

ಕೆಪಿಸಿಸಿ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ | ಭಾವಚಿತ್ರಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಪುಷ್ಪನಮನ

ಸಂವಿಧಾನ ಕೇವಲ ಪುಸ್ತಕವಲ್ಲ, ಬದುಕಿನ ದಾರಿದೀಪ

ಬೆಂಗಳೂರು: ಈ ದೇಶಕ್ಕೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಕೇವಲ ಪುಸ್ತಕವಲ್ಲ, ಅದು ನಮ್ಮ ಬದುಕಿನ ದಾರಿದೀಪ. ಅಂದು ಭಿನ್ನಾಭಿಪ್ರಾಯಗಳಿದ್ದರೂ, ಅಂಬೇಡ್ಕರ್ ಅವರ ಮೇಧಾಶಕ್ತಿಯನ್ನು ಗುರುತಿಸಿ ಸಂವಿಧಾನ ರಚನೆಯ ಜವಾಬ್ದಾರಿಯನ್ನು ನೀಡಿದ್ದು ಕಾಂಗ್ರೆಸ್ ಪಕ್ಷದ ವಿಶಾಲ ಮನೋಭಾವಕ್ಕೆ ಸಾಕ್ಷಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್‌ರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ವರನ್ನೂ ಒಳಗೊಳ್ಳುವ ಸಮಾನ ಸಮಾಜದ ನಿರ್ಮಾಣವೇ ನೈಜ ಪ್ರಜಾಪ್ರಭುತ್ವದ ಆಶಯ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯೇ ನಮ್ಮ ನಿಜವಾದ ಗುರಿಯಾಗಬೇಕು ಎಂದು ಕರೆ ನೀಡಿದರು.

ಇಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದೇಶದಾದ್ಯಂತ ನಾವು ಅತಿ ಹೆಚ್ಚು ಪ್ರತಿಮೆಗಳನ್ನು ಕಾಣುವುದು ಡಾ. ಬಿ.ಆರ್. ಅಂಬೇಡ್ಕರ್ ಅವರದ್ದೇ. ನಾನಿಲ್ಲಿ ಯಾವುದೇ ದೈವತ್ವವನ್ನು ಹೇಯಾಳಿಸುತ್ತಿಲ್ಲ, ಆದರೆ ಒಬ್ಬ ವ್ಯಕ್ತಿ ತನ್ನ ಜ್ಞಾನ ಮತ್ತು ಹೋರಾಟದಿಂದ ಹೇಗೆ ದೇವರಷ್ಟೇ ಎತ್ತರಕ್ಕೆ ಬೆಳೆಯಬಲ್ಲ ಎಂಬುದಕ್ಕೆ ಬಾಬಾಸಾಹೇಬರೇ ನಿದರ್ಶನ ಎಂದು ಹೇಳಿದರು.



ಸಂವಿಧಾನ ಶಕ್ತಿಯಿಂದಲೇ ಸಿಎಂ ಆಗಿದ್ದೇನೆ

ದೇಶದಲ್ಲಿದ್ದ ವರ್ಣ ವ್ಯವಸ್ಥೆ ವಿರುದ್ಧ ಅಂಬೇಡ್ಕರ್ ಅವರು ಹೋರಾಡಿದರು. ಹಿಂದೂ ಧರ್ಮದಲ್ಲಿದ್ದಂತಹ ಅಸ್ಪೃಷ್ಯತೆಗಳನ್ನು ಸುಧಾರಿಸಲು ಬಹಳ ಪ್ರಯತ್ನಿಸಿ, ಮನುಶಾಸ್ತ್ರವನ್ನು ಸುಟ್ಟರು. ಅವರು ಬಾಲ್ಯದಿಂದಲೇ ಅಸ್ಪೃಶ್ಯತೆಯ ಕರಾಳ ಅನುಭವ ಹೊಂದಿದ್ದ ಕಾರಣ, ದೀನ ದಲಿತರಿಗೆ ಸಮಾನ ಅವಕಾಶಗಳನ್ನು ನೀಡಲು ಪ್ರಯತ್ನಿಸಿದರು. ಸಂವಿಧಾನದ ಶಕ್ತಿಯಿಂದಲೇ ನಾನು ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅಂಬೇಡ್ಕರ್ ಜಗತ್ತಿಗೆ ನಾಯಕ: ಸಿಎಂ ಸಿದ್ದರಾಮಯ್ಯ

ಬಾಬಾಸಾಹೇಬ್ ಅಂಬೇಡ್ಕರ್ ರವರು ಕೇವಲ ದಲಿತರಿಗೆ ಮಾತ್ರವಲ್ಲದೇ, ಇಡೀ ಜಗತ್ತಿನ ನಾಯಕರಾಗಿದ್ದರು. ಭಾರತಕ್ಕೆ ಅತ್ಯಂತ ಯೋಗ್ಯವಾದ ಸಂವಿಧಾನ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಂಗಳವಾರ ಕೆಪಿಸಿಸಿ ವತಿಯಿಂದ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ಅಂಗವಾಗಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. 1950 ಜನವರಿ 26ರಂದು ಭಾರತದ ಸಂವಿಧಾನ ಜಾರಿಗೆ ಬರಲಿದೆ. ಒಬ್ಬ ವ್ಯಕ್ತಿ , ಒಂದು ವೋಟು, ಒಂದು ಮೌಲ್ಯ ಎಂದು ಸಂವಿಧಾನ ತಿಳಿಸಿದ್ದು, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಮೇಲೆ ಸಂವಿಧಾನ ನಿಂತಿದೆ. ಸಂವಿಧಾನ ಜಾರಿಯಾಗಿ 76 ವರ್ಷಗಳು ಕಳೆದರೂ ಸಮಾಜದಲ್ಲಿನ ಅಸಮಾನತೆ ಹೋಗಿಲ್ಲ ಎಂದರು.

ಮಾಲಾರ್ಪಣೆ



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಕೇಂದ್ರ ಕಚೇರಿಯಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾಲಾರ್ಪಣೆ ಮಾಡಿದರು. ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುಷ್ಮಾ ಗೋಡಬೋಲೆ, ವೆಂಕಟಾಚಲಪತಿ ಆರ್, ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್, ರಮೇಶ್ ಡಿ.ಎಸ್ ಸೇರಿದಂತೆ ಹಲವರಿದ್ದರು.

ಕಿರುಸುದ್ದಿ

ಏ.18ರಂದು ಚೈತ್ರೋತ್ಸವ ಭಾವಗೀತೆಗಳ ಗಾಯನ

ಬೆಂಗಳೂರು: ಗುಬ್ಬಿಗೂಡು ವತಿಯಿಂದ ಏ.18ರಂದು ಸಂಜೆ 5.30 ರಿಂದ 8.30ವರೆಗೆ ನೆಲಮಂಗಲದ ತೊರೆಬೈರಸಂದ್ರದಲ್ಲಿರುವ ಗುಬ್ಬಿಗೂಡು ರೆಸಾರ್ಟ್‌ನಲ್ಲಿ ಚೈತ್ರಮಾಸದ ಚೆಲುವು ಹೆಚ್ಚಿಸಲಿರುವ ಚೈತ್ರೋತ್ಸವ ಭಾವಗೀತೆಗಳ ಗಾಯನ ಸಂಜೆಯನ್ನು ಹಮ್ಮಿಕೊಂಳ್ಳಲಾಗಿದೆ.

ಮಹೇಶ್ ಗುಬ್ಬಿಗೂಡು, ಬಿ.ಎಸ್. ಲಿಂಗದೇವರು ಹಾಗೂ ಗುರುಪ್ರಸಾದ್ ಮುದ್ರಾಡಿ ಅವರ ಸಾರಥ್ಯದಲ್ಲಿ ಗಾಯಕ ನಾಗಚಂದ್ರಿಕಾ ಭಟ್, ವಿನಯ ನಾಡಿಗ್ ಗೀತೆಗಳನ್ನು ಹಾಡಲಿದ್ದು, ಪರಿಣಿತ ಸಹವಾದ್ಯ ಕಲಾವಿದರು ಜತೆಗಿರುವರು.

ದಮನಿತರ ಆಶಾಕಿರಣ ಸಂವಿಧಾನ



ಬೆಂಗಳೂರು: ಹೆಣ್ಣು ಮಕ್ಕಳ ಶೋಷಿತರು, ದಮನಿತರು, ರೈತರು, ನೊಂದವರಿಗೆ ಸಮಾನ ಅವಕಾಶ ದೊರಕಿಸಿ ಕೊಡುವಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ. ಸಂವಿಧಾನವನ್ನು ರಚಿಸಿದರಿಂದ ಕಾರಣವಾಗಿದೆ ಎಂದು ಬಿಜೆಪಿ ನಾಯಕ ಎನ್ .ಸಿ.ಕುಮಾರ್ ಹೇಳಿದರು.

ನಾಗದೇವನಹಳ್ಳಿ ಬಳಿಯ ಜ್ಞಾನಭಾರತಿ 1ನೇ ಹಂತದ ಕರುಮಾರಿಯಮ್ಮ ಬಡಾವಣೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತೋತ್ಸವ ಕಾರ್ಯದಲ್ಲಿ ಮಾತನಾಡಿದ ಅವರು, ದೇಶಕ್ಕೆ ಸಮಾನತೆಯ ಬೆಳಕನ್ನು ನೀಡಿದ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಲಾಗಿದೆ. ನಾವೆಲ್ಲರೂ ಅವರ ಆದರ್ಶ, ತತ್ವ, ಮಾರ್ಗದರ್ಶನದಲ್ಲಿ ನಡೆದಾಗ ಅತ್ಯಂತ ಬಹುದೊಡ್ಡ ಸಂವಿಧಾನಕ್ಕೆ ಆದರಲ್ಲಿಯೂ ಅಂಬೇಡ್ಕರ್ ಅವರಿಗೆ ನೀಡುವ ಗೌರವ ಎಂದು ಬಣ್ಣಿಸಿದರು. ಸಿ.ವೇಲು, ತಮ್ಮಯ್ಯಣ್ಣ, ರಾಮಕೃಷ್ಣ ವಿಜಯಲಕ್ಷ್ಮಿ, ಸುಗಂಧಿ, ಪ್ರಸನ್ನ ನಾಯಕ್, ಮಂಜುನಾಥ್, ಡಿ.ರವಿ ಸೇರಿದಂತೆ ಇತರರಿದ್ದರು.

ಇಂದು ವಾಹನಗಳ ಬಹಿರಂಗ ಹರಾಜು

ಬೆಂಗಳೂರು: ಬಾಗಲೂರು ಪೊಲೀಸ್ ಠಾಣೆಯಲ್ಲಿ ವಾರಸುದಾರರಿಲ್ಲದ ವಾಹನಗಳ ಬಹಿರಂಗ ಹರಾಜು ಪ್ರಕ್ರಿಯೆ ನಡೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಠಾಣಾ ವ್ಯಾಪ್ತಿಯಲ್ಲಿ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ ಒಟ್ಟು 19ದ್ವಿಚಕ್ರ ವಾಹನಗಳು ಮತ್ತು 03ನಾಲ್ಕು ಚಕ್ರದ ವಾಹನಗಳ ವಾರಸುದಾರರು ಪತ್ತೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದಂತೆ ಈ ವಾಹನವನ್ನು ಸಾರ್ವಜನಿಕವಾಗಿ ಹರಾಜು ಹಾಕಲು ನಿರ್ಧರಿಸಲಾಗಿದೆ.

ಹರಾಜು ಪ್ರಕ್ರಿಯೆಯು ಏ.15ರಂದು ಬೆಳಗ್ಗೆ 9ಗಂಟೆಗೆ ಬಾಗಲೂರು ಪೊಲೀಸ್ ಠಾಣೆಯ ಆವರಣದಲ್ಲಿ ಜರುಗಲಿದೆ. ಆಸಕ್ತಿಯುಳ್ಳ ಸಾರ್ವಜನಿಕರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ವಾಹನಗಳನ್ನು ಖರೀದಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ದೂರವಾಣಿ ಸಂಖ್ಯೆ 080 28469100 ಅಥವಾ 9480801418 ಅನ್ನು ಸಂಪರ್ಕಿಸಬಹುದು.

ಸರಕಾರದಿಂದ ಜನಗಣತಿ ಕಾರ್ಯ ಆರಂಭ | ಮೂರ್‍ನಾಲ್ಕು ತಿಂಗಳು ಮುಂದೂಡಲು ಜಿಬಿಎ ಚಿಂತನೆ

ಸುಪ್ರೀಂ ಗಡುವಿನೊಳಗೆ ಚುನಾವಣೆ ಅಸಾಧ್ಯ

ಬೆಂಗಳೂರು: ಸುಪ್ರೀಂಕೋರ್ಟ್ ನೀಡಿದ ಗಡುವಿನೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಪಂಚ ಪಾಲಿಕೆಗಳ ಚುನಾವಣೆ ನಡೆಯುವುದು ಅನುಮಾನವಾಗಿದೆ. ಬರುವ ಜೂನ್ 30 ಒಳಗೆ ಜಿಬಿಎ ಚುನಾವಣೆ ಮುಗಿಸಿ ವರದಿ ನೀಡುವಂತೆ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ಆದರೆ ಈಗ ಕೇಂದ್ರ ಸರ್ಕಾರದಿಂದ ಜನಗಣತಿ ಕಾರ್ಯ ನಡೆಯುತ್ತಿದೆ. ಇದೇ ಕಾರಣವನ್ನು ಇಟ್ಟುಕೊಂಡು ಜಿಬಿಎ ಚುನಾವಣೆ ಮೂರರಿಂದ ನಾಲ್ಕು ತಿಂಗಳ ಕಾಲ ಮುಂದೂಡಲು ಪ್ರಯತ್ನ ನಡೆಯುತ್ತಿದೆ ಎನ್ನಲಾಗುತ್ತಿದೆ.

ಮೂರು ತಿಂಗಳು ಚುನಾವಣೆ ಮುಂದೂಡಲು ಮನವಿ: ಜನಗಣತಿ ಕಾರ್ಯಕ್ಕೆ ಸರ್ಕಾರ ಹಾಗೂ ಜಿಬಿಎ ಸಿಬ್ಬಂದಿಗಳನ್ನು ನಿಯೋಜಿಸಿರುವುದರಿಂದ ಚುನಾವಣೆಯನ್ನು ನಡೆಸಲು ಅಗತ್ಯ ಸಿಬ್ಬಂದಿ ಕೊರತೆ ಉಂಟಾಗುವ ಸಾಧ್ಯತೆ ಇದೆ. ಈಗಾಗಲೇ ಹಲವಾರು ಸಿಬ್ಬಂದಿಗಳು ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದರಿಂದ ಚುನಾವಣಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವುದು ಕಷ್ಟಕರವಾಗಲಿದೆ ಎಂದು ನಗರಾಭಿವೃದ್ಧಿ ಇಲಾಖೆಗೆ ಜಿಬಿಎ ಪತ್ರ ಬರೆಯಲು ಸಿದ್ಧತೆ ನಡೆಸಿದೆ.



ಇದರ ಜತೆಗೆ ವಾರ್ಡ್‌ಗಳ ವಿಂಗಡಣೆ ಕಾರ್ಯ ಮುಗಿದಿದ್ದರೂ, ಗಡಿ ಗುರುತಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಹೆಚ್ಚಿನ ಕಾಲಾವಕಾಶ ಅಗತ್ಯವಿರುವುದರಿಂದ, ಚುನಾವಣೆಯ ವೇಳಾಪಟ್ಟಿಗೆ ಮತ್ತಷ್ಟು ಸಮಯಬೇಕು. ಆದ್ದರಿಂದ ಜಿಬಿಎ ಚುನಾವಣೆಯನ್ನು ಕನಿಷ್ಠ ಎರಡ್ಮೂರು ತಿಂಗಳುಗಳ ಕಾಲ ಮುಂದೂಡಲು ಅನುಮತಿ ನೀಡುವಂತೆ ಅಂದರೆ ಆಗಸ್ಟ್ ಅಂತ್ಯದಲ್ಲಿ ಅಥವಾ ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಸಲು ಅವಕಾಶ ನೀಡುವಂತೆ ಪತ್ರದಲ್ಲಿ ಮನವಿ ಮಾಡುವ ಸಾಧ್ಯತೆ ಇದೆ.


ಜಿಬಿಎ ಚುನಾವಣೆ ಮುಂದೂಡುವಂತೆ ಪತ್ರ ಬರೆದಲ್ಲಿ ಅದೇ ಪತ್ರವನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿ ಚುನಾವಣೆಯನ್ನು ಮತ್ತೆ ಮುಂದಕ್ಕೆ ಹಾಕಿಸುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಲಿದೆ ಎಂದು ಹೇಳಲಾಗುತ್ತಿದೆ. ಒಂದು ವೇಳೆ ಸುಪ್ರೀಂ ಕೋರ್ಟ್ ಇದನ್ನು ಒಪ್ಪದೆ ತುರ್ತಾಗಿ ಚುನಾವಣೆ ನಡೆಯಬೇಕು ಎಂದು ಹೇಳಿದಲ್ಲಿ ಮಾತ್ರ ಜೂನ್ ತಿಂಗಳಿನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಹೊರತು, ಇಲ್ಲವಾದಲ್ಲಿ ಜಿಬಿಎ ಚುನಾವಣೆ ಮರೀಚಿಕೆಯಾಗಿಯೇ ಉಳಿಯಲಿದೆ.

ಚುನಾವಣೆ ನಡೆಯುತ್ತದೆ ನಡೆಯಲ್ಲಾ ಎಂಬ ಚರ್ಚೆಯ ನಡುವೆ ರಾಜ್ಯ ಚುನಾವಣಾ ಆಯೋಗ ಹಾಗೂ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸೇರಿದಂತೆ ಸಾವಿರಾರು ಚುನಾವಣಾ ಸ್ಪರ್ಧಾಕಾಂಕ್ಷಿಗಳು ಹುಮ್ಮಸ್ಸಿನಿಂದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಚುನಾವಣೆ ಮಾತ್ರ ಯಾವಾಗ? ಎನ್ನುವುದು ಪ್ರಶ್ನೆಯಾಗಿದೆ.

- ಜನಗಣತಿ ಕಾರ್ಯ ಹಿನ್ನೆಲೆ ಜಿಬಿಎ ಚುನಾವಣೆ ಅನುಮಾನ?
- ಜಿಬಿಎ ಚುನಾವಣೆಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ಮನವಿ?

ಸಂವಿಧಾನದ 74 ನೇ ತಿದ್ದುಪಡಿಗಿಲ್ಲ ಬೆಲೆ

ಭಾರತದ ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ವಾಯತ್ತ ಆಡಳಿತವನ್ನು ಬಲಪಡಿಸಲು ಮತ್ತು ಸಾಂವಿಧಾನಿಕ ಮಾನ್ಯತೆ ನೀಡಲು ಜಾರಿಗೆರಿಗೆ ತರಲಾಗಿದೆ. ಈ ತಿದ್ದುಪಡಿಯ ಪ್ರಕಾರ ಯಾವುದೇ ಸ್ಥಳೀಯ ಸಂಸ್ಥೆಗಳು ಅಧಿಕಾರಿಗಳ ಆಡಳಿತದಲ್ಲಿ 180 ದಿನಗಳಿಗಿಂತ ಹೆಚ್ಚು ಕಾಲ ಇರುವಂತಿಲ್ಲ. ಜನಪ್ರತಿನಿಧಿಗಳ ಆಡಳಿತ ಕಡ್ಡಾಯವಾಗಿರಬೇಕು. ಆದರೆ ಜಿಬಿಎ ವಿಚಾರದಲ್ಲಿ ಇದು ಪಾಲನೆಯಾಗುತ್ತಿಲ್ಲ.



- ನಗರಾಭಿವೃದ್ಧಿ ಇಲಾಖೆಗೆ ಜಿಬಿಎ ಪತ್ರ ಬರೆಯಲು ಸಿದ್ಧತೆ
- ಚುನಾವಣೆಯ ವೇಳಾಪಟ್ಟಿಗೆ ಮತ್ತಷ್ಟು ಸಮಯಬೇಕು.

ಜಿಕೆವಿಕೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ

ಸಾಮಾಜಿಕ ಸ್ವಾತಂತ್ರ್ಯ ಇನ್ನೂ ದಕ್ಕಿಲ್ಲ

ಬೆಂಗಳೂರು: ಇಂದು ನಮಗೆಲ್ಲ ರಾಜಕೀಯ ಸ್ವತಂತ್ರ್ಯ ಸಿಕ್ಕಿದ್ದರು, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಇನ್ನೂ ಸಂಪೂರ್ಣವಾಗಿ ದಕ್ಕಿಲ್ಲ ಎಂದು ಡಾ.ವಡ್ಡಗೆರೆ ನಾಗರಾಜಯ್ಯ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆಯಲ್ಲಿ ಆಯೋಜಿಸಲಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಬುದ್ಧ ಮತ್ತು ಬಸವಣ್ಣನವರ ಚಿಂತನೆಗಳು ಅಂಬೇಡ್ಕರ್ ರವರ ಮೇಲೆ ಗಾಡ ಪ್ರಭಾವ ಬೀರಿದ್ದವು. ಇಂದು ನಾವೆಲ್ಲ ರಾಜಕೀಯ ಸ್ವಾತಂತ್ರ್ಯ ಪಡೆದುಕೊಂಡಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಇನ್ನು ಸಂಪೂರ್ಣವಾಗಿ ದಕ್ಕಿಲ್ಲ ಎಂದು ವಿಷಾದಿಸಿದರು.

ಅಂಬೇಡ್ಕರ್ ಅವರ ತತ್ವಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿದ್ದು, ಶಿಕ್ಷಣ ಮತ್ತು



ಸಮಾನತೆಗಾಗಿ ಅವರ ಸಂದೇಶವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕುಲಪತಿ ಡಾ.ಎಸ್.ವಿ ಸುರೇಶ್ ಮಾತನಾಡಿ, ಅಂಬೇಡ್ಕರ್ ರವರ ಚಿಂತನೆಗಳು ಸಾಮಾಜಿಕ ಹೋರಾಟ ಎಂದಿಗೂ ನಮಗೆ ಪ್ರೇರಣೆಯಾಗಿದೆ. ಅವರು ಅಂದಿನ ದಿನದಲ್ಲಿಯೇ ಮಹಿಳೆಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವಲ್ಲಿ ಹೊರಟ ಮಾಡಿ, ತಮ್ಮ ಮಂತ್ರಿ ಸ್ಥಾನವನ್ನು ತ್ಯಜಿಸಿ ತಮ್ಮ ಭದ್ಧತೆಯನ್ನು ಪ್ರದರ್ಶಿಸಿದ್ದು ಗಮನಾರ್ಹ ವಿಷಯ ಎಂದು ತಿಳಿಸಿದರು.

ಒಳಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ಬಳಿಕ ಎಸ್‌ಟಿಎಸ್ ಟೀಕೆ

ಜೆಡಿಎಸ್ ಮುಳುಗುತ್ತಿರುವ ಹಡಗು

ಕೆಂಗೇರಿ: ಜೆಡಿಎಸ್ ಮುಳುಗುತ್ತಿರುವ ಹಡಗು ಭಯದ ಭೀತಿಯಲ್ಲಿದ್ದಾರೆ ಸಂಸದ ಎಚ್.ಡಿ. ಕುಮಾರಸ್ವಾಮಿ ಎಂದು ಶಾಸಕ ಎಸ್. ಟಿ.ಸೋಮಶೇಖರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ನಾಗದೇವನಹಳ್ಳಿ ವಾರ್ಡಿನ ಕೆಪಿಎಸ್ ಸಿ ಲೇಔಟ್, ಭುವನೇಶ್ವರಿ ನಗರದಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಧರ್ಮಸಿಂಗ್ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ತಮ್ಮ ಸ್ವಾರ್ಥಕೋಸ್ಕರ ಸರ್ಕಾರವನ್ನು ತೆಗೆದ ಕರ್ಮ ನಿಮ್ಮನ್ನು ಕಾಡುತ್ತಿದೆ. ಆ ಒಂದು ಭಯಕ್ಕೆ ಕೊಮ್ಮಘಟ್ಟ ನೈಸ್ ಗ್ರೌಂಡ್‌ನಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. ಜೆಡಿಎಸ್ ಪಕ್ಷ ಮುಳುಗುತ್ತಿರುವ ಹಡಗಿನಲ್ಲಿ ಸಾಗುತ್ತಿದೆ ಎಂದು ಟಾಂಗ್ ನೀಡಿದರು.



ಕಾಂಗ್ರೆಸ್, ಜೆಡಿಎಸ್ ಶಾಸಕರ ಕಷ್ಟ -ಸುಖ ಕೇಳಿದ್ರೆ ಯಾರು ಬಿಜೆಪಿಗೆ ಹೋಗ್ತಾ ಇರಲಿಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನಮ್ಮ ಕಷ್ಟ ಸುಖ ಕೇಳದೆ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿ ಎಲ್ಲಾ ವ್ಯವಹಾರಗಳನ್ನು ಅಲ್ಲಿಯೇ ನಡೆಸುತ್ತಿದ್ದ ನೀವು, ನಮ್ಮ ಕಷ್ಟಗಳಿಗೆ ಸ್ಪಂದಿಸದೆ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡದೆ ಇದ್ದ ಕಾರಣಕ್ಕೆ ನಾವು ಬಿಜೆಪಿ ಪಕ್ಷಕ್ಕೆ ಹೋಗುವ ಪರಿಸ್ಥಿತಿ ಬಂದಿತು. ಕಾಂಗ್ರೆಸ್ ಶಾಸಕರು ಮತ್ತು ಸೋಮಶೇಖರ್ ಒಬ್ಬರೇ ಸಮ್ಮಿಶ್ರ ಸರ್ಕಾರವನ್ನು ತೆಗೆಯಲಿಲ್ಲ ನಿಮ್ಮ ಜೆಡಿಎಸ್ ಶಾಸಕರು ಇದ್ದರು ಎಂಬುದನ್ನು ಮರೆಯಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಬಿಎ ಚುನಾವಣೆ ಸಮೀಪಿಸುತ್ತಿದ್ದಂತೆ ಕಾರ್ಯಕ್ರಮ ಆಯೋಜನೆ ಮಾಡುವುದು ಇವರ ಜಾಯಮಾನ. ಚುನಾವಣೆ ಸಂದರ್ಭದಲ್ಲಿ ಕ್ಷೇತ್ರಕ್ಕೆ ಬರುವ ಜಾಯಮಾನ ನನ್ನದಲ್ಲ. ಕ್ಷೇತ್ರದ ಜನರ ಕಷ್ಟ-ಸುಖಕ್ಕೆ ಸ್ಪಂದಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ರಾಜ್ಯಕ್ಕೆ ಬಂದಂತಹ ಸಂದರ್ಭದಲ್ಲಿ 1ಲಕ್ಷ ಕ್ಕೂ ಹೆಚ್ಚು ಜನರನ್ನು ಸೇರಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದೇನೆ. ಈಗಲೂ ಪ್ರತಿ ದಿನ ಕ್ಷೇತ್ರದಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ ಎಂದು ವಾಗ್ದಾಳಿ ನಡೆಸಿದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಪ್ರಯುಕ್ತ ನಗರದ ಪಂಚಾಮೃತ ಸುಗಮ ಸಂಗೀತ ಅಕಾಡೆಮಿ ಶಂಕರಪುರಂನಲ್ಲಿರುವ ಶಂಕರ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ಆಯೋಜಿಸಿತು. ಸಂಸ್ಥೆ ಸದಸ್ಯರು, ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಸಹೋದ್ಯೋಗಿಗೆ ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ಬೆಂಗಳೂರು: ಕೆಲಸ ಮಾಡುವ ಸ್ಥಳದಲ್ಲಿ ಮಹಿಳಾ ಉದ್ಯೋಗಿಗೆ ಲೈಂಗಿಕ ಕಿರುಕುಳ ನೀಡಿ, ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಖಾಸಗಿ ಆಸ್ಪತ್ರೆಯ ಮುಖ್ಯಸ್ಥನ ವಿರುದ್ಧ ಎಚ್ ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ. ರಾಕೇಶ್ ಜಯಪ್ರಕಾಶ್ ಎಂಬವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ದೂರುದಾರೆ ಲಕ್ಷ್ಮಿ (30) ಅವರು ಕಳೆದ 2025ರ ಜುಲೈನಿಂದ ಈ ಆಸ್ಪತ್ರೆಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಆಸ್ಪತ್ರೆಯ ಮುಖ್ಯಸ್ಥರಾದ ರಾಕೇಶ್ ಅವರು ಕೆಲಸದ ಸಮಯದಲ್ಲಿ ಆಗಾಗ್ಗೆ ಲಕ್ಷ್ಮೀ ಅವರ ಬಳಿ ಬಂದು, ಅವರ ಉಡುಪಿನ ಬಗ್ಗೆ ಕೀಳಾಗಿ ಮಾತನಾಡಿ ಅನುಚಿತವಾಗಿ ವರ್ತಿಸುತ್ತಿದ್ದರು ಎಂದು ದೂರಲಾಗಿದೆ. ಈ ಬಗ್ಗೆ ದೂರುದಾರೆ ಹಲವು ಬಾರಿ ಎಚ್ಚರಿಕೆ ನೀಡಿದ್ದರೂ ಆರೋಪಿ ತನ್ನ ವರ್ತನೆ ತಿದ್ದಿಕೊಂಡಿರಲಿಲ್ಲ.

ಏ.1ರಂದು ಕೆಲಸ ಮುಗಿಸಿ ಮನೆಗೆ ಹೋದ ನಂತರ ಆರೋಪಿ ರಾಕೇಶ್ ತನ್ನ ಮೊಬೈಲ್ ಸಂಖ್ಯೆಯಿಂದ ದೂರುದಾರೆಗೆ ಮಿಸ್ ಯೂ ಎಂದು ಸಂದೇಶ ಕಳುಹಿಸಿದ್ದನು. ನಂತರ ಏ.3ರಂದು ದೂರುದಾರೆ ತನ್ನ ಪತಿಯೊಂದಿಗೆ ಮನೆಗೆ ಹೋಗುತ್ತಿದ್ದಾಗ ಕರೆ ಮಾಡಿದ ಆರೋಪಿ, ಅವರ ರೂಪದ ಬಗ್ಗೆ ಅಸಭ್ಯವಾಗಿ ಮಾತನಾಡಿದ್ದಾನೆ. ಈ ಸಂಭಾಷಣೆಯನ್ನು ದೂರುದಾರರ ಪತಿ ಕೇಳಿಸಿಕೊಂಡಿದ್ದರಿಂದ ದಂಪತಿ ನಡುವೆ ಜಗಳವಾಗಿದ್ದು, ಈ ಹಿನ್ನೆಲೆಯಲ್ಲಿ ಏ.7ರಿಂದ ಲಕ್ಷ್ಮೀ ಅವರು ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದಾರೆ.

ತನ್ನ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಂಡ ಆರೋಪಿಯ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಮಹಿಳೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಿಜೆಪಿ ಮುಖಂಡ ಡಾ.ನಿರಂತರ ಗಣೇಶ್ ಹೇಳಿಕೆ

ಮೀಸಲಿನಿಂದ ನಾರಿಯರಿಗೆ ರಾಜಕೀಯ ಬಲ

ಬೆಂಗಳೂರು: ಮಹಿಳೆಯರಿಗೆ ರಾಜಕೀಯದಲ್ಲಿ ಶೇ.33 ಮೀಸಲಾತಿ ಕಲ್ಪಿಸುವುದರಿಂದ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ನಾರಿ ಶಕ್ತಿಗೆ ಬಲ ಸಿಗಲಿದೆ. ಮಹಿಳೆಯರ ಧ್ವನಿ ಆಡಳಿತ ವ್ಯವಸ್ಥೆಯಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸುವಂತಾ ಗುತ್ತದೆ. ಇದರಿಂದ ಮಹಿಳೆಯರು ತಮ್ಮ ಸಮಸ್ಯೆಗಳು ಹಾಗೂ ಅಗತ್ಯಗಳನ್ನು ನೇರವಾಗಿ ಮಂಡಿಸಲು ಸಾಧ್ಯವಾಗುತ್ತದೆ ಎಂದು ಬಿಜೆಪಿ ಮುಖಂಡ ಡಾ.ನಿರಂತರ ಗಣೇಶ್ ಹೇಳಿದರು.



ನಾರಿ ಶಕ್ತಿ ವಂದನ್ ಅಧಿನಿಯಮ ಕುರಿತು ಮಾತನಾಡಿ, ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹಿಳೆಯರ ಸಬಲೀಕರಣ ಮತ್ತು ಸಮಾನ ಪ್ರತಿನಿಧಿತ್ವವನ್ನು ಬಲಪಡಿಸುವ ದಿಕ್ಕಿನಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮ ಜಾರಿಗೆ ಬಂದಿರುವುದು ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಮಹಿಳೆಯರು ದೇಶದ ಅಭಿವೃದ್ಧಿಯಲ್ಲಿ ಸಮಾನ ಪಾತ್ರವಹಿಸುವಂತಾಗಲು ಈ ಕ್ರಮ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಮಹಿಳಾ ಮೀಸಲಾತಿ ಪರಿಣಾಮವಾಗಿಅನೇಕ ಮಹಿಳೆಯರು ಯಶಸ್ವಿ ನಾಯಕಿಯರಾಗಿ ಹೊರಹೊಮ್ಮಿರುವುದು ಗಮನಾರ್ಹವಾಗಿದೆ. ಇದೇ ಮಾದರಿಯನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿಯೂ ವಿಸ್ತರಿಸುವುದು ಸಮಯೋಚಿತವಾಗಿದೆ ಎಂದರು.

ಸ್ವಾತಂತ್ರ್ಯದ ಬಳಿಕ ಮೊದಲ ಸಂಸತ್ತಿನಲ್ಲಿ ಮಹಿಳೆಯರ ಭಾಗವಹಿಸುವಿಕೆ ಕೇವಲ ಶೇ.4 ಇತ್ತು. ನೀತಿ ನಿಯಮಗಳ ರೂಪಿಸುವಿಕೆಯಲ್ಲಿ ಮಹಿಳೆಯರ ಧ್ವನಿ ದುರ್ಬಲವಾಗಿತ್ತು. ಮಹಿಳಾ ಮೀಸಲಾತಿ ಕೇವಲ ರಾಜಕೀಯ ಹಕ್ಕುಗಳ ವಿಸ್ತರಣೆ ಮಾತ್ರವಲ್ಲ, ಅದು ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸುವ ಮತ್ತು ಸಮಗ್ರ ಅಭಿವೃದ್ಧಿಗೆ ದಾರಿ ಮಾಡಿಕೊಡುವ ಮಹತ್ವದ ಸಾಧನವಾಗಿದೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ದೃಢ ಸಂಕಲ್ಪದಿಂದಾಗಿ ನಾರಿ ಶಕ್ತಿ ದೇಶದ ನೇತೃತ್ವ ವಹಿಸುತ್ತಿದೆ. ಸಂಸತ್ ಮತ್ತು ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಶೇ.33 ಕ್ಕೆ ಏರಿಕೆಯಾಗಲಿದೆ ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಸಂಸತ್ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಿಟ್ಟಿನಲ್ಲಿ ಯಾವುದೇ ಪ್ರಧಾನಿಯೂ ಗಮನಾರ್ಹವಾಗಿ ಕೆಲಸ ಮಾಡಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ಬಚಾವೋ ಬೇಟಿ ಪಢಾವೋನಿಂದ ಹಿಡಿದು ನಾರಿ ಶಕ್ತಿ ವಂದನಾ ಅಧಿನಿಯಮದ ತನಕ ಮಹಿಳಾ ಸಶಕ್ತೀಕರಣಕ್ಕಾಗಿ ಶ್ರಮಿಸಿದ್ದಾರೆಂದರು.

ಸೆಪ್ಟೆಂಬರ್ 2023 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಹೊಸ ಸಂಸತ್ ಭವನದಲ್ಲಿ ಮಂಡಿಸಿದ ಮೊದಲ ಮಸೂದೆಯಾಗಿ ಇದು ಇತಿಹಾಸ ನಿರ್ಮಿಸಿತು. ಇದು ಈಗ 106ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಾಗಿ ಜಾರಿಗೆ ಬಂದಿದೆ. ಸಮಾಜದ ಎಲ್ಲಾ ವರ್ಗದ ಜನರು ಈ ಮಹತ್ವದ ಕ್ರಮವನ್ನು ಬೆಂಬಲಿಸಿ, ಮಹಿಳೆಯರ ಸಬಲೀಕರಣಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಏ.17ಕ್ಕೆ ವಿಶಿಷ್ಟ ಭಕ್ತಿ ಫ್ಯೂಷನ್ ಸಂಗೀತ ಕಾರ್ಯಕ್ರಮ

ಬೆಂಗಳೂರು: ಪರಮ್ ಫೌಂಡೇಶನ್‌ನಿಂದ ಏ.17ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ಸಂಜೆ 6.15ಕ್ಕೆ ತತ್ವ ಎಂಬ ವಿಶಿಷ್ಟ ಭಕ್ತಿ ಫ್ಯೂಷನ್ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನಾದದ ಲಯದಿಂದ ಆನಂದದತ್ತ ಪಯಣ ಎಂಬ ಪರಿಕಲ್ಪನೆಯಡಿ ಮೂಡಿಬರುತ್ತಿರುವ ಈ ಗಾಯನ ಸುಧೆಯನ್ನು ಅರುಂಧತಿ ವಸಿಷ್ಠ ಮತ್ತು ವರುಣ್ ಪ್ರದೀಪ್ ತಂಡವು ನಡೆಸಿಕೊಡಲಿದೆ. ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಸಮಕಾಲೀನ ಶೈಲಿಯಲ್ಲಿ ಪ್ರಸ್ತುತಪಡಿಸುವುದು ಈ ಕಾರ್ಯಕ್ರಮದ ವೈಶಿಷ್ಟ್ಯವಾಗಿದೆ. ವೇದಘೋಷಗಳು, ಶಾಸ್ತ್ರೀಯ ಪ್ರಭಾವ ಹಾಗೂ ಜನಪದ ಧಾಟಿಯನ್ನು ಆಧುನಿಕ ಸಂಗೀತ ಉಪಕರಣಗಳೊಂದಿಗೆ ಇಲ್ಲಿ ಬೆಸೆಯಲಾಗಿದೆ.

ಉಮೇಶ್ ವಾರ್ಭವನ್, ಪ್ರದ್ಯುಮ್ನ ಸೊರಬ ಸೇರಿದಂತೆ 15ಕ್ಕೂ ಹೆಚ್ಚು ಪ್ರಸಿದ್ಧ ಕಲಾವಿದರು ಹಾಗೂ ವಾದ್ಯವೃಂದದ ಜೊತೆಗೆ 8 ಮಂದಿಯ ಗಾಯಕ ತಂಡವು ಈ ಸಂಜೆಯ ಕಾರ್ಯಕ್ರಮಕ್ಕೆ ಕಳೆ ಕಟ್ಟಲಿದೆ. ವಿಶೇಷವಾಗಿ ಕಲಾವಿದರಾದ ಪ್ರವೀಣ್ ಡಿ.ರಾವ್ ಹಾಗೂ ಮಂಜುನಾಥ್ ಸತ್ಯಶೀಲ್ ಭಾಗವಹಿಸಲಿದ್ದಾರೆ. ಮನಸ್ಸಿಗೆ ನೆಮ್ಮದಿ ಹಾಗೂ ಹೊಸ ಚೈತನ್ಯ ತುಂಬುವ ಈ ಕಲಾ ಸಂಗಮವು, ಪ್ರೇಕ್ಷಕರ ಕಣ್ಮನ ಸೆಳೆಯುವ ಜೊತೆಗೆ ಒಂದು ವಿಶಿಷ್ಟ ಆಧ್ಯಾತ್ಮಿಕ ಅನುಭವವನ್ನು ಉಣಬಡಿಸಲಿದೆ.

ಏನಿದು ಪರಂಪರಾ? ಪರಮ್ ಕಲ್ಚರ್ ಪ್ರಸ್ತುತಪಡಿಸುವ ಪರಂಪರಾ ಸರಣಿ ಬಹು ಜನಪ್ರಿಯವಾಗಿರುವಂತಹ ಕಾರ್ಯಕ್ರಮವಾಗಿದೆ. ಈಗಾಗಲೇ ನಡೆದಿರುವ ಪ್ರತಿಯೊಂದರ



ವಿಷಯ ವಸ್ತುವೂ ವಿಭಿನ್ನವಾಗಿದ್ದು, ಪ್ರೇಕ್ಷಕರಿಂದ ಹಾಗೂ ಕಲಾವಿದರಿಂದ ಪ್ರಶಂಸೆಗೊಳಪಟ್ಟಿದೆ. ಕರ್ನಾಟಕ ಹಾಗೂ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜನಪದ ಸೇರಿ ಭರತನಾಟ್ಯ, ಚಿತ್ರಕಲಾ ಪ್ರದರ್ಶನ ಇವೆಲ್ಲ ಕಾರ್ಯಕ್ರಮಗಳ ಜತೆಗೆ, ವೀರ ಸನ್ಯಾಸಿಯ ಆತ್ಮಗೀತೆ ಎಂಬ ಅದ್ಭುತವಾದ ಮಲ್ಟಿಮೀಡಿಯಾ ಪ್ರೊಡಕ್ಷನ್ ಹಾಗೂ ದಾಸವಾಣಿ - ಸಂತವಾಣಿ ಎಂಬ ಸಂಗೀತ ಕಾರ್ಯಾಗಾರವನ್ನೂ ಕೂಡ ಪರಂಪರಾ ಸರಣಿಯಲ್ಲಿ ಪ್ರದರ್ಶಿ ಸಲ್ಪಟ್ಟಿದೆ.

ದೇವಸ್ತುತಿ ತರಬೇತಿ

ಕುಂದಾಪುರ: ಕುಂದಾಪುರ ರೋಜರಿ ಮಾತಾ ದೇವಾಲಯದಲ್ಲಿ ದೇವಸ್ತುತಿ ಆಯೋಗದ ಮುಂದಾಳತ್ವದಲ್ಲಿ ದೇವಸ್ತುತಿ ತರಬೇತಿ ಶಿಬಿರ ಭಾನುವಾರ ನಡೆಯಿತು. ಮಂಗಳೂರು ಧರ್ಮಪ್ರಾಂತ್ಯದ ಮಂಗಳ ಜ್ಯೋತಿ ಸಂಸ್ಥೆಯನಿರ್ದೇಶಕ ರೋಹಿತ್ ಡಿಕೋಸ್ತಾ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ತರಬೇತಿ ನೀಡಿದರು. ಚರ್ಚಿನ ಧರ್ಮಗುರು ಪೌಲ್ ರೇಗೊ ಸಹಬಲಿದಾನ ಅರ್ಪಿಸಿದರು. ಸಂತ ಜೋಸೆಫ್ ಕಾನ್ವೆಂಟಿನ ಮುಖ್ಯಸ್ಥೆ ಸಿಸ್ಟರ್ ಸುಪ್ರಿಯಾ ಉಪಸ್ಥಿತರಿದ್ದರು.

ದೇವಸ್ತುತಿ ಆಯೋಗದ ಸಂಚಾಲಕಿ ರೀಮಾ ಡಿಸೋಜಾ ಸ್ವಾಗತಿಸಿದರು. ಸರ್ವ ಆಯೋಗಗಳ ಸಂಯೋಜಕಿ ಶೋಭಾ ವಾಜ್ ವಂದಿಸಿದರು.

ಕಿರುಸುದ್ದಿ

ಸುಡುಮದ್ದು ತಯಾರಿ: ಓರ್ವ ಪೊಲೀಸ್ ವಶಕ್ಕೆ

ವಿಟ್ಲ: ಕಂಬಳಬೆಟ್ಟು ಅಮೈಯಲ್ಲಿ ಮುನ್ನೆಚ್ಚರಿಕೆ ಇಲ್ಲದೇ ಸುಡುಮದ್ದುಗಳನ್ನು ತಯಾರಿಸುತ್ತಿರುವ ಹಿನ್ನಲೆಯಲ್ಲಿ ವಿಟ್ಲ ಪೊಲೀಸರು ದಾಳಿ ಮಾಡಿ, ಆರೋಪಿಯನ್ನು ಬಂಧಿಸಿದ್ದಾರೆ. ಸ್ಥಳೀಯ ನಿವಾಸಿ ಜಗದೀಶ ಪೂಜಾರಿ ಸುಡುಮದ್ದಿಗೆ ಬೇಕಾಗುವ ಸ್ಫೋಟಕ ಸಾಮಗ್ರಿಗಳನ್ನು ತನ್ನ ಮನೆಯ ಆವರಣದಲ್ಲಿ ಯಾವುದೇ ಮುನ್ನೆಚ್ಚರಿಕೆ ವಹಿಸದೇ ಶೇಖರಿಸಿದ್ದನೆನ್ನಲಾಗಿದೆ. ಸುಮಾರು 1.9 ಕೆ.ಜಿ.ಯಷ್ಟು ಸ್ಫೋಟಕದಂತಹ ಸಂಶಯಾಸ್ಪದ ವಸ್ತು ಪತ್ತೆಯಾಗಿದ್ದು, ಆರೋಪಿಯನ್ನು ವಶಕ್ಕೆ ಪಡೆದು, ವಿಟ್ಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಪಘಾತ ಗಾಯಾಳು ಸಾವು

ಬಂಟ್ವಾಳ: ಇಲ್ಲಿಗೆ ಸಮೀಪದ ವಗ್ಗ ಕಾರಿಂಜಕ್ರಾಸ್ ಎಂಬಲ್ಲಿ ದ್ವಿಚಕ್ರವಾಹನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಯೋರ್ವರು ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮೃತಪಟ್ಟಿದ್ದಾರೆ. ವಗ್ಗ ನಿವಾಸಿ ಜಗದೀಶ್ ಪೂಜಾರಿ ಮೃತಪಟ್ಟವರೆಂದು ಗುರುತಿಸಲಾಗಿದೆ. ಏ.11 ರಂದು ಎರಡು ಸ್ಕೂಟರ್‌ಗಳ ಮಧ್ಯೆ ಅಪಘಾತ ಸಂಭವಿಸಿದ್ದು, ಜಗದೀಶ್ ಅವರು ಒಂದು ಸ್ಕೂಟರನ್ನು ಚಲಾಯಿಸುತ್ತಿದ್ದರು. ಇನ್ನೊಂದು ಸ್ಕೂಟರ್ ಸವಾರ ಮೊಹಮ್ಮದ್ ಯಾಸೀನ್ ಮತ್ತು ಸಹಸವಾರಿಣಿ ಸೈಫುನ್ನೀಸಾ ಎಂದು ಕಡೆಯಿಂದ ಬೆಳ್ತಂಗಡಿ ಕಡೆಗೆ ಸಂಚರಿಸುತ್ತಿದ್ದ ವೇಳೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಅಪಘಾತದಿಂದ ರಸ್ತೆಗೆ ಬಿದ್ದ ಮೂವರಿಗೂ ಗಾಯಗಳಾಗಿವೆ. ಗಾಯಗೊಂಡವರನ್ನು ತಕ್ಷಣ ಸ್ಥಳೀಯರು ತುಂಬೆ ಫಾದರ್ ಮುಲ್ಲರ್ ಆಸ್ಪತ್ರೆಗೆ ಸಾಗಿಸಿದ್ದರೆ, ಜಗದೀಶ್ ಪೂಜಾರಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಜಗದೀಶ್ ಬಂಟ್ವಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರಣ್ಯದಲ್ಲಿ ಜೇನುತುಪ್ಪ ಸಂಗ್ರಹಿಸುವ ವೇಳೆ ಮರದಿಂದ ಬಿದ್ದು ವ್ಯಕ್ತಿ ಸಾವು

ಕಾಸರಗೋಡು: ಜೇನುತುಪ್ಪ ಸಂಗ್ರಹಿಸಲು ಬೃಹತ್ ಮರಕ್ಕೇರಿದ ವ್ಯಕ್ತಿ ಕೆಳಕ್ಕೆ ಬಿದ್ದು ಮೃತಪಟ್ಟ ಘಟನೆ ನಡೆದಿದೆ. ವೆಳ್ಳರಿಕುಂಡು ಪೊಲೀಸ್ ಠಾಣೆಯ ವ್ಯಾಪ್ತಿಗೊಳಪಟ್ಟ ಕೊನ್ನಕ್ಕಾಡ್ ಕೋಟಚ್ಚೇರಿ ಕಾಲನಿಯಲ್ಲಿ ವಾಸಿಸುತ್ತಿರುವ ಮೂಲತಃ ಕೊಡಗು ಜಿಲ್ಲೆಯ ತನ್ನಿಮಾಣಿ ಗ್ರಾಮದ ತಲಕಾವೇರಿ ಸಮೀಪ ನಿವಾಸಿ ಎಚ್.ಪಿ.ಪ್ರಕಾಶ್ (33) ಮೃತಪಟ್ಟವರು. ಅವರು ದಟ್ಟಾರಣ್ಯದಲ್ಲಿ ಜೇನುತುಪ್ಪ ಸಂಗ್ರಹಿಸುವ ತಂಡದ ಸದಸ್ಯರಾಗಿದ್ದಾರೆ. ಆಹಾರ ಸಾಮಗ್ರಿಗಳೊಂದಿಗೆ ದಟ್ಟಾರಣ್ಯಕ್ಕೆ ತೆರಳಿ ಅಲ್ಲೇ ಟೆಂಟ್ ನಿರ್ಮಿಸಿ ದಿನಗಳ ತನಕ ಅಲ್ಲೇ ಉಳಿದು ಜೇನುತುಪ್ಪ ಸಂಗ್ರಹಿಸುವುದು ಈ ತಂಡದ ಪ್ರಧಾನ ಉಪಜೀವನ ಮಾರ್ಗವಾಗಿದೆ. ಪ್ರಕಾಶ್ ಸೇರಿದಂತೆ ಮೂವರ ತಂಡ ಕಳೆದ ಶನಿವಾರ ರಾತ್ರಿ ಕೊನ್ನಕ್ಕಾಡಿನ ಸಮೀಪದ ಕರ್ನಾಟಕ ರಾಜ್ಯಕ್ಕೆ ಸೇರಿದ ದಟ್ಟಾರಣ್ಯಕ್ಕೆ ಜೇನುತುಪ್ಪ ಸಂಗ್ರಹಿಸಲು ಹೋಗಿ ಅಲ್ಲೇ ಟೆಂಟ್ ನಿರ್ಮಿಸಿ ಮರಗಳಿಂದ ಜೇನುತುಪ್ಪ ಸಂಗ್ರಹದಲ್ಲಿ ತೊಡಗಿದ್ದರು. ಈ ಮಧ್ಯೆ ರಾತ್ರಿ ಅಲ್ಲಿನ ಬೃಹತ್ ಮರವೊಂದರಲ್ಲಿ ಜೇನು ಗೂಡನ್ನು ಕಂಡ ಅವರು ಅದಕ್ಕೆ ಹತ್ತಿದರು. ಜೊತೆಗಿದ್ದ ಇನ್ನೋರ್ವ ಮರಕ್ಕೆ ಹತ್ತಿದ್ದರು. ಈ ವೇಳೆ ಪ್ರಕಾಶ್ ನಿಯಂತ್ರಣ ತಪ್ಪಿ ಮರದಿಂದ ಕೆಳಕ್ಕೆ ಬಿದ್ದರು. ಇದನ್ನು ಕಂಡ ಇತರ ಇಬ್ಬರು ತಕ್ಷಣ ಪ್ರಕಾಶ್ ಅವರನ್ನು ಹೆಗಲಿಗೇರಿಸಿ ಐದು ಕಿಲೋಮೀಟರ್‌ನಷ್ಟು ಸಾಗಿಸಿದ ಬಳಿಕ ಫೋನ್ ಮೂಲಕ ಅರಣ್ಯ ರೇಂಜ್ ಕಚೇರಿಗೆ ವಿಷಯ ತಿಳಿಸಿದರು. ಕೂಡಲೇ ಸ್ಥಳಕ್ಕಾಗಮಿಸುವಷ್ಟರಲ್ಲಿ ಪ್ರಕಾಶ್ ಅವರು ಕೊನೆಯುಸಿರೆಳೆದರು. ಮೃತರು ಪತ್ನಿ ರಮ್ಯಾ, ಮಕ್ಕಳಾದ ಶವಣ್ಯ, ಶಿವ ಅವರನ್ನು ಅಗಲಿದ್ದಾರೆ.

ನಿಧನ ಸುದ್ದಿ

ಚಿದಾನಂದ ಗೌಡ



ಸುಬ್ರಹ್ಮಣ್ಯ: ಕಡಬ ತಾಲೂಕು ಕೊಂಬಾರು ಗ್ರಾಮದ ಗುತ್ತು ಮನೆ ಚಿದಾನಂದ ಗೌಡ (79) ಭಾನುವಾರ ರಾತ್ರಿ ನಿಧನರಾದರು. ಅವರು ಕೊಂಬಾರು ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರಾಗಿ 12 ವರ್ಷ, ಬಿಳಿನೆಲೆ ಸೇವಾ ಸಹಕಾರಿ ಸಂಘದ ನಿರ್ದೇಶಕರಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಪುತ್ರಿಯನ್ನು ಅಗಲಿದ್ದಾರೆ.

ನಾರಾಯಣ ಆಚಾರ್



ಕುಂದಾಪುರ: ಬೀಜಾಡಿ ಗ್ರಾಮದ ಹೊದ್ರಾಳಿ ನಿವಾಸಿ ನಾರಾಯಣ ಆಚಾರ್ (71) ಅವರು ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗು ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಮುಹಮ್ಮದ್ ನಂದರಬೆಟ್ಟು



ಬಂಟ್ವಾಳ: ಇಲ್ಲಿನ ಪುರಸಭೆಯ ಮಾಜಿ ಉಪಾಧ್ಯಕ್ಷ, ನಿಕಟಪೂರ್ವ ಸದಸ್ಯ ಮುಹಮ್ಮದ್ ನಂದರಬೆಟ್ಟು (66) ಅವರು ಅಲ್ಪ ಕಾಲದ ಅನಾರೋಗ್ಯದಿಂದ ಸೋಮವಾರ ರಾತ್ರಿ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾಗಿದ್ದಾರೆ. ಬಂಟ್ವಾಳ ಪುರಸಭೆಗೆ ಮೂರು ಅವಧಿಗೆ ಸದಸ್ಯರಾಗಿ ಚುನಾಯಿತರಾಗಿದ್ದ ಇವರು ಒಂದು ಬಾರಿ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸ್ಥಳೀಯವಾಗಿ ಹಲವು ಧಾರ್ಮಿಕ, ಸಾಮಾಜಿಕ ಸಂಘಟನೆಗಳಲ್ಲೂ ಸಕ್ರಿಯರಾಗಿದ್ದರಲ್ಲದೆ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರು ಆಗಿದ್ದರು. ಕಾಲೇಜು ಹಂತದಲ್ಲೇ ಉತ್ತಮ ವಾಲಿಬಾಲ್ ಪಟುವೂ ಆಗಿದ್ದ ಇವರು ರಾಷ್ಟ್ರೀಯ ಮಟ್ಟದ ಆಟಗಾರರಾಗಿ ಗುರುತಿಸಿಕೊಂಡಿದ್ದರು. ಮೃತರು ಪತ್ನಿ, ತಲಾ ಇಬ್ಬರು ಪುತ್ರರು, ಪುತ್ರಿಯರ ಸಹಿತ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅವರ ಅಗಲಿಕೆಗೆ ವಿಧಾನಸಭಾ ಸ್ಪೀಕರ್ ಡಾ. ಯು. ಟಿ. ಖಾದರ್, ಮಾಜಿ ಸಚಿವ ಬಿ. ರಮಾನಾಥ ರೈ, ಜಿಲ್ಲಾ ಕಾಂಗ್ರೆಸ್ ಅಸಂಘಟಿತ ಕಾರ್ಮಿಕ ಘಟಕಾಧ್ಯಕ್ಷ ಬಿ. ಎಂ. ಅಬ್ಬಾಸ್ ಅಲಿ, ಪುರಸಭಾ ನಿಕಟಪೂರ್ವ ಅಧ್ಯಕ್ಷ ಬಿ. ವಾಸು ಪೂಜಾರಿ ಸಹಿತ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ ನೇತ್ರಾವತಿ ವಲಯ ಉಳ್ಳಾಲ ನಗರ ಮತ್ತು ಕೊಲ್ಯದ ಶ್ರೀ ಶಾರದಾ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಕೊಲ್ಯದ ಶಾರದಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿರುವ 21ದಿನಗಳ ಉಚಿತ ಮಕ್ಕಳ ವ್ಯಕ್ತಿತ್ವ ವಿಕಸನ ತರಗತಿಯನ್ನು ಭಾನುವಾರ ಶಾರದಾ ಟ್ರಸ್ಟ್ ನ ಅಧ್ಯಕ್ಷ ಮೋಹನ್ ಶೆಟ್ಟಿ ಕುಂಪಲ ಉದ್ಘಾಟಿಸಿದರು. ಶಾರದಾ ಟ್ರಸ್ಟ್ ನ ಪ್ರಧಾನ ಕಾರ್ಯದರ್ಶಿ ರಾಜೇಶ್ ಕುಮಾರ್ ಕೆ.ಎಸ್ , ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಜಿಲ್ಲಾ ಸಂಚಾಲಕರಾದ ಗೀತಾ, ಉಳ್ಳಾಲ ನಗರ ಸಂಚಾಲಕರಾದ ರಾಜೇಶ್ವರಿ ಮೊದಲಾದವರಿದ್ದರು.

ಏ.20: ದಕ್ಷಿಣ ಕನ್ನಡ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆ-ಸಹಾಯಕಿಯರ ಸಮಾವೇಶ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ವತಿಯಿಂದ ಐಸಿಡಿಎಸ್ 50ರ ಸುವರ್ಣ ಸಂಭ್ರಮ ಮತ್ತು ಜಿಲ್ಲಾ ಸಮಾವೇಶ ಏ.20ರಂದು ಬೆಳಗ್ಗೆ 9 ರಿಂದ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷೆ ತಾರಾ ಬಲ್ಲಾಲ್ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಸುಮಾರು 2,500 ಮಂದಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಭಾಗವಹಿಸಲಿದ್ದಾರೆ. ಸಂಘದ ಪದಾಧಿಕಾರಿಗಳಾಗಿದ್ದು, ನಿವೃತ್ತರಾದವರಿಗೆ ಸನ್ಮಾನ ನಡೆಯಲಿದೆ. ಅಲ್ಲದೆ ಸಂಘದ ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿದೆ ಎಂದರು.

ಕಾರ್ಯಕ್ರಮವನ್ನು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಂಸದ ಕ್ಯಾ. ಬ್ರಿಜೇಶ್ ಚೌಟ ಸಹಿತ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು, ರಾಜ್ಯ, ಜಿಲ್ಲಾ ಸಂಘದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದವರು ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಸಹಾಯಕರಿಗೆ ಕನಿಷ್ಠವೇತನ ಜಾರಿಗೆ ಸಂಬಂಧಿಸಿದ ವಿಚಾರ ಈಗಾಗಲೇ ನ್ಯಾಯಾಯದಲ್ಲಿ ವಿಚಾರಣೆ ಹಂತದಲ್ಲಿದೆ. ವೇತನ ಜಾರಿಗೆ ಆಗ್ರಹಿಸಿ ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಈಗಾಗಲೇ ಈ ಸಂಬಂಧ ಹಲವು ಪ್ರತಿಭಟನೆಗಳನ್ನು ನಡೆಸಲಾಗಿದ್ದು, ಇನ್ನು ನ್ಯಾಯಾಲಯದ ಆದೇಶದಂತೆ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಕನಿಷ್ಠ ವೇತನ ಜಾರಿಯಾಗದ ಹೊರತು ಬೇರೆ ಯಾವ ಹೆಚ್ಚುವರಿ ಕೆಲಸವನ್ನೂ ಮಾಡುವುದಿಲ್ಲ ಎಂದು ನಿರ್ಧರಿಸಲಾಗಿದೆ ಎಂದು ರಾಜ್ಯ ಕೋಶಾಧಿಕಾರಿ ವಿಶಾಲಾಕ್ಷಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಆಶಾಲತಾ, ರಾಜ್ಯ ಪ್ರತಿನಿಧಿ ಚಂದ್ರಾವತಿ, ಬಂಟ್ವಾಳ ತಾಲೂಕು ಅಧ್ಯಕ್ಷೆ ವಿಜಯವಾಣಿ, ಬೆಳ್ತಂಗಡಿ ತಾಲೂಕು ಅಧ್ಯಕ್ಷೆ ರಾಜೀವಿ ಉಪಸ್ಥಿತರಿದ್ದರು.

ಆಳ್ವಾಸ್‌ನಲ್ಲಿ ಏರೋಡೈನಾಮಿಕ್ಸ್‌ನಿಂದ ಡಿಜಿಸಿಎ ಮಾನ್ಯತೆ ಪಡೆದ ಡ್ರೋನ್ ತರಬೇತಿ ಕೇಂದ್ರ ಉದ್ಘಾಟನೆ

ಡ್ರೋನ್ ಕ್ರಾಂತಿಕಾರಿ ತಂತ್ರಜ್ಞಾನ

ಮೂಡುಬಿದಿರೆ: ಏರೋಡೈನಾಮಿಕ್ಸ್ ಸಂಸ್ಥೆಯು ಆಳ್ವಾಸ್ ಕಾಲೇಜಿನಲ್ಲಿ ಪ್ರಾರಂಭಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಡಿಜಿಸಿಎ ಮಾನ್ಯತೆ ಪಡೆದ ಡ್ರೋನ್ ತರಬೇತಿ ಕೇಂದ್ರವನ್ನು ಮಂಗಳವಾರ ಕಾಲೇಜಿನ ಆವರಣದಲ್ಲಿ ಉದ್ಘಾಟಿಸಲಾಯಿತು.

ಕರ್ನಾಟಕದ ಕೋಸ್ಟ್ ಗಾರ್ಡ್‌ನ ಉಪಮಹಾನಿರೀಕ್ಷಕ (ಡಿಐಜಿ) ಹಾಗೂ ಜಿಲ್ಲಾ ಕಮಾಂಡರ್ ಪಿ. ಕೆ. ಮಿಶ್ರಾ ಮಾತನಾಡಿ, ರಕ್ಷಣೆ ಹಾಗೂ ನಾಗರಿಕ ಕ್ಷೇತ್ರಗಳಲ್ಲಿ ಡ್ರೋನ್ ತಂತ್ರಜ್ಞಾನವು ವ್ಯಾಪಕವಾಗಿ ಬಳಸಲ್ಪಡುತ್ತಿರುವುದರಿಂದ ಇದರ ಮಹತ್ವ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಡಿಮೆ ವೆಚ್ಚ, ನಿಖರತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಬಳಸಬಹುದಾದ ಸಾಮರ್ಥ್ಯದಿಂದ ಡ್ರೋನ್‌ಗಳು ಕ್ರಾಂತಿಕಾರಿ ತಂತ್ರಜ್ಞಾನವಾಗಿ ಹೊರಹೊಮ್ಮುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು.

ಜಾಗತಿಕ ಬೆಳವಣಿಗೆಗಳನ್ನು ಉಲ್ಲೇಖಿಸಿ, ಅಮೇರಿಕಾ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷಗಳಲ್ಲಿ, ಡ್ರೋನ್‌ಗಳು ಆಧುನಿಕ ಯುದ್ಧ ತಂತ್ರಗಳನ್ನು ಮಹತ್ತರವಾಗಿ ಬದಲಾಯಿಸುತ್ತಿರುವುದಾಗಿ ಹೇಳಿದರು.

ಡ್ರೋನ್ ತಂತ್ರಜ್ಞಾನವು ಸಣ್ಣ ರಾಷ್ಟ್ರಗಳಿಗೂ ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುತ್ತಿವೆ. ದುಬಾರಿ ಸಾಂಪ್ರದಾಯಿಕ ಯುದ್ಧೋಪಕರಣಗಳಿಗಿಂತ ಕಡಿಮೆ ವೆಚ್ಚದ ಮಾನವರಹಿತ ಡ್ರೋನ್‌ಗಳ ಅಭಿವೃದ್ಧಿಗೆ ದೇಶಗಳು ಹೆಚ್ಚು ಒತ್ತು ನೀಡುತ್ತಿರುವುದಾಗಿ ತಿಳಿಸಿದರು. ವಿದ್ಯಾರ್ಥಿಗಳು ಇಂತಹ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.



ಆಳ್ವಾಸ್‌ನಲ್ಲಿ ಡ್ರೋನ್ ತರಬೇತಿ ಕೇಂದ್ರ ಉದ್ಘಾಟನೆ

ಇಬ್ಬರು ಭಾರತೀಯ ಇಂಜಿನಿಯರಿಂಗ್ ವಿದ್ಯಾರ್ಥಿಗಳು ನಿರ್ಮಿಸಿದ ಡ್ರೋನ್ ಸುಮಾರು 50,000 ರೈತರಿಗೆ ಬೆಳೆ ಸಮಸ್ಯೆಗಳನ್ನು ಗುರುತಿಸಲು ಹಾಗೂ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡಿರುವುದನ್ನು ಉದಾಹರಣೆಯಾಗಿ ಉಲ್ಲೇಖಿಸಿದರು. ವಿದ್ಯಾರ್ಥಿಗಳಿಂದ ನಿರ್ಮಿಸಲಾದ ಕಡಿಮೆ ವೆಚ್ಚದ ರಾಕೆಟ್ ಯೋಜನೆಗೆ ಇಸ್ರೋ ಗಮನ ಸೆಳೆದಿರುವುದನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಮಾತನಾಡಿ, ಈ ಕೇಂದ್ರದ ಆರಂಭದಿಂದ ಆಳ್ವಾಸ್ ಕಾಲೇಜಿನ ಶೈಕ್ಷಣಿಕ ವಾತಾವರಣವನ್ನು ಮತ್ತಷ್ಟು ಸಮೃದ್ಧಗೊಳಿಸುವುದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಡಿಜಿಸಿಎ ಮಾನ್ಯತೆ ಪಡೆದ ಡ್ರೋನ್ ತರಬೇತಿಯ ಪ್ರಮುಖ ಕೇಂದ್ರವಾಗಿ ಸ್ಥಾಪಿಸಲು ಸಹಕಾರಿಯಾಗಲಿದೆ ಎಂದರು. ಕೃಷಿ, ರಕ್ಷಣಾ ಕ್ಷೇತ್ರ ಮತ್ತು ಪರಿಸರ ಸಂರಕ್ಷಣಾ ಕ್ಷೇತ್ರಗಳಲ್ಲಿ ಡ್ರೋನ್ ತಂತ್ರಜ್ಞಾನವು ಮಹತ್ವದ ಬದಲಾವಣೆಗಳನ್ನು ತರುತ್ತಿದ್ದು, ಬೆಳೆಗಳ ಮೇಲ್ವಿಚಾರಣೆ, ನಿಖರ ಸಿಂಪಡಣೆ, ನೀರಾವರಿ ಪರಿಶೀಲನೆ ಹಾಗೂ ಬೆಳೆ ಆರೋಗ್ಯ ವಿಶ್ಲೇಷಣೆಗೆ ಡ್ರೋನ್‌ಗಳು ಸಹಕಾರಿಯಾಗಿವೆ. ಪರಿಸರ ಸಂರಕ್ಷಣೆಯಲ್ಲಿಯೂ ವನ್ಯಜೀವಿ ಮೇಲ್ವಿಚಾರಣೆ ಮತ್ತು ಅಕ್ರಮ ಚಟುವಟಿಕೆಗಳನ್ನು ತಡೆಯಲು ಡ್ರೋನ್‌ಗಳು ಉಪಯುಕ್ತವಾಗಿವೆ. ವಿದ್ಯಾರ್ಥಿಗಳು ಇಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಮಾಜಮುಖಿ ನವೀನತೆಗಳನ್ನು ರೂಪಿಸಬೇಕು ಎಂದರು.

> ಡ್ರೋನ್ ತಂತ್ರಜ್ಞಾನವನ್ನು ಸಿದ್ಧಿಸಿಕೊಳ್ಳುವುದು ಕಾಲದ ಅಗತ್ಯ. ವಿದ್ಯಾರ್ಥಿಗಳು ಭವಿಷ್ಯಕ್ಕೆ ಸಿದ್ಧರಾಗಿ ಸುತ್ತಮುತ್ತಲಿನ ಸಂಪನ್ಮೂಲಗಳನ್ನು ಮೌಲ್ಯಪೂರ್ಣವಾಗಿ ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು. ಡ್ರೋನ್ ತಂತ್ರಜ್ಞಾನದಿಂದ ಆಧುನಿಕ ಯುದ್ಧದ ಸ್ವರೂಪವೇ ಬದಲಾಗುತ್ತಿದ್ದು, ಪರಂಪರಾಗತ ಸಶಸ್ತ್ರ ಪಡೆಗಳ ಅಗತ್ಯತೆಯನ್ನೇ ಪ್ರಶ್ನಿಸುವಂತಾಗಿದೆ .
> ■ ವಿವೇಕ್ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ

» ಡ್ರೋನ್ ತಂತ್ರಜ್ಞಾನವು ಸಣ್ಣ ರಾಷ್ಟ್ರಗಳಿಗೂ ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುತ್ತಿವೆ.

ಏರೋಡೈನಾಮಿಕ್ಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ದೇವಿಪ್ರಸಾದ್ ಶೆಟ್ಟಿ ಪ್ರಸ್ತಾವಿಕವಾಗಿ ಮಾತನಾಡಿ, ಈ ಕೇಂದ್ರದ ಮೂಲಕ ಡ್ರೋನ್ ತಂತ್ರಜ್ಞಾನದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಡ್ರೋನ್ ಕಾರ್ಯಾಚರಣೆ, ನಿರ್ವಹಣೆ, ಸುರಕ್ಷತಾ ನಿಯಮಗಳು ಮತ್ತು ತಾಂತ್ರಿಕ ಅಂಶಗಳ ಬಗ್ಗೆ ಸಮಗ್ರ ತರಬೇತಿ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗೋನ್ಮುಖವಾಗಿ ರೂಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ನ್ಯಾಯವಾದಿ ಜಗದೀಶ ಕೆ ಶೇಣವ ಇದ್ದರು. ಕಾರ್ಯಕ್ರಮವನ್ನು ಡಾ. ಪ್ರಣಮ್ಯ ಭಟ್ ನಿರೂಪಿಸಿ, ಗ್ರೂಪ್ ಕ್ಯಾಪ್ಟನ್ ಸುಧೀರ್ ಅಮೀನ್ ಸ್ವಾಗತಿಸಿ, ಅನುಷಾ ಶೆಟ್ಟಿ ವಂದಿಸಿದರು.

ಸೂರಿಕುಮೇರಿ ಕುಟುಂಬಕ್ಕೆ ಗೌರವ ಡಾಕ್ಟರೇಟ್ ಹಸ್ತಾಂತರ

ಸಂಶೋಧನಾ ಪುಸ್ತಕ ಬರಲಿ: ಶ್ರೀ

ಬಂಟ್ವಾಳ: ಮಂಗಳೂರು ವಿಶ್ವವಿದ್ಯಾಲಯವು ಮೊತ್ತಮೊದಲ ಬಾರಿ ಗೌರವ ಡಾಕ್ಟರೇಟ್ ಅನ್ನು ವಿಶೇಷ ಪರಿಗಣನೆಯೊಂದಿಗೆ ಇತ್ತೀಚೆಗೆ ಅಗಲಿರುವ ಹಿರಿಯ ಯಕ್ಷಗಾನ ಕಲಾವಿದ ಗೋವಿಂದ ಭಟ್ ಅವರ ಕುಟುಂಬಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಎಲ್. ಧರ್ಮ ಅವರು ಸೋಮವಾರ ಸಂಜೆ ಹಸ್ತಾಂತರಿಸಿದರು.



ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ಸಂಪಾಜೆ ವತಿಯಿಂದ ಬಿ.ಸಿ. ರೋಡಿನ ಸ್ಪರ್ಶಾ ಕಲಾಮಂದಿರದಲ್ಲಿ ಸೋಮವಾರ ನಡೆದ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ಪುರಸ್ಕೃತ, ಯಕ್ಷದಶಾವತಾರಿ ಡಾ.ಕೆ.ಗೋವಿಂದ ಭಟ್ ಸೂರಿಕುಮೇರು ಅವರಿಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ ಗೋವಿಂದ ಸ್ಮರಣೆ ಕಾರ್ಯಕ್ರಮದಲ್ಲಿ ಸೇರಿದ್ದ ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ಡಾಕ್ಟರೇಟ್ ಪದವಿ ಹಸ್ತಾಂತರಿಸಲಾಯಿತು.

ಭಟ್ ಪುತ್ರರಾದ ಪ್ರಸನ್ನ ಕುಮಾರ್, ಶ್ಯಾಮಪ್ರಸಾದ್, ಸೂರ್ಯಪ್ರಕಾಶ್ ಅವರಿಗೆ ವಿಶ್ವವಿದ್ಯಾಲಯ ನೀಡುವ ಗೌರವ ಡಾಕ್ಟರೇಟ್ ಪದವಿಯನ್ನು ಹಸ್ತಾಂತರ ಮಾಡಲಾಯಿತು.

ಇದೇ ವೇಳೆ ಗೋವಿಂದ ಭಟ್ಟರ ಭಾವಚಿತ್ರಕ್ಕೆ ಗೌರವಾರ್ಪಣೆ ಮಾಡಿ ಮಾತನಾಡಿದ ಕುಲಪತಿ ಡಾ. ಧರ್ಮ, ಮೊದಲ ಬಾರಿ ಮಂಗಳೂರು ವಿಶ್ವವಿದ್ಯಾನಿಲಯವು ಮರಣೋತ್ತರ ಡಾಕ್ಟರೇಟ್ ಪದವಿಯನ್ನು ವಿಶ್ವವಿದ್ಯಾನಿಲಯದ ಲಾಂಛನದೊಂದಿಗೆ ಕುಲಾಧಿಪತಿಗಳ ಅನುಮತಿಯೊಂದಿಗೆ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿ, ಗೋವಿಂದ ಭಟ್ ಯಕ್ಷಜೀವನದ ಕುರಿತು ಸಂಶೋಧನಾ ಪುಸ್ತಕ ಹೊರಬರಬೇಕು ಎಂದರು. ಮಾಜಿ ಸಚಿವ ಬಿ.ರಮಾನಾಥ ರೈ, ರಿಜಿಸ್ಟ್ರಾರ್ ಪ್ರೊ.ಗಣೇಶ್ ಸಂಜೀವ್, ಪರೀಕ್ಷಾಂಗಕುಲಸಚಿವ ಡಾ.ದೇವೇಂದ್ರಪ್ಪ, ಹಣಕಾಸು ಅಧಿಕಾರಿ ಪಂಚಲಿಂಗಸ್ವಾಮಿ, ಐಕ್ಯುಎಸಿ ನಿರ್ದೇಶಕಿ ಪ್ರೊ.ಮೋನಿಕಾ ಸದಾನಂದ ಮತ್ತು ಸಹಾಯಕ ಕುಲಸಚಿವೆ ಸುಚೇತಾ ಕೆ. ಪದವಿ ಹಸ್ತಾಂತರ ವೇಳೆ ಹಾಜರಿದ್ದರು.

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ.ಶಾಮ ಭಟ್ ಅವರು ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನದ ಪರವಾಗಿ ಸ್ವಾಗತಿಸಿದರು. ಕಲಾವಿದ ಹರೀಶ್ ಬೊಳಂತಿಮೊಗರು ಕಾರ್ಯಕ್ರಮ ನಿರ್ವಹಿಸಿದರು. ವಿದ್ವಾಂಸ ಹಿರಣ್ಯ ವೆಂಕಟೇಶ್ವರ ಭಟ್ ಕಾರ್ಯಕ್ರಮ ನಿರ್ವಹಿಸಿದರು. ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಗೋವಿಂದಾರ್ಪಣ ಯಕ್ಷಗಾನ ಕಾರ್ಯಕ್ರಮ ನಡೆಯಿತು.

ಏ.16ರಂದು ಎಫ್‌ಎಂಸಿಐ ಪದವಿ ಪ್ರದಾನ ಸಮಾರಂಭ

ಡ್ರೆಸ್ ಕೋಡ್ ಬದಲಾವಣೆ

ಮಂಗಳೂರು: ಫಾದರ್ ಮುಲ್ಲರ್ ಚಾರಿಟೆಬಲ್ ಇನ್‌ಸ್ಟಿಟ್ಯೂಶನ್ಸ್ (ಎಫ್‌ಎಂಸಿಐ)ನ 2026ನೇ ಸಾಲಿನ ಪದವಿ ಪ್ರದಾನ ಸಮಾರಂಭ ಏ.16ರಿಂದ 18ರವರೆಗೆ ಫಾದರ್ ಮುಲ್ಲರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆ ಎಂದು ಎಫ್‌ಎಂಸಿಐ ನಿರ್ದೇಶಕ ಫಾ. ಫೌಸ್ಟಿನ್ ಲ್ಯೂಕಸ್ ಲೋಬೊ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫಾದರ್ ಮುಲ್ಲರ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನ 36ನೇ ಪದವಿ ಪ್ರದಾನ ಸಮಾರಂಭ ಏ.16ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ದೆಹಲಿಯ ನ್ಯಾಷನಲ್ ಕಮಿಷನ್ ಫಾರ್ ಹೋಮಿಯೋಪತಿಯ ಚೇರ್ಮನ್ ಡಾ. ತಾರಕೇಶ್ವರ್ ಜೈನ್ ಮತ್ತು ಯೆನೆಪೋಯ ಡೀಮ್ಡ್ ಟು ಬಿ ಯೂನಿವರ್ಸಿಟಿ ವೈಸ್ ಚಾನ್ಸಲರ್ ಡಾ. ಕೆ.ಎಸ್. ಗಂಗಾಧರ್ ಸೋಮಯಾಜಿ ಭಾಗವಹಿಸಲಿದ್ದಾರೆ ಎಂದರು.

» 856 ಪದವೀಧರರು ಪದವಿ ಸ್ವೀಕರಿಸಲಿದ್ದಾರೆ.

» 19 ಮಂದಿ ಸ್ನಾತಕೋತ್ತರ ಪದವೀಧರರು ಸೇರಿ ಒಟ್ಟು 111 ಮಂದಿ ಪದವಿ ಸ್ವೀಕರಿಸಲಿದ್ದಾರೆ.

ಈ ಬಾರಿಯ ಪದವಿ ಪ್ರದಾನ ಸಮಾರಂಭದಲ್ಲಿ ಹಳೆಯ ಡ್ರೆಸ್ ಕೋಡ್ ಬದಲಾಗಿ ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವ, ಸಂಸ್ಥೆಯ ಹೆಸರಿರುವ ಶಾಲನ್ನು ವಿದ್ಯಾರ್ಥಿಗಳು ಧರಿಸಲಿದ್ದಾರೆ. ಅವರಿಗೆ ಫ್ರೇಮ್ ಮಾಡಿದ ಪದವಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು. 856 ಪದವೀಧರರು ಪದವಿ ಸ್ವೀಕರಿಸಲಿದ್ದಾರೆ. 19 ಮಂದಿ ಸ್ನಾತಕೋತ್ತರ ಪದವೀಧರರು ಸೇರಿ ಒಟ್ಟು 111 ಮಂದಿ ಪದವಿ ಸ್ವೀಕರಿಸಲಿದ್ದಾರೆ. ಪ್ರೆಸಿಡೆಂಟ್ಸ್ ಗೋಲ್ಡ್ ಮೆಡಲ್, ಉತ್ತಮ ವಿದ್ಯಾರ್ಥಿ ಸಂಶೋಧಕ ಪ್ರಶಸ್ತಿ, ಆರ್‌ಜಿಯುಎಚ್‌ಎಸ್ ಗೋಲ್ಡ್ ಮೆಡಲ್ ಪ್ರದಾನ ಮಾಡಲಾಗುವುದು ಎಂದರು.

ಫಾದರ್ ಮುಲ್ಲರ್ ಮೆಡಿಕಲ್, ಅಲೈಡ್ ಹೆಲ್ತ್ ಆಂಡ್ ಫಿಸಿಯೋಥೆರಪಿ ಕಾಲೇಜುಗಳ ಪದವಿ ಪ್ರದಾನ ಸಮಾರಂಭ ಏಪ್ರಿಲ್ 17ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ ಎಂದು ಫಾ. ಫೌಸ್ಟೀನ್ ಲ್ಯೂಕಸ್ ಲೋಬೊ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಫ್‌ಎಂಸಿ, ಎಫ್‌ಎಂಸಿಒಎಎಚ್‌ಎಸ್, ಎಫ್‌ಎಂಸಿಒಪಿ ಆಡಳಿತಾಧಿಕಾರಿ ಡಾ.ಮೈಕೆಲ್ ಸಾಂತುಮೇಯರ್, ಎಫ್‌ಎಂಎಚ್‌ಟಿ, ಎಫ್‌ಎಂಎನ್‌ಸಿ, ಎಫ್‌ಎಂಎಎಚ್‌ಎಸ್‌ಸಿ ಆಡಳಿತಾಧಿಕಾರಿ ಫಾ.ಸಿಲ್ವೆಸ್ಟರ್ ವಿನ್ಸೆಂಟ್ ಲೋಬೊ, ದೇರಳಕಟ್ಟೆಯ ಎಫ್‌ಎಂಎಚ್‌ಪಿಡಿ ಆಡಳಿತಾಧಿಕಾರಿ ಫಾ.ನೆಲ್ಸನ್ ಧೀರಜ್ ಪೈಸ್, ಎಫ್‌ಎಂಎಚ್‌ಎಂಸಿ ಆಂಡ್ ಎಚ್ ಆಡಳಿತಾಧಿಕಾರಿ ಫಾ. ಡೊನಾಲ್ಡ್ ನಿಲೇಶ್ ಕ್ರಾಸ್ತಾ, ಎಫ್‌ಎಂಎಂಸಿ ಡೀನ್ ಡಾ. ಆಂಟನಿ ಸಿಲ್ವಾನ್ ಡಿಸೋಜ, ಎಫ್‌ಎಂಸಿಒಎಎಚ್‌ಎಸ್ ಪ್ರಾಂಶುಪಾಲ ಡಾ. ಶಿವಶಂಕರ ಎ.ಆರ್., ಎಫ್‌ಎಂಸಿಒಪಿ ಪ್ರಾಂಶುಪಾಲೆ ಪ್ರೊ. ಚೆರಿಷ್ಮಾ ಡಿಸಿಲ್ವ, ಎಫ್‌ಎಂಸಿಒಎನ್ ಆಂಡ್ ಎಫ್‌ಎಂಎಸ್‌ಒಎನ್ ಪ್ರಿನ್ಸಿಪಾಲ್ ಧನ್ಯಾ ದೇವಾಸಿಯಾ, ಎಫ್‌ಎಂಸಿ ಪ್ರಾಂಶುಪಾಲ ಪ್ರೊ. ಸಿಂಥಿಯಾ ಸಾಂತುಮಾಯರ್, ಎಫ್‌ಎಂಎಚ್‌ಎಂಸಿ ಪ್ರಾಂಶುಪಾಲ ಡಾ.ಇ.ಎಸ್.ಜೆ ಪ್ರಭು ಕಿರಣ್, ಎಫ್‌ಎಂಸಿಒಪಿಎಸ್ ಪ್ರಾಂಶುಪಾಲ ಡಾ. ಸತೀಶ್ ಎಸ್., ಎಫ್‌ಎಂಎಎಚ್‌ಎಸ್‌ಸಿ ಪ್ರಾಂಶುಪಾಲ ಡಾ. ಪೌಲಿನ್ ಆನಂದ್, ಫೋರ್ ವಿಂಡ್ಸ್ ಕಮ್ಯುನಿಕೇಶನ್ಸ್‌ನ ಎಲಿಯಾಸ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 'ಯುರೇಕಾ-2026' ಸಮಾರೋಪ ಸಮಾರಂಭ

ಸಿಕ್ಕ ಅವಕಾಶಗಳ ಸದ್ಬಳಕೆಯೇ ಯಶಸ್ಸಿನ ಕೀಲಿಕೈ: ರವೀಂದ್ರ

ಪುತ್ತೂರು: ಜೀವನದಲ್ಲಿ ನಿರೀಕ್ಷಿತವಾಗಿಯೂ, ಅನಿರೀಕ್ಷಿತವಾಗಿಯೂ ಅನೇಕ ಅವಕಾಶಗಳು ಹಲವು ಬಾರಿ ಎದುರಾಗುತ್ತವೆ. ಅವುಗಳನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಮ್ಮ ಯಶಸ್ಸಿನ ಗುಟ್ಟು ಅಡಗಿದೆ ಎಂದು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ. ಹೇಳಿದರು.

ಅವರು ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 'ಯುರೇಕಾ-2026' ರಾಜ್ಯ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ಬರೆದು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಾ, ಈ ರಜಾ ಅವಧಿಯು ಕೇವಲ ವಿಶ್ರಾಂತಿಯ ಕಾಲವಲ್ಲ. ಇದು ಕನಸುಗಳನ್ನು ರೂಪಿಸುವ ಹಾಗೂ ಭವಿಷ್ಯವನ್ನು ಕಟ್ಟುವ ಒಂದು ಸುವರ್ಣಾವಕಾಶವಾಗಿದೆ. ಇಂತಹ ಅವಕಾಶಗಳು ಜೀವನದಲ್ಲಿ ಪದೇ ಪದೇ ದೊರಕುವುದಿಲ್ಲ. ಆದುದರಿಂದ ಈ ರಜಾ ಅವಧಿಯನ್ನು ವ್ಯರ್ಥಗೊಳಿಸದೆ ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಆ ಮೂಲಕ ತಮ್ಮ ಸೃಜನಶೀಲತೆ ಹಾಗೂ ಜ್ಞಾನದ ಪರಿಧಿಯನ್ನು ವಿಸ್ತರಿಸುವತ್ತ ಗಮನಹರಿಸಬೇಕು ಎಂದು ತಿಳಿಸಿದರು.



ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ., ಆರು ದಿನಗಳ ಕಾಲ ನಡೆದ ಈ ವ್ಯಕ್ತಿತ್ವ ವಿಕಸನ ಶಿಬಿರವು ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯದ ದಾರಿಯನ್ನು ಸ್ಪಷ್ಟಪಡಿಸಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಿದ್ದು, ತಮ್ಮೊಳಗೆ ಹುದುಗಿರುವ ಸುಪ್ತ ಪ್ರತಿಭೆಗಳ ಅನಾವರಣದೊಂದಿಗೆ ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯಗಳು ಮತ್ತು ಸಾಮಾಜಿಕ ಜವಾಬ್ದಾರಿಗಳ ಕುರಿತು ಅರಿವು ಮೂಡಿಸುವಲ್ಲಿ ಪರಿಣಾಮಕಾರಿಯಾಗಿದೆ ಎಂದರು.

ಶಿಬಿರದ ಸಂಯೋಜಕಿ ಹಾಗೂ ರಸಾಯನ ಶಾಸ್ತ್ರ ವಿಭಾಗದ ಉಪನ್ಯಾಸಕಿ ಡಾ. ಸ್ನೇಹಾ ಬಿ.ಎಸ್. ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಹಂಸಿನಿ ಪ್ರಾರ್ಥಿಸಿದರು. ಸಂಸ್ಕೃತ ವಿಭಾಗದ ಉಪನ್ಯಾಸಕಿ ಶೀತಲಾ ಸ್ವಾಗತಿಸಿ, ಶಿಬಿರದ ಸಹ ಸಂಯೋಜಕರಾದ ಅಕ್ಷತಾ ಕೆ. ವಂದಿಸಿದರು. ಮಮತಾ ಶೆಟ್ಟಿ ನಿರ್ವಹಿಸಿದರು.

ಪ್ರಮಾಣ ಪತ್ರ ವಿತರಣೆ

ಏ.6ರಿಂದ 11ರವರೆಗೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ನಡೆಸಿದ ರಾಜ್ಯ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ವಿವಿಧೆಡೆಗಳಿಂದ ಆಗಮಿಸಿದ ವಿದ್ಯಾರ್ಥಿಗಳು ಪಾಲ್ಗೊಂಡು ಶಿಬಿರದ ಉದ್ದೇಶವನ್ನು ಸಾರ್ಥಕಗೊಳಿಸಿದರು. ಶಿಬಿರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ತಜ್ಞರೆನಿಸಿಕೊಂಡ ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ವೈವಿಧ್ಯಮಯ ಅವಧಿಗಳು, ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳು, ಮನೋರಂಜನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಶಿಬಿರದಲ್ಲಿ ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಕಿರುಸುದ್ದಿ



ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಆರ್‌ಸಿಬಿ	4	3	1	0	6	+1.148
ಹೈದರಾಬಾದ್	5	2	3	0	4	+0.322
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	4	2	2	0	4	-0.427
ಮುಂಬೈ	4	1	3	0	2	-0.772
ಚೆನ್ನೈ	4	1	3	0	2	-1.532
ಕೆಕೆಆರ್	4	0	3	1	1	-1.315

ಭಾರತಕ್ಕೆ ವಾಡಾ ಅಧ್ಯಕ್ಷ ಭೇಟಿ

ಹೊಸದಿಲ್ಲಿ: ವಿಶ್ವ ಡೋಪಿಂಗ್ ವಿರೋಧಿ ಸಂಸ್ಥೆ ವಿಶ್ವ ಆಂಟಿ–ಡೋಪಿಂಗ್ ಏಜೆನ್ಸಿ (ವಾಡಾ) ಅಧ್ಯಕ್ಷ ವಿಟೋಲ್ಡ್ ಬ್ಯಾಂಕಾ ದಿಲ್ಲಿಗೆ ಆಗಮಿಸಿದ್ದು, ಭಾರತದಲ್ಲಿ ಕ್ರೀಡಾ ಪಾರದರ್ಶಕತೆ ಕಾಪಾಡುವ ಬಗ್ಗೆ ಮಹತ್ವದ ಚರ್ಚೆಗಳನ್ನು ಆರಂಭಿಸಿದ್ದಾರೆ.ಅವರು ರಾಷ್ಟ್ರೀಯ ಆಂಟಿ–ಡೋಪಿಂಗ್ ಏಜೆನ್ಸಿ (ನಾಡಾ) ಅಧಿಕಾರಿಗಳೊಂದಿಗೆ ಸಭೆ ನಡೆಸಿ, ತುರ್ತು ಮತ್ತು ಗಂಭೀರ ಚರ್ಚೆಗಳನ್ನು ನಡೆಸಿದ್ದಾರೆ. ಈ ಚರ್ಚೆಯ ಮುಖ್ಯ ಉದ್ದೇಶ ಭಾರತದಲ್ಲಿ ಡೋಪಿಂಗ್ ವಿರುದ್ಧದ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಕ್ರೀಡೆಯ ಸತ್ಯನಿಷ್ಠೆಯನ್ನು ಕಾಪಾಡುವುದು.

ದೆಹಲಿಯಲ್ಲಿ ನಡೆಯಲಿರುವ ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕಾ ಅವರು ಭಾರತದಲ್ಲಿನ ಡೋಪಿಂಗ್ ಪ್ರಕರಣಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡುವ ನಿರೀಕ್ಷೆಯಿದೆ. ಸಾಮಾಜಿಕ ಜಾಲತಾಣದಲ್ಲಿ ಅವರು, ಭಾರತದ ನಾಡಾ ಮತ್ತು ರಾಷ್ಟ್ರೀಯ ಡೋಪ್ ಪರೀಕ್ಷಾ ಪ್ರಯೋಗಾಲಯಕ್ಕೆ ಭೇಟಿ ನೀಡಿ, ಡೋಪಿಂಗ್ ವಿರುದ್ಧದ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆ ಕುರಿತು ಚರ್ಚೆ ನಡೆಸಿದೆವು, ಎಂದು ತಿಳಿಸಿದ್ದಾರೆ.

ಕಾರ್ಸ್ ಬದಲಿಗೆ ಹೈದರಾಬಾದ್‌ಗೆ ಮಧುಶಂಕ



ಹೈದರಾಬಾದ್: ಇಂಗ್ಲೆಂಡ್ ವೇಗಿ ಬ್ರೈಡನ್ ಕಾರ್ಸ್ ಬದಲಿಗೆ ಶ್ರೀಲಂಕಾದ ಎಡಗೈ ವೇಗಿ ದಿಲ್ಶನ್ ಮಧುಶಂಕ ಆಡಲಿದ್ದಾರೆ ಎಂದು ಸನ್‌ರೈಸರ್ಸ್ ಹೈದರಾಬಾದ್ ಘೋಷಿಸಿದೆ. 75 ಲಕ್ಷ ರೂ. ಮೂಲ ಬೆಲೆಗೆ ಸೇರ್ಪಡೆಗೊಳ್ಳುತ್ತಿರುವ ಮಧುಶಂಕ, ಈ ಹಿಂದೆ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸಿದ ನಂತರ ಐಪಿಎಲ್‌ನಲ್ಲಿ ಎರಡನೇ ಬಾರಿಗೆ ಆಡಲಿದ್ದಾರೆ. ಎಡಗೈ ಬೌಲರ್ ಶ್ರೀಲಂಕಾವನ್ನು ಒಂದು ಟೆಸ್ಟ್, 28 ಏಕದಿನ ಮತ್ತು 19 ಟಿ20ಗಳಲ್ಲಿ ಪ್ರತಿನಿಧಿಸಿದ್ದಾರೆ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 70 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು 2026 ರ ಟಿ20 ವಿಶ್ವಕಪ್‌ಗಾಗಿ ಶ್ರೀಲಂಕಾ ತಂಡದ ಭಾಗವಾಗಿದ್ದರು, ನಾಲ್ಕು ಪಂದ್ಯಗಳಲ್ಲಿ ಐದು ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಮೆಡ್ವೆಡೆವ್‌ಗೆ ದಂಡ

ಹೊಸದಿಲ್ಲಿ: ಮಾಂಟೆ ಕಾರ್ಲೋ ಮಾಸ್ಟರ್ಸ್‌ನಲ್ಲಿ ರಷ್ಯಾದ ಟೆನಿಸ್ ಆಟಗಾರ ಡ್ಯಾನಿಲ್ ಮೆಡ್ವೆಡೆವ್ ಅಸಭ್ಯ ವರ್ತನೆಗಾಗಿ ದಂಡಕ್ಕೊಳಗಾಗಿದ್ದಾರೆ.

ಇಟಲಿಯ ಮತ್ತಿಯೋ ಬೆರೆಟ್ಟಿನಿ ವಿರುದ್ಧ ನಡೆದ ಪಂದ್ಯದಲ್ಲಿ 6–0, 6–0 ಅಂತರದಲ್ಲಿ ಸೋತ ಮೆಡ್ವೆಡೆವ್ ತಮ್ಮ ರಾಕೆಟ್ ಅನ್ನು ಏಳು ಬಾರಿ ಒಡೆದ ಕಾರಣಕ್ಕೆ 6,000 ಯೂರೋ (ಸುಮಾರು 7,000 ಡಾಲರ್) ದಂಡ ವಿಧಿಸಲಾಗಿದೆ ಎಂದು ಎಟಿಪಿ ಟೂರ್ ತಿಳಿಸಿದೆ. ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಮೆಡ್ವೆಡೆವ್, ಪಂದ್ಯದಲ್ಲಿ ಎರಡನೇ ಸೆಟ್ ಆರಂಭದಲ್ಲೇ ಅಂಪೈರ್‌ನಿಂದ ಅಸಭ್ಯ ವರ್ತನೆಗಾಗಿ ಕೋಡ್ ಉಲ್ಲಂಘನೆ ಎಚ್ಚರಿಕೆ ಪಡೆದರು. ಇದಕ್ಕಿಂತ ಮೊದಲು ಅವರು ಆಸ್ಟ್ರೇಲಿಯನ್ ಓಪನ್ ಮತ್ತು ಯುಎಸ್ ಓಪನ್ ಪಂದ್ಯಗಳಲ್ಲಿ ತೋರಿದ ಆಕ್ರೋಶದ ವರ್ತನೆಗಾಗಿ ಕ್ರಮವಾಗಿ 76,000 ಮತ್ತು 42,500 ಡಾಲರ್ ದಂಡ ಕಟ್ಟಿದ್ದರು.

ಮೆಡ್ವೆಡೆವ್ ಈಗಾಗಲೇ ಹಿನ್ನಡೆಯಲ್ಲಿದ್ದಾಗ, ಎರಡನೇ ಸೆಟ್‌ನಲ್ಲಿ ತಮ್ಮ ಸರ್ವಿಸ್ ಗೇಮ್ ಕಳೆದುಕೊಂಡ ಬಳಿಕ ಕೋಪಗೊಂಡು ರಾಕೆಟ್ ಅನ್ನು ನೆಲಕ್ಕೆ ಬಡಿದು, ನಂತರ ಅದನ್ನು ಕೋರ್ಟ್ ಅಂಚಿನತ್ತ ಎಸೆದರು. ಬಳಿಕ ನಿರಂತರವಾಗಿ ರಾಕೆಟ್ ಒಡೆಯುವ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

ಇಂದು ಸೂಪರ್ ಜೇಂಟ್ಸ್–ಆರ್‌ಸಿಬಿ ಪಂದ್ಯ | ರಜತ್ ಪಡೆಯಲ್ಲಿ ವಿಶ್ವಾಸ | ಪುಟಿದೇಳುವ ತವಕದಲ್ಲಿ ಪಂತ್ ಪಡೆ

ಲಖನೌ ಸವಾಲಿಗೆ ಬೆಂಗಳೂರು ಸಿದ್ಧ

ಬೆಂಗಳೂರು: ತವರು ಪಂದ್ಯದಲ್ಲಿ ಲಖನೌ ಸವಾಲಿಗೆ ಸಿದ್ಧವಾಗಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತವರು ಪಂದ್ಯ ಜಯದ ವಿಶ್ವಾಸದಲ್ಲಿದೆ.

ಶುಕ್ರವಾರದಂದು ಬೆಂಗಳೂರಿನಲ್ಲಿ ಗೆಲುವಿನ ಲಯದಲ್ಲಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸೋಲು–ಗೆಲುವಿನ ಫಲ ಪಡೆದಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್‌ನ 23ನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಆರ್‌ಸಿಬಿಗೆ ತವರಲ್ಲಿ ಸೋಲದ ಬಲವಿದ್ದರೆ ಲಖನೌಗೆ ಗೆಲುವಿನ ತವಕವಿದೆ. ಪಾಟಿದಾರ್ ನಾಯಕತ್ವದಲ್ಲಿ ಹೊಸ ಮುಖ ಪಡೆದಿರುವ ಬೆಂಗಳೂರು ತಂಡವು ತವರಲ್ಲಿ ಪಾರುಪತ್ಯ ಸಾಧಿಸಿದೆ. ಅತಿಥಿ ಹೈದರಾಬಾದ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳನ್ನು ಈಗಾಗಲೇ ಸೋಲಿಸಿ ಲಖನೌ ಬೇಟೆಗೆ ಸಿದ್ಧವಾಗಿದೆ ಆರ್‌ಸಿಬಿ. ಇತ್ತ ಲಖನೌ ಕೂಡ ಎರಡು ಸತತ ಗೆಲುವಿನ ನಂತರ ಭಾರೀ ಹಿನ್ನಡೆ ಅನುಭವಿಸಿದೆ. ಕಳೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋತಿದೆ. ಪುಟಿದೇಳುವ ಹಂಬಲದಲ್ಲಿದೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್ ಹಾಗೂ ಚೆನ್ನೈ ತಂಡವನ್ನು ತವರಿನಲ್ಲಿ ಸೋಲಿಸಿರುವ ಬೆಂಗಳೂರು ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಏಕಪಕ್ಷೀಯವಾಗಿ ಗೆದ್ದಿದೆ. ರಾಜಸ್ಥಾನ ಪಂದ್ಯದ ನಂತರ ಪುಟಿದೆದ್ದಿರುವ ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಅನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಸಾಲ್ಟ್ ಅಬ್ಬರದ ಬ್ಯಾಟಿಂಗ್ ಲಯಕ್ಕೆ ಮರಳಿದ್ದು ತಂಡದ ಬಲವನ್ನು ಹೆಚ್ಚಿಸಿದ್ದಾರೆ. ವಿರಾಟ್ ಕೊಹ್ಲಿ ಮೊದಲ ಪಂದ್ಯದಿಂದಲೂ ಆಕ್ರಮಣಕಾರಿ ಮತ್ತು ಅಬ್ಬರದ ಬ್ಯಾಟಿಂಗ್ ಮಾಡುತ್ತಿರುವುದು ತಂಡಕ್ಕೆ ಆನೆ ಬಲ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ. ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಫಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ.

ಪುಟಿದೇಳುವ ತವಕದಲ್ಲಿ ಪಂತ್ ಪಡೆ: ಹೈದರಾಬಾದ್ ಹಾಗೂ ಕೆಕೆಆರ್ ವಿರುದ್ಧದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನದೊಂದಿಗೆ ಎರಡು ಸತತ ಗೆಲುವು ಸಾಧಿಸಿದ್ದ ಲಖನೌ ಸೂಪರ್ ಜೇಂಟ್ಸ್ ಗೆಲುವಿನ ತವಕದಲ್ಲಿದೆ. ಪ್ರಮುಖ ಬ್ಯಾಟರ್‌ಗಳಾದ ಪಂತ್, ಪೂರಣ್, ಮಾರ್ಕ್ರಂ ಮತ್ತು ಮಾರ್ಷ್ ಅಲ್ಪ ಲಯಕ್ಕಾಗಿ ಪರದಾಡುತ್ತಿರುವುದೇ ತಂಡಕ್ಕೆ ಚಿಂತೆಯಾಗಿದೆ. ಇನ್ನುಳಿದಂತೆ ಶಮಿ, ಪ್ರಿನ್ಸ್, ಆವೇಶ್ ಸೇರಿದಂತೆ ಸ್ಪಿನ್ನರ್‌ಗಳಾದ ಸಿದ್ಧಾರ್ಥ್, ದಿಗ್ವೇಶ್ ಮಿಂಚಲು ಸಜ್ಜಾಗಿದ್ದಾರೆ.



ಕೊಹ್ಲಿ ಫಿಟ್!



ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಪಾದದ ಗಾಯದಿಂದ ಹೊರ ಕೂತಿದ್ದ ವಿರಾಟ್ ಕೊಹ್ಲಿ ಮರಳಿ ಮೈದಾನಕ್ಕಿಳಿದಿದ್ದಾರೆ. ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಅಭ್ಯಾಸ ಅವಧಿಯಲ್ಲಿ ಬ್ಯಾಟಿಂಗ್ ಮಾಡಿದ ಅವರು, ಸ್ಫೋಟಕ ಹೊಡೆತಗಳನ್ನು ಬಾರಿಸಿ ಮಿಂಚಿದರು. ಆದಾಗ್ಯೂ, ಮಾಧ್ಯಮಗೋಷ್ಠಿಯಲ್ಲಿ ಮಾತನಾಡುವಾಗ ರಸಿಖ್ ಆಡುವ ಬಗ್ಗೆ ಖಚಿತಪಡಿಸಲಿಲ್ಲ.

ಪ್ರತಿಯೊಬ್ಬರಿಗೂ ಅವರವರ ಪಾತ್ರ ತಿಳಿದಿದೆ: ರಸಿಖ್ ದಾರ್

ಎಲ್‌ಎಸ್‌ಜಿ ಪಂದ್ಯಕ್ಕೆ ನಾವು ಸಜ್ಜು




ಮುಂಬೈ ವಿರುದ್ಧದ ಗೆಲುವು ತಂಡಕ್ಕೆ ಮಹತ್ವದ ಜಯವಾಗಿತ್ತು. ನಾವು ಎಲ್ಲರೂ ಆತ್ಮವಿಶ್ವಾಸದಲ್ಲಿದ್ದೇವೆ. ತಂಡದ ಪ್ರತಿಯೊಬ್ಬ ಸದಸ್ಯರಿಗೂ ಅವರವರ ಪಾತ್ರ ಸ್ಪಷ್ಟವಾಗಿ ತಿಳಿದಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಲ್‌ರೌಂಡರ್ ರಸಿಖ್ ಸಲಾಮ್ ದಾರ್ ತಿಳಿಸಿದರು. ಮಂಗಳವಾರದಂದು ಪಂದ್ಯ ಪೂರ್ವ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈದಾನದಲ್ಲಿ ಆಡಲು ನಾವು ಕಾತರರಾಗಿದ್ದೇವೆ, ಎಂದು ಹೇಳಿದರು.

ಸ್ವಲ್ಪ ಸಮಯದ ಬಳಿಕ ಐಪಿಎಲ್ ಪಂದ್ಯ ಆಡುತ್ತಿದ್ದರೂ ಪ್ರಕ್ರಿಯೆ ಅದೇ ಆಗಿತ್ತು. ಕಳೆದ ಒಂದು ವರ್ಷದಲ್ಲಿ ನಾವು ಮಾಡಿದ ಅಭ್ಯಾಸವು ಪಂದ್ಯ ಪರಿಸ್ಥಿತಿಗಳಿಗೆ ಸಿದ್ಧಗೊಳಿಸಿದೆ. ಹಿಂದಿನ ಪಂದ್ಯದಲ್ಲಿ ನನ್ನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗಮನ ಹರಿಸಿದೆ, ಎಂದು ಹೇಳಿದರು. ದೇಶಿ ಕ್ರಿಕೆಟ್‌ನ ತಂಡ ಬದಲಾದ ಕುರಿತು ಮಾತನಾಡಿ ಎಲ್ಲೇ ಆಡಿದರೂ ನನಗೆ ಅಭ್ಯಾಸವಾಗಿದೆ. ಎಲ್ಲಾ ಕಡೆ ನನ್ನ ಗಮನ ಪ್ರದರ್ಶನದ ಮೇಲಿತ್ತು ಎಂದಿದ್ದಾರೆ. ಅನುಭವೀ ಬೌಲಿಂಗ್ ದಳದ ಭಾಗವಾಗಿರುವ ರಸಿಖ್ ಸಲಾಂ ದಾರ್, ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜೆಲ್ವುಡ್ ಮತ್ತು ಕೃಣಾಲ್ ಪಾಂಡ್ಯ ಅವರ ಜೊತೆ ಆಡುತ್ತಿದ್ದಾರೆ. ಅನುಭವದ ಬೌಲಿಂಗ್ ಪಡೆ ನಮ್ಮಲ್ಲಿದೆ. ಹೆಜಲ್ವುಡ್, ಭುವನೇಶ್ವರ್ ಕುಮಾರ್ ಮುಂತಾದ ಆಟಗಾರರನ್ನು ನಾವು ತಂಡದಲ್ಲಿ ಹೊಂದಿದ್ದೇವೆ, ಹೀಗಿರುವಾಗ ನನಗೆ ಸಹಕಾರ ಮತ್ತು ಬೆಂಬಲ ಸಿಗುತ್ತದೆ. ಅಷ್ಟಕ್ಕೂ ಮೀರಿ ಯಾವುದೇ ಆಟಗಾರನಿಗೂ ತನ್ನಿಂದ ತಂಡಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಮನವರಿಕೆ ಇರುತ್ತದೆ. ನಾನು ಯಾವಾಗಲೂ ತಂಡಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತೇನೆ. ಜಯದಲ್ಲಿ ದೊಡ್ಡ ಇಂಪ್ಯಾಕ್ಟ್ ಮಾಡಲು ಪ್ರಯತ್ನಿಸುತ್ತೇನೆ ಎಂದಿದ್ದಾರೆ.

ಪಿಚ್ ರಿಪೋರ್ಟ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.



ಬೆಂಗಳೂರು ತಂಡ

ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮ, ಕೃಣಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೆವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹ್ಯಾಜೆಲ್ವುಡ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಓಸ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾನ್.

ಲಖನೌ: ಮಿಚೆಲ್ ಮಾರ್ಷ್, ಏಡೆನ್ ಮಾರ್ಕ್ರಂ, ರಿಷಭ್ ಪಂತ್(ನಾಯಕ), ಆಯುಷ್ ಬಡೋನಿ, ನಿಕೋಲಸ್ ಪೂರಣ್, ಅಬ್ದುಲ್ ಸಮದ್, ಮುಕುಲ್ ಚೌಧರಿ, ಮೊಹಮ್ಮದ್ ಶಮಿ, ಆವೇಶ್ ಖಾನ್, ಮಣಿಮಾರನ್ ಸಿದ್ಧಾರ್ಥ್, ದಿಗ್ವೇಶ್ ಸಿಂಗ್ ರಾಠಿ, ಪ್ರಿನ್ಸ್ ಯಾದವ್, ಮ್ಯಾಥ್ಯೂ ಬ್ರೀಟ್ಜ್‌ಕೆ, ಷಹಬಾಜ್ ನೊಂಬ್ ಅಹ್ಮದ್, ಶಹಬಾಜ್ ಅಹ್ಮದ್ ಮೊಹ್ಸಿನ್ ಖಾನ್, ಅರ್ಜುನ್ ತೆಂಡೂಲ್ಕರ್, ಆಕಾಶ್ ಮಹಾರಾಜ್, ರಘುವಂಶಿ, ಅರ್ಶಿನ್ ಕುಲಕರ್ಣಿ, ನಮನ್ ತಿವಾರಿ, ಜಾರ್ಜ್ ಲಿಂಡೆ, ಇಂಗ್ಲಿಸ್

ರಾಜಸ್ಥಾನ ಓಟಕ್ಕೆ ಹೈದರಾಬಾದ್ ಬ್ರೇಕ್!

ಹೈದರಾಬಾದ್: ಗೆಲುವಿನ ನಾಗಾಲೋಟದೊಂದಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಪಾರುಪತ್ಯ ಸಾಧಿಸುತ್ತಿದ್ದ ರಾಜಸ್ಥಾನ ರಾಯಲ್ಸ್ ತಂಡ ಮೊದಲ ಸೋಲನುಭವಿಸಿದೆ.

ಬಂದ ತಂಡಗಳನ್ನೆಲ್ಲಾ ದಂಡಿಸುತ್ತಾ ಮೆರೆದಾಡುತ್ತಿದ್ದ ರಾಜಸ್ಥಾನಕ್ಕೆ ಕಿಶನ್ ಬಳಗ 57 ರನ್‌ಗಳ ಸೋಲಿನಾಘಾತ ನೀಡಿತು. ಹೊಸ ಬೌಲರ್‌ಗಳಾದ ಹುಸೈನ್ ಹಾಗೂ ಪ್ರಫುಲ್ ಹಿಂಗೆ ಅವರ ಕರಾರುವಾಕ್ ಬೌಲಿಂಗ್ ಪ್ರದರ್ಶನದೊಂದೊಂದಿಗೆ ಹೈದರಾಬಾದ್ ಪಾರಮ್ಯ ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುವಾಗ ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡದ ಮೊತ್ತ ಹಿಗ್ಗಿಸಿದರು. ಇದರೊಂದಿಗೆ ಹೈದರಾಬಾದ್ ಮೊದಲು ಬ್ಯಾಟಿಂಗ್ ಮಾಡಿ 216 ರನ್ ಗಳಿಸಿತು. ಗುರಿ ಬೆನ್ನತ್ತಿದ ರಾಜಸ್ಥಾನ 159 ರನ್ ಗಳಿಸುವಷ್ಟರಲ್ಲಿ ಸುಸ್ತಾಯಿತು. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ್ದ ಪ್ರಫುಲ್ ಹಿಂಗೆ ಮತ್ತು ಸಾಕಿಬ್ ಹುಸೈನ್ ಕ್ರಿಕೆಟ್ ಲೋಕದ ಗಮನ ಸೆಳೆದರು. ಮೊದಲಿನಿಂದಲೂ ರಾಜಸ್ಥಾನ ಪಡೆಗೆ ಕಾಡಿದ ಈ ಜೋಡಿ, ಬರೋಬ್ಬರಿ 8 ವಿಕೆಟ್‌ಗಳನ್ನು ಪಡೆಯಿತು. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್, ಧ್ರುವ್ ಜುರೇಲ್, ಹೆಟ್ಮೇರ್ ಹೀಗೆ ಎಲ್ಲಾ ಬ್ಯಾಟರ್‌ಗಳನ್ನೂ ಕಟ್ಟಿ ಹಾಕಿದ ಈ ಜೋಡಿ ಎರಡನೇ ಇನ್ನಿಂಗ್ಸ್‌ನ ಆರಂಭದಲ್ಲೇ ಪಂದ್ಯ ಗೆಲ್ಲಿಸಿತು. ಕಿಶನ್ 92 ರನ್‌ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಅನ್ನಿಸಿಕೊಂಡರು.

ಹಿಂಗೆ ಸ್ಟ್ರೈಕ್: ಬೂಮ್ರಾ, ಹ್ಯಾಜೆಲ್ವುಡ್, ಪಾಂಡ್ಯ, ಭುವನೇಶ್ವರ್ ಅಂತಹ ದೊಡ್ಡ ದೊಡ್ಡ ಬೌಲರ್‌ಗಳ ಬೆವರಿಳಿಸಿದ್ದ ವೈಭವ್ ಸೂರ್ಯವಂಶಿ ಮೊದಲನೇ ಬಾಲ್‌ನಲ್ಲೇ ವಿಕೆಟ್ ಕೊಟ್ಟರು. ದೇಶಿ ಕ್ರಿಕೆಟ್‌ನಲ್ಲಿ ಗಮನ ಸೆಳೆದಿದ್ದ ಪ್ರಫುಲ್ ಅವರ ವಿಕೆಟ್ ಪಡೆದರು. ಜೈಸ್ವಾಲ್ ಆಟ ಕೂಡ 1 ರನ್‌ಗೆ ನಿಂತಿತು. ಧ್ರುವ್ ಜುರೇಲ್, ಪ್ರಿಟೋರಿಯಸ್ ಆಟ ಕೂಡ ತಂಡ 2 ರನ್ ಅನ್ನುವಷ್ಟರಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ವೇಳೆ ಬಂದ ಜಡೇಜಾ ಹಾಗೂ ಫೆರಾರಿಯಾ ಜೊತೆಯಾಟ ನಿರ್ಮಿಸಿದರು. ಅತಿ ಹಿನ್ನಡೆ ಪಡೆಯುವ ಆತಂಕದಲ್ಲಿದ್ದ ರಾಜಸ್ಥಾನ ಇವರಿಬ್ಬರ ಆಸರೆ ಪಡೆಯಿತು. ಈ ಜೋಡಿ ಬರೋಬ್ಬರಿ 118 ರನ್‌ಗಳ ಜೊತೆಯಾಟ ನಿರ್ಮಿಸಿತು. ಜಡೇಜಾ 45, ಫೆರಾರಿಯಾ 69 ರನ್ ಗಳಿಸಿದರು. ರಾಜಸ್ಥಾನ ಸ್ಥಿರ ಸ್ಥಿತಿಗೆ ಬಂದಿತು. ಆಗ ಮತ್ತೊಬ್ಬ ದೇಶಿ ಬೌಲರ್ ಸಾಕಿಬ್ ಹುಸೈನ್ ಕರಾರುವಾಕ್ ಪ್ರದರ್ಶನ ನೀಡಿದರು. ಅವರೂ 4 ವಿಕೆಟ್ ಪಡೆದುಕೊಂಡರು. ತಂಡ 159 ರನ್‌ಗಳಿಗೆ ಆಲೌಟ್ ಆಯಿತು.



ಸಂಕ್ಷಿಪ್ತ ಸ್ಕೋರ್

ಹೈದರಾಬಾದ್: 20 ಓವರ್‌ಗಳಲ್ಲಿ 216/6ಕಿಶನ್ 91, ಕ್ಲಾಸೆನ್ 40; ಆರ್ಚರ್ 37/2
ರಾಜಸ್ಥಾನ: 19 ಓವರ್‌ಗಳಲ್ಲಿ 159/10: ಫೆರಾರಿಯಾ 69, ಜಡೇಜಾ 45; ಹುಸೈನ್ 24/4, ಹಿಂಗೆ 34/4

- ಹಿಂಗೆ–ಹುಸೈನ್ ದಾಳಿಗೆ ತತ್ತರಿಸಿದ ರಾಯಲ್ಸ್ ಪಡೆ
- ಕಿಶನ್ ಪಡೆಗೆ ಭರ್ಜರಿ ಗೆಲುವು

ಮಿಂಚಿದ ಆಯುಷ್ ಮಾತ್ರೆ | ಬ್ರೇವಿಸ್ ಅಬ್ಬರ | ಚೆನ್ನೈ 192/5

ಕೆಕೆಆರ್‌ಗೆ ಕಠಿಣ ಸವಾಲು

ಚೆನ್ನೈ: ಆಯುಷ್ ಮಾತ್ರೆ, ಸಂಜು ಸ್ಯಾಮ್ಸನ್ ಹಾಗೂ ಡೇವಾಲ್ಡ್ ಬ್ರೇವಿಸ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತವರು ಪಂದ್ಯದಲ್ಲಿ ಕೆಕೆಆರ್‌ಗೆ ಕಠಿಣ ಗುರಿ ನೀಡಿತು. ಮೊದಲ ಗೆಲುವು ಸಾಧಿಸಿದ ನಂತರ ಆತ್ಮವಿಶ್ವಾಸದಲ್ಲಿದ್ದ ಚೆನ್ನೈ ಬ್ಯಾಟರ್‌ಗಳು ಮಿಂಚಿನ ಹೊಡೆತಗಳೊಂದಿಗೆ ಕೆಕೆಆರ್‌ಗೆ ಕಾಟ ನೀಡಿದರು.

ಆರಂಭದಲ್ಲಿ ಸಂಜು, ಆಯುಷ್, ಮಧ್ಯಮ ಕ್ರಮಾಂಕದಲ್ಲಿ ಬ್ರೇವಿಸ್ ಹಾಗೂ ಸರ್ಫರಾಜ್ ಅಬ್ಬರಿಸಿದರು. ಈ ನಾಲ್ವರ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 192 ರನ್ ಗಳಿಸಿದೆ. ಇತ್ತ ಕೆಕೆಆರ್ ಕಾರ್ತಿಕ್ ತ್ಯಾಗಿ, ಅಂಕುಲ್ ರಾಯ್ ಮತ್ತು ಸುನಿಲ್ ನರೈನ್ ಅವರ ಕರಾರುವಾಕ್ ದಾಳಿಯೊಂದಿಗೆ ಮಿಂಚಿ ದೊಡ್ಡ ಸ್ಕೋರ್‌ಗೆ ಕಡಿವಾಣ ಹಾಕಿತು.

ಆಯುಷ್ ಅಬ್ಬರ: ಬ್ಯಾಟಿಂಗ್ ಆಹ್ವಾನ ಪಡೆದಿದ್ದ ಚೆನ್ನೈ ಸೂಪರ್ ಕಿಂಗ್ಸ್ ಅಬ್ಬರದ ಆರಂಭ ಪಡೆಯಿತು. ಮೊದಲನೇ ಮೂರು ಬಾಲ್‌ಗಳಲ್ಲಿ ಸತತ ಬೌಂಡರಿಗಳನ್ನು ಬಾರಿಸಿದ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ಗೆ ಅಡಿಪಾಯ ಹಾಕಿಕೊಟ್ಟರು. ಆದಾಗ್ಯೂ ಗಾಯಕ್ವಾಡ್ ಮತ್ತೊಮ್ಮೆ ಕೈಕೊಟ್ಟು 7 ರನ್‌ಗೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾತ್ರೆ ಅಬ್ಬರದ ಬ್ಯಾಟಿಂಗ್ ಮಾಡಿದರು. ಕೆಕೆಆರ್ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದ ಅವರು ಪಂದ್ಯದ ಗತಿಯನ್ನೇ ಬದಲಾಯಿಸಿಬಿಟ್ಟರು. ಸ್ಫೋಟಕ ಬೌಂಡರಿ ಮತ್ತು ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಅವರು 17 ಬಾಲ್‌ಗಳಲ್ಲಿ 38 ರನ್ ಚಚ್ಚಿ ಅರೋರಾಗೆ ಕ್ಯಾಚ್ ಆದರು. ಚೆನ್ನೈ ಪವರ್ ಪ್ಲೇನಲ್ಲಿ ಬರೋಬ್ಬರಿ 72 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಂಜು ಸ್ಯಾಮ್ಸನ್ ತಮ್ಮ ಸ್ಟ್ರೈಕ್ ರೇಟ್ ಇಳಿಸಿಕೊಂಡರು. ಡೇವಾಲ್ಡ್ ಬ್ರೇವಿಸ್ ಕೂಡ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಮುಲಾಜಿಗೆ ಬಿದ್ದರು. ಸಿಂಗಲ್‌ಗಳ ಮೂಲಕವೇ ಇಬ್ಬರು ಇನ್ನಿಂಗ್ಸ್ ಕಟ್ಟತೊಡಗಿದರು. ಇನ್ನೇನು ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾಗುತ್ತಿದ್ದ ಸಂಜು ಸ್ಯಾಮ್ಸನ್ 32 ಬಾಲ್‌ಗಳಲ್ಲಿ 48 ರನ್ ಗಳಿಸಿದ್ದಾಗ ಬೋಲ್ಡ್ ಆದರು. ಸರ್ಫರಾಜ್ ಖಾನ್ ಹಾಗೂ ಬ್ರೇವಿಸ್ ಕೆಲಕಾಲ ನಿಧಾನ ಬ್ಯಾಟಿಂಗ್ ಮಾಡಿದರು. ಚೆನ್ನೈ ಮಧ್ಯಮ ಓವರ್‌ಗಳಲ್ಲಿ 90 ರನ್ ಮಾತ್ರ ಗಳಿಸಿತು.

ಅಂತಿಮ ಓವರ್‌ಗಳಲ್ಲಿ ಕೆಕೆಆರ್ ಕಮಾಲ್: ಕಾರ್ತಿಕ್ ತ್ಯಾಗಿ, ಸುನಿಲ್ ನರೈನ್ ಮತ್ತು ವೈಭವ್ ಅವರ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಮಿಂಚಿದ ಕೆಕೆಆರ್ ಚೆನ್ನೈ ತಂಡಕ್ಕೆ ಕಡಿವಾಣ ಹಾಕಿತು. ಸ್ಲಾಗ್ ಓವರ್‌ಗಳಲ್ಲಿ ಚೆನ್ನೈನ ದೊಡ್ಡ ದೊಡ್ಡ ಬ್ಯಾಟರ್‌ಗಳು ಯಾರ್ಕರ್‌ಗಳಿಗೆ ತತ್ತರಿಸಿದರು. ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಿದ್ದ ಬ್ರೇವಿಸ್ 41 ರನ್‌ಗಳಿಗೆ ಔಟಾದರು. ಸರ್ಫರಾಜ್ ಖಾನ್ ಕೂಡ 23 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಅಂತಿಮ ಓವರ್‌ಗಳಲ್ಲಿ ಶಿವಂ ದುಬೆ ಕೂಡ ದೊಡ್ಡ ಹೊಡೆತಗಳಿಗೆ ಪ್ರಯತ್ನಿಸಿ ವಿಫಲರಾದರು. 16–20ನೇ ಓವರ್‌ವರೆಗೆ ಚೆನ್ನೈ 30 ರನ್ ಮಾತ್ರ ಗಳಿಸಿತು. ಒಟ್ಟು 5 ವಿಕೆಟ್ ನಷ್ಟಕ್ಕೆ 192 ರನ್‌ಗಳಿಸಿ ದೊಡ್ಡ ಸ್ಕೋರ್ ನಿರ್ಮಿಸಿತು.



ಬ್ಯಾಡ್ಮಿಂಟನ್: ಆಯುಷ್ 6 ಸ್ಥಾನ ಜಿಗಿತ

ಹೊಸದಿಲ್ಲಿ: ಕಳೆದ ವಾರ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್‌ನಲ್ಲಿ ಯಶಸ್ವಿ ಓಟದ ನಂತರ ಮಂಗಳವಾರ ಬಿಡುಗಡೆಯಾದ ಇತ್ತೀಚಿನ ಬಿಡಬ್ಲ್ಯೂಎಫ್ ಶ್ರೇಯಾಂಕದಲ್ಲಿ ಭಾರತೀಯ ಶಟ್ಲರ್ ಆಯುಷ್ ಶೆಟ್ಟಿ ಏಳು ಸ್ಥಾನಗಳ ಏರಿಕೆ ಕಂಡು 18 ನೇ ಸ್ಥಾನಕ್ಕೆ ತಲುಪಿದ್ದಾರೆ. ಕಳೆದ ವರ್ಷ ಯುಎಸ್ ಓಪನ್ ಪಂದ್ಯಾವಳಿ ಗೆದ್ದಿದ್ದ ಅವರು, ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಶೆಟ್ಟಿ ಬೆಳ್ಳಿ ಪದಕದೊಂದಿಗೆ ಕೊನೆಗೊಂಡರು ಮತ್ತು 1965 ರಲ್ಲಿ ಚಿನ್ನ ಗೆದ್ದ ದಿನೇಶ್ ಖನ್ನಾ ನಂತರ ಟೂರ್ನಮೆಂಟ್‌ನ ಫೈನಲ್‌ನಲ್ಲಿ ಆಡಿದ ಎರಡನೇ ಭಾರತೀಯ ಪುರುಷರ ಸಿಂಗಲ್ಸ್ ಆಟಗಾರರಾದರು. ಲಕ್ಷ್ಯ ಸೇನ್ ಅಗ್ರ 20 ರಲ್ಲಿರುವ ಏಕೈಕ ಭಾರತೀಯರಾಗಿದ್ದು, ಒಂದು ಸ್ಥಾನ ಬಡ್ತಿ ಪಡೆದು ವಿಶ್ವದ 11 ನೇ ಸ್ಥಾನಕ್ಕೆ ತಲುಪಿದ್ದಾರೆ. ನಿಂಗ್ಬೊದಲ್ಲಿ ಚಿನ್ನ ಗೆದ್ದ ಚೀನಾದ ಶಿ ಯು ಕಿ ಒಂದು ಸ್ಥಾನ ಬಡ್ತಿ ಪಡೆದು ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೆ ತಲುಪಿದ್ದಾರೆ



ಸಂಜು ಸ್ಯಾಮ್ಸನ್‌ಗೆ ತಿಂಗಳ ಆಟಗಾರ ಗರಿ


ಮುಂಬೈ: ಭಾರತದ ಆರಂಭಿಕ ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಮಾರ್ಚ್ ತಿಂಗಳ ಐಸಿಸಿ ಪುರುಷರ ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಟಿ20 ವಿಶ್ವಕಪ್ ಜಯದಲ್ಲಿ ಮಹತ್ವದ ಪಾತ್ರವಹಿಸಿದ ಅವರಿಗೆ ಈ ಗೌರವ ಲಭಿಸಿದೆ. ಟೂರ್ನಿಯ ಆರಂಭಿಕ ಹಂತದಲ್ಲಿ ಹೆಚ್ಚು ಅವಕಾಶ ಸಿಗದಿದ್ದರೂ, ಪ್ರಮುಖ ಪಂದ್ಯಗಳಲ್ಲಿ ಸ್ಯಾಮ್ಸನ್ ಅತ್ಯುತ್ತಮ ಪ್ರದರ್ಶನ ನೀಡಿ ಭಾರತದ ಪ್ರಶಸ್ತಿ ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಪ್ರಶಸ್ತಿಯೊಂದಿಗೆ ಕಳೆದ ಐದು ತಿಂಗಳ ಅವಧಿಯಲ್ಲಿ ವಿಭಿನ್ನ ದೇಶಗಳ ಆಟಗಾರರು ಈ ಗೌರವವನ್ನು ಗೆಲ್ಲುವ ಸರಣಿಯೂ ಮುಂದುವರಿದಿದೆ. ದಕ್ಷಿಣ ಆಫ್ರಿಕಾದ ಸೈಮನ್ ಹಾರ್ಮರ್, ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್, ನ್ಯೂಜಿಲ್ಯಾಂಡ್‌ನ ಡ್ಯಾರಿಲ್ ಮಿಚೆಲ್ ಹಾಗೂ ಪಾಕಿಸ್ತಾನದ ಸಾಹಿಬ್‌ಜಾದಾ ಫರ್ಹಾನ್ ಕೂಡ ಈ ಅವಧಿಯಲ್ಲಿ ಪ್ರಶಸ್ತಿ ಪಡೆದಿದ್ದರು.

ವಿಶೇಷ ಅನುಭವ: ಸಂಜು: ಪ್ರಶಸ್ತಿ ಬಗ್ಗೆ ಮಾತನಾಡಿದ ಸ್ಯಾಮ್ಸನ್, ಐಸಿಸಿ ಪ್ರಶಸ್ತಿ ಗೆಲ್ಲುವುದು ನನಗೆ ವಿಶೇಷ ಅನುಭವ. ಟಿ20 ವಿಶ್ವಕಪ್‌ನಲ್ಲಿ ಭಾರತದ ಜಯದಲ್ಲಿ ಭಾಗಿಯಾಗುವುದು ನನ್ನ ಕನಸಿನ ಕ್ಷಣವಾಗಿತ್ತು, ಎಂದು ಹೇಳಿದರು. ಆರಂಭದಲ್ಲಿ ಸ್ಥಿರ ಸ್ಥಾನ ಇರದಿದ್ದರೂ, ಸೂಪರ್ ಎಂಟು ಹಂತದಲ್ಲಿ ಅವಕಾಶ ಪಡೆದ ಅವರು ನಂತರ ಅದನ್ನು ಸದುಪಯೋಗಪಡಿಸಿಕೊಂಡರು. ಜಿಂಬಾಬ್ವೆ ವಿರುದ್ಧ 24 ರನ್‌ಗಳಿಂದ ಆರಂಭಿಸಿದ ಅವರು, ವೆಸ್ಟ್ ಇಂಡೀಸ್ ವಿರುದ್ಧ 97 ಅಜೇಯ ರನ್ ಗಳಿಸಿ ಸೆಮಿಫೈನಲ್‌ಗೆ ತಂಡವನ್ನು ಕೊಂಡೊಯ್ದರು. ಇಂಗ್ಲೆಂಡ್ ವಿರುದ್ಧ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ 89 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದ ಅವರು, ತಂಡವನ್ನು 253/7ಕ್ಕೆ ಕೊಂಡೊಯ್ದರು. ಈ ಗುರಿ ಬೆನ್ನಟ್ಟಿದ ಇಂಗ್ಲೆಂಡ್ 7 ರನ್‌ಗಳಿಂದ ಸೋಲನುಭವಿಸಿತು. ಫೈನಲ್‌ನಲ್ಲೂ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.



ಪದಬಂಧ 5954

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

1.ಆರದ ನಡುವೆ ಎಲ್ಲೆಯಿಲ್ಲದ್ದಿದೆ (3)
3.ಶರ ಹಿಡಿದು ಬಂದ ವಾಣಿಗೆ ಕಂಡ ಪಾರ್ವತಿ (3)
5.ಆದಿಲ್–ಶಾಹಿ ಸುಲ್ತಾನರ ರಾಜ್ಯ (5)
6.ಬೆಳದಿಂಗಳಿನಂಥಹ ನಗೆ ತಿರುಗಿದೆ (4)
7.ಇಡೀ ಲೋಕಕ್ಕೆ ಸಂಬಂಧಿಸಿದ್ದು (4)
9.ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
11.ವಾಲ್ಮೀಕಿಯ ಮಹಾನ್ ಗ್ರಂಥದ ನಾಯಕ–ನಾಯಕಿ (4)
14.ರಾಕ್ಷಸರಿಗೆ ಮೃತ್ಯುದೇವತೆಯಂತಿರುವ ವಿಷ್ಣು(5)
16.ವರನ ವಿಸ್ತೃತವಾದ ಹೇಳಿಕೆ (3)
17.ಕುದುರೆಯ ಜೀನಿನ ಬಳೆಯಿದು (3)

ಮೇಲಿನಿಂದ ಕೆಳಕ್ಕೆ

1.ಸಂಸ್ಕೃತ ಮೂಲದ ಕಣ್ಣು ಎಂಬ ಪದ (2)
2. ಸೂರ್ಯ–ಶಶಿ ಕೂಡಿ ಚಲನಚಿತ್ರವಾದರು (4)
3. ಅತಿಯಾದ ರಭಸದಿಂದ ಸಾಗುವುದು (4)
4. ಮುದ್ದಾದ ಶುಕ ತಲೆಕೆಳಗಾಗಿದೆ (2)
6. ನೀರಸವಲ್ಲದ್ದು–ಆನಂದದಾಯಕವಾದುದು (3)
8. ರವಿ ರಚಿಸಿದ ಕಾವ್ಯ (3)
10. ವ್ಯಾಪಾರ ಮುಂತಾದವುಗಳಲ್ಲಿ ಭಾಗಸ್ಥ (4)
12. ಹೂವಿನಿಂದ ಜೇನು ಸಂಗ್ರಹಿಸುವ ಜೇನ್ನೊಣ (4)
13. ಬಾ ಎಂದು ಕರೆದು ರವಿಗೆ ತೋರಿಸಿದ ಕೂವ (2)
15. ತಣ್ಣಗೆ ಇರುವ ಸ್ಥಿತಿ–ಶೀತದಿಂದ ಕೂಡಿದ್ದು (2)

5953 ಉತ್ತರ

ಎಡದಿಂದ ಬಲಕ್ಕೆ:
1.ಕೇಸರಿಕೇತನ
5.ರಸಾಯನ 7.ಕೈದಿ
8.ಚಕ್ರಧರ 9.ನಾಗಲೋಕ
10.ತ್ರೈಮಾಸಿಕ
12.ಪ್ರತಿಹಾರ
14.ರಾಸು 15.ಮದಕರಿ
17.ಕೋದಂಡಪಂಡಿತ

ಮೇಲಿನಿಂದ ಕೆಳಕ್ಕೆ :
2.ಸತ್ಯಸಂಧ 3.ನರ
4.ತಾನ 6.ಸಾರಂಗ
7.ಕೈಚಳಕ 9.ನಾಡರಸು
11.ಸಿಡುಕ 13.ತಿಳಿಗೇಡಿ
15.ಮದ್ದು 16.ಕೋರಿ

ದಕ್ಷಿಣ ಕನ್ನಡ, ಉಡುಪಿ ಜಿಲ್ಲಾಡಳಿತದಿಂದ ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ

ದೇಶಕ್ಕೆ ಅಂಬೇಡ್ಕರ್ ಮಹತ್ವದ ಕೊಡುಗೆ





• **ಮಂಗಳೂರು/ಉಡುಪಿ:** ಮಂಗಳವಾರ ದಕ್ಷಿಣ ಕನ್ನಡ ಜಿಲ್ಲಾಡಳಿತ ಮತ್ತು ಉಡುಪಿ ಜಿಲ್ಲಾಡಳಿತದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮ ಆಚರಣೆ ನಡೆಯಿತು.

ದೇಶದ ಆಡಳಿತದ ನೀತಿ ನಿರೂಪಣೆಯಲ್ಲಿ ಮಹಿಳೆಯರು, ದುರ್ಬಲರು ಭಾಗವಹಿಸಬೇಕೆಂಬುದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕನಸಾಗಿತ್ತು. ಇದನ್ನು ಈಡೇರಿಸಲು ಕೇಂದ್ರ ಸರ್ಕಾರ ಬದ್ಧವಾಗಿ ಅದನ್ನು ಈಡೇರಿಸಲು ಪಣ ತೊಟ್ಟಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಅವರು ಮಂಗಳವಾರ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಜಿಲ್ಲಾಡಳಿತ ವತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬಾಲ್ಯದಿಂದಲೇ ಸಮಸ್ಯೆಗಳನ್ನು ಎದುರಿಸುತ್ತಾ ಬಂದು, ಅದನ್ನೇ ಸವಾಲಾಗಿ ಸ್ವೀಕರಿಸಿದ ಮಹಾನ್ ವ್ಯಕ್ತಿ ಡಾ.ಬಿ.ಆರ್ ಅಂಬೇಡ್ಕರ್. ದೇಶಕ್ಕೆ ಅವರ ಕೊಡುಗೆ ಮಹತ್ತರವಾದುದು ಎಂದವರು ಹೇಳಿದರು.

ವಿಧಾನಪರಿಷತ್ ಸದಸ್ಯ ಐವನ್ ಡಿಸೋಜಾ ಮಾತನಾಡಿ, ಸಂವಿಧಾನದ ಆಶಯಗಳಂತೆ ಆಡಳಿತ ನಡೆಸಬೇಕಾಗಿದೆ. ಅಂಬೇಡ್ಕರ್ ಚಿಂತನೆಗಳನ್ನು ಎಲ್ಲರೂ ತಿಳಿದುಕೊಳ್ಳಲು ಸರಕಾರ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ದೇಶದ ಪ್ರತಿ ವ್ಯಕ್ತಿಗೂ ಒಂದೇ ಮತದ ಹಕ್ಕು ನೀಡಿರುವುದು ಸಂವಿಧಾನದ ಸೊಗಸು ಆಗಿದೆ ಎಂದರು.



ಮಡಿಕೇರಿ ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿ.ಪಂ., ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ನಡೆಯಿತು. ಶಾಸಕ ಡಾ.ಮಂಥರ್ ಗೌಡ, ಜಿಲ್ಲಾಧಿಕಾರಿ ಎಸ್.ಜಿ.ಸೋಮಶೇಖರ್ ಮತ್ತಿತರರು ಪಾಲ್ಗೊಂಡಿದ್ದರು.

ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ನಗರದಲ್ಲಿ ಅಂಬೇಡ್ಕರ್ ವೃತ್ತ ನಿರ್ಮಾಣ ಕಾರ್ಯವನ್ನು ಶೀಘ್ರ ಕೈಗೆತ್ತಿಕೊಳ್ಳಬೇಕು ಎಂದು ಅವರು ಕೋರಿದರು.

ಜಿಲ್ಲಾಧಿಕಾರಿ ದರ್ಶನ್ ಎಚ್ ವಿ ಅವರು ಸಂವಿಧಾನ ಪೀಠಿಕೆ ಭೋದಿಸಿದರು. ಮಂಗಳೂರು ವಿ ವಿ ಉಪನ್ಯಾಸಕ ಮೋಹನ್ ಸಿಂಘೆ ಅವರು ಉಪನ್ಯಾಸ ನೀಡಿದರು.

ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಗಟ್ಟಿ, ಮುಡಾ ಅಧ್ಯಕ್ಷ ಸದಾಶಿವ, ಪೊಲೀಸ್ ಆಯುಕ್ತ ಸುಧೀರ್ ರೆಡ್ಡಿ, ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್, ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆ ಪ್ರಭಾರ ಉಪನಿರ್ದೇಶಕ ಸುರೇಶ್ ಅಡಿಗ ಸ್ವಾಗತಿಸಿದರು. ಬಿಸಿಎಂ ಜಿಲ್ಲಾ ಅಧಿಕಾರಿ ಬಿಂದಿಯಾ ನಾಯಕ್ ವಂದಿಸಿದರು. ಪ್ರದೀಪ್ ನಿರೂಪಿಸಿದರು.

ಉಡುಪಿ ವರದಿ

ಸಂವಿಧಾನ ಶಿಲ್ಪಿ ಡಾ. ಭೀಮ ರಾವ್ ಅಂಬೇಡ್ಕರ್ ಅವರ ಜೀವನವೇ ನಮಗೆ ಆದರ್ಶ. ಸಂಘರ್ಷಗಳ ಮಧ್ಯೆಯೂ ಸಾಧನೆ ಮಾಡಿ ಜಗತ್ತಿಗೆ ಸಮಾನತೆಯ ದಾರಿ ದೀಪ ತೋರಿದ ಅವರ ಜೀವನದ ಮೌಲ್ಯಗಳನ್ನು ನಾವು ಕೂಡ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಯಶ್ ಪಾಲ್ ಎ. ಸುವರ್ಣ ಕರೆ ನೀಡಿದರು.

ನಗರದ ಮಣಿಪಾಲ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪ.ಜಾತಿ, ಪ.ಪಂಗಡದ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇಂದು ದೇಶದಲ್ಲಿ ನಾವೆಲ್ಲರೂ ಅನ್ಯೋನ್ಯತೆಯಿಂದ ಬಾಳುತ್ತಿದ್ದರೆ ಅದಕ್ಕೆ ಬಾಬಾ ಸಾಹೇಬರ ಸಂವಿಧಾನ ಕಾರಣ. ಅಂದು ಅವರು ಸಮಾನತೆಗಾಗಿ ಹೋರಾಟ ನಡೆಸಿ ಸಮ ಸಮಾಜದ ನಿರ್ಮಾಣ ಮಾಡಿದ್ದರಿಂದ ಇದು ಸಾಧ್ಯವಾಯಿತು. ಸಮಾಜದ ಸಾಮರಸ್ಯವನ್ನು ಕಾಪಾಡುವುದು ನಮ್ಮ ಕರ್ತವ್ಯ. ಆ ಮೂಲಕ ನಾವು ಮಹಾನ್ ಚೇತನಗಳಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆ ಎಂದರು.

ಅಂಬೇಡ್ಕರ್ ಒಂದು ಶಕ್ತಿ

ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಮಾತನಾಡಿ, ಅಂಬೇಡ್ಕರ್ ಅವರು ಒಂದು ಶಕ್ತಿ. ಅವರು ಯಾರಿಂದಲೂ ಪಡೆಯಲಾಗದ ಮಾಣಿಕ್ಯ. ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜೊತೆ ಸರಿ ಸಮನಾಗಿ ದೇಶದ ಏಳಿಗೆಗಾಗಿ ದುಡಿದರು. ದೇಶದ ಕಾನೂನು ಸಚಿವರಾಗಿ ಅವರು ರೂಪಿಸಿದ ಕಾನೂನುಗಳು ನಮಗೆ ಇಂದಿಗೂ ಬಲ ತುಂಬುತ್ತಿದೆ. ಅವರು ರೂಪಿಸಿದ ಪವಿತ್ರ ಸಂವಿಧಾನವನ್ನು ಬಲಿಷ್ಠಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಅವರ ಆಶಯದಂತೆ ಬಾಳಿ ದೇಶವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸೋಣ ಎಂದರು.

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾತನಾಡಿ, ಬಾಬಾ ಸಾಹೇಬರು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿದವರು ಎಂದರು.

ನಿವೃತ್ತ ಪ್ರಾಂಶುಪಾಲ ಪ್ರೊ.ಎಂ ಬಾಲಕೃಷ್ಣ ಶೆಟ್ಟಿ ಉಪನ್ಯಾಸ ನೀಡಿ ಮಾತನಾಡಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಡಾ. ಬಿ.ಆರ್ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬುದ್ಧ ವಂದನೆ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಹಿರಿಯ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸಾಂಪ್ರದಾಯಿಕ ಚರ್ಮ ಕುಶಲ ಕರ್ಮಿ ಪಾಂಚಾಲಿ ಅವರನ್ನು ಗೌರವಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಅಪರ ಜಿಲ್ಲಾಧಿಕಾರಿ ಅಬಿದ್ ಗದ್ಯಾಳ ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾರಾಯಣ ಸ್ವಾಮಿ ಸ್ವಾಗತಿಸಿ, ಪ್ರಶಾಂತ್ ಶೆಟ್ಟಿ ಹಾವಂಜೆ ನಿರೂಪಿಸಿ, ಕಾಪು ತಾಲೂಕು ಸಮಾಜ ಕಲ್ಯಾಣಾಧಿಕಾರಿ ಬಸವರಾಜ ವಂದಿಸಿದರು.

ಕಿರುಸುದ್ದಿ

17 ಲಕ್ಷ ರೂ. ಲಪಟಾಯಿಸಿದ ಬಗ್ಗೆ ವೈದ್ಯೆ ದೂರು: ಕಾಸರಗೋಡಿನ ನಾಲ್ವರು ವೈದ್ಯರ ವಿರುದ್ಧ ಕೇಸು

• **ಕಾಸರಗೋಡು:** ನೂತನವಾಗಿ ಆರಂಭಿಸುವ ಆಸ್ಪತ್ರೆಯಲ್ಲಿ ಹಣ ಠೇವಣಿ ಇರಿಸಿದರೆ ಶೇರ್ ಹಾಗೂ ಲಾಭದ ಪಾಲನ್ನು ನೀಡುವುದಾಗಿ ನಂಬಿಸಿ ವೈದ್ಯೆಯ ಕೈಯಿಂದ 17 ಲಕ್ಷ ರೂಪಾಯಿ ಪಡೆದು ವಂಚಿಸಿರುವುದಾಗಿ ದೂರಲಾಗಿದೆ. ಕಾಸರಗೋಡು ಪಿಲಿಕುಂಜೆಯ ಡಾ.ಅಪರ್ಣ (39) ಎಂಬವರು ನೀಡಿದ ದೂರಿನಂತೆ ನಾಲ್ವರು ವೈದ್ಯರ ವಿರುದ್ಧ ಕಾಸರಗೋಡು ನಗರ ಠಾಣೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಕೊಚ್ಚಿಯಲ್ಲಿ ನೂತನವಾಗಿ ಆರಂಭಿಸುವ ಆಸ್ಪತ್ರೆಯಲ್ಲಿ ಹಣ ಠೇವಣಿ ಇರಿಸಿದರೆ ಶೇರ್ ಹಾಗೂ ಲಾಭದ ಪಾಲನ್ನು ನೀಡುವುದಾಗಿ ಭರವಸೆಯೊಡ್ಡಿ 17 ಲಕ್ಷ ರೂಪಾಯಿ ತನ್ನಿಂದ ಪಡೆದುಕೊಂಡಿರುವುದಾಗಿ ಡಾ.ಅಪರ್ಣ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶಿಸಿ ಬಾಲಕ ಸಾವು

• **ಮಂಗಳೂರು:** ವಿದ್ಯುತ್ ತಂತಿ ತಗುಲಿ ಬಾಲಕನೊಬ್ಬ ಮೃತಪಟ್ಟ ಘಟನೆ ಮಹಾಕಾಳಿಪಡ್ಪುವಿನ ನಿರ್ಮಲ ನಗರದಲ್ಲಿ ನಡೆದಿದೆ. ಮೂಲತಃ ಹಾವೇರಿಯ ಜಿಲ್ಲೆಯ ಬ್ಯಾಡಗಿ ತಾಲೂಕು ಬನ್ನಿಹಟ್ಟಿ ಗ್ರಾಮದ ಮಹಾಕಾಳಿಪಡ್ಪುವಿನಲ್ಲಿ ವಾಸವಾಗಿರುವ ಕಣ್ಣನ ಗೌಡ ಎಂಬವರ ಪುತ್ರ ವರುಣ್ (15) ಮೃತ ಬಾಲಕ. ವಾರದ ಹಿಂದೆಯಷ್ಟೇ ಈತ ಎಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಫಲಿತಾಂಶದ ನಿರೀಕ್ಷೆಯಲ್ಲಿದ್ದ. ಏ.11ರಂದು ಈ ಘಟನೆ ಸಂಭವಿಸಿದೆ. ಮಹಾಕಾಳಿಪಡ್ಪು ಅಂಡರ್ ಪಾಸ್ ಬಳಿಯ ಭಜನಾಮಂದಿರದ ಬಳಿ ಸ್ನೇಹಿತರೊಂದಿಗೆ ಕ್ರಿಕೆಟ್ ಆಟವಾಡುತ್ತಿದ್ದ ವೇಳೆ ಮಂದಿರದ ಛಾವಣಿಗೆ ಬಿದ್ದ ಚೆಂಡು ತೆಗೆಯಲು ಹೋದ ಸಂದರ್ಭ ವಿದ್ಯುತ್ ತಂತಿ ತಗುಲಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ತಂದೆ ಕಣ್ಣನ ಗೌಡ ಮಹಾಕಾಳಿಪಡ್ಪುವಿನಲ್ಲಿ ಸಣ್ಣ ಕ್ಯಾಂಟೀನ್ ನಡೆಸುತ್ತಾ ಜೀವನ ಸಾಗಿಸುತ್ತಿದ್ದಾರೆ.

ಮುಂದಿನ ವಾರ ವಿವಾಹವಾಗಲಿದ್ದ ಯುವಕ ನೇಣಿಗೆ ಶರಣು

• **ಮಡಿಕೇರಿ:** ಮುಂದಿನ ವಾರ ವಿವಾಹವಾಗಬೇಕಿದ್ದ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ಅವರೆಗುಂದ ನಿವಾಸಿ ಹೆಚ್.ಟಿ. ಮಹೇಶ್ ಎಂಬವರ ಪುತ್ರ ಪ್ರಶಾಂತ್ (26) ಎಂಬ ಯುವಕನೇ ಮೃತ ದುರ್ದೈವಿ. ಪ್ರಶಾಂತ್ ಬೆಂಗಳೂರಿನಲ್ಲಿ ಹೊಟೇಲ್ ಒಂದರಲ್ಲಿ ಕೆಲಸ ಮಾಡುತ್ತಿದ್ದು, ಏ.20ರಂದು ನಡೆಯಲಿದ್ದ ತನ್ನ ಮದುವೆಗೆಂದು ಕಳೆದ 25 ದಿನಗಳ ಹಿಂದೆ ರಜೆ ಮಾಡಿಕೊಂಡು ಸ್ವಗ್ರಾಮಕ್ಕೆ ಬಂದಿದ್ದ. ಆದರೆ ಸೋಮವಾರ ಅಪರಾಹ್ನದ ನಂತರ ಈತ ತನ್ನ ಮನೆ ಸಮೀಪದ ಕಾಫಿ ತೋಟದಲ್ಲಿ ಮರದ ಕೊಂಬೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪ್ರಶಾಂತನ ತಂದೆ ಮಹೇಶ್ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಸ್ಥಳ ಪರಿಶೀಲನೆ ಮಾಡಿರುವ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ರೌಡಿ ಶೀಟರ್ ಆರೀಫ್ ಹತ್ಯೆ ಪ್ರಕರಣ: ಮತ್ತೆ ಮೂವರ ಬಂಧನ

• **ಮಂಗಳೂರು:** ಇತ್ತೀಚೆಗೆ ತೊಕ್ಕೊಟ್ಟಿನಲ್ಲಿ ನಡೆದ ರೌಡಿ ಶೀಟರ್ ಆರೀಫ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮತ್ತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ಆರೋಪಿಗಳಾದ ಅರ್ಷದ್, ಪುಚೆ ನಿಸಾಕ್ ಮತ್ತು ಜುನೈದ್ ಬಂಧಿತರು. ಬಂಧಿತ ಅರ್ಷದ್ ಕೊಲೆ ಪಿತೂರಿಯಲ್ಲಿ ಭಾಗಿಯಾಗಿದ್ದು, ಕೊಲೆ ಹತ್ಯೆ ನಡೆಸಲು ಶಸ್ತ್ರಾಸ್ತ್ರಗಳು, ವಾಹನ ವ್ಯವಸ್ಥೆ, ಹಣಕಾಸು ನೆರವು ಒದಗಿಸಿದ್ದ. ಅಲ್ಲದೆ ಪೊಲೀಸರ ಚಲನವಲನಗಳ ಬಗ್ಗೆ ಮಾಹಿತಿ ನೀಡುತ್ತಿದ್ದ ಎನ್ನಲಾಗಿದೆ. ಪುಚೆ ನಿಸಾಕ್ ಫೆಬ್ರವರಿಯಲ್ಲಿ ಆರಿಫ್ ಮೇಲೆ ನಡೆದ ದಾಳಿ ಪ್ರಯತ್ನದಲ್ಲಿ ಭಾಗಿಯಾಗಿದ್ದ. 2022ರಲ್ಲಿ ನಡೆದ ಹಿಂದಿನ ದಾಳಿಯಲ್ಲಿಯೂ ಆರೋಪಿಯಾಗಿದ್ದಾನೆ. ಜುನೈದ್ ದಾಳಿ ನಡೆಸಲು ವಾಹನ ಒದಗಿಸಿದ್ದು, ಫೆಬ್ರವರಿಯ ದಾಳಿ ತಂಡದ ಸದಸ್ಯನಾಗಿದ್ದಾನೆ. ಪೊಲೀಸರ ಪ್ರಕಾರ, ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆ ಇದ್ದು, ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಆತ್ಮ ನಿರ್ಭರ ಭಾರತ ರಾ. ಪುರಸ್ಕಾರಕ್ಕೆ ಬೆಳ್ಳೆ ಗ್ರಾ.ಪಂ. ನಾಮ ನಿರ್ದೇಶನ



• **ಶಿರ್ವ:** ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮ ನಿರ್ಭರ ಭಾರತ ರಾಷ್ಟ್ರೀಯ ಪ್ರಶಸ್ತಿಗೆ ಕರ್ನಾಟಕ ರಾಜ್ಯದಿಂದ ಬೆಳ್ಳೆ ಗ್ರಾ.ಪಂಚಾಯತ್ ರಾಷ್ಟ್ರದ ಇತರ ಐದು ಪಂಚಾಯತ್‌ಗಳೊಂದಿಗೆ ನಾಮ ನಿರ್ದೇಶನಗೊಂಡಿದ್ದು, 2024–25ನೇ ಸಾಲಿನಲ್ಲಿ ಸಮುದಾಯದ ಸಹಭಾಗಿತ್ವದೊಂದಿಗೆ ಸ್ವಂತ ಸಂಪನ್ಮೂಲವನ್ನು ಉತ್ತಮ ರೀತಿಯಲ್ಲಿ ಸಂಗ್ರಹಿಸಿ ಬಳಕೆ ಮಾಡಿದ್ದನ್ನು ಪರಿಶೀಲಿಸಲು ಕೇಂದ್ರ ಸರಕಾರದ ತಂಡ ಭೇಟಿ ನೀಡಿದೆ. ಧನಂಜಯ್ ಚಾವ್ಲಾ ಮತ್ತು ಉಪೇಂದ್ರ ಜೊತೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿ ಪ್ರತೀಕ್ ಬಾಯಲ್, ಸಿಪಿಓ ಉದಯಕುಮಾರ್ ಶೆಟ್ಟಿ, ಕಾಪು ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಜೇಮ್ಸ್ ಡಿ,ಸಿಲ್ವ, ಅನಿಲ್ ಶೆಟ್ಟಿ, ತಾ.ಪಂ.ಅಧಿಕಾರಿಗಳಾದ ರಜನಿ, ಚಂದ್ರಕಲಾ, ಪಿಡಿಒ ಆಶಾಲತಾ, ರಾಜೇಶ್ ಶೆಣೈ, ತಿಲಕ್ ರಾಜ್, ಶಶಿಧರ ಆಚಾರ್ಯ, ಮಹೇಶ್ ಶಂಕರ್, ಗ್ರಾಮ ಪಂ.ಆಡಳಿತಾಧಿಕಾರಿ ನಿಧೀಶ್ ಹೊಳ್ಳ, ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷೆ ದಿವ್ಯಾ ವಿ.ಆಚಾರ್ಯ, ಉಪಾಧ್ಯಕ್ಷ ಶಶಿಧರ ವಾಗ್ಲೆ, ಉಡುಪಿ ತಾ.ಪಂ. ಮಾಜಿ ಅಧ್ಯಕ್ಷ ಕಟ್ಟಿಂಗೇರಿ ದೇವದಾಸ್ ಹೆಬ್ಬಾರ್, ಗ್ರಾಮ ಪಂಚಾಯತ್ ಮಾಜಿ ಸದಸ್ಯರು, ಅಂಗನವಾಡಿ ಮೇಲ್ವಿಚಾರಕರು, ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾ.ಪಂ. ಸಿಬ್ಬಂಧಿವರ್ಗ, ಗ್ರಂಥಲಯ ಮತ್ತು ಎಸ್‌ಎಲ್‌ಆರ್‌ಎಂ ಸಿಬ್ಬಂದಿಗಗಳು, ಸಂಜೀವಿನಿ ಒಕ್ಕೂಟದ ಪ್ರಮುಖರು, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಬಿಜೆಪಿ ಹಿರಿಯ ನಾಯಕ, ನಾಟಕಕಾರ ರಾಮಚಂದರ್ ಬೈಕಂಪಾಡಿ ನಿಧನ

• **ಮಂಗಳೂರು:** ಬಿಜೆಪಿ ಹಿರಿಯ ನಾಯಕ, ಮೊಗವೀರ ಸಮುದಾಯದ ಮುಖಂಡ ರಾಮಚಂದರ್ ಬೈಕಂಪಾಡಿ ಅವರು ಮಂಗಳವಾರ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು.



ಬಿಜೆಪಿ ರಾಜ್ಯ ಕಾರ್ಯಕಾರಿಣಿಯ ನಿಕಟಪೂರ್ವ ಸದಸ್ಯರಾಗಿದ್ದ ಅವರು ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದರು. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ (ಕೆಎಫ್‌ಡಿಸಿ) ಇದರ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಆರಂಭದಲ್ಲಿ ನಾಟಕಕಾರರಾಗಿ ಜನ ಮನ ಗೆದ್ದಿದ್ದ ರಾಮಚಂದರ್ ಬೈಕಂಪಾಡಿ ಅವರು ಸಾಮಾಜಿಕ ಹೋರಾಟಗಾರರಾಗಿಯೂ ಗುರುತಿಸಿಕೊಂಡಿದ್ದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ನಿಕಟವರ್ತಿಯಾಗಿದ್ದ ಅವರು, 2013ರಲ್ಲಿ ಬಿಎಸ್‌ವೈಯವರ ಸ್ವತಂತ್ರ ರಾಜಕೀಯ ಪಕ್ಷ ಕೆಜೆಪಿಯಲ್ಲಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಬಳಿಕ ಮತ್ತೆ ಮಾತೃ ಪಕ್ಷಕ್ಕೆ ಮರಳಿದ್ದರು.

ಅವರಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ದೊರಕಿವೆ. ಸಮಾಜಸೇವೆಯೊಂದಿಗೆ ಹಲವು ದಶಕಗಳ ಕಾಲ ರಾಜಕೀಯ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ರಾಮಚಂದರ್ ಬೈಕಂಪಾಡಿ ಅವರ ನಿಧನಕ್ಕೆ ಬಿಜೆಪಿ ಶಾಸಕರು, ಸಂಸದರು ಸೇರಿದಂತೆ ನಾಡಿನ ಅನೇಕ ಮಂದಿ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ದ.ಕ. ಜಿಲ್ಲಾ ಬಿಜೆಪಿ ಸಂತಾಪ

ಭಾರತೀಯ ಜನತಾ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾ ಹಿರಿಯ ನಾಯಕ ರಾಮಚಂದರ್ ಬೈಕಂಪಾಡಿ ಅವರ ನಿಧನಕ್ಕೆ ದ.ಕ.ಜಿಲ್ಲಾ ಬಿಜೆಪಿ ಸಂತಾಪ ವ್ಯಕ್ತಪಡಿಸಿದೆ.

ಭಾರತೀಯ ಜನತಾ ಪಾರ್ಟಿಯ ಸಕ್ರಿಯ ಕಾರ್ಯಕರ್ತರಾಗಿದ್ದ ರಾಮಚಂದರ್ ಬೈಕಂಪಾಡಿ ಅವರು, ರಾಜ್ಯ ಕಾರ್ಯಕಾರಿಣಿ ಸದಸ್ಯ, ಮೀನುಗಾರಿಕಾ ನಿಗಮದ ಮಾಜಿ ಅಧ್ಯಕ್ಷ, ಮೀನುಗಾರರ ಮುಖಂಡರಾಗಿದ್ದರು. ಅವರ ನಿಧನ ಭಾರತೀಯ ಜನತಾ ಪಾರ್ಟಿಗೆ ತುಂಬಲಾರದ ನಷ್ಟ ಎಂದು ಬಿಜೆಪಿ ಕಂಬನಿ ಮಿಡಿದಿದೆ.

ರಾಮಚಂದರ್ ಬೈಕಂಪಾಡಿ ಅವರ ನಿಧನಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಬಿ. ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ಡಿ. ವೇದವ್ಯಾಸ ಕಾಮತ್, ಡಾ.ವೈ. ಭರತ್ ಶೆಟ್ಟಿ, ಪ್ರತಾಪಸಿಂಹ ನಾಯಕ್, ಉಮಾನಾಥ್ ಕೋಟ್ಯಾನ್, ರಾಜೇಶ್ ನ್ಯಾಕ್, ಹರೀಶ್ ಪೂಂಜ, ಭಾಗೀರಥಿ ಮುರುಳ್ಯ, ಕಿಶೋರ್ ಕುಮಾರ್, ಮಾಜಿ ಸಚಿವರಾದ ಕೃಷ್ಣ ಜೆ ಪಾಲೇಮಾರ್, ನಾಗರಾಜ್ ಶೆಟ್ಟಿ, ಎಸ್. ಅಂಗಾರ, ಮಾಜಿ ಶಾಸಕರಾದ ಎನ್. ಯೋಗೀಶ್ ಭಟ್, ಕ್ಯಾ. ಗಣೇಶ್ ಕಾರ್ಣಿಕ್, ಕೆ. ಮೋನಪ್ಪ ಭಂಡಾರಿ, ಮಾಜಿ ಜಿಲ್ಲಾಧ್ಯಕ್ಷ ಸುದರ್ಶನ ಎಂ., ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಮುಖಂಡ ನಿತಿನ್ ಕುಮಾರ್, ಜಯ ಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ ಸ್ಥಾಪಕಾಧ್ಯಕ್ಷ ತೋನ್ಸೆ ಜಯಕೃಷ್ಣ ಶೆಟ್ಟಿ, ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜಾ ಸೇರಿದಂತೆ ಹಲವು ಮಂದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 36° 27°
ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 15, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳ: ವಿಷು ಸಂಭ್ರಮ



ಪುಟ 4

ಪರಾರಿ ಬೊಬ್ಬರ್ಯ ದೈವಸ್ಥಾನ: ಏ. 28ರಿಂದ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ

ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದ ಜಾತ್ರೆ ಆರಂಭ



ಕಾಸರಗೋಡು ಜಿಲ್ಲೆಯ ಇತಿಹಾಸ ಪ್ರಸಿದ್ಧ ದೇವಾಲಯವಾದ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಮಂಗಳವಾರ ಬೆಳಿಗ್ಗೆ ಧ್ವಜಾರೋಹಣ ಮೂಲಕ ಆರಂಭಗೊಂಡಿತು. ಏ.18ರವರೆಗೆ ಜಾತ್ರೆ ನಡೆಯಲಿದೆ. ಮಂಗಳವಾರ ಸಹಸ್ರ ಕುಂಭಾಭಿಷೇಕ, ತುಲಾಭಾರ ಸೇವೆ ಹಾಗೂ ರಾತ್ರಿ ಉತ್ಸವ ಬಲಿ ಜರಗಿತು. (ಹೆಚ್ಚಿನ ವಿವರ ಪುಟ 5)

ಗ್ರಾ.ಪಂ.ಅಧೀನದ ಕೊಠಡಿಗಳ ಕಂತು ಬಾಕಿ: 20 ಅಂಗಡಿಗಳಿಗೆ ಬೀಗ



ಉಪ್ಪಿನಂಗಡಿ: ಇಲ್ಲಿನ ಹೊಸ ಬಸ್ ನಿಲ್ದಾಣದ ಬಳಿ ಇರುವ ಪಂ. ಸ್ವಾಮ್ಯದ ವಾಣಿಜ್ಯ ಸಂಕೀರ್ಣಗಳ ಏಲಂ ಬಿಡ್‌ನಲ್ಲಿ ಪಡೆದ ಅಂಗಡಿ ಕೋಣೆಗಳ ಕಂತು ಬಾಕಿ ಇರಿಸಿದ್ದ 20 ಅಂಗಡಿಗಳಿಗೆ ಪಂ. ಪಿ.ಡಿ.ಓ ವಿಲ್ಪ್ರೆಡ್ ಲಾರೆನ್ಸ್ ರಾಡ್ರಿಗ್ರಸ್ ಮಂಗಳವಾರ ಬೀಗ ಜಡಿದು ದಿಟ್ಟತನ ಪ್ರದರ್ಶಿಸಿದ್ದಾರೆ. ಏಲಂ ಪ್ರಕ್ರಿಯೆಯಲ್ಲಿ ಪಡೆದುಕೊಂಡ ಅಂಗಡಿ ಕೊಠಡಿಗಳ ಬಿಡ್ ಮೊತ್ತ ಕಂತುಗಳಲ್ಲಿ ಪಾವತಿ ಸಲು ಅವಕಾಶ ನೀಡಿದ್ದು, ಇದರಂತೆ ಹಲವರು ಉಳಿಕೆ ಮೊತ್ತದ ಕಂತುಗಳ ಪಾವತಿಸದೆ ಪಂ.ಆಡಳಿತದ ವಿನಂತಿಗಳ ಕಡೆಗಣಿಸುತ್ತಿದ್ದು, ಬಾಕಿ ಮೊತ್ತ ಪಾವತಿಸುವಂತೆ ಹಲವು ಬಾರಿ ಸೂಚನೆ ನೀಡಿದ್ದರೂ ಸ್ಪಂದಿಸದ ವ್ಯಕ್ತಿಗಳ ಅನುಭೋ ಗದಲ್ಲಿರುವ ಅಂಗಡಿ ಕೊಠಡಿಗಳಿಗೆ ಸರಕಾರಿ ರಜಾ ದಿನವಾದ ಮಂಗಳವಾರ ಬೀಗ ಜಡಿಯ ಲಾಯಿತು. ಈ ಕಾರ್ಯಾಚರಣೆಯಲ್ಲಿ ನಿ.ಪೂ. ಪಂ.ಸದಸ್ಯರು ಅನುಭೋಗದಾರರಾಗಿರುವ ಅಂಗಡಿ ಕೊಠಡಿಗಳು ಸೇರಿದ್ದು, ಅವರ ಅಂಗಡಿಗಳಿಗೂ ಬೀಗ ಜಡಿಯುವ ಮೂಲಕ ನಿಯಮ ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತಿದೆ ಎಂಬ ಸಂದೇಶ ನೀಡಿದ್ದಾರೆ. ಮೊತ್ತ ಬಾಕಿ ಇರಿಸಲಾದ ಅಂಗಡಿಗಳಿಗೆ ಪಂ.ಆಡಳಿತದಿಂದಲೇ ಒಂದು ಬೀಗ ಜಡಿದು ಎಚ್ಚರಿಕೆ ನೋಟೀಸು ಕೊಠಡಿಯ ಬಾಗಿಲಿಗೆ ಅಂಟಿಸಲಾಗಿದೆ.

ನನಸಾಗದ ಕುತ್ಲೂರು ಕಾಡಬಾಗಿಲು ಜನತೆ ಕನಸು

ಇಲ್ಲ ಸೇತುವೆ ಭಾಗ್ಯ!

ಅನುದಾನವಿದ್ದರೂ ನಡೆಯುತ್ತಿಲ್ಲ ಕಾಮಗಾರಿ

ಬೆಳ್ತಂಗಡಿ: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕುತ್ಲೂರು ಗ್ರಾಮದ ಕಾಡಬಾಗಿಲು ಸೇತುವೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಂಡು, ಶಂಕುಸ್ಥಾಪನೆಯಾದರೂ ಕಾಮಗಾರಿ ನಡೆಯದೆ ನೆನೆಗುದಿಗೆಬಿದ್ದಿದೆ.ಜನತೆ ಮಾತ್ರ ಸೇತುವೆ ಯಾವಾಗ ನಿರ್ಮಾಣವಾಗುವುದೋ ಎಂದು ಕಾಯುತ್ತಿದ್ದಾರೆ!.

ಮೂರು ದಶಕಗಳ ಹೋರಾಟ

ಶತಮಾನಗಳಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕುತ್ಲೂರು ಗ್ರಾಮದ ಅಭಿವೃದ್ಧಿಗೆ ಜನರ ನಿರಂತರ 3 ದಶಕಗಳ ಹೋರಾಟ ನಡೆಸುತ್ತಿದ್ದಾರೆ. ಸ್ವಾತಂತ್ರ್ಯ ಲಭಿಸಿ 79 ವರ್ಷ ಕಳೆದರೂ ಇಂದಿಗೂ ಇಲ್ಲಿ ವಿದ್ಯುತ್, ಸರಿಯಾದ ರಸ್ತೆ ಇಲ್ಲದಿರುವುದು ವ್ಯವಸ್ಥೆ ಜಡ್ಡುತನಕ್ಕೆ, ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಲ್ಲಿ ಸುಮಾರು ಆದಿವಾಸಿ ಮಲೆಕುಡಿಯ ಸಮುದಾಯದ 45 ಕ್ಕೂ ಹೆಚ್ಚು ಕುಟುಂಬಗಳು 2 ಶತಮಾನ ಗಳಿಂದ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದೆ. ಆದರೆ ಈಗಲೂ ಅದೇ ಚಿಮಿಣಿ ದೀಪದ ಜೀವನ , ಅದೇ ಪಕ್ಕಾ ಮಣ್ಣಿನ ರಸ್ತೆ. ಇದೇ ಅವರ ಜೀವನ ಎಂಬಂತಾಗಿದೆ.



ಪ್ರಥಮ ಹಂತ ಕೇವಲ 50 ಲಕ್ಷ ರೂ.ಮಾತ್ರ

ಕಾಡಿನ ಮಕ್ಕಳ ಸಂಪರ್ಕ ಕೊಂಡಿಯಾಗಿದ್ದ ಏಕೈಕ ಸೇತುವೆ ನಿರ್ಮಾಣಕ್ಕೆ ಜನರು ಮತ್ತೆ ಬೀದಿಗಿಳಿದು, ನಿರಂತರ ಪ್ರಯತ್ನದ ಫಲವಾಗಿ ರಾಜ್ಯ ಸರ್ಕಾರ ಸೇತುವೆ ಸೇರಿದಂತೆ ರಸ್ತೆ ಅಭಿವೃದ್ಧಿಗೆ 1.90 ಕೋ.ರೂ.ಆರ್ಥಿಕ ಅನುಮೋದನೆ ನೀಡಿತು. ಮೊದಲ ಹಂತ ಸೇತುವೆ ನಿರ್ಮಾಣಕ್ಕೆ 50 ಲ.ರೂ. ಬಿಡುಗಡೆ ಮಾಡಿತು. ಬಳಿಕ ಶಾಸಕ ಹರೀಶ್ ಪೂಂಜಾ ರಸ್ತೆ, ಸೇತುವೆ ನಿರ್ಮಾಣಕ್ಕೆ 1.90 ಕೋ.ವೆಚ್ಚದಲ್ಲಿ ನಿರ್ಮಾಣವಾಗುವ ಸೇತುವೆಗೆ ಶಂಕುಸ್ಥಾಪನೆ ನೇರವೇ ರಿಸಿದರು. ಆದರೆ ಇಲಾಖೆಗಳ ಮಾಹಿತಿ ಪ್ರಕಾರ 1.90 ಕೋ. ಯಲ್ಲಿ ಪ್ರಥಮ ಹಂತ ಬಿಡುಗಡೆಗೊಂಡಿದ್ದು ಕೇವಲ 50 ಲಕ್ಷ ರೂ.ಮಾತ್ರ.

80ರ ದಶಕದಲ್ಲಿ ಸೇತುವೆಯಾಗಿತ್ತು

ಇಲ್ಲಿ 80 ದಶಕದಲ್ಲಿ ಕಾಡಬಾಗಿಲಿನಲ್ಲಿ ಸೇತುವೆಯೊಂದನ್ನು ಅಂದು ಶಾಸಕರಾಗಿದ್ದ ಗಂಗಾಧರ ಗೌಡ ಅವರ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಇಂದು ದುಃಸ್ಥಿತಿಯಲ್ಲಿದೆ. »» ಪುಟ6

ಶಂಕುಸ್ಥಾಪನೆ ನಂತರ ಕಾಮಗಾರಿಗೆ ಬ್ರೇಕ್

ಮಾ.7 ರಂದು ಇಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿ, ಕಾಮಗಾ ರಿಗೆ ಮುಂದಡಿ ಹಾಕಿದರೆ ,ಇತ್ತ ಕಾಮಗಾರಿಗೆ ಕಾನೂನಿನ ಉರುಳು ಬಿತ್ತು. ಕಾಡಬಾಗಿಲು ಕುದುರೆಮುಖ ರಾ. ಉದ್ಯಾನವನ ವ್ಯಾಪ್ತಿಯಲ್ಲಿ ಬರುತ್ತದೆ. ಇಲ್ಲಿ ಯಾವುದೇ ಕಾಮಗಾರಿ ನಡೆಸಬೇಕಾದರೆ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ವನ್ಯಜೀವಿ ಮಂಡಳಿ ಅನುಮತಿ ಪಡೆದುಕೊಳ್ಳಬೇಕಾಗಿದೆ. ಬಳಿಕ ಅರಣ್ಯ ಹಕ್ಕುಗಳ ಕಾಯ್ದೆ ಅಡಿ ಅನುಮತಿ ಪಡೆಯ ಬೇಕು. ನಂತರ ಯಾವುದೇ ಕಾಮಗಾರಿ ನಡೆಸಬಹುದು.ಆದರೆ ಇಲ್ಲಿ ಅದ್ಯಾವುದೂ ಅನುಮತಿ ಪಡೆಯದೆ ಕಾಮಗಾರಿ ನಡೆಸಲು ವನ್ಯಜೀವಿ ಅರಣ್ಯ ಇಲಾಖೆ ಕಾನೂನಿ ನಲ್ಲಿ ಅವಕಾಶವಿಲ್ಲ ಎಂದು ಹೇಳಿದೆ. ಅಲ್ಲಿಗೆ ಕಾಮಗಾರಿ ನಿಂತಿದೆ.

ಬೋರ್ಗಲ್ಲುಗುಡ್ಡೆಯಲ್ಲಿ ನಡೆದ ಘಟನೆ

ಆವರಣವಿಲ್ಲದ ಬಾವಿಗೆ ಬಿದ್ದಿದ್ದ ಚಿರತೆಯ ರಕ್ಷಣೆ

ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ

ಕಾರ್ಕಳ: ಕಾರ್ಕಳ ತಾಲೂಕಿನ ನಿಟ್ಟೆ ಸಮೀಪದ ಬೋರ್ಗಲ್ಲುಗುಡ್ಡೆ ಪ್ರದೇಶದಲ್ಲಿ ಆವರಣವಿಲ್ಲದ ಬಾವಿಗೆ ಬಿದ್ದಿದ್ದ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿಗಳು ಯಶಸ್ವಿಯಾಗಿ ರಕ್ಷಿಸಿದ ಘಟನೆ ನಡೆದಿದೆ.

ಆಹಾರ ಅರಸಿ ಕಾಡಿನಿಂದ ಹೊರಬಂದಿದ್ದ ಚಿರತೆ ಸಮೀಪದ ಮನೆ ಬಳಿಗೆ ಬಂದಿರಬಹುದು. ಈ ವೇಳೆ ಗಮನ ತಪ್ಪಿ ಬಾವಿಗೆ ಬಿದ್ದಿರಬಹುದೆಂದು ಅಂದಾಜಿಸಲಾಗಿದೆ. ಬೆಳಿಗ್ಗೆ ಬಾವಿಯೊಳಗೆ ಚಿರತೆ ಕಂಡ ಸ್ಥಳೀಯರು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಮಾಹಿತಿ ಸಿಕ್ಕ ಕೂಡಲೇ ಕುಂದಾಪುರ ಉಪ ಅರಣ್ಯ ಸಂರಕ್ಷಣಾಧಿಕಾರಿ ರುತ್ರನ್ , ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪಿ. ಶ್ರೀಧರ್ ಮಾರ್ಗದರ್ಶನದಲ್ಲಿ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಯಿತು. ಕಾರ್ಕಳ ವಲಯ ಅರಣ್ಯಾಧಿಕಾರಿ ಪ್ರಭಾಕರ್ ಕುಲಾಲ್, ಉಪ ವಲಯ ಅರಣ್ಯಾಧಿಕಾರಿ ಹುಕ್ರಪ್ಪ ಗಸ್ತು ಅರಣ್ಯಪಾಲಕ ಸುರೇಶ್ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿದರು. ಚಿರತೆಯನ್ನು ಸುರಕ್ಷಿತವಾಗಿ ರಕ್ಷಿಸುವ ಕಾರ್ಯ ಸವಾಲಿನದ್ದಾಗಿತ್ತು. ಬಾವಿಯ ಆಳ , ಚಿರತೆ ಆತಂಕದ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಕಾರ್ಯಾಚರಣೆ ನಡೆಸಲಾಯಿತು. ಕಬ್ಬಿಣದ ಪಂಜರ ಹಾಗೂ ಕಬ್ಬಿಣದ ಹಗ್ಗಗಳ ಸಹಾಯದಿಂದ ಚಿರತೆಯನ್ನು ಮೇಲಕ್ಕೆತ್ತುವ ಕಾರ್ಯ ಯಶಸ್ವಿಯಾಗಿ ನೆರವೇರಿತು.

ಈ ಸಂದರ್ಭ ಚಂದ್ರಕಾಂತ್ ಕರುಣಾಕರ್ ಸೇರಿದಂತೆ ಸ್ಥಳೀಯರು ಸಹ ಸಹಕಾರ ನೀಡಿದರು. ಅವರ ಸಹಾಯದಿಂದ ರಕ್ಷಣಾ ಕಾರ್ಯ ಇನ್ನಷ್ಟು ಸುಗಮವಾಗಿ ನಡೆಯಿತು.



ಆರೋಗ್ಯ ಪರಿಶೀಲನೆ

ರಕ್ಷಿಸಲ್ಪಟ್ಟ ಚಿರತೆಯನ್ನು ಬಳಿಕ ಆರೋಗ್ಯ ಪರಿಶೀಲನೆಗೆ ಕಾಡಿಗೆ ಕರೆದೊಯ್ಯಲಾಗಿದ್ದು, ಯಾವುದೇ ಗಾಯಗಳಿಲ್ಲವೆಂದು ದೃಢಪಟ್ಟ ನಂತರ ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಡಲಾಗುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸುತ್ತಮುತ್ತ

ಕರಾವಳಿಯಲ್ಲಿ ತಾಪಮಾನ ಹೆಚ್ಚಳ ಮುನ್ಸೂಚನೆ

ಮಂಗಳೂರು: ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಾಪಮಾನ ಹೆಚ್ಚಳವಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಮಂಗಳವಾರ ಕರಾವಳಿಯಲ್ಲಿ ಸರಾಸರಿ 34.7ಡಿಗ್ರಿ ಗರಿಷ್ಠ, 23.9 ಕನಿಷ್ಠ ಉಷ್ಣಾಂಶ ದಾಖಲಾಗಿದೆ. ಬುಧವಾರ ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಅಲ್ಲಲ್ಲಿ ಮೋಡದ ವಾತಾವರಣದ ಮುನ್ಸೂಚನೆ ಇದೆ. ಕಳೆದ ಕೆಲವು ದಿನಗಳಿಂದ ಕರಾವಳಿಯಲ್ಲಿ ಬಿಸಿಲು ಜೋರಾಗಿದ್ದು, ಜನತೆಯ ಬೆವರಿಳಿಸುತ್ತಿದೆ. ಮಳೆಗಾಗಿ ಅಲ್ಲಲ್ಲಿ ಪ್ರಾರ್ಥನೆಗಳೂ ನಡೆಯುತ್ತಿವೆ.

ಸದುಪಯೋಗವಾಗುತ್ತಿಲ್ಲ 14 ಲಕ್ಷ ರೂಪಾಯಿ ವೆಚ್ಚದ ತಂಗುದಾಣ

ಬಸ್ ನಿಲ್ದಾಣದ ಎದುರು ನಿಲ್ಲದ ಬಸ್ಸುಗಳು!

ಸುರತ್ಕಲ್: ಬಸ್ ನಿಲ್ದಾಣದೆದುರು ಬಸ್ಸುಗಳು ನಿಲ್ಲಬೇಕಾದುದು ಸಾಮಾನ್ಯ. ಆದರೆ ಬಸ್ ನಿಲ್ದಾಣಗಳಿದ್ದರೂ ಅಲ್ಲಿ ಬಸ್‌ಗಳು ನಿಲ್ಲುತ್ತಿಲ್ಲವೆಂದರೆ ಏನರ್ಥ?. ಸುರತ್ಕಲ್ ವ್ಯಾಪ್ತಿಯಲ್ಲಿ ಈ ಸಮಸ್ಯೆ ಹೆಚ್ಚಾಗಿದೆ.

ಹೊನ್ನಕಟ್ಟೆ, ಕುಳಾಯಿ, ಪಣಂಬೂರು ಮುಂತಾದಪ್ರದೇಶಗಳಲ್ಲಿಸಮರ್ಪಕವಾಗಿ ನಿರ್ಮಿಸಲಾದ ಬಸ್ ನಿಲ್ದಾಣಗಳಿದ್ದರೂ, ಬಹುತೇಕ ಬಸ್ ಚಾಲಕರು ಅಲ್ಲಿ ನಿಲ್ಲಿಸದೇ, ದೂರದ ಸ್ಥಳಗಳಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸುವುದು ಸಾಮಾನ್ಯವಾಗಿದೆ.

ಪ್ರಯಾಣಿಕರ ಪರದಾಟ

ಎಲ್ಲೆಂದರಲ್ಲಿ ಬಸ್ ನಿಲ್ಲಿಸುವುದರಿಂದ ಪ್ರಯಾಣಿಕರು ಪರದಾಡಬೇಕಾದ ಸ್ಥಿತಿ ಎದುರಾಗಿದೆ. ವಿಶೇಷವಾಗಿ ಪಣಂಬೂರಿನಲ್ಲಿ ಎರಡೂ ಬದಿಗಳಲ್ಲಿ ಸುಸಜ್ಜಿತ ಬಸ್ ನಿಲ್ದಾಣಗಳಿದ್ದರೂ, ಬಸ್‌ಗಳನ್ನು ನಿಲ್ದಾಣದ ಹೊರಗೆ ನಿಲ್ಲಿಸುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ರಸ್ತೆ ತಡೆ ಸಮಸ್ಯೆ ಎದುರಾಗುತ್ತಿದೆ. ನವಮಂಗಳೂರು ಬಂದರು ಕಾರ್ಮಿಕರು ಸಹ ಈ ಕಾರಣದಿಂದ ದಿನನಿತ್ಯ ಸಂಚಾರದಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ.

ಕ್ರಮ ಅಗತ್ಯ

ಈ ರೀತಿ ನಿಯಮ ಉಲ್ಲಂಘನೆಗಳ ಮೇಲೆ ಸಂಚಾರಿ ಪೊಲೀಸರು, ಸಂಬಂಧ ಪಟ್ಟ ಇಲಾಖೆ ಯಾವುದೇ ಕಠಿಣ ಕ್ರಮ ಕೈಗೊಳ್ಳದ ಹೊರತು ಬದಲಾವಣೆ ಸಾಧ್ಯವಾಗದು.



- ಎಲ್ಲೆಂದರಲ್ಲಿ ಬಸ್ ನಿಲ್ಲಿಸುವುದರಿಂದ ಪ್ರಯಾಣಿಕರು ಪರದಾಡಬೇಕಾದ ಸ್ಥಿತಿ
- ನಿಯಮ ಉಲ್ಲಂಘನೆಗೆ ಸೂಕ್ತ ಕ್ರಮ ಕೈಗೊಳ್ಳಲು ಸಾರ್ವಜನಿಕರ ಆಗ್ರಹ

ಕ್ರಮ ಕೈಗೊಳ್ಳಿ

ಇತ್ತೀಚೆಗೆ ಕೊಟ್ಟಾರ ಚೌಕಿಯ ಬಸ್ ನಿಲ್ದಾಣದ ಸಮಸ್ಯೆಗೆ ಪೊಲೀಸ್ ಇಲಾಖೆ ತಕ್ಷಣ ಸ್ಪಂದಿಸಿ ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಅದೇ ರೀತಿಯಲ್ಲಿ, ಪಣಂಬೂರು, ಸುರತ್ಕಲ್, ಸಹಿತ ಸುತ್ತಮುತ್ತಲಿನ ಇತರ ಪ್ರದೇಶಗಳಲ್ಲಿಯೂ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಬಸ್‌ಗಳು ನಿಗದಿತ ನಿಲ್ದಾಣಗಳಲ್ಲೇ ನಿಲ್ಲುವಂತೆ ಕಡ್ಡಾಯ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ತಾಪಮಾನ ಹೆಚ್ಚಳ: ಕಾಸರಗೋಡಿನಲ್ಲಿ ಕುಡಿಯುವ ನೀರಿಗೂ ಈಗ ತತ್ವಾರ

ಉಪ್ಪಳ: ತಾಪಮಾನ ಹೆಚ್ಚಳದಿಂದ ನದಿಗಳಲ್ಲಿ ನೀರಿನ ಮಟ್ಟ ಕುಸಿಯಲಾರಂಭಿಸಿದ್ದು, ಕುಡಿಯುವ ನೀರಿಗೂ ತತ್ವಾರ ಎದುರಾಗಿದೆ. ಉಪ್ಪಳ ಹೊಳೆಯ ಕೊಡಂಗೆಯಲ್ಲಿ ನಿರ್ಮಿಸಲಾದ ಕುಡಿಯುವ ನೀರು ಯೋಜನೆಯ ಬೃಹತ್ ಬಾವಿಯಲ್ಲಿ ನೀರಿನ ಮಟ್ಟ ಇಳಿಕೆಯಾಗಿರುವುದರಿಂದ ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯಲ್ಲಿ ಎರಡು ದಿನಕ್ಕೊಮ್ಮೆ ಕುಡಿಯುವ ನೀರು ವಿತರಣೆಗೊಳ್ಳುತ್ತಿದ್ದು, ಇದೀಗ ನಾಲ್ಕು ದಿನಕ್ಕೊಮ್ಮೆ ವಿತರಣೆಯಾಗುತ್ತಿದೆ. ಇದರಿಂದ ನಳ್ಳಿ ನೀರನ್ನೇ ಆಶ್ರಯಿಸುತ್ತಿರುವ ಕುಟುಂಬ ಸಂಕಷ್ಟಕ್ಕೀಡಾಗಿದೆ. ಕೊಡಂಗೆ ಬಾವಿಯಿಂದ ಬೇಕೂರು ಹಿರಣ್ಯಪದವ್‌ನಲ್ಲಿರುವ ಬೃಹತ್ ಟ್ಯಾಂಕ್‌ಗೆ ತುಂಬಿಸಿ ಬಳಿಕ ಪಂ. ವ್ಯಾಪ್ತಿಯ ಸುಮಾರು 5 ಸಾವಿರ ಕುಟುಂಬಕ್ಕೆ ವಿತರಣೆಗೊಳ್ಳುತ್ತಿದೆ.



ಬೇಸಿಗೆಯಲ್ಲಿ ಪ್ರತೀವರ್ಷ ನೀರಿನ ಸಮಸ್ಯೆ ಉಂಟಾಗುತ್ತಿದ್ದು, ಇನ್ನೊಂದು ಟ್ಯಾಂಕ್ ನಿರ್ಮಿಸಿ ನೀರನ್ನು ವಿಂಗಡಿಸಿ ವಿತರಿಸಿದಲ್ಲಿ ನೀರಿನ ಸಮಸ್ಯೆಗೆ ಪರಿಹಾರ ಕಂಡಕೊಳ್ಳಬಹುದೆಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ. ಕುಡಿಯುವ ನೀರಿನ ಸಮಸ್ಯೆಗೆ ಶೀಘ್ರ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

ಮಂಜಿನನಗರಿಯಲ್ಲೂ ಗರಿಷ್ಠ 35 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದ ತಾಪಮಾನ

ಬಸವಳಿದ ಜನತೆ, ಮಳೆಗಾಗಿ ದೇವರಿಗೆ ಮೊರೆ

ಮಡಿಕೇರಿ: ತಂಪುತಂಪು ಕೂಲ್ ಕೂಲ್ ಹವಾಮಾನಕ್ಕೆ ಹೆಸರಾದ ಕೊಡಗು ಜಿಲ್ಲೆಯಲ್ಲೂ ಈ ಬಾರಿ ಬೇಸಿಗೆಯ ಬಿಸಿಲ ಅಬ್ಬರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮಳೆಗಾಗಿ ದೇವರಿಗೆ ಮೊರೆ ಹೋಗುತ್ತಿದ್ದಾರೆ.

ಜಿಲ್ಲೆಯಲ್ಲೇ ಅತಿ ಹೆಚ್ಚು ತಂಪಾದ ಹವಾಮಾನಕ್ಕೆ ಹೆಸರಾದ ಮಡಿಕೇರಿಯಲ್ಲೇ ಮಂಗಳವಾರ ಗರಿಷ್ಠ ತಾಪಮಾನ 35ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದ್ದು, ಕನಿಷ್ಠ ತಾಪಮಾನ 20ಡಿಗ್ರಿಯಷ್ಟಿತ್ತು. ಜಿಲ್ಲೆಯ ಇತರ ಭಾಗಗಳಲ್ಲಿ ಈ ತಾಪಮಾನ ಮತ್ತೆ 1–2 ಡಿಗ್ರಿ ಹೆಚ್ಚಿದೆ.

ಬಸವಳಿಯುವ ಜನತೆ

ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಸರಾಸರಿ ತಾಪಮಾನ 34–25 ಡಿಗ್ರಿಯಷ್ಟಿರಬೇಕಿತ್ತು. ಆದರೆ ಈ ಬಾರಿ ಇದು ಇನ್ನೂ ಒಂದು ಡಿಗ್ರಿ ಹೆಚ್ಚು ಆಗಿದೆ. ರಾತ್ರಿ ತಾಪಮಾನವು ಕಡಿಮೆಯಿದ್ದರೂ, ಸೆಖೆ ಮಾತ್ರ ತಡೆಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಜನತೆ ಬಿರುಬಿಸಿಲಿನಿಂದ ಬಸವಳಿಯುತ್ತಿದ್ದಾರೆ.



ದೇವರಿಗೆ ಪೂಜೆ ಸಲ್ಲಿಕೆ

ತಾಲೂಕಿನಲ್ಲಿ ಅರೇಬಿಕಾ ಕಾಫಿ ತೋಟಗಳಿಗೆ ಅಲಸ್ವಲ್ಪ ಮಳೆ ಬಿದ್ದ ಪರಿಣಾಮ ಶೇ.50ರಷ್ಟು ಕಾಫಿ ಹೂ ಅರಳಿದೆ. ಈ ಸಂದರ್ಭ ಮಳೆ ಬಿದ್ದರೆ ಮಾತ್ರ ಫಸಲು ಉಳಿಯುತ್ತದೆ. ಈಗ ಮಳೆ ಬೀಳದ ಹಿನ್ನೆಲೆ ಕೃಷಿಕರು ಆತಂಕಗೊಂಡಿದ್ದಾರೆ. ಈ ಕಾರಣದಿಂದ ಮಳೆಗಾಗಿ ದೇವರ ಮೊರೆ ಹೋಗಿದ್ದೇವೆ ಎಂದು ಹಿರಿಕರ ದೇವಳ ಸಮಿತಿ ಅಧ್ಯಕ್ಷ ಶಿವಪ್ರಕಾಶ್ ಹೇಳಿದ್ದಾರೆ.

ಗಣನೀಯ ಏರಿಕೆ ಸಾಧ್ಯತೆ

ಹವಾಮಾನ ಇಲಾಖೆಯ ವರದಿಗಳ ಪ್ರಕಾರ ಮುಂದಿನ 5 ದಿನಗಳ ಕಾಲ ತಾಪಮಾನ ಗಣನೀಯ ಏರಿಕೆಯಾಗಲಿದ್ದು, ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ಬಿಸಿಲಿನ ತೀವ್ರತೆ ಹೆಚ್ಚಿರಲಿದ್ದು, ಈ ಸಮಯ ಜನರು ಅನಗತ್ಯ ಮನೆಯಿಂದ ಹೊರ ಬರದಂತೆ, ಆರೋಗ್ಯ ಕಾಪಾಡುವಂತೆ ಸೂಚಿಸಲಾಗಿದೆ. »» ಪುಟ 6

ಸಮಸ್ಯೆಯಾಗಲಿದೆ

ದಕ್ಷಿಣದ ಕಾಶ್ಮೀರ ಎಂದು ಕರೆಸಿಕೊಳ್ಳುತ್ತಿರುವ ಕೊಡಗು ಜಿಲ್ಲೆಯಲ್ಲೂ ಪ್ರಸಕ್ತ ಫ್ಯಾನ್, ಎಸಿಗಳ ಮೊರೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಮುಂದಿನ ದಿನಗಳಲ್ಲಿ ಸಾಕಷ್ಟು ಮಳೆಯಾಗದಿದ್ದಲ್ಲಿ ಈ ಬಾರಿ ಬೇಸಿಗೆ ಕೊಡಗಿನ ಜನತೆ ಪಾಲಿಗೆ ತಡೆಯಲಾರದಷ್ಟು ಸಮಸ್ಯೆ ತಂದೊಡ್ಡಲಿರುವುದರಲ್ಲಿ ಸಂಶಯವಿಲ್ಲ.

ಉಡುಪಿ ಜಿಲ್ಲೆಯಲ್ಲಿ ಹೆಚ್ಚಿದ ತಾಪಮಾನ: ಸುಡು ಬಿಸಿಲಿನ ಬೇಗೆಗೆ ತತ್ತರಿಸಿದ ಜನತೆ

ಕಟ್ಟಡ ನಿರ್ಮಾಣ ಕಾರ್ಮಿಕರು, ಬೀದಿ ವ್ಯಾಪಾರಿಗಳಿಗೆ ಸಂಕಷ್ಟ

ಉಡುಪಿ: ಜಿಲ್ಲೆಯಲ್ಲಿ ಸೂರ್ಯನ ಪ್ರಖರತೆ ದಿನದಿಂದ ದಿನಕ್ಕೆ ಏರುತ್ತಿದ್ದು ಕರಾವಳಿಯ ಜನತೆ ಬಿಸಿಲಿನ ಬೇಗೆಗೆ ತತ್ತರಿಸಿ ಹೋಗಿ ದ್ದಾರೆ. ಸುಡುವ ಬಿಸಿಲು ಮತ್ತು ಅತಿಯಾದ ಆರ್ದ್ರತೆಯಿಂದ ಜಿಲ್ಲೆಯಾದ್ಯಂತ ಸಾಮಾನ್ಯ ಜನಜೀವನದ ಮೇಲೆ ತೀವ್ರ ಪರಿಣಾಮ ಬೀರಿದ್ದು, ವಿಶೇಷವಾಗಿ ಬಿಸಿಲಿನಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ.

ಈ ಬಿಸಿಲಿನ ಝಳಕ್ಕೆ ಅತಿ ಹೆಚ್ಚು ತೊಂದರೆಗೊಳಗಾಗಿರುವುದು ದಿನಗೂಲಿ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು. ಅನಿವಾರ್ಯ ಸುಡುವ ಬಿಸಿಲಿನಲ್ಲೇ ಕೆಲಸ ಮಾಡಬೇಕಾದ ಅನಿವಾರ್ಯತೆ ಇವರದ್ದಾಗಿದೆ. ಬೆಳಿಗ್ಗೆ 10 ಗಂಟೆಯಾಗುವಷ್ಟರಲ್ಲಿ ರಸ್ತೆಗಿಳಿಯುವುದು ಕಷ್ಟವಾಗುತ್ತಿದ್ದು, ಮಧ್ಯಾಹ್ನದ ವೇಳೆಗೆ ಬಿಸಿಗಾಳಿ ತೀವ್ರತೆ ಹೆಚ್ಚುತ್ತಿದೆ. ಜನವರಿ–ಫೆಬ್ರವರಿಯಲ್ಲೇ ಬಿಸಿಲು ಶುರುವಾಗಿದ್ದರೂ, ಏಪ್ರಿಲ್ ಮಧ್ಯಭಾಗದಲ್ಲಿ ಇದು ಅಸಹನೀಯ ಮಟ್ಟಕ್ಕೆ ತಲುಪಿದೆ.

ಸಾಂದರ್ಭಿಕ ಚಿತ್ರ



ಖಾರಾವಳಿ

ಉಡುಪಿಯಲ್ಲಿ ತಾಪಮಾನವು 35 ರಿಂದ 37 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದ್ದರೂ, ಕರಾವಳಿ ತೀರದ ತೇವಾಂಶದಿಂದಾಗಿ ಜನರಿಗೆ 42 ರಿಂದ 45 ಡಿಗ್ರಿ ಸೆಲ್ಸಿಯಸ್ ಬಿಸಿಲಿನ ಅನುಭವವಾಗುತ್ತಿದೆ.

ಸುತ್ತ ಮುತ್ತ

ಸರಸ್ವತಿ ಸೌಹಾರ್ದ ಸಹಕಾರ ಸಂಘಕ್ಕೆ ಅನಂತಕೃಷ್ಣ ಆಯ್ಕೆ



ಸುಳ್ಯ: ಸರಸ್ವತಿ ಸೌಹಾರ್ದ ಸಹಕಾರ ಸಂಘದ ವೃತ್ತಿಪರ ನಿರ್ದೇಶಕರಾಗಿ ಅನಂತಕೃಷ್ಣ ಚಾಕೋಟೆ ನೇಮಕಗೊಂಡಿದ್ದಾರೆ. ಮಂಡೆಕೋಲು ಸಹಕಾರಿ ಕೃಷಿ ಪತ್ತಿನ ಸಹಕಾರಿ ಸಂಘದ ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದಾರೆ.

ಏ.20ರಿಂದ 'ಕನ್ನಿಕಾ ವ್ಯಕ್ತಿತ್ವ ವಿಕಸನ ಶಿಬಿರ'

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನ ಮತ್ತು ಬೆಳ್ತಂಗಡಿ ತಾಲೂಕು ತುಳು ಶಿವಳ್ಳಿ ಸಭಾ ಮಹಿಳಾ ಘಟಕ ಮತ್ತು ಉಜಿರೆ ವಲಯದ ಸಹಕಾರದಿಂದ ಪ್ರತಿವರ್ಷ ನಡೆಯುವ 'ಕನ್ನಿಕಾ ವ್ಯಕ್ತಿತ್ವ ವಿಕಸನ ಶಿಬಿರ' ಏ.20ರಂದು ಉಜಿರೆಯ ಶ್ರೀ ಶಾರದಾ ಮಂಟಪದಲ್ಲಿ ನಡೆಸಲಾಗುವುದು. ಬ್ರಾಹ್ಮಣ ಸಮಾಜದ ಆರು ಪಂಗಡದ ಹೆಣ್ಣು ಮಕ್ಕಳಿಗೆ (3ರಿಂದ 18 ವಯಸ್ಸಿನ) ಒಂದು ದಿನದ ಬೇಸಿಗೆ ರಜೆಯ, ಮಕ್ಕಳ ಅಭಿರುಚಿಗೆ ತಕ್ಕಂತೆ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಬಗೆಯ ಕಾರ್ಯಕ್ರಮಗಳನ್ನು ಆಯೋಜಿಲಾಗಿದೆ. ಶಿಬಿರವನ್ನು ಬೆಳಿಗ್ಗೆ 9ಕ್ಕೆ ಮಹಿಳಾ ಘಟಕದ ಗೌರವಾಧ್ಯಕ್ಷೆ ಕುಸುಮ ಪಡುವೆಟ್ನಾಯ ಉದ್ಘಾಟಿಸಲಿದ್ದು, ತಾಲೂಕು ಅಧ್ಯಕ್ಷೆ ಜಯಾ ಅನಂತಕೃಷ್ಣ ಆರ್ಮುಡತ್ತಾಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಾವಂಜೆ ಶ್ರೀ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವ: ಧ್ವಜಾರೋಹಣ



ಮುಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮೀ ದೇವಸ್ಥಾನ ನಾಗವ್ರಜ ಕ್ಷೇತ್ರದಲ್ಲಿ ಏ.13ರಿಂದ 19ರ ವರೆಗೆ ವರ್ಷಾವಧಿ ಜಾತ್ರಾ ಮಹೋತ್ಸವದ ಪ್ರಯುಕ್ತ ಧ್ವಜಾರೋಹಣ ನಡೆಯಿತು. ಮಂಗಳವಾರ ಬೆಳಿಗ್ಗೆ ಕ್ಷೇತ್ರದ ಅರ್ಚಕರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಬೆಳಿಗ್ಗೆ ಧ್ವಜಾರೋಹಣ ನಡೆಯಿತು. ಮಧ್ಯಾಹ್ನ ಅನ್ನಸಂತರ್ಪಣೆ,ಸಂಜೆ ಉತ್ಸವ ಬಲಿ ಹಳೆಯಂಗಡಿ ಪೇಟೆ ಸವಾರಿ ನಡೆಯಿತು. ಈ ಸಂದರ್ಭ ಕ್ಷೇತ್ರದ ಧರ್ಮದರ್ಶಿ, ಡಾ. ಯಾಜಿ ನಿರಂಜನ ಭಟ್, ಆಡಳಿತ ಮೊಕ್ತೇಸರ ಎಂ. ಶಶೀಂದ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು. ಕ್ಷೇತ್ರದಲ್ಲಿ ಏ.18ಕ್ಕೆ ಪೂರ್ವಾಹ್ನ 10.30ಕ್ಕೆ ರಥಾರೋಹಣ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ 7ಕ್ಕೆ ಮಹಾರಥೋತ್ಸವ, ನಡೆಯಲಿದೆ ಎಂದು ಪ್ರಕಟಣೆ ತಿಳಿಸಲಿದೆ.

ಇಂದು ರೋಟರಿ ಬಸ್ ತಂಗುದಾಣ ಲೋಕಾರ್ಪಣೆ

ಬಂಟ್ವಾಳ: ಇಲ್ಲಿನ ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್ ವತಿಯಿಂದ ಬಂಟ್ವಾಳ-ಮೂಡುಬಿದ್ರೆ ರಸ್ತೆ ನಡುವಿನ ಬಾರೆಕಾಡು ಕ್ರಾಸ್ ಎಂಬಲ್ಲಿ ರೂ 1.30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ 'ರೋಟರಿ ಬಸ್ ತಂಗುದಾಣ'ವನ್ನು ರೋಟರಿ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ. ಇವರು ಏ.15ರಂದು ಸಂಜೆ ಗಂಟೆ 4.30ಕ್ಕೆ ಲೋಕಾರ್ಪಣೆಗೊಳಿಸಲಿದ್ದಾರೆ. ಶಾಸಕ ರಾಜೇಶ್ ನ್ಯಾಕ್ ಮತ್ತಿತರ ಗಣ್ಯರು ಭಾಗವಹಿಸುವರು. ಇದೇ ವೇಳೆ ಸಿದ್ದಕಟ್ಟೆ ಸಮೀಪದ ಆರಂಬೋಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 3 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ರಂಗಮಂದಿರ ಕಾಮಗಾರಿ ವೀಕ್ಷಣೆ ಜೊತೆಗೆ ಮಂಚಕಲ್ಲು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕುಡಿಯುವ ನೀರಿನ ಶುದ್ಧೀಕರಣ ಘಟಕ ಮತ್ತು ಅಂಗನವಾಡಿ ಕೇಂದ್ರಕ್ಕೆ ಕಪಾಟು ಹಸ್ತಾಂತರಗೊಳಿಸುವರು. ಸಂಜೆ 6ಕ್ಕೆ ಲೊರೆಟ್ಟೋ ಹಿಲ್ಸ್ ರೋಟರಿ ಸಭಾಂಗಣದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕ್ಲಬ್‌ನ ಅಧ್ಯಕ್ಷ ವಿಜಯ ಫೆರ್ನಾಂಡಿಸ್ ಅಧ್ಯಕ್ಷತೆ ವಹಿಸಲಿದ್ದು ಮಾಜಿ ಜಿಲ್ಲಾ ಗವರ್ನರ್ ಎನ್. ಪ್ರಕಾಶ್ ಕಾರಂತ್, ಸಹಾಯಕ ಗವರ್ನರ್ ಉಮೇಶ್ ರಾವ್ ಮಿಜಾರ್, ವಲಯ ಸೇನಾನಿ ರಾಮಚಂದ್ರ ಶೆಟ್ಟಿಗಾರ್, ಕ್ಲಬ್ಬಿನ ಸ್ಥಾಪಕಾಧ್ಯಕ್ಷ ಅವಿಲ್ ಮಿನೇಜಸ್ ಮತ್ತಿತರ ಗಣ್ಯರು ಭಾಗವಹಿಸುವರು. ಅನಾರೋಗ್ಯಪೀಡಿತರಿಗೆ ವೀಲ್ ಚೇರ್ ವಿತರಣೆ ಸಾಧಕರಿಗೆ ಸನ್ಮಾನ ನಡೆಯಲಿದೆ ಎಂದು ಕ್ಲಬ್‌ನ ಕಾರ್ಯದರ್ಶಿ ಮೋಹನ್ ಕೆ. ಶ್ರೀಯಾನ್ ರಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿಶೇಷ ಶಿಷ್ಟ ಸಂಪ್ರದಾಯದ ಧಾರ್ಮಿಕ ಆಚರಣೆಗಳು | ಚಂದ್ರಮಂಡಲ ರಥ ಉತ್ಸವ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ವಿಷು ಸಂಭ್ರಮ



ಪುತ್ತೂರು: ಸೌರಮಾನ ಯುಗಾದಿ ತುಳುನಾಡಿನಲ್ಲಿ ಹೊಸ ವರ್ಷವನ್ನು ಆಚರಿಸುವ ದಿನ. ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಜಾತ್ರಾ ಉತ್ಸವದೊಂದಿಗೆ ವಿಷು ಕಣಿ ಸಂಭ್ರಮವೂ ಸೇರಿಕೊಂಡು ಏ.15ರಂದು ವಿಶೇಷ ಶಿಷ್ಟ ಸಂಪ್ರದಾಯದ ಧಾರ್ಮಿಕ ಆಚರಣೆಗಳು ನಡೆಯಲಿವೆ.

ಮಳೆಗಾಗಿಯೂ ಪ್ರಾರ್ಥನೆ

ಮೇಷ ಸಂಕ್ರಮಣದ ದಿನ ರಾತ್ರಿ ದೇವರ ದೈನಂದಿನ ಪೇಟೆ ಸವಾರಿ ಮುಗಿದು, ದೇವಾಲಯದ ಆಡಳಿತದವರು, ಭಕ್ತಾದಿಗಳು ಸೇರಿ ಕಾಲ ಕಾಲಕ್ಕೆ ಮಳೆ-ಬೆಳೆ ಸಮೃದ್ಧಿಯಾಗಿ ಸುಭಿಕ್ಷೆ ಉಂಟಾಗಲಿ ಎಂದು ದೇವಳದ ತಂತ್ರಿಗಳ ಮೂಲಕ ದೇವರ ಸತ್ಯ ಧರ್ಮ ನಡೆಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಬಳಿಕ ಫಲಪುಷ್ಪಾದಿ ಸುವಸ್ತುಗಳನ್ನು ದರ್ಪಣ ಸಹಿತ ಗರ್ಭಗುಡಿಯಲ್ಲಿ ಇರಿಸಿ ಬಾಗಿಲು ಮುಚ್ಚಲಾಗುತ್ತದೆ. ವಿಷು (ಬಿಸು)ವಿನ ದಿನ (ತುಳು ಪಂಚಾಂಗದಲ್ಲಿ ತಿಂಗಳಡಿ ದಿನ) ಪ್ರಾತಃಕಾಲದಲ್ಲಿ ಶ್ರೀ ದೇವರ ಗರ್ಭಗುಡಿಯ ಬಾಗಿಲು ತೆಗೆದು ದರ್ಪಣ ಬಿಂಬ ದರ್ಶನವಾಗುತ್ತದೆ. ದೇವಾಲಯದ ಒಳಾಂಗಣದ ಸಾಂಪ್ರದಾಯಿಕ ಚಪ್ಪರದ ಕಂಬಗಳನ್ನು ತಳಿರು ತೋರಣ ಕಟ್ಟಿ ಸಿಂಗರಿಸಲಾಗುತ್ತದೆ ಮತ್ತು ದೇವರು ಬಂದು ನಿಲ್ಲುವ ಕೊಡಿಮರದ ಬಲ ಭಾಗದಲ್ಲಿ ಚಪ್ಪರಕ್ಕೆ ಮೇಲ್ಕಾಪು ಹಾಸಲಾಗುತ್ತದೆ.

ಚಂದ್ರಮಂಡಲ ಉತ್ಸವ

ಸೌರ ಯುಗಾದಿ ವಿಷುಕಣಿ ಅಂಗವಾಗಿ ದೇವಾಲಯದ ಒಳಾಂಗಣದಲ್ಲಿ ಬೆಳಗ್ಗೆ ವಿಶೇಷ ಉತ್ಸವ ಬಲಿ, ವಸಂತ ಕಟ್ಟೆಪೂಜೆ ನಡೆಯುತ್ತದೆ. ಸಂಜೆ ತುಳು ಪಂಚಾಂಗ ಸಂಪ್ರದಾಯದಂತೆ ದೇವಾಲಯದ ಹೊರಾಂಗಣದಲ್ಲಿ 'ಬಯ್ಯದ ಬಲಿ' (ಸಂಜೆಯ ಉತ್ಸವ) ನಡೆದು ಬಳಿಕ ಶ್ರೀ ದೇವರ ಸಾಂಪ್ರದಾಯಿಕ ಚಂದ್ರ ಮಂಡಲ ಉತ್ಸವ (ಬಂಡಿ ಉತ್ಸವ) ನಡೆಯುತ್ತದೆ. ದೇವಾಲಯದಲ್ಲಿ ಶತಮಾನಗಳ ಹಿಂದೆ ಬಂಡಿಯ ಪೀಠದಲ್ಲಿ ದೇವರ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ ಹೊರಾಂಗಣದಲ್ಲಿ ಎಳೆಯಲಾಗುತ್ತಿತ್ತು. ಚಂದ್ರಮಂಡಲ ರಥವನ್ನು ನಿರ್ಮಿಸಿದ ಬಳಿಕ ಚಂದ್ರಮಂಡಲ ರಥ ಉತ್ಸವ ನಡೆಯುತ್ತದೆ. ಪುತ್ತೂರು ಸೀಮೆಯ ಜನರು ಇದನ್ನು ಬಂಡಿ ಉತ್ಸವ ಎಂದೂ ಕರೆಯುತ್ತಾರೆ.

ವಿಶೇಷ ಊಟ

ವಿಷುಕಣಿಯ ಅಂಗವಾಗಿ ಮಧ್ಯಾಹ್ನ ದೇವಾಲಯದಲ್ಲಿ ಮಹಾಪೂಜೆಯ ಬಳಿಕ ಅನ್ನ ಸಂತರ್ಪಣೆಯಲ್ಲಿ ವಿಷುಹಬ್ಬದ ಪ್ರಯುಕ್ತ ವಿಶೇಷ ಊಟ ಇರುತ್ತದೆ. ಮನೆಗಳಲ್ಲಿ ಸೌರ ಯುಗಾದಿ ಆಚರಣೆ ಇದ್ದರೂ ಒಬ್ಬ ಸದಸ್ಯನಾದರೂ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ನಡೆಯುವ ವಿಷು ಊಟದಲ್ಲಿ ಅನ್ನಪ್ರಸಾದವನ್ನು ಸ್ವೀಕರಿಸುವುದು ಅಂದಿನ ವಿಶೇಷ.

ಇಂದಿನ ಪೇಟೆ ಸವಾರಿ

ಏ.15ರ ರಾತ್ರಿ ಉತ್ಸವ, ಬಂಡಿ ಉತ್ಸವ, ಬನ್ನೂರು, ಅಶೋಕನಗರ, ರೈಲ್ವೇ ಮಾರ್ಗ ಸವಾರಿ ನಡೆಯಲಿದೆ.

ಬ್ರಹ್ಮಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಭಜನಾ ಸ್ಪರ್ಧೆ



ಮಂಗಳೂರು: ಪ್ರಜಾಪಿತ ಬ್ರಹ್ಮ ಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ, ಮಂಗಳೂರು ವತಿಯಿಂದ 'ದಾಸ ಸಂಕೀರ್ತನ ಕುಣಿತ ಭಜನೆ ಸ್ಪರ್ಧೆ ಏ.12ಕ್ಕೆ ವಿಶ್ವ ಶಾಂತಿ ಮಂದಿರದಲ್ಲಿ ನಡೆಯಿತು.

ಯುವ ಸಮಾಜವನ್ನು ಪ್ರೋತ್ಸಾಹಿಸುವುದರೊಂದಿಗೆ ಕುಣಿತ ಭಜನಾ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಬ್ರಹ್ಮಕುಮಾರಿ ವಿಶ್ವೇಶ್ವರಿ ಇವರು ಆಧ್ಯಾತ್ಮಿಕ ಸಂದೇಶವನ್ನು ನೀಡಿದರು. ಆದಾಸ ಸಂಕೀರ್ತನೆ ಮತ್ತು ಭಜನೆಗಳು ಕೇವಲ ಸಂಗೀತವಲ್ಲ, ಅವು ಆತ್ಮಶುದ್ಧಿ ಮತ್ತು ಮನಃಶಾಂತಿಯ ಸಾಧನಗಳಾಗಿವೆ. ಇಂದಿನ ಜಂಜಾಟದ ಬದುಕಿನಲ್ಲಿ ಮಾನವನಿಗೆ ಮನದೊಳಗಿನ ಶಾಂತಿ ಅತ್ಯವಶ್ಯಕವಾಗಿದೆ. ಭಗವಂತನ ಸ್ಮರಣೆಯೊಂದಿಗೆ ಭಜನೆ ಮಾಡುವುದರಿಂದ ಮನಸ್ಸು ಏಕಾಗ್ರವಾಗುತ್ತದೆ ಹಾಗೂ ಜೀವನದಲ್ಲಿ ಸಕಾರಾತ್ಮಕತೆ ಬೆಳೆಯುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಮಾಧವ ಎಂ.ಅಂಚನ್ ಅವರು, ದಾಸ ಸಾಹಿತ್ಯದ ಮಹತ್ವ ಹಾಗೂ ಭಜನೆಯ ಆಧ್ಯಾತ್ಮಿಕ ಪ್ರಭಾವದ ಕುರಿತು ಮಾತನಾಡಿದರು. ಪ್ರಮುಖರಾದ ವಿಜಯ ಎನ್. ಕುಕ್ಯಾನ್, ಡಾ.ರತಿ ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ಹಲವು ಭಜನಾ ತಂಡಗಳು ಭಾಗವಹಿಸಿದ್ದವು.

ಬನ್ನೂರಿನ ಎವಿಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಡಾ. ಅಂಬೇಡ್ಕರ್ ಜಯಂತಿ




ಪುತ್ತೂರು: ದೇಶವು ಸುಗಮವಾಗಿ ಮುನ್ನಡೆಯಬೇಕಾದರೆ ಪೂರಕವಾದ ಕಾನೂನು ಚೌಕಟ್ಟು ಅಗತ್ಯ. ಭಾರತ ಪರಕೀಯರ ದಾಸ್ಯದಿಂದ ಮುಕ್ತವಾದರೂ, ಸುಗಮ ಆಡಳಿತಕ್ಕೆ ಕಾನೂನು ವ್ಯವಸ್ಥಿತ ಸಂವಿಧಾನವನ್ನು ರಚಿಸುವಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರಧಾನ ಪಾತ್ರ ವಹಿಸಿದ್ದರು ಎಂದು ಬನ್ನೂರಿನ ಎವಿಜಿ ಆಂಗ್ಲ ಮಾಧ್ಯಮ ಶಾಲೆಯ ಶಾಲಾ ಆಡಳಿತ ಸಮಿತಿಯ ಉಪಾಧ್ಯಕ್ಷ ಉಮೇಶ್ ಮಲುವೇಲು ಹೇಳಿದರು.

ನಗರದ ಬನ್ನೂರಿನ ಎವಿಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಂಗಳವಾರ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ದೀಪ ಬೆಳಗಿಸಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಮಾತನಾಡಿದರು.

ಶಾಲಾ ಸಂಚಾಲಕ ಎ.ವಿ. ನಾರಾಯಣ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಉನ್ನತ ವ್ಯಾಸಂಗವನ್ನು ಪಡೆದು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸಿದರು. ಎಲ್ಲದಕ್ಕೂ ಶಿಕ್ಷಣವೇ ಸೂಕ್ತವಾದ ಮಾರ್ಗ ಎಂಬುದನ್ನು ಮನಗಂಡು ಮುಂದೆ ಭಾರತದ ಸಂವಿಧಾನದ ರಚನೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದರು ಎಂದರು.

ಸಭಾ ವೇದಿಕೆಯಲ್ಲಿ ಮುಖ್ಯ ಶಿಕ್ಷಕ ಅಮರನಾಥ ಬಿ.ಪಿ., ನೃತ್ಯ ಶಿಕ್ಷಕಿ ನಿವಿತಾ ಪಾಣಾಜೆ ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿನಿ ಆಯಿಶಾ ಶೈಮಾಳ ಹುಟ್ಟುಹಬ್ಬ ಇದೇ ಸಂದರ್ಭದಲ್ಲಿ ಆಚರಿಸಲಾಯಿತು. ಹರ್ಷಿತ ಪ್ರಾರ್ಥಿಸಿದರು. ಶಾಲಾ ವಿದ್ಯಾರ್ಥಿ ಮಾಸ್ಟರ್ ವಿಖ್ಯಾತ್ ಸಂವಿಧಾ ನದ ಪೀಠಿಕೆಯನ್ನು ವಾಚಿಸಿದರು. ಶಿಕ್ಷಕಿ ಸುಚಿತಾ ಸ್ವಾಗತಿಸಿ, ಶ್ವೇತ ವಂದಿಸಿದರು. ಅನುರಾಧ ಕಾರ್ಯಕ್ರಮ ನಿರ್ವಹಿಸಿದರು.

ಅಂಬಿಕಾ ಪಿಯು ವಿದ್ಯಾಲಯ: ಶೇ.100 ಫಲಿತಾಂಶ





ಪುತ್ತೂರು: ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯ ಫಲಿತಾಂಶದಲ್ಲಿ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ನೆಲ್ಲಿಕಟ್ಟೆ ಹಾಗೂ ಬಪ್ಪಳಿಗೆಯಲ್ಲಿನ ಎರಡೂ ಪದವಿ ಪೂರ್ವ ವಿದ್ಯಾಲಯಗಳು ಫಲಿತಾಂಶ ಪಡೆದು ದಾಖಲೆ ನಿರ್ಮಿಸಿವೆ. ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯ ಹಾಗೂ ಬಪ್ಪಳಿಗೆಯ ಅಂಬಿಕಾ ವಸತಿಯುತ ಪದವಿಪೂರ್ವ ವಿದ್ಯಾಲಯಗಳೆರಡೂ ಶೇ.100 ಫಲಿತಾಂಶ ದಾಖಲಿಸಿವೆ. ಇದರೊಂದಿಗೆ ಕಳೆದ ವರ್ಷಗಳಿಂದ ಸತತ ನೂರು ಶೇಕಡಾ ಫಲಿತಾಂಶ ದಾಖಲಿಸಿದ ಕೀರ್ತಿಗೆ ಅಂಬಿಕಾ ಭಾಜನವಾಗಿದೆ.

ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯ

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 231 ವಿದ್ಯಾರ್ಥಿಗಳಲ್ಲಿ 173 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 58 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವುದಲ್ಲದೆ ವಿಜ್ಞಾನ ವಿಭಾಗದಲ್ಲಿ ಶಾರ್ವರೀ ಆರ್‌ಎಸ್ 600 ರಲ್ಲಿ 597 ಅಂಕವನ್ನು ಪಡೆಯುವುದರ ಮೂಲಕ ರಾಜ್ಯಕ್ಕೆ ತೃತೀಯ ರಾಂಕ್ ದಾಖಲಿಸಿದ್ದಾರೆ. ತ್ರಿಶೂಲ್ ಎನ್.ಡಿ 594, ಪ್ರತೀಕ್ಷಾ ಶೆಣೈ 600ರಲ್ಲಿ 594 ಅಂಕ ಪಡೆದಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 37 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 6 ಮಂದಿ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ದಾಖಲೆ ಬರೆದಿದ್ದಾರೆ. ಅದರಲ್ಲೂ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 231 ವಿದ್ಯಾರ್ಥಿಗಳಲ್ಲಿ 52 ಮಂದಿ ವಿದ್ಯಾರ್ಥಿಗಳು ಹಾಗೂ ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 31 ವಿದ್ಯಾರ್ಥಿಗಳಲ್ಲಿ 16 ಮಂದಿ ವಿದ್ಯಾರ್ಥಿಗಳು 570ಕ್ಕಿಂತಲೂ ಅಧಿಕ ಅಂಕ ಗಳಿಸಿರುವುದು ಉಲ್ಲೇಖನೀಯ.

ವಿಜ್ಞಾನ ವಿಭಾಗ

ಶಾರ್ವರಿ ಆರ್.ಎಸ್. (597), ತ್ರಿಶೂಲ್ ಎನ್.ಡಿ. (594), ಚಂದನ ಇ (593), ಕವನ (590), ಪ್ರಕೃತಿ ಶೆಟ್ಟಿ(590), ಶ್ರೀನಿಧಿ (589), ನಿರೀಕ್ಷಾ ಕೆ.ಪಿ. (588), ಸಿಂಚನ ಹರೀಶ್ ಪನಂಬು (588), ಚಿನ್ಮಯಿ ಪುತ್ತಿಲ (588), ಅಭಿನವ್ ವಸಿಷ್ಠ (588), ಶ್ರೀಯ(588), ಎಂ ಶ್ರೀಶೈಲ್ (588), ಚಿತ್ರ ಕೆ.ಪಿ. (587), ಸಾನ್ವಿ ಜೆ.ಎಸ್ (586), ಪ್ರಜ್ವಲ್ ಎಚ್ (586), ಆಯುಷ್ ರಾವ್ ಕೆ.(586), ಶಿಫಾಲಿ ರೈ (584), ಜಶ್ಮಿ ಡಿ ಎಸ್ (584), ಹಂಸಿಕಾ ಡಿ.ಟಿ (583), ಸಾನ್ವಿ ಎಸ್. ಪಿ. (583), ಶ್ರೀಲಕ್ಷ್ಮಿ ಎಸ್ ಸಿ (583), ಪುಣ್ಯ ಎನ್.ಎ. (583), ಪಿ.ಕೆ. ರಕ್ಷಿತ್ (583), ಎನ್. ತನ್ವಿ ಗೌರಿ (582), ಚೈತನ್ಯ ಎ. (581), ಪ್ರಖ್ಯಾತ್ ರಾಜ್ ರೈ (581), ಸಂಹಿತಾ ಎನ್. (580), ಇಶಾ ಜಾರ್ಜ್ (580) ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ

ಪ್ರತೀಕ್ಷಾ ಎನ್. ಶೆಣೈ (594), ಅನನ್ಯ ಎ(593), ಕೆ. ಪ್ರತೀಕ್ ಪಡಿಯಾರ್ (591), ಶ್ರೀದೇವಿ (590), ಕೆ ಅಭಯ್ ನಾಯಕ್ (587), ಪ್ರತ್ಯುಷ್ ಹೆಬ್ಬಾರ್ (587), ಅನನ್ಯ ಜೆ. ಶೆಟ್ಟಿ (585), ಜಿ. ಸುನಿಧಿ ಪ್ರಭು (582), ಗೌತಮ್ ನಾಯಕ್ ಎನ್. (581), ನರೇಶ್ ಕೆ.ಎನ್. (581), ಹಿತಾಶ್ರೀ (580) ಅಂಕ ಗಳಿಸಿದ್ದಾರೆ.

ಬಪ್ಪಳಿಗೆ ಅಂಬಿಕಾ ಪದವಿಪೂರ್ವ ವಿದ್ಯಾಲಯ

ಪರೀಕ್ಷೆಗೆ ಹಾಜರಾದ ಒಟ್ಟು 216 ವಿದ್ಯಾರ್ಥಿಗಳಲ್ಲಿ 159 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 56 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 48 ಮಂದಿ ವಿದ್ಯಾರ್ಥಿಗಳು 570ಕ್ಕಿಂತಲೂ ಅಧಿಕ ಅಂಕ ಗಳಿಸಿ ದಾಖಲೆ ಬರೆದಿದ್ದಾರೆ. ಗಗನ್ ಕೆ.ಆರ್. (594) ಅಂಕ ಗಳಿಸಿ ರಾಜ್ಯಕ್ಕೆ ಆರನೇ ರ್‍ಯಾಂಕ್ ಗಳಿಸಿದರೆ ಬೆಂಗಳೂರಿನ ಅಖಿಲೇಶ್ ಅನಂತ ಶರ್ಮ (591) ಅಂಕ ಹಾಗೂ ಸನ್ನಿಧಿ (591) ಅಂಕ ದಾಖಲಿಸಿದ್ದಾರೆ. ಗಗನ್ ಕೆ.ಆರ್. (594), ಅಖಿಲೇಶ್ ಅನಂತ ಶರ್ಮ (591), ಸನ್ನಿಧಿ ಎನ್ . (591), ಅಸೀಮ ಅಗ್ನಿ ಹೋತ್ರಿ (589), ಎಸ್ ಚಿನ್ಮಯ್ (589) ಸಾಕ್ಷಿ ಕೃಷ್ಣ (589), ಶ್ರೀ ಲಕ್ಷ್ಮೀ ಸುರೇಶ್ (589), ಪ್ರತೀಕ್ ಶಿವರುದ್ರಯ್ಯ ಹಿರೇಮಠ್ (588), ಪ್ರಿಯದರ್ಶಿನಿ ಎನ್. ಟಿ (588), ಶ್ರೀಶ ರೈ (586), ಶ್ರೀಶ ಎಂ. (585), ಧೃತಿ ಭಟ್ ಕೆ. (584), ಅದ್ವಿತಾ ಪಿ. ರಾವ್ (583), ಇಂಚರ (583), ಕೆ.ಎಲ್. ಶಶಾಂಕ್ (583), ಸಂದೀಪ್ ಶರ್ಮಾ ಸಿಎಸ್ (583), ಸಾತ್ವಿಕ್ ರಾಮನ್ ಕೆ.ಸಿ. (583), ಚಿಂತನ್ ಎ.ಜೆ (582), ಸೃಜನ್ (582), ನಿರೀಕ್ಷ - 581, ತೇಜಸ್ವಲ್ ಆರ್. (581), ಅಶ್ವಿನಿ ಎನ್ (580), ಶ್ರಾವಣಿ ಸಿ ಸಿ (580), ವೃದ್ಧಿ ರೈ ಅವರು (580) ಅಂಕ ಗಳಿಸಿದ್ದಾರೆ.

ಏ.29-ಮೇ 3: ತೊಕ್ಕೊಟ್ಟು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠೆ



ಉಳ್ಳಾಲ: ತೊಕ್ಕೊಟ್ಟು ಗಾಂಧಿನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳು ನಡೆದು ಕ್ಷೇತ್ರವು ಸುಂದರ ವಾಗಿ ಕಂಗೊಳಿಸುತ್ತಿದೆ. ಧಾರ್ಮಿಕ ಕ್ಷೇತ್ರಗಳ ಸರ್ವಾಂಗೀಣ ಅಭಿವೃದ್ಧಿಯೊಂದಿಗೆ ಎಲ್ಲರೂ ಒಗ್ಗೂಡಿ ಬಲಿಷ್ಠ ಕರ್ನಾಟಕ ಮತ್ತು ಭಾರತವನ್ನು ನಿರ್ಮಿಸಬೇಕು. ಇಂಜಿನಿಯರ್ ಮೂಲಕ ಪರಿಶೀಲನೆ ನಡೆಸಿ ಕ್ಷೇತ್ರದ ಜೀರ್ಣೋದ್ಧಾರ ಕಾಮಗಾರಿಗೆ ಗರಿಷ್ಠ ಮಟ್ಟದ ಸಹಕಾರ ನೀಡುವುದಾಗಿ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ತೊಕ್ಕೊಟ್ಟು ಬಳಿಯ ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಏ.29 ರಿಂದ ಮೇ 3ರ ತನಕ ನಡೆಯಲಿರುವ ಪುನರ್ ಪ್ರತಿಷ್ಠಾಪನಾ ಕಲಶೋತ್ಸವದ ಆಮಂತ್ರಣ ಪತ್ರಿಕೆಯನ್ನು ಶ್ರೀಕ್ಷೇತ್ರದಲ್ಲಿ ಮಂಗಳವಾರದಂದು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕ್ಷೇತ್ರದ ತಂತ್ರಿಗಳಾದ ವೇದ ಮೂರ್ತಿ ಬ್ರಹ್ಮಶ್ರೀ ಪ್ರಕಾಶ್ ವಿ.ಹೊಳ್ಳ ಶಕ್ತಿನಗರ ಮಾತನಾಡಿ, ಚಾಮುಂಡೇಶ್ವರಿ ಅಮ್ಮನವರು ಮತ್ತು ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾ ಕಲಶೋತ್ಸವ ಕಾರ್ಯಕ್ರಮವು ಸುಸಾಂಗವಾಗಿ ನಡೆಯಲಿಯೆಂದು ಶುಭಾ ಶಂಸನೆಗೈದರು.

ಅಂಬೇಡ್ಕರ್ ಜಯಂತಿ

ಇದೇ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆಗೈದು ಸಂಸ್ಮರಣೆ ನಡೆಸಲಾಯಿತು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ ಅಧ್ಯಕ್ಷತೆ ವಹಿಸಿದ್ದರು.ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ, ಪಿಲಾರು ಸಾಯಿ ಮಂದಿರದ ಮುಖ್ಯಸ್ಥರಾದ ದಿನೇಶ್ ಶಾಂತಿ, ಕಾಪಿಕಾಡು ಬಬ್ಬುಸ್ವಾಮಿ ದೈವಸ್ಥಾನದ ರಾಜು ಗುರಿಕಾರ, ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಭಾಸ್ಕರ ತೊಕ್ಕೊಟ್ಟು ಪ್ರಚಾರ ಸಮಿತಿಯ ಪ್ರಧಾನ ಸಂಚಾಲಕ ರಾಘವ ಆರ್.ಉಚ್ಚಿಲ್, ಉಗ್ರಾಣ ಸಮಿತಿ ಪ್ರಧಾನ ಸಂಚಾಲಕ ದಿನೇಶ್ ಕಾಜವ, ಮಹಿಳಾ ಸಮಿತಿಯ ಪ್ರಧಾನ ಸಂಚಾಲಕ ಸುರೇಖಾ ಚಂದ್ರಹಾಸ್, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಸತೀಶ್ ದೀಪಂ, ಉಳ್ಳಾಲ ನಗರಸಭೆಯ ಮಾಜಿ ಅಧ್ಯಕ್ಷರಾದ ಶಶಿಕಲಾ, ಮಾಜಿ ಉಪಾಧ್ಯಕ್ಷ ದಿನೇಶ್ ರೈ, ಪ್ರಮುಖರಾದ ದೇವದಾಸ್ ಭಂಡಾರಿ, ಅಮಿತಾ ಅಶ್ವಿನ್ ಬಂಡಿಕೊಟ್ಯ,ಚಂದ್ರಶೇಖರ್ ಉಚ್ಚಿಲ್, ರೋಹಿತ್ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು. ಹೊರೆಕಾಣಿಕೆ ಸಮಿತಿಯ ಪ್ರಧಾನ ಸಂಚಾಲಕರಾದ ಭಗವಾನ್ ದಾಸ್ ಸ್ವಾಗತಿಸಿ,ಪ್ರವೀಣ್ ಬಸ್ತಿ ನಿರೂಪಿಸಿದರು.

ಎಲ್ಲರ ಸಹಕಾರ ಅಗತ್ಯ

ಅಷ್ಟಮಂಗಲ ಪ್ರಶ್ನೆಯಲ್ಲಿ ಕಂಡು ಬಂದಂತೆ ಊರವರ ಸಹಕಾರದಲ್ಲಿ ಜೀರ್ಣೋದ್ಧಾರ ಕಾಮಗಾರಿ ನಡೆಸಲು ಟ್ರಸ್ಟ್ ಮತ್ತು ಸಮಿತಿ ರಚಿಸಿದ್ದೇವೆ.ಚಾಮುಂಡೇಶರಿ ಕ್ಷೇತ್ರದಲ್ಲಿ ಅನೇಕ ಪ್ರಾರ್ಥನೆಗಳು ಈಡೇರಿವೆ. ಕ್ಷೇತ್ರದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯವಿದೆ.

- ಗಿರೀಶ್ ಕುಮಾರ್ ಯು. ಕೆ, ಆಡಳಿತ ಮೊಕ್ತೇಸರರು, ಚಾಮುಂಡೇಶ್ವರಿ ಕ್ಷೇತ್ರ

ಶಾಸಕ ಭರತ್ ಶೆಟ್ಟಿ ಮನವಿ ಮೇರೆಗೆ ಎನ್‌ಎಂಪಿಎನಿಂದ 11 ಕೋ.ರೂ. ಅನುದಾನ

ಬೈಕಂಪಾಡಿ ಪ್ರದೇಶಕ್ಕೆ ರಸ್ತೆ, ಟ್ರಕ್ ಯಾರ್ಡ್ ನಿರ್ಮಾಣ



ಸುರತ್ಕಲ್: ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕಿಸುವ ಹೆದ್ದಾರಿ ಬದಿಯ ರಸ್ತೆಯ ಕಾಂಕ್ರೀಟೀಕರಣ, ಟ್ರಕ್ ಯಾರ್ಡ್ ಕಾಮಗಾರಿಯು ಗುರುವಾರದಿಂದ ಆರಂಭವಾಗಲಿದ್ದು, 11 ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಾಣವಾಗಲಿದೆ. ಎನ್‌ಎಂಪಿಎ ಇದಕ್ಕೆ ಅನುದಾನ ನೀಡಲಿದೆ. ಶಾಸಕ ಡಾ. ಭರತ್ ಶೆಟ್ಟಿ ಅವರು ಎನ್‌ಎಂಪಿಎಗೆ ಮನವಿ ಮಾಡಿದ ಮೇರೆಗೆ ಬಂದರು ಅನುದಾನ ಬಿಡುಗಡೆ ಮಾಡಿದೆ.

ಈ ಕುರಿತು ಸೋಮವಾರ ಶಾಸಕರ ನೇತೃತ್ವದಲ್ಲಿ ಸಭೆ ನಡೆಯಿತು. ಈ ಭಾಗದ ಬಹುಕಾಲದ ಬೇಡಿಕೆ ಈಡೇರಲು ದಾರಿ ತೆರೆದಿದೆ. ಕೆಐಎಡಿಬಿ ಇಲಾಖೆ, ಟ್ರಾಫಿಕ್ ಪೊಲೀಸ್ ಹಾಗೂ ಬಂದರು ಪ್ರಾಧಿಕಾರದ ಅಧಿಕಾರಿಗಳ ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಕಾಮಗಾರಿ ಅವಧಿ, ಸಂಚಾರ ನಿಯಂತ್ರಣ ಹಾಗೂ ಸಾರ್ವಜನಿಕರಿಗೆ ಸಮಸ್ಯೆ ಆಗದಂತೆ ಕಾಮಗಾರಿ ಚರ್ಚೆ ನಡೆಸಲಾಯಿತು.

ಕಾಮಗಾರಿ ಸುಗಮವಾಗಿ ನಡೆಯುವ ಉದ್ದೇಶದಿಂದ ಸಂಬಂಧಿತ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲು ಪೊಲೀಸರು ಆದೇಶ ಹೊರಡಿಸಲಿದ್ದು ಗುರುವಾರದಿಂದ ಪರ್ಯಾಯ ಸಂಚಾರ ಅವಕಾಶ ಮಾಡಿ ಕೊಡಲಾಗುವುದು. ವಿಶೇಷವಾಗಿ ಭಾರೀ ವಾಹನಗಳ ಓಡಾಟ ಹೆಚ್ಚಿರುವ ಈ ಪ್ರದೇಶದಲ್ಲಿ ಸಂಚಾರ ನಿಯಂತ್ರಣ ಕ್ರಮಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಬೈಕಂಪಾಡಿ ಕೈಗಾರಿಕಾ ಪ್ರದೇಶವು ಪ್ರಮುಖ ಉದ್ಯಮ ವಲಯವಾಗಿರುವುದರಿಂದ, ದೀರ್ಘಕಾಲದಿಂದ ರಸ್ತೆ ದುರಸ್ತಿ ಹಾಗೂ ಕಾಂಕ್ರೀಟ್ ನಿರ್ಮಾಣದ ಬೇಡಿಕೆ ಕೇಳಿಬರುತ್ತಿತ್ತು. ಈಗ ಕಾಮಗಾರಿ ಆರಂಭವಾಗುತ್ತಿರುವುದರಿಂದ ಸ್ಥಳೀಯ ಉದ್ಯಮಿಗಳು, ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಇನ್ನು ಎರಡು ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸಲು ಸಂಬಂಧಿತ ಅಧಿಕಾರಿಗಳಿಗೆ ಶಾಸಕ ಡಾ. ಭರತ್ ಶೆಟ್ಟಿ ಸೂಚನೆ ನೀಡಿದ್ದಾರೆ. ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರ ಸಂಚಾರ ಸುಗಮವಾಗುವುದರ ಜೊತೆಗೆ ಅಪಘಾತಗಳ ಪ್ರಮಾಣವೂ ಕಡಿಮೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ವೇಣೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ವರ್ಷಾವಧಿ ಜಾತ್ರಾ ಸಂಭ್ರಮಕ್ಕೆ ಚಾಲನೆ

ಬೆಳ್ತಂಗಡಿ: ಇಲ್ಲಿನ ವೇಣೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವಕ್ಕೆ ಮೇಷ ಸಂಕ್ರಮಣ ದಿನವಾದ ಮಂಗಳವಾರ ಆರಂಭವಾಯಿತು.

ಬೆಳಿಗ್ಗೆ ತೋರಣ ಮುಹೂರ್ತ ನಡೆದು ಧ್ವಜಾರೋಹಣ ನೆರವೇರುವ ಮೂಲಕ 9 ದಿನಗಳ ಜಾತ್ರಾ ಮಹೋತ್ಸವ ವಿಧಿವಿಧಾನಕ್ಕೆಕ್ಷೇತ್ರದತಂತ್ರಿಶ್ರೀಪಾದವಾಂಗಣ್ಣಾಯರವರ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಮಧ್ಯಾಹ್ನ ಮಹಾಪೂಜೆ ನೆರವೇರಿದ್ದು, ನೂರಾರು ಭಕ್ತರು ಆಗಮಿಸಿ ಶ್ರೀ ದೇವರ ದರ್ಶನ ಪಡೆದರು. ಪ್ರಧಾನ ಅರ್ಚಕ ವಿಷ್ಣುಮೂರ್ತಿ ಭಟ್, ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಎ. ಜಯರಾಮ್ ಶೆಟ್ಟಿ, ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಜಾತ್ರಾ ದಿನಗಳಂದು ಶ್ರೀ ದೇವರಿಗೆ ವಿಶೇಷ ಪೂಜೆ, ಭಜನೆ, ಉತ್ಸವ, ಮಹಾಪೂಜೆ, ನಿತ್ಯಬಲಿ ನಡೆಯಲಿದೆ. ಏ.19ಕ್ಕೆ ರಾತ್ರಿ ರಕ್ತೇಶ್ವರಿ ದೈವದ ನೇಮ ನಡೆಯಲಿದೆ. ಏ. 20ರಂದು ರಾತ್ರಿ ದರ್ಶನ ಬಲಿ, ಕಲ್ಕುಡ-ಕಲ್ಲುರ್ಟಿ ದೈವಗಳ ನೇಮ ನಡೆಯಲಿದೆ. ಏ. 22ಕ್ಕೆ ಬೆಳಿಗ್ಗೆ ಕವಾಟೋದ್ಘಾಟನೆ, ಚೂರ್ಣೋತ್ಸವ, ಮಧ್ಯಾಹ್ನ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ ಶ್ರೀ ಕೊಡಮಣಿತ್ತಾಯ ದೈವದ ನೇಮ, ಉತ್ಸವ ಹಾಗೂ ಮಹಾ ರಥೋತ್ಸವ ನಡೆಯಲಿದೆ. ಏ. 23ಕ್ಕೆ ರಾತ್ರಿ ಅಂಗಣ ಪಂಜುರ್ಲಿ ದೈವದ ನೇಮ ನಡೆಯಲಿದೆ. ಏ.25ರಂದು ಶ್ರೀ ಭದ್ರಕಾಳಿ ದೇವಿಯ ಪ್ರತಿಷ್ಠಾ ಮಹೋತ್ಸವ ಜರಗಲಿದೆ.

ಹಸಿರುವಾಣಿ ಹೊರೆಕಾಣಿಕೆ

ಜಾತ್ರಾ ಸಂದರ್ಭದಲ್ಲಿ ಪ್ರತೀ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದ್ದು, ಏ. 13ರಿಂದ 21ರವರೆಗೆ ಭಕ್ತರು ಹಸಿರುವಾಣಿ ಹೊರೆಕಾಣಿಕೆಯನ್ನು ಕ್ಷೇತ್ರಕ್ಕೆ ಸಮರ್ಪಿಸಬಹುದಾಗಿದೆ.

ಸುತ್ತಮುತ್ತ

ಏ.17: ಪ್ರಿಯದರ್ಶಿನಿ ಕಿನ್ನಿಗೋಳಿ ಶಾಖೆಯಿಂದ ಹೊಲಿಗೆ ಯಂತ್ರ ವಿತರಣೆ

ಮುಲ್ಕಿ: ಹಳೆಯಂಗಡಿಯ ಪ್ರಧಾನ ಕಚೇರಿಯ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿಯ ಕಿನ್ನಿಗೋಳಿ ಶಾಖೆಯ ಎರಡನೇ ವರ್ಷದ ವಾರ್ಷಿಕೋತ್ಸವ ಹಾಗೂ ಕಿನ್ನಿಗೋಳಿ ಸೈಂಟ್ ಮೇರಿಸ್ ಸ್ಪೆಷಲ್ ಸ್ಕೂಲ್ ನ ವಿದ್ಯಾರ್ಥಿಗಳಿಗೆ ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮ ಏ.17ರಂದು ಶುಕ್ರವಾರ ಬೆಳಗ್ಗೆ 10 ಗಂಟೆಗೆ ಕಿನ್ನಿಗೋಳಿ ಶಾಖೆ ಆವರಣದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡ, ಸದಸ್ಯರಾದ ಕೋಲಿಲ ಡಿ ಅಮೀನ್, ರೇಷ್ಮಾ ಮಾರ್ಟಿನ್ ಮೊದಲಾದವರು ಉಪಸ್ಥಿತರಿರುವರು ಎಂದು ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬರ್ನಾರ್ಡ್ ತಿಳಿಸಿದ್ದಾರೆ.

ಅರೆಭಾಷೆ ಹಾಸ್ಯ ಲೇಖನ ಸ್ಪರ್ಧೆಗೆ ಆಹ್ವಾನ

ಮಡಿಕೇರಿ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಅರೆಭಾಷೆ ಹಾಸ್ಯ ಲೇಖನ ಸ್ಪರ್ಧೆ ನಡೆಸಲು ಉದ್ದೇಶಿಸಲಾಗಿರುತ್ತದೆ. ಅರೆಭಾಷೆ ಹಾಸ್ಯ ಲೇಖನ ಸ್ವಂತ ರಚನೆಯಾಗಿರಬೇಕು, ಬೇರೆ ಎಲ್ಲೂ ಪ್ರಕಟವಾಗಿರಬಾರದು, ಕನಿಷ್ಠ ಐದುನೂರು ಪದಗಳಲ್ಲಿ ಒಂದು ಸಾವಿರ ಪದ ಮೀರಬಾರದು. ಹೊಸ ಆಲೋಚನೆ, ಹೊಸ ಹೊಳಹುಗಳ ಬರಹವಾಗಿರಬೇಕು.
ಹಾಸ್ಯ ಲೇಖನಕ್ಕೆ ಪ್ರಥಮ ಬಹುಮಾನ 5,000, ದ್ವಿತೀಯ ಬಹುಮಾನ 3,000 ಹಾಗೂ ತೃತೀಯ ಬಹುಮಾನ 2,000 ಒಳಗೊಂಡಿದೆ. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿದೆ. ಬರಹ ಕಳುಹಿಸಲು ಮೇ 10 ಅಂತಿಮ ದಿನವಾಗಿದೆ.
ಬರಹಗಳನ್ನು ಅಂಚೆ ಮೂಲಕ ಅಥವಾ ಅಕಾಡೆಮಿ ವಾಟ್ಸಾಪ್ ನಂ 6362522677 ಮೂಲಕ ಅಥವಾ ಇ-ಮೇಲ್ arebaseacademy@gmail.com ಮೂಲಕ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕಾಫಿ ಕೃಪಾ, ರಾಜಸೀಟ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ, ಮೊ.ನಂ 6362522677 ಸಂಪರ್ಕಿಸಬಹುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಅವರು ಕೋರಿದ್ದಾರೆ.

'ನಾರಿ ಶಕ್ತಿ ವಂದನ ಸಮ್ಮೇಳನ'ದ ನೇರ ಪ್ರಸಾರ ವೀಕ್ಷಣೆ

ಉಡುಪಿ: ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಜಾರಿಗೆ ತರಲಿರುವ ಮಹತ್ವಪೂರ್ಣ 'ನಾರಿ ಶಕ್ತಿ ವಂದನ' ಅಧಿನಿಯಮದ ಪೂರ್ವಭಾವಿಯಾಗಿ ಏ.13ರಂದು ಪ್ರಧಾನಿ ನರೇಂದ್ರ ಮೋದಿ ಅವರ ಉಪಸ್ಥಿತಿಯಲ್ಲಿ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 'ನಾರಿ ಶಕ್ತಿ ವಂದನ ಸಮ್ಮೇಳನ'ದ ನೇರ ಪ್ರಸಾರವನ್ನು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ನೇತೃತ್ವದಲ್ಲಿ ಜಿಲ್ಲಾ ಕಛೇರಿಯಲ್ಲಿ ವೀಕ್ಷಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಕಿರಣ್ ಕುಮಾರ್ ಬೈಲೂರು, ಜ್ಯೋತಿ ಉದಯ ಕುಮಾರ್, ನಳಿನಿ ಪ್ರದೀಪ್ ರಾವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀನಿಧಿ ಹೆಗ್ಡೆ, ಗಿರೀಶ್ ಎಮ್. ಅಂಚನ್, ಶಿವಕುಮಾರ್ ಅಂಬಲಪಾಡಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ಯಾಮಲಾ ಎಸ್. ಕುಂದರ್, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ರುಡಾಲ್ಫ್ ಡಿ. ಸೋಜಾ, ಬಿಜೆಪಿ ಉಡುಪಿ ನಗರಾಧ್ಯಕ್ಷ ದಿನೇಶ್ ಅಮೀನ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಜಗದೀಶ್ ಆಚಾರ್ಯ ಕಪ್ಪೆಟ್ಟು, ರಶ್ಮಿತಾ ಬಿ. ಶೆಟ್ಟಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ನೀತಾ ಪ್ರಭು, ನಗರ ಯುವ ಮೋರ್ಚಾ ಅಧ್ಯಕ್ಷ ಶ್ರೀವತ್ಸ, ಮಹಿಳಾ ಮೋರ್ಚಾ ಸದಸ್ಯರ ಸಹಿತ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಕುಶಾಲನಗರ ಪತ್ರಕರ್ತರ ಸಂಘದ 'ನೇಗಿಲಯೋಗಿ' ಪ್ರಶಸ್ತಿ ಪ್ರದಾನ ಏ.21ಕ್ಕೆ

ಮಡಿಕೇರಿ: ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕ ಕೊಡಮಾಡುವ 'ನೇಗಿಲಯೋಗಿ' ಪ್ರಶಸ್ತಿ ಪ್ರದಾನ ಸಮಾರಂಭ ಏ.21ರಂದು ಕುಶಾಲನಗರದ ಗೌಡ ಸಮಾಜದ ಸಭಾಂಗಣದಲ್ಲಿ ನಡೆಯಲಿದೆ. ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ನಾಲ್ವರು ಕೃಷಿಕರನ್ನು ತಾಲೂಕು ಪತ್ರಕರ್ತರ ಸಂಘವು ಪ್ರತೀವರ್ಷ 'ನೇಗಿಲಯೋಗಿ' ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಅದರಂತೆ ಈ ಬಾರಿ ಸುಂಟಿಕೊಪ್ಪದ ಪ್ರಗತಿಪರ ಕೃಷಿಕ ಪಟ್ಟೆಮನೆ ಪಿ.ಉದಯಕುಮಾರ್, ನಾಕೂರು ಶಿರಂಗಾಲ ಗ್ರಾಮ ಪಂಚಾಯತ್"ನ ಮಳೂರು ನಿವಾಸಿ ಶಂಕರನಾರಾಯಣ, ಶಿರಂಗಾಲ ಗ್ರಾಮಪಂಚಾಯತ್ 'ನ ಮಣಜೂರು ನಿವಾಸಿ ಭವಾನಿ ಕುಮಾರಸ್ವಾಮಿ, ಹಾಗೂ ಗುಡ್ಡೆಹೊಸೂರು ಪಂಚಾಯತ್"ನ ಬಾಳುಗೋಡು ನಿವಾಸಿ ನಂಗಾರು ಜಗ್ಗ(ಜಗದೀಶ್) ಅವರನ್ನು ಆಯ್ಕೆ ಮಾಡಲಾಗಿದೆ. ಏ.21ರಂದು ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮವನ್ನು ಕೊಡಗು ಪತ್ರಿಕಾಭವನ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್ ಉದ್ಘಾಟಿಸಲಿದ್ದು, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಸಿ.ದಿನೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಚ್.ಟಿ.ಅನಿಲ್, ದತ್ತಿದಾನಿ ಕೃಷಿಕ, ಸಮಾಜಸೇವಕ ಟಿ.ಕೆ. ಸಾಯಿಕುಮಾರ್, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿ ಪ್ರಸಾದ್, ಸುಂಟಿಕೊಪ್ಪದ ವಿಜಯ ಪ್ಲಾಂಟೇಷನ್ ಸಪ್ಲೈಸ್‌ನ ಮಾಲಕ ಎಸ್.ಜಿ.ಶ್ರೀನಿವಾಸ್, ಗುಡ್ಡೆಹೊಸೂರಿನ ಉದ್ಯಮಿ ಮಂಡೆಪಂಡ ಚಿಮ್ಮ ಉತ್ತಪ್ಪ ರಂಗಸಮುದ್ರದ ಉದ್ಯಮಿ ರಕ್ಷಿತ್ ಮಾವಾಜಿ, ಚಿಕ್ಕಬೆಟ್ಟಗೇರಿಯ ಉದ್ಯಮಿ ರಂಜಿತ್ ಎಂ.ಎಸ್. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಉಡುಪಿಯ ಇಂದ್ರಾಣಿ ನದಿಯು ಹೂಳು, ತ್ಯಾಜ್ಯದಿಂದ ಕಲುಷಿತ | ದುಃಸ್ಥಿತಿ ಬಗ್ಗೆ ಸಿಎಂ ಕಚೇರಿ ಕಳವಳ

ಸಮಗ್ರ ವರದಿ ಸಲ್ಲಿಸಲು ನಗರಸಭೆ ಪೌರಾಯುಕ್ತರಿಗೆ ಸೂಚನೆ

ಉಡುಪಿ: ನಗರದ ಜೀವನದಿಯಾಗಿರುವ ಇಂದ್ರಾಣಿ ನದಿಯು ಹೂಳು ಮತ್ತು ತ್ಯಾಜ್ಯದಿಂದ ಕಲುಷಿತಗೊಂಡಿರುವ ಗಂಭೀರ ವಿಷಯವು ಈಗ ರಾಜ್ಯ ಸರ್ಕಾರದ ಮಟ್ಟದಲ್ಲಿ ಸದ್ದು ಮಾಡಿದೆ. ಈ ನದಿಯ ದುಃಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿರುವ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ. ಕೆ. ವೈಷ್ಣವಿ ಅವರು, ಕೂಡಲೇ ಈ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ನಗರಸಭೆ ಪೌರಾಯುಕ್ತರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಸರ್ಕಾರದ ಈ ಹಠಾತ್ ಆದೇಶದಿಂದ ಎಚ್ಚೆತ್ತುಕೊಂಡಿರುವ ಉಡುಪಿ ನಗರಸಭೆಯು, ನದಿ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸುದೀರ್ಘ ವಿವರಣೆಯನ್ನು ಮುಖ್ಯಮಂತ್ರಿಗಳ ಕಚೇರಿಗೆ ರವಾನಿಸಿದೆ.

ನೀರು ಶುದ್ದೀಕರಣ ಘಟಕ ಮೇಲ್ದರ್ಜೆಗೆ

ನಗರಸಭೆ ನೀಡಿರುವ ವರದಿಯ ಪ್ರಕಾರ, ಪ್ರಸ್ತುತ ನಗರದಲ್ಲಿರುವ 12 ಎಂಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಶುದೀಕರಣ ಘಟಕವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಭರದಿಂದ ಸಾಗುತ್ತಿದೆ. ಇದರೊಂದಿಗೆ



ನದಿಗೆ ತ್ಯಾಜ್ಯ ಎಸೆಯುವವರ ವಿರುದ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದ್ದು, ಪ್ಲಾಸ್ಟಿಕ್ ನಿರ್ವಹಣಾ ನಿಯಮಾವಳಿಯಂತೆ ನಗರವ್ಯಾಪ್ತಿಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.
ಈ ನಿಟ್ಟಿನಲ್ಲಿ ನಡೆಸಲಾದ ಕಾರ್ಯಾಚರಣೆಗಳಲ್ಲಿ ಇಲ್ಲಿಯವರೆಗೆ ಸಾರ್ವಜನಿಕರಿಂದ ಒಟ್ಟು 9.33 ಲಕ್ಷ ರೂಪಾಯಿ ದಂಡ ಸಂಗ್ರಹಿಸಲಾಗಿದ್ದು, ಈ ವರ್ಷವೊಂದರಲ್ಲೇ 3.31 ಲಕ್ಷ ರೂಪಾಯಿ ದಂಡ ವಸೂಲಿ ಮಾಡಿರುವುದು ನಗರಸಭೆಯ ಕಟ್ಟುನಿಟ್ಟಿನ ನಿಗಾವನ್ನು ಸಾಬೀತುಪಡಿಸಿದೆ.

ಕಟ್ಟಡಗಳ ತ್ಯಾಜ್ಯ ನೀರು ನದಿಗೆ

ಸುಮಾರು 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಹರಿಯುವ ಇಂದ್ರಾಣಿ ನದಿಯು ಕುಂಜಿಬೆಟ್ಟು, ಕಲ್ಸಂಕ, ಬನ್ನಂಜೆ, ಮಠದಬೆಟ್ಟು ಮತ್ತು ಕಲ್ಮಾಡಿ ಮಾರ್ಗವಾಗಿ ಸಮುದ್ರವನ್ನು ಸೇರುತ್ತದೆ. ಆದರೆ ಒಳಚರಂಡಿ ವ್ಯವಸ್ಥೆ ಇಲ್ಲದ ಹಲವು ಪ್ರದೇಶಗಳಲ್ಲಿ ಕಟ್ಟಡಗಳ ತ್ಯಾಜ್ಯ ನೀರು ನೇರವಾಗಿ ಮಳೆ ನೀರು ಹರಿಯುವ ಚರಂಡಿಗಳ ಮೂಲಕ ನದಿಗೆ ಸೇರುತ್ತಿರುವುದು ಮಾಲಿನ್ಯಕ್ಕೆ ಪ್ರಮುಖ ಕಾರಣವಾಗಿದೆ. ಈ ಸಮಸ್ಯೆಯನ್ನು ನಿವಾರಿಸಲು ಈಗಾಗಲೇ ಹಲವು ವಸತಿ ಸಮುಚ್ಚಯಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ಅಸೋಸಿಯೇಷನ್ ಸದಸ್ಯರ ಸಭೆ ಕರೆದು ತ್ಯಾಜ್ಯ ನೀರನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಗಿದೆ. ನದಿ ದಡದಲ್ಲಿ ವಾಸಿಸುವವರಿಗೂ ನದಿಗೆ ಕಲುಷಿತ ನೀರು ಬಿಡದಂತೆ ಎಚ್ಚರಿಕೆ ನೀಡಲಾಗಿದೆ.

ಸಿಸಿ ಕ್ಯಾಮರ ಅಳವಡಿಕೆ

ಕೇವಲ ಜನವಸತಿ ಮಾತ್ರವಲ್ಲದೆ, ಪ್ರವಾಸಿಗರು ಮತ್ತು ಕಾರ್ಮಿಕರಿಂದ ಆಗುವ ಮಾಲಿನ್ಯವನ್ನು ತಡೆಯಲು ನದಿಯ ಆಯಕಟ್ಟಿನ ಜಾಗಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಮತ್ತು ಕಮ್ಯುನಿಟಿ ಮೊಬಿಲೈಸರ್‌ಗಳನ್ನು ನಿಯೋಜಿಸಲಾಗಿದೆ. ಮಳೆಗಾಲದಲ್ಲಿ ತೇಲುವ ತ್ಯಾಜ್ಯವನ್ನು ತಡೆಯಲು 'ಫ್ಲೋಟಿಂಗ್ ಟ್ರಾಶ್ ಬ್ಯಾರಿಯರ್' ತಂತ್ರಜ್ಞಾನವನ್ನು ಬಳಸುತ್ತಿರುವುದಾಗಿ ನಗರಸಭೆ ತಿಳಿಸಿದೆ. ನಗರದ ಕಸ ಎಸೆಯುವ ಸ್ಥಳಗಳನ್ನು ಗುರುತಿಸಿ ಅವುಗಳನ್ನು ಸ್ವಚ್ಛಗೊಳಿಸಿ ಅಲ್ಲಿ ಸಣ್ಣ ಉದ್ಯಾನವನಗಳನ್ನು ನಿರ್ಮಿಸುವ ಮೂಲಕ ನಗರಸಭೆಯು ಜಲಮೂಲಗಳ ಸಂರಕ್ಷಣೆಗೆ ಮುಂದಾಗಿದೆ.

ದಶಕಗಳಿಂದ ಕಲುಷಿತವಾಗಿರುವ ಇಂದ್ರಾಣಿ ನದಿ

ಇಂದ್ರಾಣಿ ನದಿಯ ಇಂದಿನ ಸ್ಥಿತಿಯು ದಶಕಗಳ ಕಾಲದ ನಿರ್ಲಕ್ಷ್ಯದ ಫಲ ವಾಗಿದೆ. ಕೈಗಾರಿಕಾ ಘಟಕಗಳಿಂದ ಹೊರ ಬರುವ ವಿಷಕಾರಿ ರಾಸಾಯನಿಕಗಳು, ಬೃಹತ್ ವಸತಿ ಸಮುಚ್ಚಯಗಳ ಕೊಳಚೆ ನೀರು ಮತ್ತು ನಗರದ ಹೋಟೆಲ್‌ಗಳಿಂದ ನೇರವಾಗಿ ನದಿಗೆ ಬಿಡಲಾಗುತ್ತಿರುವ ಘನ ಹಾಗೂ ದ್ರವ ತ್ಯಾಜ್ಯಗಳು ಈ ಪವಿತ್ರ ನದಿಯನ್ನು ಹರಿಯುವ ಚರಂಡಿಯನ್ನಾಗಿ ಪರಿವರ್ತಿಸಿವೆ. ಸಮುದ್ರ ಸೇರುವವರೆಗಿನ ಈ 10 ಕಿ.ಮೀ. ಹಾದಿಯಲ್ಲಿ ನದಿ ಹೆಚ್ಚೆ ಹೆಚ್ಚಿಗೂ ಕಲುಷಿತಗೊಳ್ಳುತ್ತಿದ್ದು, ಇದು ಕೇವಲ ಪರಿಸರ ಸಮಸ್ಯೆಯಲ್ಲದೆ ಸುತ್ತಮುತ್ತಲಿನ ಅಂತರ್ಜಲದ ಮೇಲೂ ತೀವ್ರ ಪರಿಣಾಮ ಬೀರುತ್ತಿದೆ. ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ಈ ಬೇಜವಾಬ್ದಾರಿಗೆ ಈಗ ಸರ್ಕಾರದ ಹಸ್ತಕ್ಷೇಪದ ಮೂಲಕ ಕಡಿವಾಣ ಬೀಳಬೇಕಿದೆ.

ಏ.18ಕ್ಕೆ ನಿಗದಿಯಾಗಿದ್ದ ಹರೇಕಳ ಕಂಬಳ ಮುಂದಿನ ವರ್ಷಕ್ಕೆ ಮುಂದೂಡಿಕೆ



ಉಳ್ಳಾಲ: ಹರೇಕಳದಲ್ಲಿ ಏ.18ರಂದು ಜರುಗಬೇಕಿದ್ದ ಸೂರ್ಯ-ಚಂದ್ರ ಜೋಡುಕರೆ ಕಂಬಳವನ್ನು ಕಂಬಳ ಸಮಿತಿ ಅಧ್ಯಕ್ಷರಿಗೆ ಪಿತೃ ವಿಯೋಗದ ಸೂತಕದ ಛಾಯೆ ಆವರಿಸಿರುವುದರಿಂದ ಈ ಸಂದರ್ಭದಲ್ಲಿ ಮನರಂಜನೆ ಸೂಕ್ತವಲ್ಲ ಎಂದು ಪರಿಗಣಿಸಿ ಮುಂದಿನ ವರ್ಷಕ್ಕೆ ಮುಂದೂಡಲಾಗಿದೆ.
ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹರೇಕಳ ಸೂರ್ಯ-ಚಂದ್ರ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಮಾತನಾಡಿ ಹರೇಕಳದಲ್ಲಿ ಏ.18ರಂದು ಸೂರ್ಯ-ಚಂದ್ರ ಕಂಬಳ ನಡೆಸಲು ತೊಂಭತ್ತು ಶೇಕಡಾದಷ್ಟು ಸಿದ್ದತೆ ನಡೆಸಲಾಗಿತ್ತು.ಅದಾಗಲೇ 800 ಮಂದಿ ಸದಸ್ಯರನ್ನೊಳಗೊಂಡ ಸಮಿತಿ, ಉಪಸಮಿತಿಯ ಮೂಲಕ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ತಲುಪಿಸುವ ಕಾರ್ಯ ಕೂಡಾ ನಡೆದಿತ್ತು. ಹಲವು ಲಕ್ಷರೂ. ಖರ್ಚು ಮಾಡಿ ಕಂಬಳ ಸಿದ್ಧತೆ ಕೈಗೊಂಡಿರುವ ಮಧ್ಯೆಯೇ ವಯೋಸಹಜವಾಗಿ ಕೆಲ ದಿನಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ನನ್ನ ತಂದೆ ಪ್ರಗತಿಪರ ಕೃಷಿಕ ಉಳಿದೊಟ್ಟು ಕೊರಗಪ್ಪ ಶೆಟ್ಟಿಯವರ ಅಗಲುವಿಕೆಯ ಕಾರಣದಿಂದ ಧಾರ್ಮಿಕ ಹಿನ್ನೆಲೆಯಲ್ಲಿ ಸೂತಕದಲ್ಲಿ ಕಂಬಳ ನಡೆಸುವುದು ಸೂಕ್ತವಲ್ಲ ಎಂಬ ಕಂಬಳ ಸಮಿತಿಯ ನಿರ್ಣಯದಂತೆ ಸೂರ್ಯ-ಚಂದ್ರ ಜೋಡುಕರೆ ಕಂಬಳ ಮುಂದಿನ ವರ್ಷ ನಡೆಸಲು ತೀರ್ಮಾನಿಸಲಾಗಿದೆ ಎಂದರು.
ಪ್ರಾಕೃತಿಕವಾಗಿ ಹರೇಕಳ ಕಂಬಳಗದ್ದೆ ನೇತ್ರಾವತಿ ನದಿಗೆ ಸಮೀಪವಿರುವ ನೀರಿನ ಹರಿವು ಜಾಸ್ತಿ ಇರುವ ಕಾರಣದಿಂದ ನಿಗದಿತ ತಿಂಗಳಲ್ಲೇ ಕಂಬಳ ನಡೆಸಬೇಕಾದ ಅನಿವಾರ್ಯತೆ ಇದ್ದು ಬೇರೆ ದಿನದಲ್ಲೂ ಸೂತಕದ ದಿನ ತಪ್ಪವುದಿಲ್ಲ ಇತರ ದಿನಗಳಲ್ಲಿ ಜಿಲ್ಲಾ ಕಂಬಳ ಸಮಿತಿ ಬೇರೆ ಕಂಬಳಕ್ಕೆ ದಿನ ನಿಗದಿಗೊಳಿಸಿದ್ದು ನಂತರ ಮಳೆ ಬಂದರೆ ಗದ್ದೆಯಲ್ಲಿ ನೀರು ತುಂಬುವ ಸಾಧ್ಯತೆ ಹೆಚ್ಚಿದ್ದು ಆ ಕಾರಣದಿಂದ ಸೂತಕದ ವಾತಾವರಣದಲ್ಲಿ ಮನರಂಜನೆ ಬೇಡ ಎಂದು ಮುಂದಿನ ವರ್ಷ ಕಂಬಳ ನಡೆಸುವ ಹಂತಕ್ಕೆ ಬರಲಾಗಿದೆ ಎಂದರು.
ಕಂಬಳ ಸಮಿತಿ ಗೌರವಾಧ್ಯಕ್ಷ ಮೋಹನ್ ದಾಸ್ ರೈ ದೆಬ್ಬೇಲಿಗುತ್ತು, ಪ್ರಧಾನ ಸಂಚಾಲಕ ರವೀಂದ್ರ ರೈ ಕಲ್ಲಿಮಾರು, ಉಪಾಧ್ಯಕ್ಷ ಬದ್ರುದ್ದೀನ್ ಹರೇಕಳ, ಪ್ರಧಾನ ಕಾರ್ಯದರ್ಶಿ ವಾಮನ್‌ರಾಜ್ ಪಾವೂರು, ಅರ್ಜುನ್ ಆರ್. ಶೆಟ್ಟಿ ಹಾಗೂ ಕೋಶಾಧಿಕಾರಿ ಸುಧಾಕರ್ ಬೈತಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಾರ್ಲಿಮೆಂಟರಿ ಅಸೋಸಿಯೇಶನ್ ಸಮ್ಮೇಳನದಲ್ಲಿ ಸ್ಪೀಕರ್ ಖಾದರ್ ಭಾಗಿ



ಮಂಗಳೂರು: ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಯುವ-ನಾಯಕತ್ವ ಎಂಬ ಪದ ಹೆಚ್ಚು ಬಳಸಲಾಗುತ್ತದೆ. ಆದರೆ ಯುವ ಶಾಸಕರನ್ನು ಕೇವಲ ವಯಸ್ಸಿನ ಆಧಾರದ ಮೇಲೆ ವ್ಯಾಖ್ಯಾನಿಸುವುದು ಸರಿಯಲ್ಲ ಎಂದು ವಿಧಾನ ಸಭಾ ಸ್ಪೀಕರ್ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.
ಗೋವಾದ ಪಣಜಿಯಲ್ಲಿ ನಡೆದ ಕಾಮನ್ ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಶನ್ ಭಾರತ ವಲಯ ಪ್ರಥಮ ಸಮ್ಮೇಳನದಲ್ಲಿ ಅವರು ಮಾತನಾಡಿದರು.
ರಾಜಕೀಯದಲ್ಲಿ ಯುವಕರನ್ನು ಎರಡು ಆಯಾಮಗಳಲ್ಲಿ ನೋಡಬಹುದು. ವಯೋಲ್ಯದವರು ಮತ್ತು ಜ್ಞಾನವೃದ್ಧರು. ಭಾರತದಲ್ಲಿ ಸುಮಾರು 15-20 ಶೇಕಡಾ ಶಾಸಕರು 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ಆದರೆ ನಿಜವಾದ ಪ್ರಶ್ನೆ ಎಷ್ಟು ಜನರು ನಾವೀನ್ಯತೆ ಧೈರ್ಯ ಮತ್ತು ಜವಾಬ್ದಾರಿಯೊಂದಿಗೆ ಯೋಚಿಸುತ್ತಾರೆ ಎಂಬುವುದಾಗಿದೆ ಎಂದವರು ಹೇಳಿದರು.
ಇಂದಿನ ಆಡಳಿತ ವ್ಯವಸ್ಥೆ ಅತ್ಯಂತ ಸಂಕೀರ್ಣವಾಗಿದೆ. ಕೇವಲ ಅನುಭವಕ್ಕೆ ಸೀಮಿತವಾಗಿರದೆ, ಕಾರ್ಪೋರೇಟ್ ನಾಯಕರು ತರಬೇತಿ ಪಡೆಯುವಂತೆಯೇ, ಶಾಸಕರು ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಡೇಟಾ ಆಡಳಿತ ಮತ್ತು ಆರ್ಥಿಕ ನೀತಿ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ಪಡೆಯುವುದು ಅವಶ್ಯಕ ಎಂದು ಖಾದರ್ ಹೇಳಿದರು.
ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಗೋವಾ ರಾಜ್ಯಪಾಲ ಪುಸಪಾಟಿ ಅಶೋಕ್ ಗಜಪತಿ ರಾಜು, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಮುಂತಾದವರು ಭಾಗವಹಿಸಿದ್ದರು.

ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಬರಲು ಶ್ರಮಿಸಿ: ಡಾ. ಮಂಥರ್



ಮಡಿಕೇರಿ: ಶಿಕ್ಷಣ ಪಡೆದು ಮುಖ್ಯ ವಾಹಿನಿಗೆ ಬರಲು ಶ್ರಮಿಸಬೇಕು ಎಂದು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು ತಿಳಿಸಿದ್ದಾರೆ.
ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಮಾತನಾಡಿದರು. ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಎಚ್. ಕೆ.ವೀರಣ್ಣಗೌಡ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಸಂದೀಪ್ ಎಸ್.ರಾವಣಿಕರ್, ಮಹಾ ಬೋಧಿ ಸಂಘದ ಅಧ್ಯಕ್ಷ ಮೋಹನ್ ಮೌರ್ಯ ಮಾತನಾಡಿದರು.
ಕಲಾವಿದ ಈ.ರಾಜು ಮತ್ತು ತಂಡದವರು ಅಂಬೇಡ್ಕರ್ ಕುರಿತು ಹಾಡಿದರು. ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ತೀರ್ಥ ಧರ್ಮಜ ಉತ್ತಪ್ಪ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ ಗ್ಯಾರಂಟಿ ಯೋಜನೆ ತಾಲೂಕು ಅನುಷ್ಠಾನ ಸಮಿತಿ ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ಪ್ರಮುಖರಾದ ಟಿ.ಪಿ.ರಮೇಶ್, ಜನಾರ್ದನ, ಎಚ್. ಎಲ್.ದಿವಾಕರ, ಪ್ರೇಮಕುಮಾರ್, ನಗರಸಭೆ ಸದಸ್ಯರಾದ ಸತೀಶ್, ಚಂದ್ರಶೇಖರ್, ಮುತ್ತುರಾಜು, ಜುಲೇಕಾಬಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ತಹಶೀಲ್ದಾರ್ ಶ್ರೀಧರ, ಪ್ರಮುಖರಾದ ದೀಪಕ್ ಪೊನ್ನಪ್ಪ, ಪ್ರೇಮಾ ಕೃಷ್ಣ ಸಿದ್ದೇಶ್, ಯಶೋದ, ವಿನಯ ಕುಮಾರ್, ದೇವರಾಜು, ಗಣೇಶ್, ಸುದರ್ಶನ, ಕುಮಾರ, ಸುಧೀರ್, ವಾಸು, ಸಂದೀಪ್, ಪಾಲಾಕ್ಷ, ವೀರೇಂದ್ರ, ಕಿರಣ್, ಮುತ್ತಪ್ಪ ಹರೀಶ್, ಎಸ್.ಹೊನ್ನೇಗೌಡ, ಜಿಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು. ಶೇಖರ್ ಸ್ವಾಗತಿಸಿದರೆ, ರಮೇಶ್ ನಿರೂಪಿಸಿದರು. ಬಾಲಕೃಷ್ಣ ರೈ ವಂದಿಸಿದರು.

ವಾಳ್ಯ ಶಾಲೆಯಲ್ಲಿ ಶಿಕ್ಷಕಿಗೆ ಬೀಳ್ಕೊಡುಗೆ



ಕಡಬ: ಕುಟ್ರುಪ್ಪಾಡಿ ಗ್ರಾಮದ ವಾಳ್ಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 15 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡಿರುವ ಶಿಕ್ಷಕಿ ಮಂಜುಳಾ ಅವರಿಗೆ ಬೀಳ್ಕೊಡುಗೆ ಸಮಾರಂಭ ಶಾಲೆಯಲ್ಲಿ ನಡೆಯಿತು.
ಮುಖ್ಯ ಅತಿಥಿಯಾಗಿದ್ದ ಹೊಸಮಠ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಕರುಣಾಕರ ಗೋಗಟೆ ಮಾತನಾಡಿ, ಶಿಕ್ಷಕ ವೃತ್ತಿ ಎನ್ನುವುದು ಒಂದು ಸದೃಢ ಸಮಾಜವನ್ನು ನಿರ್ಮಾಣ ಮಾಡುವ ಜವಾಬ್ದಾರಿಯುತ ವೃತ್ತಿ, ಇದನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದರೆ ಸಮಾಜಕ್ಕೆ ಉತ್ತಮ ನಾಗರೀಕರನ್ನು ನೀಡಿ ರಾಷ್ಟ್ರ ನಿರ್ಮಾಣ ಮಾಡಲು ಪೂರಕವಾಗುತ್ತದೆ. ಮಂಜುಳ ಅವರು ವಾಳ್ಯ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿದಷ್ಟು ಸಮಯ ಊರಿನ ಜನರ ಹಾಗೂ ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು ಎಂದರು.
ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶಿವರಾಮ ಗೌಡ ಉಳಿಪು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾಶೀನಾಥ್ ಗೋಗಟೆ, ಉಪಾಧ್ಯಕ್ಷೆ ರೇವತಿ ಶುಭ ಹಾರೈಸಿದರು. ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ಸದಸ್ಯ ಕಿರಣ್ ಗೋಗಟೆ, ಹಿರಿಯರಾದ ವನಜ ಹೆಬ್ಬಾರ್, ದಾನಿ ದಿನಕರ ಹೆಬ್ಬಾರ್ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭ 5ನೇ ತರಗತಿಯ ವಿದ್ಯಾರ್ಥಿಗಳಿಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು.
ಮುಖ್ಯ ಶಿಕ್ಷಕಿ ಶೋಭಾವತಿ ಸ್ವಾಗತಿಸಿ, ಅಂಗನವಾಡಿ ಶಿಕ್ಷಕಿ ಪದ್ಮಶ್ರೀ ವಂದಿಸಿದರು. ರಕ್ಷಾ ಕಾರ್ಯಕ್ರಮ ನಿರ್ವಹಿಸಿದರು.

ಬಸವನಮೂಲೆ: ಬಸವೇಶ್ವರ ದೇವಸ್ಥಾನದಲ್ಲಿ ಗೊನೆ ಮುಹೂರ್ತ



ಸುಬ್ರಹ್ಮಣ್ಯ: ಕುಲ್ಕುಂದದ ಬಸವನಮೂಲೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಜಾತ್ರೋತ್ಸವದ ಪೂರ್ವಭಾವಿಯಾಗಿ ಗೊನೆ ಮುಹೂರ್ತ ಸೋಮವಾರ ನೆರವೇರಿತು.
ಕಲಾವಿದ ಕೆ. ಯಜ್ಞೇಶ್ ಆಚಾರ್ ಅವರ ತೋಟದಲ್ಲಿದ್ದ ಬಾಳೆಗೊನೆಯನ್ನು ದೇವಳದ ಪ್ರಧಾನ ಅರ್ಚಕ ಗಣೇಶ್ ದೀಕ್ಷಿತ್ ವಿವಿಧ ವೈದಿಕ ವಿಧಾನಗಳ ಮೂಲಕ ತೆಗೆದರು.ಬಳಿಕ ಮಂಗಳವಾದ್ಯದ ಮೂಲಕ ಮೆರವಣಿಗೆಯಲ್ಲಿ ಗೊನೆಯನ್ನು ಶ್ರೀ ದೇವಳಕ್ಕೆ ತರಲಾಯಿತು.
ಈ ಸಂದರ್ಭ ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂದ, ಉಪಾಧ್ಯಕ್ಷ ರವೀಂದ್ರ ಕುಮಾರ್ ರುದ್ರಪಾದ, ಪ್ರಮುಖರಾದ ಕೆ.ಯಜ್ಞೇಶ್ ಆಚಾರ್, ಶಿವರಾಮ ಪಳ್ಳಿಗದ್ದೆ ಚಂದ್ರಶೇಖರ ಬಸವನಮೂಲೆ, ಉಮೇಶ್ ಪಳ್ಳಿಗದ್ದೆ, ಬಾಲಕೃಷ್ಣ ಕುಲ್ಕುಂದ, ದಿನೇಶ್ ಸಿ.ಡಿ. ಮತ್ತಿತರರು ಉಪಸ್ಥಿತರಿದ್ದರು.

ಏ.20: ಜಾತ್ರೆ

ಶ್ರೀ ದೇವಳದಲ್ಲಿ ಏ.19ರಂದು ಕ್ಷೇತ್ರದ ತಂತ್ರಿ ವೇದಮೂರ್ತಿ ಶಿವರಾಮ ಭಟ್ ಕಳಿಂಗಾರ್ ನೇತೃದಲ್ಲಿ ಜಾತ್ರೆ ವಿಧಿವಿಧಾನಗಳು ಆರಂಭವಾಗಲಿದೆ. ಈ ದಿನ ಪ್ರಾಸಾದ ಶುದ್ಧಿ, ವಾಸ್ತು ಹೋಮ, ವಾಸ್ತು ಬಲಿ, ಪುಣ್ಯಾಹವಾಚನ, ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ, ಯಕ್ಷಗಾನ ಬಯಲಾಟ ನಡೆಯಲಿದೆ. ಏ.20ರಂದು ಗಣಪತಿ ಹೋಮ, ಕಲಶಪೂಜೆ, ಶತರುದ್ರಾಭಿಷೇಕ, ಪರಿವಾರ ದೇವರಿಗೆ ಕಲಶಾಭಿಷೇಕ, ತಂಬಿಲ ಸೇವೆ, ಶ್ರೀ ದೇವರಿಗೆ ಕಲಶಾಭಿಷೇಕ, ಮಹಾಪೂಜೆ, ಸಂಜೆ ದೀಪಾರಾಧನೆ, ತಾಯಂಬಕ, ಶ್ರೀ ರಂಗಪೂಜೆ, ರಾತ್ರಿ ಮಹಾಪೂಜೆ, ಭೂತ ಬಲಿ,ಪಲ್ಲಕ್ಕಿ ಉತ್ಸವ, ವಸಂತ ಕಟ್ಟೆಪೂಜೆ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ ನಡೆಯಲಿದೆ.

ಏ.19: ಅಂಬೇಡ್ಕರ್ ವಿಚಾರ ಸಂಕಿರಣ




ಉಡುಪಿ: ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಜಿಲ್ಲಾ ಬಿಜೆಪಿ ವತಿಯಿಂದ ಜಿಲ್ಲಾ ಎಸ್ಸಿ ಮೋರ್ಚಾ ಸಹಯೋಗದೊಂದಿಗೆ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು.
ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಮಾತನಾಡಿ, ಏ.19ರಂದು ಪ್ರಬುದ್ಧರಿಗಾಗಿ ಜಿಲ್ಲಾ ಬಿಜೆಪಿ, ಜಿಲ್ಲಾ ಎಸ್.ಸಿ. ಮೋರ್ಚಾ ನೇತೃತ್ವದಲ್ಲಿ ಅಂಬೇಡ್ಕರ್ ಜೀವನ ಚರಿತ್ರೆಯ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗುವುದು ಎಂದರು.
ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ದಿನಕರ ಶೆಟ್ಟಿ ಹೆರ್ಗ, ಶ್ರೀಕಾಂತ್ ನಾಯಕ್, ಜಿಲ್ಲಾ ಉಪಾಧ್ಯಕ್ಷೆ ನಳಿನಿ ಪ್ರದೀಪ್ ರಾವ್, ಎಸ್.ಸಿ. ಮೋರ್ಚಾ ರಾಜ್ಯ ಉಪಾಧ್ಯಕ್ಷ ದಿನಕರ ಬಾಬು, ಬಿಜೆಪಿ ಜಿಲ್ಲಾ ಕಾರ್ಯದರ್ಶಿಗಳಾದ ಶಿವಕುಮಾರ್ ಅಂಬಲಪಾಡಿ, ಗಿರೀಶ್ ಎಂ. ಅಂಚನ್, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್, ನೇಕಾರ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯ ರತ್ನಾಕರ ಇಂದ್ರಾಳಿ, ಜಿಲ್ಲಾ ಎಸ್.ಸಿ. ಮೋರ್ಚಾ ಅಧ್ಯಕ್ಷ ಚಂದ್ರ ಪಂಚವಟಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಜಿಲ್ಲಾ ಎಸ್.ಸಿ. ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ ಡಿ.ಬಿ., ಎಸ್. ನಾರಾಯಣ್, ಉಪಾಧ್ಯಕ್ಷ ಹೆರಿಯ ಉಪ್ಪೂರು, ಕಾರ್ಯದರ್ಶಿ ಬೇಬಿ ರಾಜೇಶ್, ಬಿಜೆಪಿ ಉಡುಪಿ ನಗರ ಪ್ರಧಾನ ಕಾರ್ಯದರ್ಶಿ ಜಗದೀಶ್ ಆಚಾರ್ಯ ಕಪ್ಪೆಟ್ಟು, ಚಂದ್ರಶೇಖರ್ ಪ್ರಭು, ನಗರ ಎಸ್.ಸಿ. ಮೋರ್ಚಾ ಅಧ್ಯಕ್ಷ ಅಜಿತ್ ಕಪ್ಪೆಟ್ಟು, ಲೋಕಯ್ಯ ಪಣಿಯಾಡಿ, ರವೀಂದ್ರ ಪಾಟ್ಕರ್ ಇದ್ದರು.

ಮುಳ್ಳುಗುಡ್ಡೆ ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ 100 ವರುಷದ ಸಂಭ್ರಮ | ಕಾರ್ಯಕ್ರಮಕ್ಕೆ ಸಕಲ ಸಿದ್ದತೆ

ಏ. 19ರಂದು ಶತಮಾನೋತ್ಸವ ಸಂಭ್ರಮ, ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ

ಹೆಬ್ರಿ: ಹೆಬ್ರಿ ತಾಲೂಕಿನ ಶಿವಪುರ ಗ್ರಾಮದ ಮುಳ್ಳುಗುಡ್ಡೆ ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ ಈಗ ಶತಮಾನೋತ್ಸವ ಸಂಭ್ರಮ. ಸರ್ವರ ಸಹಕಾರದಲ್ಲಿ ಶತಮಾನೋತ್ಸವದ ಸಂಭ್ರಮಕ್ಕೆ ಸಕಲ ಸಿದತೆಗಳು ನಡೆಯುತ್ತಿದೆ. ಶತಮಾನೋತ್ಸವದಲ್ಲಿ ಹಳೇ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ನಡೆಯಲಿದೆ. 1925ರಲ್ಲಿ ಶಿವಪುರ ಗ್ರಾಮದ ಶಾನುಭೋಗರಾಗಿದ್ದ ಪಿ. ರಾಮರಾಯ ಶಾನುಭೋಗರು ಶಾಲೆಯನ್ನು ಸ್ಥಾಪಿಸಿದ್ದರು. ಸಾವಿರಾರು ಮಕ್ಕಳಿಗೆ ಗ್ರಾಮೀಣ ಪ್ರದೇಶದ ಶಾಲೆಯು ವಿದ್ಯಾರ್ಜನೆಯನ್ನು ನೀಡಿದೆ. ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಮುಳ್ಳುಗುಡ್ಡೆಯಲ್ಲಿ ಅತ್ಯಂತ ವಿಶಾಲವಾದ ಸ್ಥಳದಲ್ಲಿ ಶಾಲೆಯಿದ್ದು, 2 ಕಟ್ಟಡಗಳು ಸುಣ್ಣಬಣ್ಣದಿಂದ ಅಲಂಕಾರಗೊಂಡು



ಕಂಗೊಳಿಸುತ್ತಿದೆ. ಶಾಲಾಡಳಿತ ಪರಿಷತ್, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಶಿವಪುರದ ಮುಂದಾಳು ಮೂರ್ಸಾಲು ಮೋಹನದಾಸ ನಾಯಕ್ ನಿರಂತರವಾಗಿ ಶಾಲೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಶಾಲಾಡಳಿತ ಪರಿಷತ್ ಮತ್ತು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಮೂರ್ಸಾಲು ಮೋಹನದಾಸ ನಾಯಕ್ ನೇತೃತ್ವದಲ್ಲಿ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಗನ್ನಾಥ ಕುಲಾಲ್ ಶಿವಪುರ, ಶತಮಾನೋತ್ಸವ ಸಮಿತಿ ಅಧ್ಯಕ್ಷ ನಿವೃತ್ತ ಮುಖ್ಯ ಶಿಕ್ಷಕ ಮುರಳೀಧರ ಭಟ್ ಮತ್ತು ಶಾಲಾ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಿತಿ ಅಧ್ಯಕ್ಷ ಡಾ. ಗುರುಪ್ರಸಾದ ಕೊಡಂಚ ಸಹಕಾರದಲ್ಲಿ ಶತಮಾನೋತ್ಸವ ನಡೆಯುತ್ತಿದ್ದು ಸರ್ವರೂ ಕೈಜೋಡಿಸಿದ್ದಾರೆ. ಊರಿನ ದಾನಿಗಳು, ಸಂಘ-ಸಂಸ್ಥೆಗಳು, ಹಳೇ ವಿದ್ಯಾರ್ಥಿಗಳು, ಶಾಲಾಡಳಿತ ಪರಿಷತ್ ಮತ್ತು ವ್ಯವಸ್ಥಾಪನಾ ಸಮಿತಿ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಶಾಲಾ ಶಿಕ್ಷಕ ರಕ್ಷಕ ಸಂಘ, ಶತಮಾನೋತ್ಸವ ಸಮಿತಿ, ಶಾಲಾ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಿತಿ, ಹಳೇ ವಿದ್ಯಾರ್ಥಿ ಸಂಘದ ಸರ್ವ ಸದಸ್ಯರು, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ, ಗೌರವ ಶಿಕ್ಷಕಿಯರು ಸಂಭ್ರಮದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ.
ಶಾಲಾ ಹಳೆ ವಿದ್ಯಾರ್ಥಿಗಳ ಕ್ರೀಡೋತ್ಸವ ಇತ್ತೀಚೆಗೆ ಸಂಪನ್ನಗೊಂಡಿದೆ. ಶಾಲೆಯ ನಿರಂತರ ಉಳಿವಿಗಾಗಿ 100 ವರ್ಷಗಳ ಕಾಲ ಸೇವೆ ಸಲ್ಲಿಸಿದ ಮುಖ್ಯ ಶಿಕ್ಷಕರು, ಶಿಕ್ಷಕರು, ಜನಪ್ರತಿನಿಧಿಗಳು, ದಾನಿಗಳು, ಪೋಷಕರು, ಹಳೇ ವಿದ್ಯಾರ್ಥಿಗಳು, ಶಿಕ್ಷಣ ಇಲಾಖೆ ಸೇರಿ ಹಲವರ ಸೇವೆಯ ಫಲವಿದೆ ಎಂದು ಮೋಹನದಾಸ ನಾಯಕ್ ಸ್ಮರಿಸಿದರು.
ಮುಳ್ಳುಗುಡ್ಡೆ ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಂಭ್ರಮ, ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಏ.19ರಂದು ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ನಡೆಯಲಿದೆ. ಬಳಿಕ ಕಲ್ಲಡ್ಕ ವಿಠಲ ನಾಯಕ್ ಅವರಿಂದ ಗೀತಾ ಸಾಹಿತ್ಯ ಸಂಭ್ರಮ, ಸಂಜೆ 7ಕ್ಕೆ ಶತಮಾನೋತ್ಸವ ಸಂಭ್ರಮ ನಡೆಯಲಿದೆ. ಗುರುವಂದನೆ, ನಿವೃತ್ತ ಮುಖ್ಯ ಶಿಕ್ಷಕಿ ಬೇಬಿ ಹಾಗೂ ಸಾಧಕರು, ದಾನಿಗಳು ಮತ್ತು ಗೌರವ ಶಿಕ್ಷಕರಿಗೆ ಗೌರವ ಸಮರ್ಪಣೆ ನಡೆಯಲಿದೆ. ಶಾಲಾ ವಿದ್ಯಾರ್ಥಿಗಳ ನೃತ್ಯೋತ್ಸವ, ಹಳೆ ವಿದ್ಯಾರ್ಥಿಗಳ ನೃತ್ಯ ವೈವಿಧ್ಯ ಬಳಿಕ ರಾತ್ರಿ ವಿನಯ ಬೇರೋಳ್ಳಿ ಸಂಯೋಜನೆಯಲ್ಲಿ ಯಕ್ಷರ್ಪಣ ಬೇರೋಳ್ಳಿ ತಂಡದಿಂದ ದಕ್ಷಿಣೋತ್ತರ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ರಾಮಾಂಜನೇಯ ಕಾಳಗ ಯಕ್ಷಗಾನ ನಡೆಯಲಿದೆ. ಮಂಜುನಾಥ ಕುಲಾಲ್ ಶಿವಪುರ, ವಿಶ್ವನಾಥ ಪೂಜಾರಿ, ಸಚಿನ್ ನಾಯ್ಕ್ ಕುಚ್ಚಿ, ಶಿಕ್ಷಕ ರಮಾನಂದ ಶೆಟ್ಟಿ, ವಿಶ್ವಾಸ್ ವೈಲಾಯ, ಎಸ್. ಕೃಷ್ಣ ಸಂತೋಷ ಶೆಟ್ಟಿ, ಗಣೇಶ ಹಾಂಡ ಶಿವಪುರ ಮತ್ತು ಹಲವರು ನಿರಂತರವಾಗಿ ಶತಮಾನೋತ್ಸವ ಸಂಭ್ರಮದ ಯಶಸ್ಸಿಗಾಗಿ ಶ್ರಮಿಸುತ್ತಿದ್ದಾರೆ ಎಂದು ಮುರ್ಸಾಲು ಮೋಹನದಾಸ ನಾಯಕ್ ತಿಳಿಸಿದರು.

ಸುತ್ತ ಮುತ್ತ

ಹರೇಕಳದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಕೊಣಾಜೆ: ಇಲ್ಲಿನ ಹರೇಕಳ ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆಯಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ತ್ಯಾಗಮ್ ಹರೇಕಳ ಭಾಗವಹಿಸಿ, ಉಪನ್ಯಾಸ ನೀಡಿದರು. ಶಾಲಾ ಮುಖ್ಯ ಶಿಕ್ಷಕಿ ಮೋಹಿನಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಶಿಕ್ಷಕರಾದ ರವಿಶಂಕರ್, ಶಾಲಾ ವಿದ್ಯಾರ್ಥಿ ಸರಕಾರದ ವಿವಿಧ ಮಂತ್ರಿಗಳು ಉಪಸ್ಥಿತರಿದ್ದರು. ಶಿಕ್ಷಕರಾದ ಕೃಷ್ಣಶಾಸ್ತ್ರಿ ಸ್ವಾಗತಿಸಿದರು, ಶಿಕ್ಷಕಿ ಸ್ಮಿತಾ ವಂದಿಸಿದರು. ಹಿಂದಿ ಭಾಷಾ ಶಿಕ್ಷಕರಾದ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಕೋಟ: ಕಾಂಗ್ರೆಸ್ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ

ಕೋಟ: ಭಾರತ ರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ಕೋಟ ಬ್ಲಾಕ್ ಕಾಂಗ್ರೆಸ್ ಕಚೇರಿ ಇಂದಿರಾ ಭವನದಲ್ಲಿ ನೆರವೇರಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಕರ್ ಕುಂದರ್ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆಗೈದು ಮಾತನಾಡಿದರು. ಈ ಸಂದರ್ಭ ಸಾಲಿಗ್ರಾಮ ಪ.ಪಂ. ಗ್ರಾಮೀಣ ಸಮಿತಿ ಕಾರ್ಯದರ್ಶಿ ರವೀಂದ್ರ ಕಾಮತ್. ಮುಖಂಡರಾದ ಶೇಖರ ಮರಕಾಲ, ಬ್ರಹ್ಮಾವರ ತಾಲೂಕು ಕೆಡಿಪಿ ಸಮಿತಿ ಸದಸ್ಯರಾದ ದಿನೇಶ್ ಬಂಗೇರ ಗುಂಡ್ಮಿ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಬಾಲಕೃಷ್ಣ ಪೂಜಾರಿ, ಶ್ರೀನಿವಾಸ ವಡ್ಡರ್ಸೆ, ಮಹಾಬಲ ಮಡಿವಾಳ, ಅಚ್ಯುತ ಪೂಜಾರಿ, ಬಸವ ಪೂಜಾರಿ, ಗಣೇಶ್ ಪೂಜಾರಿ ಕೋಟ, ಸುರೇಶ ಶೆಟ್ಟಿ ಕಾವಡಿ, ರವಿ ಪೂಜಾರಿ ಚಿಟ್ಬೆಬೆಟ್ಟು, ಯಾಸಿನ್ ಪಾರಂಪಳ್ಳಿ, ನಾಗೇಶ್ ಪೂಜಾರಿ ಪಾರಂಪಳ್ಳಿ, ಕೃಷ್ಣಮೂರ್ತಿ ಪೂಜಾರಿ ಕಾರ್ಕಡ,ಬಸವ ಮರಕಾಲ ಕಾರ್ಕಡ,ಸುಜನ್ ವಡ್ಡರ್ಸೆ, ರಾಜು ಪೂಜಾರಿ, ಅಂಬಾಗಿಲುಕೆರೆ, ಅಲ್ವಿನ್ ಗುಂಡ್ಮಿ ರಘುರ್ ಗುಂಡ್ಮಿ ಪ್ರಮುಖ ಮುಖಂಡರು ಉಪಸ್ಥಿತರಿದ್ದರು. ಶ್ರೀನಿವಾಸ ವಡ್ಡರ್ಸೆ ವಂದಿಸಿದರು.

ಮುಲ್ಕಿ ನಗರ ಪಂಚಾಯತ್‌ನಲ್ಲಿ ಅಂಬೇಡ್ಕರ್ ಜಯಂತಿ

ಮುಲ್ಕಿ: ಇಲ್ಲಿನ ನಗರ ಪಂಚಾಯತ್ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ 135ನೇ ಜನ್ಮದಿನಾಚರಣೆ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಭಾಗವಹಿಸಿ, ಮಾತನಾಡಿದರು. ಈ ಸಂದರ್ಭ ಮುಲ್ಕಿ ನಗರ ಪಂಚಾಯತ್ ಮಾಜೀ ಸದಸ್ಯರಾದ ಮಂಜುನಾಥ ಕಂಬಾರ, ಭೀಮಾ ಶಂಕರ್, ಸಾಮಾಜಿಕ ಕಾರ್ಯಕರ್ತರಾದ ಮಂಜುನಾಥ ಆರ್ ಕೆ, ಶಿವಾನಂದ ಆರ್ ಕೆಎಸ್ ರಾವ್ ನಗರ, ಹಾಗೂ ಮುಲ್ಕಿ ನಗರ ಪಂಚಾಯತ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ವಂಡ್ಸೆ ಶಾಲೆಯಲ್ಲಿ ಅಂಬೇಡ್ಕರ್ ಜಯಂತಿ

ಕುಂದಾಪುರ: ವಂಡ್ಸೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಮಂಗಳವಾರ ಆಚರಿಸಲಾಯಿತು. ವಂಡ್ಸೆ ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿ ನಾಗರಾಜ ಶೆಟ್ಟಿ ಅವರು ಡಾ. ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸರಕಾರಿ ನೌಕರರ ಸಂಘ ಕುಂದಾಪುರ ಇದರ ನಿರ್ದೇಶಕ ಪ್ರತಾಪ್ ಕುಮಾರ್ ಶೆಟ್ಟಿ ಅಧ್ಯಾಪಕರು, ಬೋಧಕೇತರರು ಮತ್ತು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಭಾರ ಮುಖ್ಯ ಶಿಕ್ಷಕ ಸೋಮರಾಯ ಜನ್ನು ಸ್ವಾಗತಿಸಿ, ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ರಾಜು ಎನ್. ವಂದಿಸಿದರು.

ಕೋಟ ಗ್ರಾ.ಪಂ.ನಿಂದ ಅಂಬೇಡ್ಕರ್ ಜಯಂತಿ

ಕೋಟ: ಇಲ್ಲಿನ ಕೋಟ ಗ್ರಾಮಪಂಚಾಯತ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಕೋಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಉಮೇಶ್ ಮೊಗವೀರ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆಗೈದು ಸಂವಿಧಾನದ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಪಂಚಾಯತ್ ಲೆಕ್ಕಪರಿಶೋಧಕ ಶೇಖರ್ ಮರವಂತೆ,ಗ್ರಂಥಪಾಲಕಿ ಜ್ಯೋತಿ,ಎಸ್ ಎಲ್ ಆರ್ ಎಂ ಘಟಕದ ಮುಖ್ಯಸ್ಥೆ ಭವ್ಯ,ಸಂಜೀವಿನಿ ಒಕ್ಕೂಟದ ಪ್ರೇಮ ಆಚಾರ್, ಪಂಚಾಯತ್ ಸಿಬ್ಬಂದಿಗಳು ಮತ್ತಿತರರು ಇದ್ದರು.

ಪುತ್ತೂರು ತಾಲೂಕು ಆಡಳಿತದಿಂದ ಡಾ. ಅಂಬೇಡ್ಕರ್ ಜಯಂತಿ
ಅಸ್ಪೃಶ್ಯತೆ ಸಂಪೂರ್ಣವಾಗಿ ದೂರವಾಗಲಿ



ಪುತ್ತೂರು: ಶಿಕ್ಷಣ, ಸಂಘಟನೆ, ಹೋರಾಟದ ಮೂಲಕ ಸಮಾಜದ ಬದಲಾವಣೆ ಮಾಡಬಹುದು ಎಂಬ ನಂಬಿಕೆ ಡಾ. ಬಿ.ಆರ್.ಅಂಬೇಡ್ಕರ್ ಅವರದ್ದಾಗಿದ್ದು, ನ್ಯಾಯ, ಸಮಾನತೆಗಾಗಿ ಅವರು ಸಂವಿಧಾನವನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಎಷ್ಟೇ ಮುಂದುವರಿದರೂ ಇನ್ನೂ ಒಂದಷ್ಟು ಕಡೆಗಳಲ್ಲಿ ಉಳಿದಿರುವ ಸಣ್ಣ ಮಟ್ಟಿನ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಎಲ್ಲರ ಪ್ರಯತ್ನ ಅಗತ್ಯವಾಗಿದೆ ಎಂದು ಪುತ್ತೂರು ಸಹಾಯಕ ಕಮಿಷನರ್ ಸ್ಟೆಲ್ಲಾ ವರ್ಗೀಸ್ ಹೇಳಿದರು.

ಅವರು ಮಂಗಳವಾರ ಪುತ್ತೂರು ತಾ.ಪಂ. ಸಭಾಂಗಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಪುತ್ತೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಮಳ ರಾಮಚಂದ್ರ ಮಾತನಾಡಿ, ದಲಿತರ ಉದ್ಧಾರಕ್ಕಾಗಿಯೇ ಡಾ. ಅಂಬೇಡ್ಕರ್ ಅವರು ಜನ್ಮ ತಳೆದಿದ್ದು, ಅವರು ಸಂವಿಧಾನದ ಮೂಲಕ ಶೋಷಿತ ವರ್ಗಕ್ಕೆ ಶಕ್ತಿ ತುಂಬುವ ಕಾರ್ಯ ಮಾಡಿದ್ದರು. ಪ್ರಸ್ತುತ ಅಲ್ಲಲ್ಲಿ ಸಂವಿಧಾನವನ್ನೇ ತಿರುಚುವ ಪ್ರಯತ್ನಗಳು ನಡೆಯುತ್ತಿರುವುದು ಖೇದಕರ ಎಂದರು.

ಬೆಳ್ತಂಗಡಿ ಉಪವಲಯ ಅರಣ್ಯಾಧಿಕಾರಿ ರವಿಚಂದ್ರ ಪಡುಬೆಟ್ಟು ಉಪನ್ಯಾಸ ನೀಡಿ, ಡಾ.ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅರ್ಥ ಮಾಡಿಕೊಂಡಾಗಲೇ ಸಮಾಜದಲ್ಲಿ ಬದಲಾವಣೆಗಳನ್ನುತರಲುಸಾಧ್ಯವಿದ್ದು,ಶಿಕ್ಷಣದಿಂದ ಮಾತ್ರ ಅಸಮಾನತೆ, ಅಸ್ಪೃಶ್ಯತೆ ಹೋಗಲಾಡಿಸಲು ಸಾಧ್ಯವಿದೆ. ಅಂಬೇಡ್ಕರ್ ಹೇಳಿದಂತೆ ನಾವು ಅವರ ಆರಾಧಕರಾಗದೆ ವಿಚಾರಗಳನ್ನು ಅನುಸರಿಸುವ ಅನುಯಾಯಿಗಳಾಗಬೇಕು ಎಂದರು.

ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ. ಅವರು ಸಂವಿಧಾನದ ಪೀಠಿಕೆ ವಾಚಿಸಿದರು. ಸಮಾಜ ಕಲ್ಯಾಣ ಇಲಾಖೆ ಅಧೀನ ಹಾಸ್ಟೆಲ್ ನಲ್ಲಿದ್ದು ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರಾದ ನಂದಿತಾ ಹಾಗೂ ಚೈತ್ರಾ ಅವರನ್ನು ಅಭಿನಂದಿಸಲಾಯಿತು. ಪುತ್ತೂರು ತಾ.ಪಂ. ಇಒ ನವೀನ್ ಕುಮಾರ್ ಭಂಡಾರಿ ಎಚ್. ಹಾಗೂ ಪುತ್ತೂರು ನಗರ ಪೊಲೀಸ್ ಇನ್ಸ್‌ಪೆಕ್ಟರ್ ಜಾನ್ಸನ್ ಡಿಸೋಜ ವೇದಿಕೆಯಲ್ಲಿದ್ದರು. ಪುತ್ತೂರು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸುನೀತಾಕುಮಾರಿ ಸ್ವಾಗತಿಸಿದರು. ತಾಲೂಕು ಕಚೇರಿ ಸಿಬ್ಬಂದಿ ಶ್ರೀಕಲಾ ವಂದಿಸಿದರು.

ಬಂಟ್ವಾಳ: ಅಂಬೇಡ್ಕರ್ ಜಯಂತಿ



ಬಂಟ್ವಾಳ: ತಾಲೂಕು ಪಂಚಾಯತ್, ಪುರಸಭೆ ಮತ್ತು ಸಮಾಜ ಕಲ್ಯಾಣ ಇಲಾಖೆ ಬಂಟ್ವಾಳ ಇವರ ಸಂಯುಕ್ತಾಶ್ರಯದಲ್ಲಿ ಬಂಟ್ವಾಳ ತಾಲೂಕು ಮಟ್ಟದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಸಮಾರಂಭ ಬಿ.ಸಿ.ರೋಡಿನ ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಜಿ. ಕಾರ್ಯಕ್ರಮ ಉದ್ಘಾಟಿಸಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಕನಸಿನ ಸಮಾನತೆಯ ಸಮಾಜದ ಬುನಾದಿ ಮಕ್ಕಳಲ್ಲಿ ಇದ್ದು, ಮಕ್ಕಳ ಹಕ್ಕುಗಳನ್ನು ಕಾಪಾಡಿದಾಗ ಅಂಬೇಡ್ಕರ್ ಅವರ ಕನಸು ನನಸಾಗುತ್ತದೆ ಎಂದರು.

ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಬೇಬಿ ಕುಂದರ್ ಮಾತನಾಡಿ, ಅಂಬೇಡ್ಕರ್ ಅವರ ಯೋಜನೆ, ಯೋಚನೆ, ತತ್ವ ಸಿದ್ಧಾಂತಗಳು ಮುಂದಿನ ಜನಾಂಗಕ್ಕೆ ತಲುಪುವ ನಿಟ್ಟಿನಲ್ಲಿ ಕಾರ್ಯಕ್ರಮ ನಡೆಯಬೇಕು ಹೊರತು ಕೇವಲ ಕಾಟಾಚಾರಕ್ಕಾಗಿ ನಡೆಯಬಾರದು ಎಂದು ಹೇಳಿದರು.

ಪ್ರೊ. ಗಿರೀಶ್ ಭಟ್ ಅಜೆಕ್ಕಳ ಮಾತನಾಡಿ, ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರಿಗೆನಾವೆಲ್ಲರೂ ಋಣಿಗಳಾಗಿರಬೇಕು ಎಂದರು. ತಾ.ಪಂ.ಇಒ.ಸಚಿನ್ ಕುಮಾರ್, ನ್ಯಾಯವಾದಿ ರಮೇಶ್ ಉಪಾಧ್ಯಾಯ, ದಲಿತ ಮುಖಂಡರು ಇದ್ದರು. ಇದೇ ವೇಳೆ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಹಾಗೂ ಸಮುದಾಯದ ಏಳಿಗೆಗಾಗಿ ಶ್ರಮಿಸಿದ ಬೇಬಿ ಮೈರನ್ ಪಾದೆ, ಸತೀಶ್ ಅರಳ, ಸೇಸಪ್ಪ ಬೆದ್ರಕಾಡು ಅವರನ್ನು ಗೌರವಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ವಿನಯಕುಮಾರಿ ಸ್ವಾಗತಿಸಿ, ಕೇಶವ ದೈಪಲ ವಂದಿಸಿದರು. ಕೀರ್ತಿ ವಗ್ಗ ನಿರೂಪಿಸಿದರು. ಇದಕ್ಕೂ ಮುನ್ನ ಬಿ.ಸಿ.ರೋಡಿನ ಬ್ರಹ್ಮ ಶ್ರೀ ನಾರಾಯಣ ಗುರು ವೃತ್ತದಿಂದ ಅಂಬೇಡ್ಕರ್ ಬಾವಚಿತ್ರವನ್ನು ಅಂಬೇಡ್ಕರ್ ಭವನದವರೆಗೆ ಜಾಥ ಮೂಲಕ ಸಾಗಿ ಬಂತು.

ಕಾರ್ಕಳ: ವಿಕಾಸ ಜನಸೇವಾ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ



ಕಾರ್ಕಳ: ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಕಾರ್ಕಳ ಶಾಸಕರ ಜನಸೇವಾ ಕಚೇರಿಯಲ್ಲಿ ಮಂಗಳವಾರ ಆಚರಿಸಲಾಯಿತು.

ಕಾರ್ಕಳ ಶಾಸಕ, ಮಾಜಿ ಸಚಿವರಾದ ವಿ. ಸುನಿಲ್ ಕುಮಾರ್ ಅವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಜೊತೆಗೆ ಬಿಜೆಪಿ ಪ್ರಮುಖರು, ಕಾರ್ಯಕರ್ತರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಅಂಬೇಡ್ಕರ್ ಜಯಂತಿಯ ಶುಭಾಶಯ ವ್ಯಕ್ತಪಡಿಸಿದರು.

ತತ್ವ ಸಿದ್ಧಾಂತ ಅಳವಡಿಸಿ

ಪಕ್ಷದ ವಕ್ತಾರರು, ನ್ಯಾಯವಾದಿಗಳಾದ ರವೀಂದ್ರ ಮೊಯ್ಲಿ ಅಂಬೇಡ್ಕರ್ ಅವರ ಕುರಿತು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ. ಮಾತ್ರವಲ್ಲದೆ ಅಂಬೇಡ್ಕರ್ ಅವರು ಕೇವಲ ಒಂದು ಸಮುದಾಯದ ನಾಯಕರಲ್ಲ ಅವರು ಇಡೀ ರಾಷ್ಟ್ರದ ಆಸ್ತಿ. ಸಮಾನತೆ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಕುರಿತಾದ ಅವರ ಆಶಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ಈ ಸಂದರ್ಭ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್, ನಗರ ಅಧ್ಯಕ್ಷರಾದ ನಿರಂಜನ್ ಜೈನ್, ಮಾಜಿ ಪುರಸಭಾ ಅಧ್ಯಕ್ಷ ಸುಮಾ ಕೇಶವ್ ಪುರಸಭಾ ಸದಸ್ಯರು, ಎಸ್‌ಸಿ ಮೋರ್ಚಾ ಅಧ್ಯಕ್ಷ ಶ್ರೀನಿವಾಸ್ ಕಾರ್ಲ, ವಿವಿಧ ಮೋರ್ಚಾದ ಪದಾಧಿಕಾರಿಗಳು, ಸದಸ್ಯರು ಹಾಗೂ, ಪದಾಧಿಕಾರಿಗಳು, ಮುಂತಾದವರು ಉಪಸ್ಥಿತರಿದ್ದರು.

ಮುಂದಿನ ವರ್ಷ ಅಂಬೇಡ್ಕರ್ ಭವನದಲ್ಲೇ ಜಯಂತಿ ಆಚರಣೆ: ಭಾಗೀರಥಿ ಮುರುಳ್ಯ



ಸುಳ್ಯ: ಕಳೆದ ವರ್ಷ ಬಂಟರ ಭವನದಲ್ಲಿ ನಡೆದ ಅಂಬೇಡ್ಕರ್ ಜಯಂತಿ ದಿನ 2026ರ ಜಯಂತಿ ಅಂಬೇಡ್ಕರ್ ಭವನದಲ್ಲಿ ನಡೆಸುವಂತಾಗಲಿ ಎಂದು ಹೇಳಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದ್ದು ಆದರೆ ಈ ಬಾರಿಯ ಜಯಂತಿ ಸಂದರ್ಭಕ್ಕೂ ಪೂರ್ತಿಯಾಗಿಲ್ಲ. ಮುಂದಿನ ವರ್ಷವಾದರೂ ಅಂಬೇಡ್ಕರ್ ಭವನದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವಂತಾಗಬೇಕು ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಸುಳ್ಯ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಆಡಳಿತ, ತಾಲೂಕು ಪಂಚಾಯತ್, ನಗರ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸುಳ್ಯ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಮುಸ್ತಫ ಕಾರ್ಯಕ್ರಮ ಉದ್ಘಾಟಿಸಿದರು. ಉಪ್ಪಿನಂಗಡಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಸುಬ್ರಹ್ಮಣ್ಯ ಕೈಂತಜೆ ಸಂಸ್ಮರಣಾ ಉಪನ್ಯಾಸ ನೀಡಿದರು. ದ.ಕ. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ತಾಲೂಕು ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ತಹಶೀಲ್ದಾರ್ ಮಂಜುಳ ಎಂ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ರಾಜಣ್ಣ ನ.ಪಂ. ಮುಖ್ಯಾಧಿಕಾರಿ ಎಚ್. ಆರ್. ಬಸವರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್. ಹರಗಿ ಇದ್ದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣ ಬಿ. ಸ್ವಾಗತಿಸಿ, ಶಿವಪ್ರಸಾದ್ ಕೆ.ವಿ. ವಂದಿಸಿದರು. ಮಮತಾ ಕೆ.ಎಸ್. ಹಾಗೂ ಆಶಾ ನಿರ್ವಹಿಸಿದರು.

ಕಡಬ ತಾಲೂಕು ಆಡಳಿತ ಸೌಧದಲ್ಲಿ ಡಾ. ಅಂಬೇಡ್ಕರ್ ಜಯಂತಿ ಆಚರಣೆ



ಕಡಬ: ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಆಶ್ರಯದಲ್ಲಿ ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಶು ಸಂಗೋಪನ ಇಲಾಖೆ, ಸರ್ವೆ ಇಲಾಖೆ, ಕಡಬ ತಾ.ಪಂ. ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಡಬ ತಾಲೂಕು ಆಡಳಿತ ಸೌಧದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆ ಮಂಗಳವಾರ ಜರಗಿತು.

ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿಯ ಅಧ್ಯಕ್ಷ, ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು.

ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಕುಶಾಲಪ್ಪ ಎಸ್. ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಮಾತನಾಡಿದರು. ಕಡಬ ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಉಪ ತಹಶೀಲ್ದಾರ್ ಶಾಯಿದುಲ್ಲಾ ಖಾನ್, ಕಂದಾಯ ನಿರೀಕ್ಷಕ ಪೃಥ್ವಿರಾಜ್, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬಂದಿಗಳು, ದಲಿತ ಪರ ಸಂಘಟನೆಗಳ ಪ್ರಮುಖರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಉಪ ತಹಶೀಲ್ದಾರ್ ಗೋಪಾಲ್ ಕಲ್ಲುಗುಡ್ಡೆ ಸ್ವಾಗತಿಸಿ, ವಂದಿಸಿದರು.

ಸ್ಮರಣೆ ಜೊತೆಗೆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿ: ಪ್ರೊ. ಪೋತೆ



ಕೊಣಾಜೆ: ವಿಶ್ವವಿದ್ಯಾನಿಲಯಗಳು ಕೇವಲ ಪದವಿಗಳನ್ನು ನೀಡುವ ಕೇಂದ್ರಗಳಾಗದೆ ಅವು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುವ ವೇದಿಕೆಗಳಾಗಬೇಕು. ಅಂಬೇಡ್ಕರ್ ಅವರನ್ನು ಕೇವಲ ಸ್ಮರಿಸಬಾರದು, ಅವರನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎಚ್. ಟಿ. ಪೋತೆ ಅಭಿಪ್ರಾಯಪಟ್ಟರು

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ, ತರಬೇತಿ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ ಮಂಗಳವಾರ ಮಂಗಳ ಗಂಗೋತ್ರಿಯ ವಿಜ್ಞಾನ ಸಂಕೀರ್ಣ ಕಟ್ಟಡದಲ್ಲಿರುವ ಡಾ. ಯು.ಆರ್. ರಾವ್ ಸಭಾಂಗಣದಲ್ಲಿ ಜರಗಿದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಯನ್ನು ಉದ್ಘಾಟಿಸಿ ಮಾತನಾಡಿದರು.

ಒಂದು ವರ್ಗಕ್ಕೆ ಸೀಮಿತವಲ್ಲ


ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಪಿ. ಎಲ್. ಧರ್ಮ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜದಲ್ಲಿ ಆತ್ಮಪರಿಶೀಲನೆ ಮತ್ತು ಜಾಗೃತಿ ಮುಖ್ಯವಾಗಿದ್ದು, ಅವರ ಚಿಂತನೆಗಳು ಕೇವಲ ಒಂದು ವರ್ಗಕ್ಕೆ ಸೀಮಿತವಾಗಿಲ್ಲ ಎಂದರು.

ಕುಲಸಚಿವರಾದ ಪ್ರೊ. ಗಣೇಶ್ ಸಂಜೀವ್, ಪರೀಕ್ಷಾಂಗ ಕುಲಸಚಿವ ಡಾ.ಹೆಚ್ ದೇವೇಂದ್ರಪ್ಪ ಹಣಕಾಸು ಅಧಿಕಾರಿ ಪಂಚಲಿಂಗಸ್ವಾಮಿ ಎನ್. ಉಪಸ್ಥಿತರಿದ್ದರು. ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ರಾಜು ಕೃಷ್ಣ ಚಲನ್ನವರ ಪ್ರಸ್ತಾವನೆಗೈದರು. ಯಮುನಾ ಎಸ್.ಎಂ ಅತಿಥಿ ಪರಿಚಯ ನೀಡಿದರು. ಡಾ.ಪ್ರಶಾಂತ್ ನಾಯ್ಕ್ ನಿರೂಪಿಸಿದರು. ಪ್ರೊ.ಎಂ.ಎಸ್ ಮುಷ್ತಾಕ್ ವಂದಿಸಿದರು.

ಪುರಭವನ ಬಳಿ ಪ್ರತಿಮೆಗೆ ಮಾಲಾರ್ಪಣೆ



ಮಂಗಳೂರು: ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಎಸ್‌ಸಿ, ಎಸ್‌ಟಿ ಮೋರ್ಚಾ ಸಹಯೋಗದೊಂದಿಗೆ ಭಾರತ ರತ್ನ ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ನಗರದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮುಖಾಂತರ ಮಂಗಳವಾರ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಡಿ. ವೇದವ್ಯಾಸ ಕಾಮತ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ ಮಂಜುಳಾ ರಾವ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಜಗನ್ನಾಥ ಬೆಳುವಾಯಿ, ರಮೇಶ್ ಕಂಡೆಟ್ಟು ಗುರುಚರಣ್ ರಾವ್, ವಸಂತ್ ಪೂಜಾರಿ, ಲಲ್ಲೇಶ್ ಕುಮಾರ್, ಭರತ್ ಸೂಟರ್ ಪೇಟೆ, ರಮೇಶ್ ಹೆಗ್ಡೆ ಮೊದಲಾದವರು ಉಪಸ್ಥಿತರಿದ್ದರು.



ಬಿಜೆಪಿ ಕಾಪು ಮಂಡಲ ವತಿಯಿಂದ ಮಂಡಲ ಕಚೇರಿಯಲ್ಲಿ ಅಂಬೇಡ್ಕರ್ ಜನ್ಮ ದಿನಾಚರಣೆ ಆಚರಿಸಲಾಯಿತು. ಬಿಜೆಪಿ ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ರಾವ್ ಮಂಡಲ ಉಪಾಧ್ಯಕ್ಷರಾದ ಎಂಜಿ ನಾಗೇಂದ್ರ, ಅನಿಲ್ ಕುಮಾರ್ ಕಾಪು ಕಾಪುಮಂಡಲದ ಬಿಎಲ್‌ಎ -1 ಸಂದೀಪ್ ಮಜೂರ್, ಕಚೇರಿ ಕಾರ್ಯದರ್ಶಿ ಅನಿಲ್ ಶೆಟ್ಟಿ ಪಕ್ಷದ ಪ್ರಮುಖರಾದ ಜಗದೀಶ್ ಮೆಂಡನ್ ಹರ್ಷಿತ್ ಪೂಜಾರಿ ಸುಧಾಕರ್, ಕಾರ್ಯಕರ್ತರು ಇದ್ದರು.



ಬಂಟ್ವಾಳ ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದಿಂದ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಜಯಲಕ್ಷ್ಮಿ ಮಾತಾಜಿ ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಬಗ್ಗೆ ಮಾಹಿತಿ ನೀಡಿದರು. ಉಪಪ್ರಾಂಶುಪಾಲ ಯತಿರಾಜ್ ಪೆರಾಜೆ ಉಪಸ್ಥಿತರಿದ್ದರು. ವಿದ್ಯಾರ್ಥಿನಿಗಳಾದ ಅಕ್ಷತಾಲಕ್ಷ್ಮೀ, ಸ್ತುತಿ ಸಹಕರಿಸಿದರು.

ಬಿಜೆಪಿಯಿಂದ ಅಂಬೇಡ್ಕರ್ ಜಯಂತಿ



ಮಂಗಳೂರು: ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲೆಯ ವತಿಯಿಂದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆಯನ್ನು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ನಡೆಸಲಾಯಿತು.

ಈ ವೇಳೆ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖಾಂತರ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ವಿಕಾಸ್ ಪುತ್ತೂರು ಮಾತನಾಡಿ, ಅಂಬೇಡ್ಕರ್ ಅವರು ನಡೆದು ಬಂದ ಜೀವನದ ಬಗ್ಗೆ ತಿಳಿಸಿದರು. ಬಿಜೆಪಿ ಜಿಲ್ಲಾ ಅಧ್ಯಕ್ಷ ಸತೀಶ್ ಕುಂಪಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಸುಲೋಚನ ಭಟ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಜಗನ್ನಾಥ ಬೆಳುವಾಯಿ ಮೊದಲಾದವರು ಉಪಸ್ಥಿತರಿದ್ದರು.

ಕುಂದಾಪುರ ತಾಲೂಕು ಆಡಳಿತದಿಂದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ
ಜೀವನ, ಸಾಧನೆ ಎಲ್ಲರಿಗೂ ಮಾದರಿ: ಶಾಸಕ ಕೊಡ್ಗಿ



ಕುಂದಾಪುರ: ಅಂಬೇಡ್ಕರ್ ಅವರು ದೇಶದ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಅವರ ಜೀವನ, ಸಾಧನೆ ಎಲ್ಲರಿಗೂ ಮಾದರಿ. ಸಂವಿಧಾನ ಪಾಲನೆಯೇ ನಾವು ಅವರಿಗೆ ಸಲ್ಲಿಸುವ ದೊಡ್ಡ ಗೌರವ ಎಂದು ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ತಾಲೂಕು ಆಡಳಿತ, ತಾಲೂಕು ಪಂಚಾಯತ್ ಕುಂದಾಪುರ, ಪುರಸಭೆ ಕುಂದಾಪುರ, ಸಮಾಜ ಕಲ್ಯಾಣ ಇಲಾಖೆ, ಆಶ್ರಯದಲ್ಲಿ ನಡೆದ ಕುಂದಾಪುರ ತಾ.ಪಂ. ಸಭಾಂಗಣದಲ್ಲಿ ಮಂಗಳವಾರ ಜರಗಿದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕುಂದಾಪುರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್. ಹರಿಪ್ರಸಾದ್ ಶೆಟ್ಟಿ ಕಾನ್ಕಿ ಕಾರ್ಯಕ್ರಮ ಉದ್ಘಾಟಿಸಿದರು. ಬಸ್ರೂರು ಶಾರದಾ ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ. ಎಂ. ದಿನೇಶ್ ಹೆಗ್ಡೆ ಉಪನ್ಯಾಸ ನೀಡಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿನೋದ್ ಕ್ರಾಸ್ತ, ಕುಂದಾಪುರ ಉಪವಿಭಾಗಾಧಿಕಾರಿ ರಶ್ಮಿ ಎಸ್. ಆರ್., ತಾ.ಪಂ. ಇಒ ಮಹೇಶ ಕೆ.ಜಿ., ಪುರಸಭೆ ಮುಖ್ಯಾಧಿಕಾರಿ ಆನಂದ ಜೆ., ದಲಿತ ಸಂಘಟನೆಗಳ ಮುಖಂಡರಾದ ಪ್ರಭಾಕರ್ ವಿ., ಸುಶೀಲಾ ನಾಡ, ಮೋಹನ್‌ಚಂದ್ರ ಕಾಳಾವರ್ಕರ್ ಮತ್ತಿತರರು ಇದ್ದರು. ಕುಂದಾಪುರ ತಹಶಿಲ್ದಾರ್ ಪ್ರದೀಪ್ ಕುರ್ಡೇಕರ್ ಸ್ವಾಗತಿಸಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರಮೇಶ್ ವಂದಿಸಿದರು. ಹಾಸ್ಟೆಲ್ ವಾರ್ಡನ್ ರಾಧಿಕಾ ರಾಣಿ ನಿರೂಪಿಸಿದರು.

ಮೂಡುಬಿದಿರೆ ಬಿಜೆಪಿ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ
ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢ: ಎಂ. ಬಾಹುಬಲಿ



ಮೂಡುಬಿದಿರೆ: ಬಿಜೆಪಿ ಮುಲ್ಕಿ- ಮೂಡುಬಿದಿರೆ ಮಂಡಲದ ಮೂಡುಬಿದಿರೆ ನಗರ ಮಹಾಶಕ್ತಿ ಕೇಂದ್ರದ ವತಿಯಿಂದ ಡಾ. ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸುವ ಮೂಲಕ 135ನೇ ಜನ್ಮ ದಿನಾಚರಣೆಯನ್ನು ವಿದ್ಯಾಗಿರಿಯ ಪಕ್ಷದ ಕಚೇರಿಯಲ್ಲಿ ಆಚರಿಸಲಾಯಿತು.

ಹಿರಿಯ ಬಿಜೆಪಿ ಮುಖಂಡ, ನ್ಯಾಯವಾದಿ ಎಂ. ಬಾಹುಬಲಿ ಪ್ರಸಾದ್ ಅವರು ಮಾತನಾಡಿ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿ ಕಾರ್ಯನಿರ್ವಹಿಸಲು ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಕೊಡುಗೆ ಅಪಾರವಾದದ್ದು ನಮ್ಮ ಸಂವಿಧಾನದಲ್ಲಿ ಜನರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸವಿವರವಾಗಿ ನಮೂದಿಸಿದರಿಂದ ದೇಶದಲ್ಲಿ ಯಾವುದೇ ದಂಗೆ -ಅಶಾಂತಿ ಇಲ್ಲದೆ ಸರಕಾರ ನಡೆಸಲು ಪೂರಕವಾಗಿರುತ್ತದೆ. ಬಿಜೆಪಿ ಹಿರಿಯ ನಾಯಕ ಕೆ.ಆರ್. ಪಂಡಿತ್ ಅವರು ಡಾ. ಬಿ.ಆರ್ ಅಂಬೇಡ್ಕರ್ ಅವರ ಜೀವನ ಚರಿತ್ರೆ ಬಗ್ಗೆ ಉಲ್ಲೇಖಿಸಿದರು.

ಅಗಲಿರುವ ಬಿಜೆಪಿಯ ಹಿರಿಯ ಮುಖಂಡರಾದ ರಾಮಚಂದರ್ ಬೈಕಂಪಾಡಿ ಅವರಿಗೆ ಈ ಸಂದರ್ಭದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮೂಡುಬಿದಿರೆ ನಗರ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರಾದ ಲಕ್ಷ್ಮಣ್ ಪೂಜಾರಿ, ಮೇಘನಾಥ್ ಶೆಟ್ಟಿ ಮಾಜಿ ಪುರಸಭಾ ಅಧ್ಯಕ್ಷರಾದ ನಾಗರಾಜ್ ಪೂಜಾರಿ ಒಂಟಿಕಟ್ಟೆ, ಮಹಾಶಕ್ತಿ ಕೇಂದ್ರದ ಕಾರ್ಯದರ್ಶಿಯಾದ ಅಧ್ಯಕ್ಷರಾದ ಅಣ್ಣಪ್ಪ, ಪ್ರಮುಖರಾದ ಪ್ರಸಾದ್ ಭಂಡಾರಿ, ದಿನೇಶ್ ಕುಮಾರ್, ವಿಠಲ ದೇವಾಡಿಗ, ಶಕ್ತಿ ಕೇಂದ್ರದ ಪ್ರಮುಖರಾದ ಕರುಣಾಕರ್ ಶೆಟ್ಟಿ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸುತ್ತಮುತ್ತ

ಏ.17ರಿಂದ ನಾರಂಪಾಡಿ ಗುತ್ತು ದೈವಸ್ಥಾನದಲ್ಲಿ ತಂಬಿಲ, ದೈವಗಳ ನೇಮ

ಬದಿಯಡ್ಕ: ನಾರಂಪಾಡಿ ಗುತ್ತು ದೈವಸ್ಥಾನದಲ್ಲಿ ಏ.17ರಿಂದ 19ರ ತನಕ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ಕಾರ್ಮಿಕತ್ವದಲ್ಲಿ ಶ್ರೀ ನಾಗತಂಬಿಲ, ದೈವಗಳಿಗೆ ತಂಬಿಲ ಹಾಗೂ ದೈವಗಳ ನೇಮವು ವಿವಿಧ ವೈದಿಕ, ಧಾರ್ಮಿಕ ಮತ್ತು ದೈವಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.
ಇದರಂಗವಾಗಿ ಏ.17ರಂದು ಗಣಪತಿ ಹೋಮ, ಶ್ರೀ ನಾಗತಂಬಿಲ, ಶ್ರೀ ದೈವಗಳ ತಂಬಿಲ, ಭಜನೆ, ಸಂಜೆ ಶ್ರೀ ವಿಷ್ಣುಮೂರ್ತಿ, ಶ್ರೀ ರಕ್ತೇಶ್ವರಿ ಹಾಗೂ ಶ್ರೀಧೂಮಾವತಿ ಮತ್ತು ಪರಿವಾರ ದೈವಗಳ ಭಂಡಾರ ಏರುವುದು. ರಾತ್ರಿ ದೈವಗಳ ತೊಡಂಲ್, ರಾತ್ರಿಕೋಲ ನಡೆಯಲಿದೆ. ರಾತ್ರಿ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚಾಟ, ಕೊರತ್ತಿ ದೈವದ ಕೋಲ ನಡೆಯಲಿದೆ. ಏ.18ರಂದು ಬೆಳಗ್ಗೆ ಶ್ರೀ ರಕ್ತೇಶ್ವರಿ, ಶ್ರೀ ವಿಷ್ಣುಮೂರ್ತಿ, ಶ್ರೀ ಧೂಮಾವತಿ ಮತ್ತು ಪರಿವಾರ ದೈವಗಳ ನೇಮ ನಡೆಯಲಿದೆ. ಸಂಜೆ ಭಜನೆ, ದೀಪಾರಾಧನೆ, ರಾತ್ರಿ ಕುಪ್ಪೆ ಪಂಜುರ್ಲಿ, ವರ್ಣರ ಪಂಜುರ್ಲಿ ದೈವಗಳ ಭಂಡಾರ ಏರುವುದು. ರಾತ್ರಿ ಕುಪ್ಪೆ ಪಂಜುರ್ಲಿ ಹಾಗೂ ವರ್ಣರ ಪಂಜುರ್ಲಿ ದೈವದ ನೇಮ ನಡೆಯಲಿದೆ.
ಏ.19ರಂದು ಶ್ರೀ ಬೀರ್ಣಾಳ್ವ ದೈವದ ಭಂಡಾರ ಏರುವುದು, ನೇಮ, ಧರ್ಮದೈವ ಶ್ರೀ ಮಲರಾಯಿ ದೈವದ ಭಂಡಾರ ಏರುವುದು, ನೇಮ ಪ್ರಸಾದ ವಿತರಣೆ ನಡೆಯಲಿದೆ. ಸಂಜೆ ಶ್ರೀ ಗುಳಿಗ ದೈವದ ಕೋಲ, ಭಂಡಾರ ಇಳಿಯುವುದು, ಶ್ರೀ ರಾಹು ಗುಳಿಗನಿಗೆ ಬಡಿಸುವುದು, ಗುರುಹಿರಿಯರಿಗೆ ಬಡಿಸುವುದು, ಅನ್ನಪ್ರಸಾದದೊಂದಿಗೆ ಸಂಪನ್ನಗೊಳ್ಳಲಿದೆ.

ಏ.17,19ರಂದು ಅಗಲಾಡಿ ನಡುಮನೆ ಪಡಿಪ್ಪುರೆ ಒತ್ತೆಕೋಲ

ಬದಿಯಡ್ಕ: ಉಬ್ರಂಗಳ ಅಗಲ್ಪಾಡಿ ನಡುಮನೆ ಪಡಿಪ್ಪುರೆ ಶ್ರೀ ಮಹಾವಿಷ್ಣುಮೂರ್ತಿ ದೈವದ ಒತ್ತೆಕೋಲ ಮಹೋತ್ಸವ (ಕೆಂಡಸೇವೆ)ಯು ಏ.17 ಮತ್ತು 18ರಿಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಏ.17ರಂದು ಬೆಳಗ್ಗೆ ಮೇಲೇರಿ ಕೂಡಿಸುವುದು, ಸಂಜೆ ಉಬ್ರಂಗಳ ಶ್ರೀ ಐವರು ವಿಷ್ಣುಮೂರ್ತಿ ಚಾಮುಂಡಿ ದೈವಸ್ಥಾನದಿಂದ ಶ್ರೀ ಮಹಾವಿಷ್ಣುಮೂರ್ತಿ ದೈವದ ಭಂಡಾರ ಹೊರಡುವುದು, ಸಂಜೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶಾಸ್ತಾರ ಸನ್ನಿಧಿಗೆ ಭಂಡಾರ ತಲುಪಿದ ಬಳಿಕ ದೇವಾಲಯದಲ್ಲಿ ಕಾರ್ತಿಕ ಪೂಜೆ ನಡೆಯುವುದು. ರಾತ್ರಿ ಮೇಲೇರಿಗೆ ಅಗ್ನಿ ಸ್ಪರ್ಶ, ಅನ್ನದಾನ, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದು. ಶ್ರೀ ದೈವದ ಕುಳಿಚ್ಚಾಟ ನಡೆಯುವುದು.
ಏ.18ರಂದು ಮುಂಜಾನೆ ಶ್ರೀ ದೈವದ ಮೇಲೇರಿ ಪ್ರವೇಶ, ಅರಸಿನ ಹುಡಿ ಪ್ರಸಾದ ವಿತರಣೆ, ಭಂಡಾರ ಹೊರಡುವುದರೊಂದಿಗೆ ಸಮಾಪ್ತಿಗೊಳ್ಳುವುದು.

ಗುಡ್ಡೆ ಶ್ರೀ ಮಹಾಲಿಂಗೇಶ್ವರ ಕ್ಷೇತ್ರ: ಬಾಲಾಲಯ ಪ್ರತಿಷ್ಠೆ

ಕಾಸರಗೋಡು: ಕೂಡ್ಲು ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಗರ್ಭಗುಡಿ ಹಾಗೂ ನಮಸ್ಕಾರ ಮಂಟಪದ ಪುನರ್ ನಿರ್ಮಾಣ ಸಂಕಲ್ಪಸಿದ್ಧಿಗಾಗಿ ದೈವಚೈತನ್ಯವನ್ನು ಬಾಲಲಿಂಗಕ್ಕೆ ಸಂಯೋಜಿಸುವ ಬಾಲಾಲಯ ಪ್ರತಿಷ್ಠೆ ಕಾರ್ಯಕ್ರಮ ಜರಗಿತು.
ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಉಚ್ಚಿಲ ಶ್ರೀ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಜರಗಿತು. ಬಾಲಾಲಯದಲ್ಲಿ ಬಿಂಬ ಪ್ರತಿಷ್ಠೆ, ಜೀವಕಲಶಾಭಿಷೇಕ, ಬ್ರಹ್ಮಕಲಶೋತ್ಸವದ ಅವಧಿ ನಿರ್ಣಯ, ಮಹಾಪೂಜೆ ನಡೆಯಿತು.
ಬಳಿಕ ನಡೆದ ಸಭೆಯಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಹಾಗೂ ಶ್ರೀ ಕ್ಷೇತ್ರದ ತಂತ್ರಿವರ್ಯ ಉಚ್ಚಿಲ ಶ್ರೀ ಪದ್ಮನಾಭ ತಂತ್ರಿಗಳು ಸೇರಿದಂತೆ ಹಲವಾರು ಮಂದಿ ಭಕ್ತರು ಭಾಗವಹಿಸಿದ್ದರು.

ಕೆಎಸ್‌ಎಸ್‌ಪಿಎ ಸದಸ್ಯತ್ವ ವಿತರಣೆ

ಕಾಸರಗೋಡು: ಕೆಎಸ್‌ಎಸ್‌ಪಿಎ ಕಾಸರಗೋಡು ವಿಧಾನಸಭಾ ಮಂಡಲದ ನೇತೃತ್ವದಲ್ಲಿ ಸದಸ್ಯತ್ವ ವಿತರಣೆ ನಡೆಯಿತು. ಜಿಲ್ಲಾ ಜೊತೆ ಕಾರ್ಯದರ್ಶಿ ಎಂ.ಕೆ.ಸಿ.ನಾಯರ್ ಎಸ್.ಬಾಟ್ಯ ಅವರಿಗೆ ಸದಸ್ಯತ್ವ ನೀಡಿ ಉದ್ಘಾಟಿಸಿದರು. ಮಹಿಳಾ ವಿಭಾಗದ ಅಧ್ಯಕ್ಷೆ ತಿಲಕಾ ಕೆ.ಅಧ್ಯಕ್ಷತೆ ವಹಿಸಿದ್ದರು. ಶೋಭನಾ ಶ್ರೀಧರನ್, ಸುಶೀಲಾ ಕೆ.ಸಿ., ಚಂದುಕುಟ್ಟಿ ಪಿ.ಎ.ಪಳ್ಳಿಕುಂಞಿ, ಸಿ.ಎಚ್.ಬಾಬು, ಲೀಲಾಮಣಿ ಸುರೇಶ್, ಸುಜಾತಾ ಕೆ.ವಿ., ಕೃಷ್ಣನ್ ಕೆ. ಮೊದಲಾದವರು ಮಾತನಾಡಿದರು.
ವಿಧಾನಸಭಾ ಮಂಡಲ ಕಾರ್ಯದರ್ಶಿ ಸೀತಾರಾಮ ಮಲ್ಲ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಕೆ.ವಿ.ಮುಕುಂದನ್ ವಂದಿಸಿದರು.

ಜಿಲ್ಲೆಯಲ್ಲಿ ಐದು ಕ್ಷೇತ್ರಗಳಲ್ಲಿ ಯುಡಿಎಫ್‌ಗೆ ಗೆಲುವು: ನಾಯರ್

ಕಾಸರಗೋಡು: ಜಿಲ್ಲೆಯ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳಲ್ಲೂ ಯುಡಿಎಫ್ ಗೆಲ್ಲಲಿದೆ ಎಂದು ಯುಡಿಎಫ್ ಜಿಲ್ಲಾ ಸಂಚಾಲಕ ಎ.ಗೋವಿಂದನ್ ನಾಯರ್ ಹೇಳಿದ್ದಾರೆ.
ಸಾಧಾರಣವಾಗಿ ಕಾಸರಗೋಡು ಮತ್ತು ಮಂಜೇಶ್ವರ ವಿಧಾನಸಭಾ ಕ್ಷೇತ್ರಗಳು ಯುಡಿಎಫ್ ಗೆಲುವು ಕ್ಷೇತ್ರಗಳಾಗಿವೆ. ಆದರೆ ಈ ಬಾರಿ ಆ ಕ್ಷೇತ್ರಗಳು ಮಾತ್ರವಲ್ಲದೆ ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳಲ್ಲೂ ಯುಡಿಎಫ್ ಗೆಲುವು ಸಾಧಿಸಲಿದೆ. ಈ ಪೈಕಿ ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳಲ್ಲೂ ಯುಡಿಎಫ್ ಕಳೆದ ಬಾರಿಗಿಂತಲೂ ಹೆಚ್ಚಿನ ಬಹುಮತದೊಂದಿಗೆ ಗೆಲ್ಲುವ ನಿರೀಕ್ಷೆ ಇದೆ ಎಂದು ಗೋವಿಂದನ್ ನಾಯರ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯಾದ್ಯಂತ ಹಬ್ಬಕ್ಕೆ ಭರ್ಜರಿ ವ್ಯಾಪಾರ | ಕೊನ್ನೆ ಹೂವಿಗೆ ಹೆಚ್ಚಿದ ಬೇಡಿಕೆ

ಎಲ್ಲೆಡೆ ಸಂಭ್ರಮ ಸಡಗರದ 'ವಿಷು' ಹಬ್ಬ ಆಚರಣೆ

ಕಾಸರಗೋಡು: ವರ್ಷವಿಡೀ ಸುಖ ಸಮೃದ್ಧಿ ಉಂಟಾಗಲಿ ಎಂಬ ಆಶಯದೊಂದಿಗೆ, ಐಶ್ವರ್ಯದ ಸಂಕೇತದೊಂದಿಗೆ ಕೇರಳೀಯರು ಆಚರಿಸುವ ಹಬ್ಬವೇ ವಿಷು ಹಬ್ಬ. ತುಳುನಾಡಿನಲ್ಲಿ ಇದನ್ನೇ ಬಿಸು ಪರ್ಬ ಎನ್ನುತ್ತಾರೆ. ಸೌರಮಾನ ಯುಗಾದಿ ಮೇಷ ಸಂಕ್ರಮಣದ ಮರುದಿನ ಹೊಸವರ್ಷ ಆರಂಭ. ಇದೇ ಸೌರಮಾನ ಯುಗಾದಿ ಅಥವಾ ವಿಷು ಆಗಿದೆ. ಈ ವಿಷು ಹಬ್ಬಕ್ಕೆ ಹೆಚ್ಚಿನ ಮಹತ್ವವಿದೆ.
ವರ್ಷದ ಆರಾಧ್ಯ ದೇವರನ್ನು ನೋಡುವ ಕ್ರಮವನ್ನು ಕಣಿ ಕಾಣುವುದು ಎನ್ನಲಾಗುತ್ತಿದ್ದು, ಈ ಪದವನ್ನು ತುಳುವರು, ಮಲೆಯಾಳಿಗರು ಸಮಾನವಾಗಿ ಬಳಸುತ್ತಾರೆ. ಕಣಿ ಎಂದರೆ ಶ್ರೇಯಸ್ಸು ಶಕುನ, ಭವಿಷ್ಯ ಎಂಬ ಅರ್ಥಗಳೂ ಇವೆ. ವಿಷು ಹಬ್ಬವನ್ನು ಮನೆಮನೆಗಳಲ್ಲಿ, ದೇವಾಲಯಗಳಲ್ಲಿ, ಭಜನಾ ಮಂದಿರ, ದೈವಸ್ಥಾನಗಳಲ್ಲಿ, ತರವಾಡು ಮನೆಗಳಲ್ಲಿ ತಮ್ಮದೇ ಆದ ಶೈಲಿಯಲ್ಲಿ ಆಸ್ತಿಕರು ಆಚರಿಸಿಕೊಳ್ಳುತ್ತಾರೆ. ಕಣಿ ಮನೆಯನ್ನು ಸಿಂಗರಿಸಿ,





ಹಿಂದಿನ ದಿನ ರಾತ್ರಿಯೇ ದೇವರ ವಿಗ್ರಹದ ಜೊತೆಗೆ ಕಣಿಯ ಸಾಮಗ್ರಿಗಳನ್ನು ಇರಿಸಲಾಗುತ್ತದೆ. ನವಧಾನ್ಯಗಳು, ಬಟ್ಟೆಬರೆ, ಬಂಗಾರದ ಆಭರಣ, ಹಣ, ಫಲವಸ್ತುಗಳು ಇತ್ಯಾದಿಗಳೊಂದಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ಪಾತ್ರೆಯಲ್ಲಿ ಬೆಳ್ತಿಗೆ ಅಕ್ಕಿ, ತೆಂಗಿನಕಾಯಿ ಮತ್ತು ಕನ್ನಡಿ, ಕೊನ್ನೆ ಹೂ ಇರಿಸಲಾಗುತ್ತದೆ. ಕಣಿ ಕಂಡ ತಕ್ಷಣ ಕನ್ನಡಿಯಲ್ಲಿ ತಮ್ಮ ಮುಖವನ್ನೇ ನೋಡಿಕೊಳ್ಳಬೇಕು ಎಂದೂ ಸಂಪ್ರದಾಯವಿದೆ. ಇದರಿಂದ ಆಯುರಾರೋಗ್ಯ, ಐಶ್ವರ್ಯಗಳ ಸಮೃದ್ಧಿಗಳೊಂದಿಗೆ ಇಡೀ ವರ್ಷ ಸಂತೋಷದಿಂದ ಇರುತ್ತಾರೆ ಎಂಬುದು ನಂಬಿಕೆ.
ಮುಂಜಾನೆ ಎದ್ದು ಶುಚಿರ್ಭೂತರಾಗಿ ನೂತನ ಬಟ್ಟೆ ಧರಿಸಿ ಗುರುಹಿರಿಯರಿಗೆ ವಂದಿಸಿ ನಂತರ ದೇವರ ಮನೆಯ ಕಣಿ ಕಾಣುತ್ತಾರೆ. ಕಣಿಯ ಆಭರಣ, ವಾಹನ ಖರೀದಿಗೂ ಆದ್ಯತೆ ಮಲೆಯಾಳಿಗಳು ವಿಷು ಎಲ್ಲದಕ್ಕೂ ಶುಭ ಎಂಬ ಹಿನ್ನೆಲೆಯನ್ನು ಇಟ್ಟುಕೊಂಡು ಆಭರಣ ಖರೀದಿ ನಡೆಸುತ್ತಾರೆ. ವಿಷು ದಿನದಂದು ಸಣ್ಣ ಮಕ್ಕಳಿಗೆ ಕಿವಿ ಚುಚ್ಚುವುದು ಕೂಡಾ ಸಂಪ್ರದಾಯವಾಗಿದೆ.

ವಿಷು ಕಣಿ

ಎಲ್ಲಾದೇವಾಲಯಗಳಲ್ಲೂ, ದೈವಸ್ಥಾನ, ಭಜನಾ ಮಂದಿರಗಳಲ್ಲೂ ವಿಷು ಕಣಿ ಇರಿಸಲಾಗುತ್ತದೆ. ಮನೆಗಳಲ್ಲಿ ವಿಷು ಕಣಿ ಇರಿಸಿದ ನಂತರ ಎಲ್ಲರೂ ಕ್ಷೇತ್ರಗಳಿಗೆ ಕಣಿ ಕಾಣಲು ಭೇಟಿ ತೆರಳುತ್ತಾರೆ.

ಬಂಗಾರದ ಹೂ (ಕಕ್ಕೆ ಹೂ)

ಬಂಗಾರ ಹೂವು ವಿಷು ಹಬ್ಬದ ಸಂಕೇತವಾಗಿ ಕೊನ್ನೆ ಹೂವು (ಕಕ್ಕೆ ಹೂವು) ಈ ಅವಧಿಯಲ್ಲಿ ಎಲ್ಲೆಡೆ ಅರಳಿ ನಿಂತಿರುತ್ತದೆ. ಆಗಸದಲ್ಲಿ ನಕ್ಷತ್ರಗಳು ಶೋಭಿಸುವಂತೆ ಹಸಿರು ಮರದ ತುಂಬೆಲ್ಲ ಬಂಗಾರದ ಹೂವುಗಳು ರಾರಾಜಿಸುತ್ತದೆ. ದೇವರಿಗೆ ಯಾವಾಗಲೂ ಸಮರ್ಪಣೆ ಮಾಡದೆ ಇರುವ ಈ ಕೊನ್ನೆ ಹೂವನ್ನು ವಿಷು ದಿನದಂದು ಸಮರ್ಪಿಸಲಾಗುತ್ತದೆ.

ನಗರದಲ್ಲಿ ವಿಷು ಹಬ್ಬ: ವ್ಯಾಪಾರ ಬಲು ಜೋರು

ಕಾಸರಗೋಡು ಪೇಟೆಯಲ್ಲಿ ಕಳೆದ ಒಂದು ವಾರದಿಂದ ವಿಷು ಹಬ್ಬಕ್ಕಾಗಿ ಬಟ್ಟೆ ಖರೀದಿ, ಇತರ ಆಹಾರ ಸಾಮಗ್ರಿ, ಬಟ್ಟೆಬರೆ ಖರೀದಿ, ತರಕಾರಿ ಮೊದಲಾದವುಗಳ ಖರೀದಿ ಭರದಿಂದ ನಡೆಯುತ್ತಿದ್ದು, ಸೋಮವಾರ ಮತ್ತು ಮಂಗಳವಾರಗಳಲ್ಲಿ ಕಾಸರಗೋಡು ಪೇಟೆಯಲ್ಲಿ ಹೆಚ್ಚಿನ ಜನಸಂದಣಿ ಕಂಡುಬಂದಿದೆ. ಬೆಳಗ್ಗಿನಿಂದಲೇ ಹೆಚ್ಚಿನ ಜನಸಂದಣಿ ಮತ್ತು ವಾಹನಗಳ ದಟ್ಟಣೆಯಿಂದ ಹೊಸ ಬಸ್ ನಿಲ್ದಾಣದಿಂದ ಹಳೆ ಬಸ್ ನಿಲ್ದಾಣಕ್ಕೆ ತೆರಳ ಬೇಕಾದರೆ ಕೆಲವು ತಾಸುಗಳು ಬೇಕಾ ಗುತ್ತದೆ. ಅಲ್ಲಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿದೆ. ಅಲ್ಲದೆ ಜವುಳಿ ಅಂಗಡಿಗಳಲ್ಲಿ, ಕೊನ್ನೆ ಹೂ ಮಾರಾಟದ ಅಂಗಡಿಗಳಲ್ಲಿ, ಶ್ರೀ ಕೃಷ್ಣದೇವರ ವಿಗ್ರಹ ಮಾರಾಟ, ತರಕಾರಿ ಮಾರಾಟದಲ್ಲಿ ಭರ್ಜರಿ ವ್ಯಾಪಾರ ಕಂಡು ಬಂದಿತ್ತು.

ಮಂಗಲ್ಪಾಡಿ ಡಾ.ಬಿ.ಆರ್.ಅಂಬೇಡ್ಕರ್ ಕಲಾ ವೇದಿಕೆಯ 24ನೇ ವಾರ್ಷಿಕೋತ್ಸವ



ಉಪ್ಪಳ: ಡಾ.ಬಿ.ಆರ್.ಅಂಬೇಡ್ಕರ್ ಗ್ರಾಮ ವಿಕಸನ ಮತ್ತು ಕಲಾವೇದಿಕೆ ಮಂಗಲ್ಪಾಡಿ ಇದರ 29ನೇ ವಾರ್ಷಿಕೋತ್ಸವ ಮತ್ತು ಸಂವಿದಾನ ಶಿಲ್ಪಿ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನವನ್ನು ಮಂಗಲ್ಪಾಡಿಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.
ಸಭಾ ಕಾರ್ಯಕ್ರಮವನ್ನು ಗ್ರಾ.ಪಂ. ಸದಸ್ಯ ವಸಂತಕುಮಾರ್ ಮಯ್ಯ ದೀಪ ಬೆಳಗಿಸಿ ಉದ್ಘಾಟಿಸಿದರು. ಅಂಬೇಡ್ಕರ್ ವಿಚಾರ ವೇದಿಕೆ ಬದಿಯಡ್ಕ ಇದರ ಸ್ಥಾಪಕ ಸದಸ್ಯ ನಾರಾಯಣ ಬಾರಡ್ಕ ಅಂಬೇಡ್ಕರ್ ತತ್ವ ಮತ್ತು ವಿಚಾರಗಳ ಬಗ್ಗೆ ಮಾತನಾಡಿದರು. ಕುಬಣೂರು ಅಂಬೇಡ್ಕರ್ ಕಲಾ ಸಂಘದ ಅಧ್ಯಕ್ಷ ಶಿವ ಕುಬಣೂರು ಅತಿಥಿಯಾಗಿದ್ದರು. ಹಿರಿಯ ಯಕ್ಷಗಾನ ಗುರು ರಾಮ ಸಾಲ್ಯಾನ್ ಮತ್ತು ಭರತನಾಟ್ಯ, ಯಕ್ಷಗಾನ ಕಲಾವಿದೆ, ಯೊಗಪಟು ಕುಮಾರಿ ಅಶ್ವಿನಿ ಮಂಗಲ್ಪಾಡಿ ಅವರನ್ನು ಶಾಲು ಹೊದೆಸಿ ಸನ್ಮಾನಿಸಿ ಅಭಿನಂದನಾ ಪತ್ರ ನೀಡಲಾಯಿತು.
ಕಲಾವೇದಿಕೆಯ ಅಧ್ಯಕ್ಷ ಕಿಶೋರ್‌ಕುಮಾರ್ ಮಂಗಲ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ಸುಶ್ಮಿತಾ ಮತ್ತು ಬಳಗ ಕ್ರಾಂತಿ ಗೀತೆ ಹಾಡಿದರು. ವೇದಿಕೆ ಕಾರ್ಯದರ್ಶಿ ಹರೀಶ್ ಕುಮಾರ್ ಮಂಗಲ್ಪಾಡಿ ಪ್ರಸ್ತಾವನೆಗೈದರು.

ಬಹುಮಾನ ವಿತರಣೆ

ಇದೇ ವೇಳೆ ಆಟೋಟ ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಅಮಿತಾ ಸುರೇಶ್ ಸ್ವಾಗತಿಸಿ, ಜಗದೀಶ್ ಕುಮಾರ್ ಮಂಗಲ್ಪಾಡಿ ವಂದಿಸಿ, ಸುರೇಶ್ ಕುಮಾರ್ ಮಂಗಲ್ಪಾಡಿ ನಿರೂಪಿಸಿದರು. ಬಳಿಕ ಮಕ್ಕಳಿಂದ ನೃತ್ಯ ವೈವಿಧ್ಯ ನಡೆಯಿತು. ತುಳುವೆರೆ ಉಡಲು ಜೊಡುಕಲ್ಲು ಇವರ ಅಭಿನಯದ ಸುರೇಶ್ ಶೆಟ್ಟಿ ಜೋಡುಕಲ್ಲು ನಿರ್ಮಾಣ ಮಾಡಿದ ನಾಟಕ 'ಡೆನ್ನ ಡೆನ್ನಾನ' ಜನಮನ ರಂಜಿಸಿತು.

ಮಧೂರು ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ವಾರ್ಷಿಕ ಜಾತ್ರೆ ಆರಂಭ: ಧ್ವಜಾರೋಹಣ



ಕಾಸರಗೋಡು: ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಳದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಮಂಗಳವಾರ ಆರಂಭಗೊಂಡಿದ್ದು, ಏ.18ರವರೆಗೆ ಜರಗಲಿದೆ.
ಮಂಗಳವಾರ ಬೆಳಿಗ್ಗೆ ವೇದ ಪಾರಾಯಣ, ಧ್ವಜಾರೋಹಣ, ಸಹಸ್ರ ಕುಂಭಾಭಿಷೇಕ, ತುಲಾಭಾರ ಸೇವೆ, ಮಹಾಪೂಜೆ, ಸಂಜೆ ತಾಯಂಬಕ, ದೀಪಾರಾಧನೆ, ರಾತ್ರಿ 9ಕ್ಕೆ ಉತ್ಸವ ಬಲಿ ಜರಗಿತು. ಏ.15ರಂದು ಬೆಳಿಗ್ಗೆ5ಕ್ಕೆ ವಿಶೇಷೋತ್ಸವ, ವಿಷು ಕಣಿಯ ವಿಶೇಷಬಲಿ, ರಾಜಾಂಗಣ ಪ್ರಸಾದ, ಪಂಚವಾದ್ಯ, ಮಧ್ಯಾಹ್ನ 12 ಗಂಟೆಗೆ ತುಲಾಭಾರ ಸೇವೆ, ಸಂಜೆ 5ಕ್ಕೆ ತಾಯಂಬಕ, ವೀಣಾರಾಧನೆ, ರಾತ್ರಿ 9ಕ್ಕೆ ಉತ್ಸವ ಬಲಿ, ಏ.16ರಂದು ಬೆಳಿಗ್ಗೆ5 ಕ್ಕೆ ವಿಶೇಷೋತ್ಸವ, ಉತ್ಸವ ಬಲಿ. ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ ತಾಯಂಬಕ, ದೀಪಾರಾಧನೆ, ರಾತ್ರಿ 8ಕ್ಕೆ ಮಹಾದೀಪೋತ್ಸವ, ಉತ್ಸವ ಬಲಿ ನಡೆಯ ಲಿದೆ. ಏ.17ರಂದು ಬೆಳಿಗ್ಗೆ 5ಕ್ಕೆ ಉತ್ಸವ ಬಲಿ, ವಿಶೇಷೋತ್ಸವ, ದರ್ಶನ ಬಲಿ, ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ 5ಕ್ಕೆ ತಾಯಂಬಕ, ದೀಪಾರಾಧನೆ.
ರಾತ್ರಿ 7 ಕ್ಕೆ ಉತ್ಸವ ಬಲಿ, ಮೂಲಸ್ಥಾನ ಉಳಿಯತ್ತಡ್ಕಕ್ಕೆ ಶ್ರೀ ದೇವರ ಘೋಷಯಾತ್ರೆ, ಶ್ರೀ ವೀರಮಾರುತಿ ವ್ಯಾಯಮ ಶಾಲೆ ಕಾಸರಗೋಡು ಇವರ ತಾಲೀಮು ಪ್ರದರ್ಶನ, 8.30ಕ್ಕೆ ಮೂಲಸ್ಥಾನ ಉಳಿಯತ್ತಡ್ಕದಲ್ಲಿ ಕಟ್ಟೆಪೂಜೆ, 10 ಗಂಟೆಗೆ ಮಧೂರು ಬೆಡಿಕಟ್ಟೆಯಲ್ಲಿ ಕಟ್ಟೆಪೂಜೆ, ಸಾಂಪ್ರದಾಯಿಕ ಸುಡುಮದ್ದು ಪ್ರದರ್ಶನ, ಶಯನ, ಕವಾಟ ಬಂಧನ ನಡೆಯುವುದು. ಏ.18ರಂದು ಬೆಳಿಗ್ಗೆ 7 ಕ್ಕೆ ಕವಾಟೋದ್ಘಾಟನೆ, ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ5 ಕ್ಕೆ ತಾಯಂಬಕ, ದೀಪಾರಾಧನೆ, ರಾತ್ರಿ 9ಕ್ಕೆ ಉತ್ಸವ ಬಲಿ, 10ಕ್ಕೆ ಶ್ರೀ ಕ್ಷೇತ್ರದ ಆರಾಟು ಕೆರೆಯಲ್ಲಿ ಶ್ರೀ ದೇವರ ಅವಭೃತ ಸ್ನಾನ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಧ್ವಜಾವರೋಹಣ ನಡೆಯಲಿದೆ.

ಏ.18ರಂದು ನೃತ್ಯರೂಪಕ

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶಿವಾಜಿ ಕಲಾಸಂಘ ಕೊಲ್ಯ, ಮಧೂರು ಇವರು ಏ.18ರಂದು ರಾತ್ರಿ 8.30ಕ್ಕೆ 'ಸತ್ಯವಿನಾಯಕ ಪೂಜಾ ಮಹಿಮೆ' ಎಂಬ ಪೌರಾಣಿಕ ನೃತ್ಯರೂಪಕ ಪ್ರಸ್ತುತ ಪಡಿಸಲಿದ್ದಾರೆ. ರಾಂ ಎಲ್ಲಂಗಳ ರಚನೆ , ನಿರ್ದೇಶನದ ಈ ನೃತ್ಯರೂಪಕ ಸೌಮ್ಯಾ ಶಂಕರ್ ನೃತ್ಯ ನಿರ್ದೇಶನದಲ್ಲಿ ಮೂಡಿಬರಲಿದೆ.

ಏ.17ರಂದು ಪೆರಡಾಲ ಶ್ರೀ ದೇವಳ ಬ್ರಹ್ಮಕಲಶ: ಎಲ್ಲೆಡೆ ಪ್ರಚಾರ ಆರಂಭ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವವು ಏ.17ರಂದು ಆರಂಭವಾಗಲಿದೆ. ನಾಡಿನಾದ್ಯಂತ ಸಂಚರಿಸುವ ವಾಹನ ಪ್ರಚಾರಕ್ಕೆ ಮಂಗಳವಾರ ಶ್ರೀ ಕ್ಷೇತ್ರದಿಂದ ಚಾಲನೆಯನ್ನು ನೀಡಲಾಯಿತು. ಉದ್ಯಮಿ ಕೊಡುಗೈದಾನಿ ಗೋಪಾಲಕೃಷ್ಣ ಪೈ ಬದಿಯಡ್ಕ ಅವರು ಧ್ವಜ ಹಸ್ತಾಂತರಿಸಿ ಶುಭಕೋರಿದರು.
ಅರ್ಚಕ ವೇದಮೂರ್ತಿ ಶಿವರಾಮ ಭಟ್ ಪೆರಡಾಲ ಪ್ರಾರ್ಥನೆ ಸಲ್ಲಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲ, ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಹಸಿರುವಾಣಿ ಸಮಿತಿಯ ಅಧ್ಯಕ್ಷ ಕೃಷ್ಣಮೂರ್ತಿ ಪುದುಕೋಳಿ, ಪ್ರಚಾರ ಸಮಿತಿಯ ಡಾ.ಶ್ರೀಶಕುಮಾರ ಪಂಜಿತ್ತಡ್ಕ, ಶ್ಯಾಮಪ್ರಸಾದ ಸರಳಿ, ಚಪ್ಪರಸಮಿತಿ ಅಧ್ಯಕ್ಷಭಾಸ್ಕರಪಂಜಿತ್ತಡ್ಕ, ಅಲಂಕಾರ ಸಮಿತಿ ಸಂಚಾಲಕ ಪುಟ್ಟ ನಾಯ್ಕ ಪೆರಡಾಲ, ಲೆಕ್ಕ ಪರಿಶೋಧಕ ಕುಂಞಣ್ಣಬದಿಯಡ್ಕ, ಶಿವಶಕ್ತಿಪೆರಡಾಲ ಸದಸ್ಯರು, ದೇವಸ್ಥಾನದ ಸಿಬ್ಬಂದಿ ವರ್ಗ, ವಿವಿಧ ಸಮಿತಿಗಳ ಪದಾಧಿಕಾರಿಗಳು, ಭಗವದ್ಭಕ್ತರು ಉಪಸ್ಥಿತರಿದ್ದರು.

ಇಲೆಕ್ಟ್ರಾನಿಕ್ ಮತಯಂತ್ರಗಳ ಸ್ಟ್ರಾಂಗ್ ರೂಮ್ ಪರಿಶೀಲಿಸಿದ ಜಿಲ್ಲಾಧಿಕಾರಿ



ಕಾಸರಗೋಡು: ವಿಧಾನಸಭಾ ಚುನಾವಣೆಗೆ ಮತಗಳನ್ನು ದಾಖಲಿಸಲು ಬಳಸಿದ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ಸ್ಟ್ರಾಂಗ್ ರೂಮ್‌ಗಳನ್ನು ಬಿಗಿ ಭದ್ರತೆಯಲ್ಲಿ ಇರಿಸಲಾಗಿದೆ. ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕಾಸರಗೋಡು ಸರ್ಕಾರಿ ಕಾಲೇಜಿಗೆ ಭೇಟಿ ನೀಡಿ ಭದ್ರತೆ ಪರಿಶೀಲಿಸಿದರು.
ಕಾಸರಗೋಡು, ಮಂಜೇಶ್ವರ ಮತ್ತು ಉದುಮ ಕ್ಷೇತ್ರಗಳ ಮತಯಂತ್ರಗಳನ್ನು ಸರ್ಕಾರಿ ಕಾಲೇಜಿನ ಸ್ಟ್ರಾಂಗ್ ರೂಮ್‌ನಲ್ಲಿ ಇರಿಸಲಾಗಿದೆ. ಭದ್ರತಾ ವ್ಯವಸ್ಥೆಗಳು ತೃಪ್ತಿಕರವಾಗಿವೆ ಎಂದು ಜಿಲ್ಲಾಧಿಕಾರಿಗಳು ನಿರ್ಣಯಿಸಿದ್ದಾರೆ.

ಸ್ವರ್ಗ ಸ್ವಾಮಿ ವಿವೇಕಾನಂದ ಶಾಲೆಯಲ್ಲಿ 'ರಂಗ ದೀಪಿಕಾ' ರಂಗ ತರಬೇತಿ ಶಿಬಿರ



ಪೆರ್ಲ: ಭೂಮಿಕಾ ಸಂಡೇ ಥಿಯೇಟರ್ಸ್ ಸ್ವರ್ಗ ಹಾಗೂ ಸಹೋದರ ಸಂಸ್ಥೆಗಳಾದ ಎಂ.ಕೆ.ಬಾಲಕೃಷ್ಣ ಗ್ರಂಥಾಲಯ, ವಾಚನಾಲಯ ಸ್ವರ್ಗ ಮತ್ತು ಮಾತೃಭೂಮಿ ಸ್ವರ್ಗ ಇದರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದ ಶಾಲೆ ಸ್ವರ್ಗದಲ್ಲಿ 'ರಂಗದೀಪಿಕಾ – 2026' ರಂಗ ತರಬೇತಿ ಏಕದಿನ ಕಾರ್ಯಕ್ರಮ ನಡೆಯಿತು.
ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ಅಧ್ಯಾಪಕ, ಸಂಶೋಧಕ ಯಕ್ಷಗಾನ ಭಾಗವತ ಡಾ.ಸತೀಶ್ ಪುಣಿಂಚಿತ್ತಾಯರು ಮಾತನಾಡಿ, ನಾಟಕದ ಪರಂಪರೆ ಮತ್ತೆ ಸ್ವರ್ಗದಲ್ಲಿ ಆರಂಭವಾಗಿದೆ ಇದು ನಿಂತ ನೀರಾಗದಿರಲಿ ಎಂದರು.
ಬಾಲಕೃಷ್ಣ ಗ್ರಂಥಾಲಯ ಹಾಗೂ ವಾಚನಾಲಯ ಸ್ವರ್ಗ ಇದರ ಅಧ್ಯಕ್ಷ ರವಿರಾಜ್ ಸ್ವರ್ಗ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಅಭ್ಯಾಗತರಾಗಿ ಕಾಸರಗೋಡು ಜಿ.ಪಂ. ಸದಸ್ಯ ಸೋಮಶೇಖರ ಜೆ.ಎಸ್. ತಮ್ಮ ನಾಟಕದ ಅನುಭವ ಹಂಚಿಕೊಂಡರು. ಜೊತೆಗೆ ಪಂ. ಸದಸ್ಯ ರಾಮಚಂದ್ರ ಎಂ. ತಮ್ಮ ನಾಟಕದ ಆಸಕ್ತಿ ಬಗ್ಗೆ ಮಾತನಾಡಿದರು. ಸ್ವರ್ಗ ಸ್ವಾಮಿ ವಿವೇಕಾನಂದಶಾಲೆಯ ಮುಖ್ಯೋಪಾಧ್ಯಾಯಿನಿ ಗೀತಾ ಕುಮಾರಿ ಭೂಮಿಕಾ ಸಂಡೆ ಥಿಯೇಟರ್ ಹಲವು ಮಕ್ಕಳ ಪ್ರತಿಭೆಗಳಿಗೆ ನಾಂದಿಯಾಗಲಿ ಎಂದರು.
ಈ ಸಂದರ್ಭ ಊರಿನ ಹಿರಿಯ ನಾಟಕ ಕಲಾವಿದ ಬಾಬು ಪೂಜಾರಿ ಬೈರಡ್ಕ ಅವರಿಗೆ ರಂಗ ಗೌರವಾರ್ಪಣೆ ನೆರವೇರಿತು. ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರಸಿದ್ಧ ರಂಗ ನಿರ್ದೇಶಕ ಉದಯ್ ಸಾರಂಗ್, ರಂಗಕರ್ಮಿ ಅಶೋಕ್ ಮಾಸ್ಟರ್ ಕೊಡ್ಲಮೊಗರು ರಂಗ ತರಬೇತಿ ಕಾರ್ಯಕ್ರಮ ನಡೆಸಿದರು.
ವೈಷ್ಣವಿ, ಅಭಿಜ್ಞ, ದೀಪಿಕಾ ಪ್ರಾರ್ಥಿಸಿ ಕಾರ್ಯಕ್ರಮ ಸಂಚಾಲಕ ಶ್ರೀನಿವಾಸ ನಾಯ್ಕ್ ಪೆರಿಕ್ಕಾನ ಸ್ವಾಗತಿಸಿ, ಉಪ್ಪಿನಂಗಡಿ ಸರಕಾರಿ ಪ.ಪೂ. ಕಾಲೇಜಿನ ಉಪನ್ಯಾಸಕಿ ನವ್ಯಶ್ರೀ ಸ್ವರ್ಗ ಕಾರ್ಯಕ್ರಮ ನಿರೂಪಿಸಿದರು.

ಪರಿಶಿಷ್ಟ ಪಂಗಡದ ಪ್ರದೇಶಗಳಿಗೆ ಭೇಟಿ ನೀಡಿ ಗ್ರಾಮಗಳಲ್ಲಿನ ಸಮಸ್ಯೆ ಆಲಿಸಿ: ಜಿಲ್ಲಾಧಿಕಾರಿ



ಕಾಸರಗೋಡು: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಚೇರಿಯ ಅಧೀನದಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಜಾರಿಗೆ ತರಬೇಕಾದ ವಿವಿಧ ಯೋಜನೆಗಳನ್ನು ರೂಪಿಸುವ ನಿಟ್ಟನಲ್ಲಿ ಪರಿಶಿಷ್ಟ ಪಂಗಡ ಪ್ರದೇಶದ ಸಾಮಾಜಿಕ ಅಧ್ಯಯನ ಕೊಠಡಿಗಳ ವಿಸ್ತರಣಾ ಅಧಿಕಾರಿಗಳು, ಪ್ರವರ್ತಕರು ಮತ್ತು ಸಹಾಯಕರ ಸಭೆ ಜಿಲ್ಲಾ ಯೋಜನಾ ಸಮಿತಿ ಸಭಾಂಗಣದಲ್ಲಿ ಜರಗಿತು.
ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಭೆಯನ್ನು ಉದ್ಘಾಟಿಸಿದ ಅವರು, ಪರಿಶಿಷ್ಟ ಪಂಗಡದ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಗಳಲ್ಲಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅಗತ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಗಳನ್ನು ಸಲ್ಲಿಸಲು ಜಿಲ್ಲಾಧಿಕಾರಿ ಸೂಚನೆ ನೀಡಿದರು.
ಕಾಸರಗೋಡು ಪರಿಶಿಷ್ಟ ಪಂಗಡ ಅಭಿವೃದ್ಧಿ ಅಧಿಕಾರಿ ಕೆ.ವಿ.ರಾಘವನ್, ಸಹಾಯಕ ಪರಿಶಿಷ್ಟ ಪಂಗಡ ಅಭಿವೃದ್ಧಿ ಅಧಿಕಾರಿ ಎ.ಪ್ರಸನ್ನ, ಪರಿಶಿಷ್ಟ ಪಂಗಡ ವಿಸ್ತರಣಾ ಅಧಿಕಾರಿಗಳು, ಪ್ರವರ್ತಕರು, ಸಾಮಾಜಿಕ ಕಾರ್ಯಕರ್ತರು ಮಾತನಾಡಿದರು.

ಪ್ರವಾಸಕ್ಕೆ ಕರೆದೊಯ್ಯಬೇಕು

ಸಾಮಾಜಿಕ ಅಧ್ಯಯನ ಕೊಠಡಿಗಳಲ್ಲಿರುವ ಎಲ್ಲಾ ಮಕ್ಕಳನ್ನು ಒಂದು ದಿನದ ಪ್ರವಾಸಕ್ಕೆ ಕರೆದೊಯ್ಯಬೇಕು, ಗ್ರಾಮಗಳಲ್ಲಿರುವ ಎಲ್ಲಾ ಕುಟುಂಬಗಳಿಗೆ ಭೂದಾಖಲೆ ಗಳ ಒದಗಿಸುವ ಆಪರೇಷನ್ ಸ್ಮೈಲ್ ಯೋಜನೆ ಕಾರ್ಯ ಗತಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಿಲಾಂಕಟ್ಟೆ ಸಮೀಪದ ಚೋಕೆಮೂಲೆ ಶ್ರೀ ರಾಜಗುಳಿಗ ಸನ್ನಿಧಿಯಲ್ಲಿ ವರ್ಷಾವಧಿ ನಡೆಯುವ ಕೋಲ ಮಂಗಳವಾರ ಸಂಪನ್ನಗೊಂಡಿತು. ಇದರಂಗವಾಗಿ ಬೆಳಗ್ಗೆ ಶುದ್ಧಿಕಲಶ, ಮಧ್ಯಾಹ್ನ ಶ್ರೀ ರಾಜಗುಳಿಗ ದೈವದ ಕೋಲ, ಪ್ರಸಾದ ವಿತರಣೆ, ಭೋಜನ ಪ್ರಸಾದದೊಂದಿಗೆ ಸಮಾಪ್ತಿಗೊಂಡಿತ್ತು. ಸಂಕ್ರಮಣದಂಗವಾಗಿ ನಡೆದ ಕೋಲದಲ್ಲಿ ಗ್ರಾಮದ ನೂರಾರು ಮಂದಿ ಭಕ್ತರು ಭಾಗವಹಿಸಿದರು.

ದಿ. ಸದಾಶಿವ ಅನಂತಪುರ ಪಂಚಮಸ್ಮೃತಿ ಪುರಸ್ಕಾರ ಪ್ರದಾನ ಸಮಾರಂಭ | ಡಾ.ಕೆ.ಚೆನ್ನಪ್ಪ ಗೌಡ ಅಭಿಪ್ರಾಯ

ಭಾವ ಜಗತ್ತು-ವೈಚಾರಿಕತೆ ಎರಡೂ ಸಂತುಲಿತ ಪ್ರಮಾಣದಲ್ಲಿದ್ದಾಗ ಸುಂದರ ಬದುಕು ಸಾಧ್ಯ

ಕುಂಬಳೆ: ಕಾವ್ಯ ಅತ್ಯಂತ ಪ್ರಭಾವಶಾಲಿ ಮಾಧ್ಯಮ. ಕನಿಷ್ಠ ಪದಗಳು, ರೂಪಕಗಳ ಮೂಲಕ ಪರಿಣಾಮಕಾರಿ ಸಂವಹನ ಇಲ್ಲಿ ಸಾಧ್ಯ. ಅತ್ಯುತ್ತಮ ಮಾನವೀಯ ರಚನೆಯಾಗಿ ಕವಿತೆಗಳು ಭಾವ ಜಗತ್ತು –ಚಿಂತನ ಜಗತ್ತಿನ ಹದವಾದ ಮಿಳಿತ ಸಾಹಿತ್ಯ ಯಶಸ್ವಿಯಾಗುತ್ತದೆ ಎಂದು ಹಿರಿಯ ಜಾನಪದ ವಿದ್ವಾಂಸ, ಕರ್ನಾಟಕ ಜಾನಪದ ವಿ.ವಿ.ವಿಶ್ರಾಂತ ಕುಲಪತಿ ಡಾ.ಕೆ.ಚಿನ್ನಪ್ಪ ಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.
ಸದಾಶಿವ ಅನಂತಪುರ ಸಾಂಸ್ಕೃತಿಕ ಪ್ರತಿಷ್ಠಾನ , ಪ್ರಕೃತಿ ಯುವ ತಂಡ ಸಹಯೋಗದಲ್ಲಿ ಅನಂತಪುರ ಕ್ಷೇತ್ರದ ಅನಂತಶ್ರೀ ಸಭಾ ಭವನದಲ್ಲಿ ನಡೆದ ದಿ. ಸದಾಶಿವ ಅನಂತಪುರ ಪಂಚಮಸ್ಮೃತಿ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಸತ್ಯಶಂಕರ ಅನಂತಪುರ ಅವರ ಬದುಕು – ಭಾವ – ಜೀವ ಚೊಚ್ಚಲ ಕವನ ಸಂಕಲನ



ಬಿಡುಗಡೆಗೊಳಿಸಿ ಅವರು ಮಾತನಾಡಿದರು.
ಇಂದು ವ್ಯಕ್ತಿ ಕೇಂದ್ರಿತ ಮೌಲ್ಯಗಳು ವಿಜೃಂಭಿಸುವ ಕಾಲ. ಮಾನವೀಯತೆ ಎತ್ತಿ ಹಿಡಿಯುವ ಪ್ರಯತ್ನಗಳು ಕಾವ್ಯದ ವಸ್ತುವಾಗಬೇಕು ಎಂದರು.
ಭಾವ ಜಗತ್ತು ವೈಚಾರಿಕತೆ ಎರಡೂ ಸಂತುಲಿತ ಪ್ರಮಾಣದಲ್ಲಿ ಇದ್ದಾಗ ಒಳ್ಳೆಯ ಜೀವನ ಸಾಧ್ಯವಾಗುತ್ತದೆ. ಸತ್ಯಶಂಕರ ಅವರ ಕವಿತೆಗಳು ಅವರ ಕುಟುಂಬದ 3 ತಲೆಮಾರುಗಳ ಜನರ ಬದುಕಿನಿಂದ ಪ್ರಭಾವಿತವಾಗಿವೆ ಎಂದು ಚಿನ್ನಪ್ಪ ಗೌಡ ಅಭಿಪ್ರಾಯಪಟ್ಟರು.
ಕವನ ಸಂಕಲನದ ಕವಿ ಸತ್ಯಶಂಕರ ಅನಂತಪುರ ತಮ್ಮ ಕಾವ್ಯ ಯಾನದ ಕುರಿತು ಮಾತನಾಡಿದರು. ಹಿರಿಯ ಕವಿ ಶ್ರೀಕೃಷ್ಣಯ್ಯ ಅನಂತಪುರ ಅಧ್ಯಕ್ಷತೆವಹಿಸಿದ್ದರು. ಅನಂತಪುರ ಕ್ಷೇತ್ರ ಅರ್ಚಕ ವೇ.ಮೂ.ಸುಬ್ರಹ್ಮಣ್ಯ ಭಟ್ ಉದ್ಘಾಟಿಸಿ ಶುಭಹಾರೈಸಿದರು. ಕೃತಿ ಪರಿಚಯಿಸಿದ ಸಾಹಿತಿ ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಲಯ ಬದ್ಧತೆಯೊಂದಿಗೆ ಲಾಸ್ಯವಾಡುವ ಇಲ್ಲಿಯ ರಚನೆಗಳು ಭರವಸೆಗಳೊಂದಿಗೆ ಗಮನಾರ್ಹವಾಗಿದೆ. ಸಮಕಾಲೀನತೆ ಸೃಜನಶೀಲತೆಗೆ ಒಗ್ಗಿಸಿಕೊಂಡ ಸತ್ಯಶಂಕರ ಅವರು ಗಡಿನಾಡಿನ ಸಂವೇದನಾಶೀಲ ಕವಿ ಎಂಬುದನ್ನು ತನ್ನ ರಚನೆಗಳ ಮೂಲಕ ಸಾಬೀತುಪಡಿಸಿದ್ದಾರೆಂದರು.
ಪದ್ಮಶ್ರೀ ಸತ್ಯನಾರಾಯಣ ಬೆಳೇರಿ, ಡಾ.ಟಿ.ಕೆ. ಯಶೋಧಾ,ಡಾ.ಬೇ.ಸಿ.ಗೋಪಾಲಕೃಷ್ಣ ಭಟ್, ಪ್ರಕೃತಿ ಯುವ ತಂಡ ಅಧ್ಯಕ್ಷ ಲೋಕಯ್ಯ ಸಿದ್ದಿಬೈಲು ಉಪಸ್ಥಿತರಿದ್ದರು. ಚೈತ್ರಾ ಸತ್ಯಶಂಕರ್ ಸ್ವಾಗತಿಸಿ, ಕೀರ್ತನಾ ಎನ್. ರಾವ್ ಮಾತನಾಡಿದರು. ವಿಜಯ ಕುಮಾರ್ ಅನಂತಪುರ ವಂದಿಸಿದರು. ಪತ್ರಕರ್ತ ಎಂ.ನಾ.ಚಂಬಲ್ತಿಮಾರ್ ನಿರೂಪಿಸಿದರು. ಹಿರಿಯಮೃದಂಗವಾದಕದಿ.ಸದಾಶಿವ ಅನಂತಪುರ ಪಂಚಮಸ್ಮೃತಿ ಪುರಸ್ಕಾರಕ್ಕೆ ಹಿರಿಯ ಚರ್ಮ ವಾದ್ಯ ತಯಾರಕ ಕೆ.ಸದಾನಂದ ರಾವ್ ಕೂಡ್ಲು ಆಯ್ಕೆಯಾಗಿದ್ದು ಅನಾರೋಗ್ಯ ಕಾರಣದಿಂದ ಸಮಾರಂಭದಲ್ಲಿ ಭಾಗವಹಿಸದ ಸದಾನಂದ ರಾವ್ ಅವರ ಮನೆಗೆ ತೆರಳಿ ಪುರಸ್ಕಾರ ಪ್ರದಾನ ಮಾಡುವ ಬಗ್ಗೆ ಸಂಘಟಕರು ಪ್ರಕಟಿಸಿದರು.

ಅಕ್ಷರ ರೂಪಕ್ಕಿಳಿಸಬಲ್ಲ

ವಿವಿಧ ಮಜಲುಗಳನ್ನು ದಾಟಿಬಂದ ಕನ್ನಡ ಕಾವ್ಯ ಪ್ರಪಂಚ ಎಲ್ಲಾ ಹಣೆಪಟ್ಟಿಗಳನ್ನು ಬಿಸುಟು ಬೋಳು ಹಣೆಯಲ್ಲಿ ಪಂಥಗಳನ್ನು ಮೀರಿ ಬೆಳೆದಿದೆ. ಬಂಧನ ರಹಿತ ಕವಿ ಸ್ವೇಚ್ಛೆಯಿಂದ ಅಂತರಂಗದ ಭಾವಗಳನ್ನು ಬಸಿದು ಅಕ್ಷರ ರೂಪಕ್ಕಿಳಿಸಬಲ್ಲ.
● ಶ್ರೀಕೃಷ್ಣಯ್ಯ ಅನಂತಪುರ

ಸುತ್ತ ಮುತ್ತ

ನಾಳೆ ಕುಡಿಯುವ ನೀರಿಗೆ ಸಂಬಂಧಿಸಿ ಕಾರ್ಯಪಡೆ ಸಭೆ

ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೇಸಿಗೆ ಕಾಲದಲ್ಲಿ ಉಂಟಾಗುವ ಕುಡಿಯುವ ನೀರಿನ ಸಮಸ್ಯೆಯ ಪರಿಹಾರದ ಬಗ್ಗೆ ಚರ್ಚಿಸಲು ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅಧ್ಯಕ್ಷತೆಯಲ್ಲಿ ಏ.16ರಂದು ಬೆಳಿಗ್ಗೆ 10 ಗಂಟೆಗೆ ಟಾಸ್ಕ್‌ಫೋರ್ಸ್ ಸಭೆ ನಡೆಯಲಿದೆ. ನೀರಿನ ಸಮಸ್ಯೆ ಇರುವ ಪ್ರದೇಶಗಳ ವಿವರವನ್ನು ಮುಂಚಿತವಾಗಿ ಶಾಸಕರ ಕಚೇರಿಯ ಇ-ಮೇಲ್ mla.kirakumarkodgi@email.com ಅಥವಾ ದೂರವಾಣಿ ಸಂಖ್ಯೆ 8618190691 ಗೆ ಕಳುಹಿಸುವಂತೆ ಶಾಸಕರ ಕಚೇರಿ ಪ್ರಕಟಣೆ ತಿಳಿಸಿದೆ.

ರಂಗೋಲಿಯಲ್ಲಿ ಮೂಡಿದ ಕೆ.ಕೆ. ಹೆಬ್ಬಾರರ ಭಾವಚಿತ್ರ



ಕುಂದಾಪುರ: ವಿಶ್ವಕಲಾ ದಿನಾಚರಣೆಯ ಪ್ರಯುಕ್ತ ಕುಂದಾಪುರದ ಶ್ರೀವರ್ಣ ಆರ್ಟ್ ಕ್ಲಾಸ್ಸ್ ವತಿಯಿಂದ ಉಡುಪಿಯ ಪ್ರಸಿದ ಮತ್ತು ಪದ್ಮಶ್ರೀ, ಪದ್ಮ ವಿಭೂಷಣ ಚಿತ್ರಕಲಾವಿದರಾದ ಕೆ.ಕೆ. ಹೆಬ್ಬಾರ್ ಸ್ಮರಣಾರ್ಥವಾಗಿ ರಂಗೋಲಿಯಲ್ಲಿ ಮೂಡಿದ ಕೆ.ಕೆ. ಹೆಬ್ಬಾರ್ ಅವರ ಭಾವಚಿತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕಲಾವಿದ ಹರೀಶ್ ಸಾಗಾ ಮಾರ್ಗದರ್ಶನದಲ್ಲಿ ಕಲಾ ವಿದ್ಯಾರ್ಥಿಯರಾದ ಕೃತಿ ಕೆ. ದೇವಾಡಿಗ, ಸಾತ್ವಿಕ್ ಆರ್. ಮತ್ತು ರಿಶು ಜೆ. ಶೆಟ್ಟಿ ಅವರು ಸುಮಾರು 112 ಚ.ಅಡಿ ವಿಸ್ತೀರ್ಣದ ಕೆ.ಕೆ. ಹೆಬ್ಬಾರ್ ಅವರ ಭಾವಚಿತ್ರವನ್ನು ಕಪ್ಪು ಬಿಳುಪಿನ ರಂಗೋಲಿಯಲ್ಲಿ ರಚಿಸಿದ್ದಾರೆ.

ಏ.19: 'ಕೋ. ಮ. ಕಾರಂತ ಪ್ರಶಸ್ತಿ' ಪ್ರದಾನ

ಕುಂದಾಪುರ: ಕುಂದಪ್ರಭ ಸಂಸ್ಥೆಯಿಂದ ಶ್ರೇಷ್ಠ ಸಾಧಕರಿಗೆ ನೀಡಲ್ಪಡುತ್ತಿರುವ 'ಕೋ. ಮ. ಕಾರಂತ ಪ್ರಶಸ್ತಿ' ಪ್ರದಾನ ಸಮಾರಂಭ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಆರ್. ಎನ್. ಶೆಟ್ಟಿ ಸಭಾಂಗಣದಲ್ಲಿ ಏ.19ರಂದು ಸಂಜೆ 3.30ಕ್ಕೆ ನಡೆಯಲಿದೆ. ಮೂಡುಬಿದರೆ ಜೈನ ಮಠದ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಪಟ್ಟಾಚಾರ್ಯವರ್ಯ ಸ್ವಾಮಿಗಳು ಆಶೀರ್ವಚನ ನೀಡುವರು. ಪ್ರತಿಭಾವಂತ ಕುಂಚ ಕಲಾವಿದ, ಉದ್ಯಮಿ ಬಳ್ಕೂರು ಜಯರಾಮ ಉಡುಪ 'ಕೋ. ಮ. ಕಾರಂತ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಸಂಸ್ಥೆ ಯು.ಎಸ್.ಶೆಣೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಸೇತುವೆ ಭಾಗ್ಯ

ಗಾಳಿ, ಮಳೆ , ಚಳಿ, ಬಿಸಿಲಿಗೆ ಮೈಯೊಡ್ಡಿಕೊಂಡಿದ್ದ ಈ ಸೇತುವೆ 40 ವರ್ಷಗಳ ನಂತರ ತನ್ನ ಸೇವೆಯನ್ನು ಕೊನೆಗೊಳಿಸಿ ಬಿದ್ದು ಮಲಗಿದಲ್ಲೇ ಆಯಿತು. ಕಾಡಿನ ಮಕ್ಕಳ ಸಂಪರ್ಕ ಸೇತುವೆ ಏಕಾಏಕಿ ಮುರಿದು ಬಿತ್ತು. ಕಾಡಿನ ಸಂಪರ್ಕ ಶಾಶ್ವತವಾಗಿ ಕಸಿದುಕೊಂಡಿತು.

ಕಾಡಿನ ಮಕ್ಕಳು ಹೈರಾಣ

ಕಾಮಗಾರಿ ಉಸ್ತುವಾರಿ ವಹಿಸಿದ್ದ ಕರ್ನಾಟಕ ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗಕ್ಕೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಯಾವುದೇ ಕಾನೂನಿನ ಪರಿಜ್ಞಾನ ಇಲ್ಲದಂತೆ ಮೌನವಾಗಿದೆ. ಇನ್ನೂ ದಾಖಲೆಗಳನ್ನು ಕ್ರೋಡೀಕರಿಸಿ ಅರ್ಜಿ ಸಲ್ಲಿಸುವ ಗೋಜಿಗೆ ಹೋಗಲಿಲ್ಲ, ಅಂತೂ ಹಲವು ವರ್ಷಗಳ ಸೇತುವೆ ನಿರ್ಮಾಣದ ಕನಸು ನನಸಾಗುವುದು ಅನುಮಾನವಾಗಿದೆ. ಒಟ್ಟಾರೆ ಕಾನೂನು, ಸರ್ಕಾರ, ಇಲಾಖೆಗಳ ನಡುವೆ ಅಮಾಯಕ ಆದಿವಾಸಿ ಕಾಡಿನ ಮಕ್ಕಳು ಹೈರಾಣಾಗಿರುವುದು ಮಾತ್ರ ದುರಂತ.

ದೇವರಿಗೆ ಮೊರೆ

ಸೋಮವಾರಪೇಟೆ ತಾಲೂಕಿನ ಕೆಲವು ಕೃಷಿಕರು, ಗ್ರಾಮಸ್ಥರು ಮಳೆಗಾಗಿ ದೇವರ ಮೊರೆ ಹೋಗಿದ್ದಾರೆ. ತಾಲೂಕಿನ ಹಿರಿಕರ ಗ್ರಾಮದ ಕೃಷಿಕರು, ಸೋಮವಾರ ಗ್ರಾಮದ ಮಲ್ಲೇಶ್ವರ ದೇವಾಲಯ ದಲ್ಲಿ ಪೂಜೆ ಸಲ್ಲಿಸಿ, ಮಾಲಂಬಿ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಬೆಟ್ಟದ ಮಳೆ ಮಲ್ಲೇಶ್ವರ ಹಾಗೂ ಬಸವಣ್ಣ ದೇವರಿಗೆ ಸಾಮೂಹಿಕ ಪೂಜೆಯನ್ನು ಸಲ್ಲಿಸಿ, ಮಳೆಗಾಗಿ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ

ಉಡುಪಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್-ಆರ್ಕಿಟೆಕ್ಟ್ ಅಸೋಸಿಯೇಷನ್ ಪದಗ್ರಹಣ | ಗೌರವ್ ಗುಪ್ತ ಬಣ್ಣನೆ

ಉಡುಪಿ ಅಭಿವೃದ್ಧಿಯಲ್ಲಿ ಇಂಜಿನಿಯರ್‌ಗಳ ಪಾತ್ರ ಅನನ್ಯ

ಉಡುಪಿ: ಉಡುಪಿ ಜಿಲ್ಲೆಗೆ ಬರುವುದು ನನಗೆ ಯಾವಾಗಲೂ ತವರು ಮನೆಗೆ ಬಂದಂತಹ ಅನುಭವ ನೀಡುತ್ತದೆ. ಈ ಜಿಲ್ಲೆಯ ಆರಂಭದ ದಿನಗಳಲ್ಲಿ ಆಡಳಿತ ಯಂತ್ರವನ್ನು ಕಟ್ಟಿದ ನೆನಪುಗಳು ಇಂದಿಗೂ ಹಸಿರಾಗಿವೆ ಎಂದು ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ (ಐಎಎಸ್) ಭಾವನಾತ್ಮಕವಾಗಿ ನುಡಿದರು.

ಉಡುಪಿಯ ಕರಾವಳಿ ಬೈಪಾಸ್ ಬಳಿಯ ಮಣಿಪಾಲ್ ಇನ್‌ನಲ್ಲಿ ಮಂಗಳವಾರ ಸಂಜೆ ನಡೆದ ಉಡುಪಿ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಮತ್ತು ಆರ್ಕಿಟೆಕ್ಟ್ ಅಸೋಸಿಯೇಷನ್‌ನ ಬೆಳ್ಳಿಹಬ್ಬದ ಸನ್ಮಾನ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಜಿಲ್ಲೆಯ ಅಭಿವೃದ್ಧಿ ಹಾದಿ

ಜಿಲ್ಲೆಯ ರಚನೆಯಾದ ಹೊಸತರಲ್ಲಿ ತಾನಿಲ್ಲಿ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುವಾಗ ಮೂಲಸೌಕರ್ಯಗಳ ಕೊರತೆಯಿದ್ದರೂ, ಜನರ



ಸಹಕಾರದಿಂದ ಜಿಲ್ಲೆಯನ್ನು ಅಭಿವೃದ್ಧಿಪಡಿಸಿದ ಹಾದಿಯನ್ನು ಅವರು ಸ್ಮರಿಸಿದರು.

ಅಟಲ್ ಭೇಟಿಯ ಸಿದ್ಧತೆಯ ಸ್ಮರಣೆ

2002ರ ಪರ್ಯಾಯದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಭೇಟಿಯ ವೇಳೆ ಜಿಲ್ಲಾಡಳಿತ ನಡೆಸಿದ ಸಿದ್ಧತೆಗಳು ಇಂದಿಗೂ ಮರೆಯಲಾಗದ ಕ್ಷಣಗಳಾಗಿವೆ ಎಂದು ಅವರು ತಿಳಿಸಿದರು.

ಕೊಡುಗೆ ಅಪಾರ

ಬ್ಯಾಂಕಿಂಗ್, ಶಿಕ್ಷಣ ಹಾಗೂ ಉದ್ಯಮಶೀಲತೆಗೆ ಉಡುಪಿ ಮಾದರಿಯಾಗಿದ್ದು ಇಲ್ಲಿನ ದೇಗುಲಗಳ ಪುನರ್ನಿರ್ಮಾಣ ಮತ್ತು ಹೆದ್ದಾರಿಗಳ ಅಭಿವೃದ್ಧಿಯಲ್ಲಿ ಇಂಜಿನಿಯರ್‌ಗಳ ಕೊಡುಗೆ ಅಪಾರವಾಗಿದೆ ಎಂದು ಅವರು ಶ್ಲಾಘಿಸಿದರು.

ಭಗವಾನ್‌ದಾಸ್ ಅಧಿಕಾರ ಸ್ವೀಕಾರ

ಸಂಘದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಂ. ಭಗವಾನ್ ದಾಸ್ ಕೆ. ಅವರು ಮಾತನಾಡಿ, 25 ವರ್ಷಗಳ ಹಿಂದೆ ಗೌರವ್ ಗುಪ್ತ ಅವರ ಮಾರ್ಗದರ್ಶನದಲ್ಲೇ ಈ ಸಂಘವು ಅಸ್ತಿತ್ವಕ್ಕೆ ಬಂದಿತ್ತು. ಇಂದು ಬೆಳ್ಳಿಹಬ್ಬದ ಸಂಭ್ರಮದ ಕಾಲದಲ್ಲಿ ಅವರ ಸಮ್ಮುಖದಲ್ಲೇ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ಅತ್ಯಂತ ಸಂತಸದ ವಿಷಯ ಎಂದು ತಿಳಿಸಿದರು.

ಕಳೆದ 14 ವರ್ಷಗಳಿಂದ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಅವರು, ಮುಂಬರುವ 2026-28ರ ಅವಧಿಯಲ್ಲಿ ಶೈಕ್ಷಣಿಕ ಕ್ಷೇತ್ರ ಮತ್ತು ವೃತ್ತಿಪರ ನಿರ್ಮಾಣ ಕ್ಷೇತ್ರದ ನಡುವೆ ಸಮರ್ಪಕ ಸೇತುವೆ ನಿರ್ಮಿಸಲು ಆದ್ಯತೆ ನೀಡುವುದಾಗಿ ಭರವಸೆ ನೀಡಿದರು.

ಯುವ ಇಂಜಿನಿಯರ್‌ಗಳು ಪಟ್ಟಣ ಯೋಜನಾ ನಿಯಮಗಳನ್ನು ಸಮರ್ಪಕವಾಗಿ ಅರಿತು ಗ್ರಾಹಕರಿಗೆ ನ್ಯಾಯ ಒದಗಿಸಬೇಕು ಎಂದು ಅವರು ಕರೆ ನೀಡಿದರು.

ಮಣಿಪಾಲ ಎಂಐಟಿ ನಿರ್ದೇಶಕ ಡಾ. ಅನಿಲ್ ರಾಣಾ ಅವರು ಪದಗ್ರಹಣ ಅಧಿಕಾರಿಯಾಗಿ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರಿಸಿದರು. ಸಮಾರಂಭದಲ್ಲಿ ಉಡುಪಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್ ಪಾಲ್ಗೊಂಡಿದ್ದರು. ನೂತನ ಕಾರ್ಯದರ್ಶಿಯಾಗಿ ಕೆ. ಮಹೇಶ್ ಕಾಮತ್ ಹಾಗೂ ಖಜಾಂಚಿಯಾಗಿ ಅಮಿತ್ ಅರವಿಂದ್ ನಾಯಕ್ ಅವರು ಅಧಿಕಾರ ಸ್ವೀಕರಿಸಿದರು. ಸಂಘದ ನಿರ್ಗಮಿತ ಅಧ್ಯಕ್ಷ ಯೋಗೀಶ್‌ಚಂದ್ರ ಧಾರಾ, ಗೌರವಾಧ್ಯಕ್ಷ ಎಂ. ನಾಗೇಶ್ ಹೆಗ್ಡೆ ಹಾಗೂ ಸಂಘದ ಸದಸ್ಯರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

ಬೆಳ್ಳಿಹಬ್ಬದ ಸಂಭ್ರಮ

ಅಸೋಸಿಯೇಷನ್ ತನ್ನ 25 ವರ್ಷಗಳ ಸಾರ್ಥಕ ಪಯಣ ಪೂರೈಸಿದ್ದು, 2000ನೇ ಇಸವಿಯಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ಜಿಲ್ಲೆಯ ನಿರ್ಮಾಣ ಕ್ಷೇತ್ರ ಮತ್ತು ಪಟ್ಟಣ ಯೋಜನಾ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ನೂತನ ಅಧ್ಯಕ್ಷ ಭಗವಾನ್‌ದಾಸ್ ಕೆ. ತಿಳಿಸಿದರು. 'ನಮ್ಮ ಅಡಿಪಾಯಕ್ಕೆ ಗೌರವ ಮತ್ತು ಭವಿಷ್ಯಕ್ಕೆ ಸಬಲೀಕರಣ' ಎಂಬ ಧ್ಯೇಯದೊಂದಿಗೆ ಬೆಳ್ಳಿಹಬ್ಬ ಆಚರಿಸುತ್ತಿರುವ ಈ ಸಂಸ್ಥೆಯು ಯುವ ಇಂಜಿನಿಯರ್‌ಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡುವಲ್ಲಿ ಮಹತ್ವಮೈಲಿಗಲ್ಲಾಗಲಿದೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

ಯುಡಿಐಡಿ ವೈದ್ಯಕೀಯ ತಪಾಸಣೆ, ನೋಂದಣಿ ಶಿಬಿರ | ಶಾಸಕ ಗಂಟಿಹೊಳೆ ಹೇಳಿಕೆ

ಸರ್ಕಾರಿ ಸೌಲಭ್ಯ ಪಡೆಯಲು ಸಹಕಾರಿ

ಕುಂದಾಪುರ: ದೇಶಾದ್ಯಂತ ವಿಕಲಚೇತನರಿಗೆ ಯುಡಿಐಡಿ ಕಾರ್ಡ್ ಏಕೈಕ ಮತ್ತು ಸಾರ್ವತ್ರಿಕ ಗುರುತು ಚೀಟಿಯಾಗಿ ಕಾರ್ಯನಿರ್ವಹಿಸುತ್ತದೆ. ಕುಂದಾಪುರ ಮತ್ತು ಬೈಂದೂರು ವಿಧಾನಸಭಾಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿನ ಎಲ್ಲಾ ವಿಕಲಚೇತನರಿಗೆ ಯುಡಿಐಡಿ ಕಾರ್ಡ್ ಮಾಡಿಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಯುಡಿಐಡಿ ಕಾರ್ಡ್ ಹೊಂದಿರುವವರಿಗೆ ಎನ್‌ಜಿಓ, ದಾನಿಗಳಿಂದ ಸಿಗುವ ಹಾಗೂ ಸರ್ಕಾರದಿಂದ ಸಿಗುವ ಯೋಜನೆಗಳು, ಸೌಲಭ್ಯಗಳು ಮತ್ತು ರಿಯಾಯಿತಿಗಳನ್ನು ಸುಲಭವಾಗಿ ಪಡೆಯಲು ಸಹಕಾರಿಯಾಗಲಿದೆ ಎಂದು ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಡುಪಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ, ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ ಉಡುಪಿ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಉಡುಪಿ, ಆರೋಗ್ಯ ಇಲಾಖೆ ಕುಂದಾಪುರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಕುಂದಾಪುರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕುಂದಾಪುರ ಘಟಕ ಮತ್ತು ಅಂಗವಿಕಲರ ಗ್ರಾಮೀಣ ಮತ್ತು ನಗರ



> **ಸಮಾನ ಅವಕಾಶ ಒದಗಿಸಲಿದೆ**
>
> **ಯುಡಿಐಡಿ ಕಾರ್ಡ್ ವಿಕಲಚೇತನರ ಸಬಲೀಕರಣಕ್ಕೆ ಮತ್ತು ಅವರಿಗೆ ಸಮಾಜದಲ್ಲಿ ಸಮಾನ ಅವಕಾಶಗಳನ್ನು ಒದಗಿಸಲು ಮತ್ತು ಅವರ ಜೀವನವನ್ನು ಸುಲಭಗೊಳಿಸಲು ಪ್ರಮುಖ ಹೆಜ್ಜೆ ಆಗಿದೆ.**
>
> ● **ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ**

ಪುನರ್ವಸತಿ ಯೋಜನೆ ಕುಂದಾಪುರ ಇವರ ಸಹಯೋಗದೊಂದಿಗೆ ಕುಂದಾಪುರ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ನಾಲ್ಕು ದಿನಗಳ ಯುಡಿಐಡಿ ವೈದ್ಯಕೀಯ ತಪಾಸಣೆ ಹಾಗೂ ನೊಂದಣಿ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ. ಪ್ರೇಮಾನಂದ, ಕುಂದಾಪುರ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಚಂದ್ರ ಮರಕಾಲ, ಡಾ. ನಾಗೇಶ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕುಂದಾಪುರ ಘಟಕ ಸಭಾಪತಿ ಜಯಕರ ಶೆಟ್ಟಿ, ಖಜಾಂಚಿ ಶಿವರಾಮ ಶೆಟ್ಟಿ, ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ ಅಧಿಕಾರಿ ರತ್ನ ಸುವರ್ಣ ಮೊದಲಾದವರು ಉಪಸ್ಥಿತರಿದ್ದರು. ಡಾ. ಗಣನಾಥ ಶೆಟ್ಟಿ ಎಕ್ಕಾರು ನಿರ್ವಹಿಸಿದರು.

ಆಳ್ವೆಗದ್ದೆ ದೇವಸ್ಥಾನದಲ್ಲಿ ಬ್ರಹ್ಮಕಲಶ, ಧಾರ್ಮಿಕ ಸಭೆ | ಎಡನೀರು ಶ್ರೀ ಆಶೀರ್ವಚನ

ಸರ್ವರ ಸಹಕಾರ, ಒಗ್ಗಟ್ಟಿನಿಂದ ಸಾಧನೆ

ಬೈಂದೂರು: ಪರಶುರಾಮರ ನಮ್ಮ ಭರತಭೂಮಿಯಲ್ಲಿ ವೇದಗಳ ಆಧಾರದ ಮೇಲೆ ಸನಾತನ ಧರ್ಮ ಕಟ್ಟಲ್ಪಟ್ಟಿದೆ ಎಂದು ಎಡನೀರು ಮಠ ಸ್ವಾಮೀಜಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದರು.

ಶಿರೂರು ಆಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಸೋಮವಾರ ಬೆಳಗ್ಗೆ ಬ್ರಹ್ಮಕಲಶೋತ್ಸವ ಹಾಗೂ ಬ್ರಹ್ಮಕಲಶಾಭಿಷೇಕ ನೆರವೇರಿಸಿ ಬಳಿಕ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಈ ಧರ್ಮದಲ್ಲಿ ಹಲವಾರು ದೇವರು-ದೈವ ಹಾಗೂ ಸ್ವದ್ಧಿಯನ್ನು ಗುರುತಿಸುವುದರಿಂದ ಯಾವುದೇ ಬಿಗುವಾದ ಕಟ್ಟುಪಾಡುಗಳಲ್ಲ. ಅಲ್ಲದೇ ಧಾರ್ಮಿಕ ವಿಷಯದಲ್ಲಿ ಎಲ್ಲರಿಗೂ ವಿಶೇಷ ಸ್ವಾತಂತ್ರ್ಯ ಕೊಟ್ಟಿದೆ. ದೃಢವಾದ ಭಕ್ತಿ ಮತ್ತು ಶ್ರದ್ಧೆಯಿಂದ ಜಾತಿ, ಮತ ಭೇದವಿಲ್ಲದೇ ಸರ್ವರ ಸಹಕಾರ, ಒಗ್ಗಟ್ಟಿನಿಂದ ನಾವು ಏನನ್ನಾದರೂ ಸಾಧಿಸಬಹುದು. ಮಾನಸಿಕ ಶಾಂತಿ, ಸಹನೆ, ನೆಮ್ಮದಿಗಾಗಿ ಭಗವಂತನಿಗೆ ಶರಣಾಗತಿಯಾಗುವ ಮೂಲಕ ಆತನ ಅನುಗ್ರಹ ಪ್ರಾಪ್ತಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಶ್ರೀ ಮಹಾಗಣಪತಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಣಪತಿ ಎಸ್. ಮೊಗವೀರ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮ ಎನ್. ಆಳ್ವೆಗದ್ದೆ, ಗೌರವಾಧ್ಯಕ್ಷ ನಾರಾಯಣ ಟಿ. ಆಳ್ವೆಗದ್ದೆ, ವತ್ತಿನೆಣೆ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಪಿ. ಸೂಲಿಯಣ್ಣ ಶೆಟ್ಟಿ, ಜಿ. ಶಂಕರ್ ಸಹೋದರ ಜಯಣ್ಣ, ದೇವಸ್ಥಾನದ ಮಾಜಿ ಅಧ್ಯಕ್ಷ ಅಕ್ಷಯ ನಾರಾಯಣ ಮಾಸ್ತಿ, ತಿಮ್ಮಪ್ಪ ಎನ್. ಮೊಗೇರ್, ಸುಬ್ರಾಯ ಆರ್. ಮೊಗೇರ್, ಜ್ಞಾನದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಾಮಚಂದ್ರ ಶಿರೂರುಕರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೇಂದ್ರ ಸಮಿತಿ ಅಧ್ಯಕ್ಷ ವಾಸು ಮೇಸ್ತ, ಮತ್ಸ್ಯೋದ್ಯಮಿ ಗೋಪಾಲ ಮೊಗೇರ್ ಭಟ್ಕಳ, ಗ್ರಾಮ ಪಂಚಾಯತ್ ಮಾಜಿ ಸದಸ್ಯ ನಾಗೇಶ ಟಿ. ಆಳ್ವೆಗದ್ದೆ, ಉದ್ಯಮಿಗಳಾದ ಪ್ರಶಾಂತ ಎ. ಮೊಗೇರ್, ನರೇಶ್ ಮೊಗೇರ್, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷೆ ಶ್ಯಾಮಲಾ ಎಸ್. ಕುಂದರ್, ಕರ್ನಾಟಕ ಬ್ಯಾಂಕಿನ ಅಧಿಕಾರಿ ರಮೇಶ ವೈದ್ಯ, ಹೆಮ್ಮಾಡಿ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಉದಯ ಕುಮಾರ್ ಹಟ್ಟಿಯಂಗಡಿ ಉಪಸ್ಥಿತರಿದ್ದರು. ನಿಟ್ಟೆ ಕಾಲೇಜಿನ ಪ್ರಾಧ್ಯಾಪಕ ಪ್ರೊ. ರಾಧಾಕೃಷ್ಣ ದೊಡ್ಮನೆ ಪ್ರಾಸ್ತಾವಿಸಿದರು. ಲೋಕೇಶ್ ಮೊಗೇರ್ ಸ್ವಾಗತಿಸಿದರು. ದೀಪಿಕಾ ರವಿ ಕೋಟ ಕಾರ್ಯಕ್ರಮ ನಿರೂಪಿಸಿದರು. ವಿನೋದ ಮೊಗೇರ್ ವಂದಿಸಿದರು.



> **ಗೌರವಾರ್ಪಣೆ**
>
> **ಶಿರೂರಿನ ಹಿರಿಯ ವೈದ್ಯರಾದ ಡಾ. ಕೆ.ಪಿ. ನಂಬಿಯಾರ್ ಹಾಗೂ ಡಾ. ಕಮಲಾಕರ್ ಆಚಾರ್ಯ ಪಂಡಿತ್ ಅವರನ್ನು ಸನ್ಮಾನಿಸಲಾಯಿತು. ಜೀರ್ಣೋದ್ಧಾರ ಕಾರ್ಯಕ್ಕೆ ಆರ್ಥಿಕ ಸಹಾಯ ನೀಡಿದ ದಾನಿಗಳನ್ನು ಗೌರವಿಸಲಾಯಿತು.**

ಕುಂದಾಪುರ ಬಿಜೆಪಿಯಿಂದ ನಾರಿ ಶಕ್ತಿ ವಂದನ ಸಮ್ಮೇಳನ ಕಾರ್ಯಕ್ರಮ ವೀಕ್ಷಣೆ



ಕುಂದಾಪುರ: ಹೊಸದಿಲ್ಲಿಯ ವಿಜ್ಞಾನ ಭವನದಲ್ಲಿ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಜರಗಿದ ನಾರಿ ಶಕ್ತಿ ವಂದನ ಸಮ್ಮೇಳನದ ಕಾರ್ಯಕ್ರಮವನ್ನು ಕುಂದಾಪುರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೂತ್ ಸಂಖ್ಯೆ 76ರ ಕುಂದಾಪುರ ಮಂಡಲ ಕಾರ್ಯದರ್ಶಿ ನೇತ್ರಾವತಿ ಮಡಿವಾಳ ಅವರು ಮನೆಯಲ್ಲಿ ವೀಕ್ಷಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕುಂದಾಪುರ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ. ಎಸ್., ಬಿಜೆಪಿ ನಿಕಟ ಪೂರ್ವ ಅಧ್ಯಕ್ಷ ಶಂಕರ್ ಅಂಕದಕಟ್ಟೆ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸೌರಭಿ ಪೈ, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ಮಂಡಲ ಉಪಾಧ್ಯಕ್ಷ ಸುನೀಲ್ ಶೆಟ್ಟಿ ಹೇರಿಕುದ್ರು, ಪ್ರಕಾಶ್ ಪೂಜಾರಿ ಬೀಜಾಡಿ, ರೂಪಾ ಬಾಬು ಪೈ, ಒಬಿಸಿ ಮೋರ್ಚಾ ಅಧ್ಯಕ್ಷ ಸುರೇಂದ್ರ ಕಾಂಚನ್ ಸಂಗಮ್, ರೈತ ಮೋರ್ಚಾ ಅಧ್ಯಕ್ಷ ಜಯಶೀಲ ಶೆಟ್ಟಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಸುಮತಿ ನಾಗರಾಜ್, ಮಹಿಳಾ ಮೋರ್ಚಾ ಕಾರ್ಯದರ್ಶಿ ಆಶಾ ಗೋವಿಂದ, ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಸರೋಜಾ ಪೂಜಾರ್ತಿ, ದೀಪಾ ಶೆಟ್ಟಿ, ಶೋಭಾ ಮೆಂಡನ್, ಗೋಪಾಡಿ ಮಾಜಿ ಗ್ರಾಮ ಪಂಚಾಯಿತಿನ ಸದಸ್ಯ ಪ್ರಕಾಶ್ ಕಾಂಚನ್, ಬೀಜಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಮಂಜುನಾಥ್ ಕುಂದರ್, ಪುರಸಭಾ ಮಾಜಿ ಸದಸ್ಯ ದಿವಾಕರ ಕಡ್ಗಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಏ.19ರಂದು ದಾಸನಾಡಿ ದೇಗುಲ ರಾಜಗೋಪುರದ ಲೋಕಾರ್ಪಣೆ

ಬೈಂದೂರು: ಶಿರೂರು ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನೂತನ ನಿರ್ಮಾಣದ ಶಿಲಾಮಯ ರಾಜಗೋಪುರವು ಏ. 19ರಂದು ಶ್ರೀ ಪೇಜಾವರ ಮಠದ ಪೀಠಾಧಿಪತಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಏ.18ರಂದು ಬೆಳಿಗ್ಗೆ ವೇದಮೂರ್ತಿ ವಿಶ್ವೇಶ್ವರ ಭಟ್ ಕತ್ತಾಲ ನೇತೃತ್ವದಲ್ಲಿ ದೇವಸ್ಥಾನದ ಅರ್ಚಕ ರವೀಂದ್ರ ಆಯ್ಯಂಗಾರಸಹಯೋಗದೊಂದಿಗೆ ಮಹಾಸಂಕಲ್ಪ ಪುಣ್ಯಾಹ, ಮಾತೃಕಾ ಪೂಜಾ, ದೇವನಾಂದಿ, ಕೌತುಕ ಪೂಜೆ, ಋತ್ವಿಕ್ವರಣ, ಮಧುಪರ್ಕ, ಕೃಷ್ಣಾಚರಣೆ, ಶ್ರೀ ಮಹಾಗಣಪತಿ ಹೋಮ ಶಿಖರ ಶುದೀಕರಣ ಜರುಗಲಿದೆ. ಏ. 19ರಂದು ಬೆಳಿಗ್ಗೆ 7.28ಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದ ಶಿಲಾಮಯ ರಾಜಗೋಪುರದ ಶಿಖರ ಪ್ರತಿಷ್ಠೆ, ಗುರುಗಣೇಶ ಪೂಜಾ, ಪುಣ್ಯಾಹ, ಸ್ಥಾನಶುದ್ಧಿ ಹೋಮ, ಬಿಂಬಶುದ್ಧಿ ಹೋಮ, ಶಿಖರ ಅಧಿವಾಸ ಹೋಮ, ಮೂಲಮಂತ್ರ ಹೋಮ, ಮೂಹೂರ್ತವಾಚನ, ಶಕ್ತಿ-ತತ್ವ ಕಲಾವೃದಿ ಹೋಮ. ಶ್ರೀ ಮಹಾವಿಷ್ಣು ಯಾಗ, ಶಾಂತಿ ಪ್ರಾಯಶ್ಚಿತ್ತ ಹೋಮಗಳು, ಮಹಾ ಪೂರ್ಣಾಹುತಿ, ಕುಂಭಾಭಿಷೇಕ, ನಡೆಯಲಿದೆ. ಅಪರಾಹ್ನ ಶಿರೂರು ಪೇಟೆಯಿಂದ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರನ್ನು ಸ್ವಾಗತಿಸಿ, ಪೂರ್ಣಕುಂಭದೊಂದಿಗೆ ಭವ್ಯ ಮೆರವಣಿಗೆಯಲ್ಲಿ ದೇವಳಕ್ಕೆ ಬರಮಾಡಿಕೊಳ್ಳುವುದು. ಸಂಜೆ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರ ಎಸ್. ನಾಗಯ್ಯ ಶೆಟ್ಟಿ ಹೊಸ್ಮನೆ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು, ಸ್ವಾಮೀಜಿ ಆಶೀರ್ವಚನ




ನೀಡಲಿದ್ದಾರೆ. ಶ್ರೀ ಅನಂತೇಶ್ವರ ದೇವಸ್ಥಾನದ ಅರ್ಚಕ ವೇದವ್ಯಾಸ ಐತಾಳ ಸಗ್ರಿ ಧಾರ್ಮಿಕ ಪ್ರವಚನ ನೀಡಲಿದ್ದಾರೆ. ಸಂಸದ ಬಿ. ವೈ. ರಾಘವೇಂದ್ರ, ಶಾಸಕ ಗುರುರಾಜ ಗಂಟಿಹೊಳೆ ಮಾಜಿ ಶಾಸಕರಾದ ಬಿ. ಎಂ. ಸುಕುಮಾರ ಶೆಟ್ಟಿ ಕೆ. ಗೋಪಾಲ ಪೂಜಾರಿ, ಕೊಲ್ಲೂರು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ಉದ್ಯಮಿಗಳಾದ ಯು.ಬಿ. ಶೆಟ್ಟಿ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜರು, ವತ್ತಿನೆಣೆ ಶ್ರೀ ರಾಘವೇಂದ್ರ ಮಠದ ಅಧ್ಯಕ್ಷ ಪಿ. ಸೂಲಿಯಣ್ಣ ಶೆಟ್ಟಿ ಉಪಸ್ಥಿತರಿರಲಿದ್ದಾರೆ. ರಾತ್ರಿ ಶ್ರೀ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮಂಡಳಿ ಪೆರ್ಡೂರು ಇವರಿಂದ ಯಕ್ಷಗಾನ ಪ್ರದರ್ಶನವಿದೆ ಎಂದು ದೇವಸ್ಥಾನದ ಆಡಳಿತ ಮೊಕ್ತಸರ ಎಸ್.ನಾಗಯ್ಯ ಶೆಟ್ಟಿ ಗೌರವಾಧ್ಯಕ್ಷ ಆರ್. ಎ. ಶೆಟ್ಟಿ ತಿಳಿಸಿದ್ದಾರೆ.

ಪಡುಬಿದ್ರಿ: ಪ್ರಚಾರ ವಾಹನದ ಉದ್ಘಾಟನೆ



ಪಡುಬಿದ್ರಿ: ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮ ಕಲಶೋತ್ಸವದ ಪ್ರಚಾರ ವಾಹನದ ಉದ್ಘಾಟನೆ ಮಂಗಳವಾರ ಜರಗಿತು.

ಹೊರೆ ಕಾಣಿಕೆ ಸಮಿತಿ ಪ್ರಧಾನ ಸಂಚಾಲಕ ಡಾ. ದೇವಿಪ್ರಸಾದ್ ಶೆಟ್ಟಿ ಅನುವಂಶಿಕಮೊಕ್ತೇಸರರತ್ನಾಕರರಾಜ್ ಅರಸ್ ಕಿನ್ನಕ್ಕೆ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿ ಶಂಕರ ಹೆಗ್ಡೆ, ಜೀರ್ಣೋದ್ಧಾರ ಸಮಿತಿ ಉಪಾಧ್ಯಕ್ಷ ಪಿ. ರವೀಂದ್ರನಾಥ ಜಿ. ಹೆಗ್ಡೆ ಪ್ರಧಾನ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ನವೀನ್ ಚಂದ್ರ ಜೆ. ಶೆಟ್ಟಿ, ಜಯ ಶೆಟ್ಟಿ ಪದ್ರ, ಸತೀಶ್ ಶೆಟ್ಟಿ ಗುಡ್ಡೆಚ್ಚಿ, ವೈ. ಸುಕುಮಾರ್, ಚಂದ್ರಹಾಸ ಶೆಟ್ಟಿ ರತ್ನಾಕರ ಶೆಟ್ಟಿ ನಡುಕೆರೆ, ಜಯ ಕೋಟ್ಯಾನ್, ರಮಾಕಾಂತ ರಾವ್, ಸುಧಾಕರ ಸಾಲ್ಯಾನ್, ಕೃಷ್ಣ ಬಂಗೇರ, ಸೋಮಶೇಖರ್, ಸುರೇಶ್, ಅಶೋಕ್ ಸಾಲ್ಯಾನ್, ಭರತ್ ದೇವಾಡಿಗ, ಪ್ರಕಾಶ್ ದೇವಾಡಿಗ, ಲಕ್ಷ್ಮಣ ಪೂಜಾರಿ, ರವೀಂದ್ರನಾಥ ಶೆಟ್ಟಿ ಶ್ರೀನಾಥ್ ಹೆಗ್ಡೆ, ರವಿ ಶೆಟ್ಟಿ ಗುಂಡ್ಲಾಡಿ, ಪ್ರಕಾಶ್ ಶೆಟ್ಟಿ ಪಡುಹಿತ್ಲು ಇದ್ದರು.



ಶಿರ್ವ ಸಮೀಪದ ಬಂಟಕಲ್ಲು ಶ್ರೀದುರ್ಗಾಪರಮೇಶರೀ ಹಿ.ಪ್ರಾ. ಶಾಲೆ ಶತಸಂಭ್ರಮೋತ್ಸವವನ್ನು ಮುಖ್ಯ ಶಿಕ್ಷಕಿ ಸಹಿತ ಆರು ಶಿಕ್ಷಕಿಯರು ಮುಖ್ಯ ಶಿಕ್ಷಕಿ ಸಂಗೀತಾ ಪಾಟ್ಕರ್ ಸಹಿತ ಸಹಶಿಕ್ಷಕಿಯರಾದ ಶಾಲಿನಿ ಆಚಾರ್ಯ, ವಿನುತಾ ಆಚಾರ್ಯ, ಸುಮತಿ, ರೇಷ್ಮಾ, ಶ್ವೇತಾ ಅವರನ್ನು ಸನ್ಮಾನಿಸಲಾಯಿತು.

ಅಭಿವೃದ್ಧಿಯ ಪಥದಲ್ಲಿ ಪರಾರಿ ಬೊಬ್ಬರ್ಯ ದೈವಸ್ಥಾನ: ಏ. 28ರಿಂದ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ಬ್ರಹ್ಮಾವರ: ತಾಲೂಕು ಉಪ್ಪೂರು ಗ್ರಾಮದಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ಬೊಬ್ಬರ್ಯ ದೈವಸ್ಥಾನದ ಜೀರ್ಣೋದ್ಧಾರ ಕಾರ್ಯವು ಭರದಿಂದ ಸಾಗುತ್ತಿದೆ. ಏ.18ರಂದು ಸಂಜೆ ಬ್ರಹ್ಮಕಲಶದ ಪೂರ್ವಭಾವಿಯಾಗಿ ಕೊಳಲಗಿರಿ ಜಂಕ್ಷನ್‌ನಿಂದ ದೈವ ಸ್ಥಳದವರೆಗೆ ವಿಶೇಷವಾಗಿ ಹೊರ ಕಾಣಿಕೆ ಸಮರ್ಪಣೆ, ಟ್ಯಾಬ್ಲೋಗಳ ಮೆರವಣಿಗೆ ನಡೆಯಲಿದೆ. ಏ. 19ರಂದು ಪರಿವಾರ ದೈವಗಳ ಸಹಿತ ಶ್ರೀ ಬೊಬ್ಬರ್ಯ ದೈವದ ಪುನರ್ ಪ್ರತಿಷ್ಠೆ, ಏ.20ರಂದು ಬ್ರಹ್ಮಕಲಶೋತ್ಸವ, ಸಂಜೆ ದೈವದ ನೇಮ ನೆರವೇರಲಿದೆ.


ಜೀರ್ಣೋದ್ಧಾರ ಕಾರ್ಯದ ವಿವರ

ದೈವಸ್ಥಾನದ ಅಭಿವೃದ್ಧಿಯ ಪ್ರಾಥಮಿಕ ಹಂತವಾಗಿ, ಸುಮಾರು 400 ಲೋಡ್‌ಗಳಷ್ಟು ಮಣ್ಣನ್ನು ಭರ್ತಿ ಮಾಡುವ ಮೂಲಕ ದೈವಸ್ಥಾನದ ಜಾಗವನ್ನು ರಸ್ತೆಯ ಮಟ್ಟಕ್ಕೆ ಏರಿಸಲಾಗಿದೆ. ದೈವಸ್ಥಾನದ ಆವರಣ ಗೋಡೆಯ ಕಾಮಗಾರಿಯು ಶೇಕಡಾ



80ರಷ್ಟು ಪೂರ್ಣಗೊಂಡಿದೆ.

ಪ್ರಮುಖವಾಗಿ ಶ್ರೀ ಬೊಬ್ಬರ್ಯ ದೈವ ಹಾಗೂ ಪರಿವಾರ ದೈವಗಳಾದ ನಂದಿಕೋಣ ಮತ್ತು ನೀಚ ದೈವದ ಶಿಲಾಮಯ ಗುಡಿಯ ನಿರ್ಮಾಣ ಕಾರ್ಯವು ತ್ವರಿತ ಗತಿಯಲ್ಲಿ ನಡೆಯುತ್ತಿದ್ದು ಈಗಾಗಲೇ ಶೇಕಡಾ 90ರಷ್ಟು ಕೆಲಸ ಮುಗಿದಿದೆ.

> **ಭಕ್ತರ ಇಷ್ಟಾರ್ಥ ಸಿದ್ದಿಸಿದೆ**
>
> 
>
> **ಕಾರಣಿಕ ದೈವ ಶ್ರೀ ಪರಾರಿ ಬೊಬ್ಬರ್ಯ ದೈವಸ್ಥಾನ ಹತ್ತು ಹಲವು ಭಕ್ತರ ಇಷ್ಟಾರ್ಥ ಸಿದ್ದಿಸಿದೆ. ಸ್ವರ್ಣ ನದಿಯ ತಟದಲ್ಲಿರುವ ಈ ಬೊಬ್ಬರ್ಯ ದೇವಸ್ಥಾನ ನಮ್ಮೂರಿಗೆ ಸ್ವರ್ಣ ಕಿರೀಟದಂತೆ ರಾರಾಜಿಸುತ್ತಿದೆ. ಭಕ್ತಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಒಲುಮೆಗೆ ಪಾತ್ರರಾಗಬೇಕಾಗಿ ಮನವಿ**
>
> ● **ಲಕ್ಷ್ಮೀಶ್ ಭಟ್**
> **ಪ್ರಧಾನ ಅರ್ಚಕರು, ಶ್ರೀ ಪರಾರಿ ಬೊಬ್ಬರ್ಯ ದೈವಸ್ಥಾನ ಜೀರ್ಣೋದ್ಧಾರ ಸಮಿತಿ**

> **ಉತ್ಸವಕ್ಕೆ ತಯಾರಾಗಿದೆ**
>
> 
>
> **ಊರ, ಪರವೂರ ದಾನಿಗಳಿಂದ ಉಪ್ಪೂರು ಪರಾರಿ ಬೊಬ್ಬರ್ಯ ದೈವಸ್ಥಾನ ಬಹಳ ವಿಜೃಂಭಣೆಯಿಂದ ಜೀರ್ಣೋದ್ಧಾರಗೊಂಡು ಉತ್ಸವಕ್ಕೆ ತಯಾರಾಗಿದೆ. ಶಿಲಾಮಯ ಶ್ರೀ ದೇವಸ್ಥಾನ ಸುಂದರವಾಗಿ ಮೂಡಿಬಂದಿದೆ. ಸ್ವರ್ಣ ನದಿಯ ತಟದಲ್ಲಿರುವ ಈ ಈ ಬೊಬ್ಬರ್ಯ ದೇವಸ್ಥಾನ ಕೊಳಲಗಿರಿ ಮಣಿಪಾಲ ಪ್ರಮುಖ ರಸ್ತೆಯ ಭಕ್ತ ಅಭಿಮಾನಿಗಳ ಕಾರ್ಣಿಕ ಬೊಬ್ಬರ್ಯ ದೇವಸ್ಥಾನವಾಗಿದೆ.**
>
> ● **ಸತೀಶ್ ಪೂಜಾರಿ ಕೀಳಂಜೆ**
> **ಗೌರವಧ್ಯಕ್ಷ, ಜೀರ್ಣೋದ್ಧಾರ ಸಮಿತಿ**

> **ಪ್ರವಾಡ ಕ್ಷೇತ್ರ**
>
> 
>
> **ಪರಾರಿ ಬಬ್ಬರಿಯ ದೇವಸ್ಥಾನ ಹಲವಾರು ಪವಾಡಗಳು ಇಲ್ಲಿ ನಡೆದಿರುತ್ತದೆ. ಈಗ ಶಿಲಾಮಯವಾಗಿ ಸಿದ್ಧಗೊಂಡಿರುವ ಶ್ರೀ ಪರಾರಿ ಬೊಬ್ಬರ್ಯ ದೇವಸ್ಥಾನ ಸುಂದರವಾಗಿ ಕಂಗಳುತ್ತಿದೆ.ಭಕ್ತಾಭಿಮಾನಿಗಳ ಇಷ್ಟಾರ್ಥ ಸಿದ್ಧಿಗಾಗಿ ಈಗಾಗಲೇ ಹಲವರು ಇಲ್ಲಿ ಬಂದು ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ.**
>
> ● **ಗುರುರಾಜ್ ಭಟ್,**
> **ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ**

ಬಾಕಿ ಉಳಿದಿರುವ ಕಾಮಗಾರಿಗಳು

ಮುಂದಿನ ಹಂತದಲ್ಲಿ ಶಿಲಾಮಯ ಗುಡಿಗೆ ಮೇಲ್ಛಾವಣಿ ಅಳವಡಿಕೆ ಸಂಪೂರ್ಣವಾಗಿದ್ದು ದೈವಸ್ಥಾನ ಗರ್ಭಗುಡಿಗೆ ಮತ್ತು ಸ್ವಾಗತ ಗೋಪುರಕ್ಕೆ ಹಂಚನ್ನು ಹಾಕಲಾಗಿದ್ದು ರಾತ್ರಿ ಹಗಲು ಎನ್ನದೆ ಬರದಿಂದ ಕೆಲಸಗಳು ಸಾಗುತ್ತಿದೆ.

ಇಂಟರ್‌ಲಾಕ್ ಮತ್ತು ಆಫೀಸ್ ರೂಮಿಗೆ ಮತ್ತು ಕಂಪೌಂಡಿಗೆ ಪೈಂಟ್ ಸುಣ್ಣಬಣ್ಣದ ಕೆಲಸವು ಇನ್ನು ಎರಡು ದಿವಸದಲ್ಲಿ ಆಗಲಿದೆ. ಇನ್ನು ಎರಡು ಮೂರು ದಿವಸದಲ್ಲಿ ದೈವಸ್ಥಾನದ ಒಳಗೆ ವಿದ್ಯುತ್ ಲೈಟ್ ದೀಪ ಅಲಂಕಾರ ಸಂಪೂರ್ಣ ಆಗಲಿದ್ದು ಹಾಗೂ ದೈವಸ್ಥಾನದ ಸಂಪೂರ್ಣ ಆವರಣಕ್ಕೆ ಮೇಲ್ಛಾವಣಿ ಆಗಿರುತ್ತದೆ. ಇದರೊಂದಿಗೆ ನೆಲಹಾಸು, ಸುಂದರವಾದ ಸ್ವಾಗತ ಗೋಪುರ ನಿರ್ಮಾಣ, ವಿದ್ಯುತ್ ಸಂಪರ್ಕ ಆಗಿರುತ್ತದೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯ ಆಗಿರುತ್ತದೆ 10 ಕಾಮಗಾರಿಗಳು ಬಾಕಿ ಉಳಿದಿದ್ದು, ದೇವಸ್ಥಾನದ ಮೇಲ್ಭಾಗದ ಛಾವಣಿ ಸಂಪೂರ್ಣ ಕೆಲಸ ಆಗಿದೆ.